ವಿಶ್ವವಾಣಿ
ವಿಶ್ವಾಸವೇ ವಿಶ್ವ

ಫರ್ಮಾನ್ ವಿರುದ್ಧ ಪೋಕ್ಸೋ

ರುದ್ರಾಕ್ಷಿ ಸುಂದರಿ ಮೊನಾಲಿಸಾಳಿಗೆ ಇನ್ನೂ 18 ವರ್ಷ ತುಂಬಿಲ್ಲ ಎನ್ನಲಾಗಿದ್ದು, ಆಕೆಯನ್ನು ಇತ್ತೀಚೆಗೆ ಮದುವೆಯಾಗಿದ್ದ ಮಹಾರಾಷ್ಟ್ರದ ಫರ್ಮಾನ್ ಖಾನ್ ವಿರುದ್ಧ ಮಧ್ಯಪ್ರದೇಶ ಪೊಲೀಸರು ಪೋಕ್ಸೋ ಕೇಸ್ ದಾಖಲಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

13ರಿಂದ ತುಮಕೂರು ಮೇಲ್ಸೇತುವೆ ಬಂದ್?

ಬೆಂಗಳೂರು: ಬೆಂಗಳೂರಿನಿಂದ 20ಕ್ಕೂ ಅಧಿಕ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ತುಮಕೂರು ಮೇಲ್ಸೇತುವೆಯು ಸಂಚಾರಿ ಪೊಲೀಸರು ಅನುಮತಿ ನೀಡಿದರೆ ಮುಂದಿನ ವಾರ ಸೋಮವಾರದಿಂದ ಶುಕ್ರವಾರದವರೆಗೆ ಬಂದ್ ಆಗುವ ಸಾಧ್ಯತೆಯಿದೆ. ತುಮಕೂರು ಮೇಲ್ಸೇತುವೆ ರಸ್ತೆಯಲ್ಲಿ ಅಂತಿಮ ಲೋಡ್ ಪರೀಕ್ಷೆ ನಡೆಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಿದ್ಧತೆ ನಡೆಸಿದ್ದು, ಮೇಲ್ಸೇತುವೆಗೆ ಹೊಸದಾಗಿ 1422 ಕೇಬಲ್‌ಗಳ ಅಳವಡಿಕೆಗೆ ಮುಂದಾಗಿದೆ. ಈ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಬೆಂಗಳೂರು ಸಂಚಾರಿ ಪೊಲೀಸ್ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಈ ಪ್ರಸ್ತಾವನೆಗೆ ಬೆಂಗಳೂರು ಪೊಲೀಸರು ಅನುಮತಿ ನೀಡಿದರೆ ಏಪ್ರಿಲ್ 13 ರಿಂದ ಏಪ್ರಿಲ್ 17 ರವರೆಗೆ ಮೇಲ್ಸೇತುವೆ ಬಂದ್ ಆಗಲಿದೆ. ಸೋಮವಾರ ಬೆಳಗ್ಗೆ 11 ಗಂಟೆಯಿಂದ ಏ.17ರ ಬೆಳಗ್ಗೆ 11 ರವರೆಗೆ ಮೇಲ್ಸೇತುವೆಯನ್ನು ಮುಚ್ಚಲಾಗುತ್ತದೆ. 2010 ರಲ್ಲಿ ಸಂಚಾರಕ್ಕೆ ಈ ಮೇಲ್ಸೇತುವೆ ಮುಕ್ತವಾಗಿತ್ತು. ಪೀಣ್ಯ ಮೇಲ್ಸೇತುವೆಯು 82 ಗಂಟೆ ಬಂದ್ ಆದರೆ ಗೊರಗೊಂಟೆಪಾಳ್ಯ ಸೇರಿ ಪೀಣ್ಯದ ವರೆಗೆ ಸವಾರರಿಗೆ ಟ್ರಾಫಿಕ್ ಜಾಮ್ ಬಿಸಿ ತಟ್ಟಲಿದೆ.

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ಕಾಂಗ್ರೆಸ್‌ಗೆ ಕೊನೆಯ ಮೊಳೆ ಹೊಡೆಯುವುದೇ ಇದೇ ಸಿದ್ದರಾಮಯ್ಯ. ಅವರನ್ನು ಕಂಡರೆ ಅಸೂಯೆ, ಹೊಟ್ಟೆಕಿಚ್ಚು ಇರುವುದು ನಮಗಲ್ಲ. ಕಾಂಗ್ರೆಸ್‌ನಲ್ಲೇ ಕೆಲವರಿಗೆ ಹೊಟ್ಟೆಕಿಚ್ಚಿದೆ. ರಾಜ್ಯ ಸರಕಾರ ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ಕರ್ನಾಟಕಕ್ಕೆ ಹೆಚ್ಚಿನ ಕಾರ್ಖಾನೆಗಳನ್ನು ತರುತ್ತೇನೆ.



35 ಡಿಗ್ರಿ ಸೆಲ್ಸಿಯಸ್ ದಾಟಿದ ತಾಪಮಾನ | ಹೀಟ್ ಸ್ಟ್ರೋಕ್ ಬಗ್ಗೆ ಎಚ್ಚರ ವಹಿಸುವಂತೆ ಸೂಚನೆ

ಬಿಸಿಲಿನ ಬೇಗೆಗೆ ಬೆಂದಕಾಳೂರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ತಾಪಮಾನ ಹೆಚ್ಚಳವಾಗುತ್ತಿದ್ದು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಹೀಟ್‌ವೇವ್ ಹಾಗೂ ಹೀಟ್ ಸ್ಟ್ರೋಕ್ ಬಗ್ಗೆ ಎಚ್ಚರಿಕೆ ವಹಿಸುವಂತೆ ಮುನ್ಸೂಚನೆ ನೀಡಿದೆ.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಎಚ್ಚರಿಕೆಯನ್ನು ನೀಡಲಾಗಿದ್ದು, ಕಳೆದ ಮೂರು ದಿನಗಳಿಂದ ನಗರದ ತಾಪಮಾನದಲ್ಲಿ ಭಾರಿ ಏರಿಕೆಯಾಗಿದೆ. ಸದ್ಯ ಗರಿಷ್ಟ ತಾಪಮಾನವು 35 ಡಿ.ಸೆ ದಾಟಿದ್ದು, ಕನಿಷ್ಟ ತಾಪಮಾನವೂ 20 ಡಿ.ಸೆಗಿಂತ ಹೆಚ್ಚಾಗಿದೆ. ಹೀಟ್ ವೇವ್‌ನ ಪರಿಣಾಮವು ಜನರ ಆರೋಗ್ಯದ ಮೇಲೆ ಬೀರುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಸಾಧ್ಯವಾದಷ್ಟು ಹೆಚ್ಚು ನೀರು ಕುಡಿಯುವಂತೆ, ದೇಹಕ್ಕೆ ಹಿತವಾದ ಹಗುರವಾದ ಮತ್ತು ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಸಿಲಿಗೆ ಹೊರಗೆ ಹೋಗುವಾಗ ಟೋಪಿ, ಗಾಗಲ್ಸ್, ಪಾದರಕ್ಷೆಗಳನ್ನು ಬಳಸುವುದು ಅಗತ್ಯ. ದೂರ ಪ್ರಯಾಣಗಳನ್ನು ಸಾಧ್ಯವಾದರೆ ರಾತ್ರಿ ವೇಳೆ ಮಾಡುವುದು ಉತ್ತಮ. ಹೊರಾಂಗಣದಲ್ಲಿ ಕೆಲಸ ಮಾಡುವವರು ತಲೆಗೆ ಟೋಪಿ ಅಥವಾ ಛತ್ರಿ ಬಳಸಿ, ತೇವವಾದ ಬಟ್ಟೆಯನ್ನು ತಲೆ, ಕುತ್ತಿಗೆ, ಮುಖದ ಮೇಲೆ ಇಟ್ಟುಕೊಳ್ಳುವುದು ಉತ್ತಮ. ದೇಹದ ತಾಪಮಾನ ತಗ್ಗಿಸಲು ಮಜ್ಜಿಗೆ, ಲಸ್ಸಿ, ಶರ್ಬತ್, ಲಿಂಬು ನೀರು ಮುಂತಾದ ಪಾನೀಯಗಳನ್ನು ಸೇವಿಸುವುದು ಉತ್ತಮ. ಪಶು-ಪಕ್ಷಿಗಳಿಗೆ ಸಹ ನೆರಳು ಮತ್ತು ಸಾಕಷ್ಟು ನೀರು ಒದಗಿಸುವಂತೆ ಪ್ರಾಧಿಕಾರ ಮನವಿ ಮಾಡಿದೆ.

ಗರ್ಭಿಣಿಯರು, ನವಜಾತ ಶಿಶುಗಳು, ಹಿರಿಯ ನಾಗರಿಕರು ಮತ್ತು ಚಿಕ್ಕ ಮಕ್ಕಳಿಗೆ ವಿಶೇಷ ಕಾಳಜಿ ವಹಿಸಬೇಕು. ಹೃದಯರೋಗ, ರಕ್ತದೊತ್ತಡ ಸಮಸ್ಯೆ ಇರುವವರು ಹೆಚ್ಚಿನ ಎಚ್ಚರಿಕೆ ವಹಿಸಬೇಕು. ವಿಶೇಷವಾಗಿ ಮಧ್ಯಾಹ್ನ 12 ರಿಂದ 3 ಗಂಟೆಯೊಳಗೆ ಹೊರಗೆ ಹೋಗುವುದನ್ನು ತಪ್ಪಿಸುವುದು ಉತ್ತಮ ಎಂದು ಪ್ರಾಧಿಕಾರವು ಪ್ರಕಟಣೆಯ ಮೂಲಕ ತಿಳಿಸಿದೆ.

ನಗರದ ಕೆಲವೆಡೆ ತಂಪೆರೆದ ವರುಣ

ಕಳೆದ ಕೆಲವು ದಿನಗಳಿಂದ ಬಿಸಿಲಿನ ಬೇಗೆಗೆ ಬೆಂದು ಹೋಗಿದ್ದ ಬೆಂಗಳೂರಿನಲ್ಲಿ ಶುಕ್ರವಾರ ಮಳೆ ಸುರಿದಿದ್ದು, ಜನರು ನೆಮ್ಮದಿಯ ಉಸಿರು ಬಿಡುವಂತಾಗಿದೆ. ಪೂರ್ವ ಮುಂಗಾರು ಹಾಗೂ ಕರ್ನಾಟಕದ ಒಳನಾಡಿನಲ್ಲಿ ಟ್ರಫ್ ಹಿನ್ನೆಲೆ, ಮಳೆಯಾಗುತ್ತಿದ್ದು, ಶುಕ್ರವಾರ ಬೆಂಗಳೂರಿನ ವಿಜಯನಗರ, ಹೊಸಹಳ್ಳಿ, ಯಶವಂತಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಮಳೆರಾಯ ಅಬ್ಬರಿಸಿದ್ದಾನೆ. ಬಿಸಿಲ ಝಳಕ್ಕೆ ಹೈರಾಣರಾಗಿದ್ದ ಬೆಂಗಳೂರು ಜನ ಮಳೆಯಿಂದ ಕೂಲ್ ಕೂಲ್ ಆಗಿದ್ದಾರೆ. ಸಂಜೆಯ ತಂಪುಗಾಳಿ ಜನರನ್ನು ತಂಪಾಗಿಸಿದೆ. ಆದರೆ ಮಳೆಯಿಂದಾಗಿ ಅಲ್ಲಲ್ಲಿ ಸಂಚಾರದಲ್ಲಿ ಅಸ್ತವ್ಯಸ್ತವೂ ಆಗಿದೆ. ಮುಂದಿನ ಒಂದು ವಾರಗಳ ಕಾಲ ಮಳೆಯಾಗಲಿದ್ದು, ಇಂದು ಬೆಂಗಳೂರಿನ ಕೆಲವೆಡೆ ಗುಡುಗು-ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದ್ದು, ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ಧಾರವಾಡ, ಹಾವೇರಿ ಸೇರಿದಂತೆ ಕೆಲವೆಡೆ ಮಳೆಯ ಮುನ್ಸೂಚನೆಯನ್ನು ನೀಡಲಾಗಿದೆ. ನಗರದ ಹೃದಯ ಭಾಗಗಳಾದ ಮೆಜೆಸ್ಟಿಕ್, ಜೆ.ಸಿ.ರೋಡ್, ಕಾರ್ಪೊರೇಷನ್ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಳೆಯಾಗಿದೆ. ಇದರೊಂದಿಗೆ ಶಾಂತಿನಗರ ಕೆ.ಆರ್.ಮಾರ್ಕೆಟ್ ಮತ್ತು ಚಾಮರಾಜಪೇಟೆ ಭಾಗಗಳಲ್ಲೂ ಮಳೆಯ ಸಿಂಚನವಾಗಿದ್ದು, ರಸ್ತೆಗಳು ಮಳೆ ನೀರಿನಿಂದ ಒದ್ದೆಯಾಗಿವೆ. ಇದ್ದಕ್ಕಿದ್ದಂತೆ ಸುರಿದ ಮಳೆಯಿಂದಾಗಿ ವಾಹನ ಸವಾರರು ಕೆಲ ಕಾಲ ಆಶ್ರಯ ಪಡೆಯಲು ರಸ್ತೆ ಬದಿಯ ಮೇಲ್ಸೇತುವೆ ಹಾಗೂ ಕಟ್ಟಡಗಳ ಮೊರೆ ಹೋಗಬೇಕಾಯಿತು.ಬೇಸಿಗೆಯ ಆರಂಭದಿಂದಲೇ ಬೆಂಗಳೂರಿನಲ್ಲಿ ಉಷ್ಣಾಂಶ ಗಣನೀಯವಾಗಿ ಏರಿಕೆಯಾಗಿತ್ತು. ಹಗಲಿಡೀ ಕಾಡುತ್ತಿದ್ದ ಧಗೆಯಿಂದಾಗಿ ಜನರು ಮನೆಯಿಂದ ಹೊರಬರಲು ಹೈರಾಣಾಗುತ್ತಿದ್ದರು. ಆದರೆ ಇಂದು ಸುರಿದ ಮಳೆಯು ಈ ಬಿಸಿಲಿನ ತಾಪವನ್ನು ಒಂದಿಷ್ಟು ತಗ್ಗಿಸುವಲ್ಲಿ ಯಶಸ್ವಿಯಾಗಿದೆ. ವಾತಾವರಣದಲ್ಲಿ ಹಠಾತ್ ತಂಪು ಆವರಿಸಿದ್ದು, ಕಾಂಕ್ರೀಟ್ ಕಾಡಿನಂತಾಗಿದ್ದ ಬೆಂಗಳೂರಿಗೆ ವರುಣನ ದರ್ಶನ ತಂಪು ನೀಡಿದೆ.

ನಗರದಲ್ಲಿ ಶುಕ್ರವಾರ ಸಂಜೆ ಸುರಿಯುತ್ತಿರುವ ಮಳೆಯ ನಡುವೆಯೇ ಹೋಗುತ್ತಿರುವ ಬೈಕ್ ಸವಾರ.

ರಾಜ್ಯದ ಹಲವೆಡೆ ಮುಂದಿನ ಒಂದು ವಾರ ಸಾಧಾರಣ ಮಳೆ

ರಾಜ್ಯದ ದಕ್ಷಿಣ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮುಂದಿನ ಒಂದು ವಾರ ಸಾಧಾರಣ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಕರಾವಳಿ ಭಾಗದ ಜಿಲ್ಲೆಗಳಲ್ಲಿ ಶನಿವಾರ ಹಾಗೂ ಭಾನುವಾರ ಬಿಸಿಗಾಳಿ ಬೀಸಲಿದೆ ಎಂದು ಎಚ್ಚರಿಕೆ ನೀಡಿದೆ. ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಎರಡು ದಿನ ಬಿಸಿಗಾಳಿ ಬೀಸುವ ಸಾಧ್ಯತೆಯಿದೆ. ಈ ಜಿಲ್ಲೆಗಳ ಜತೆಗೆ ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ ಹಾಗೂ ಗದಗ ಜಿಲ್ಲೆಯ ಕೆಲವೆಡೆ ಇದೇ ಏಪ್ರಿಲ್ 13ರಿಂದ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ. ದಕ್ಷಿಣ ಒಳನಾಡಿನ ಚಾಮರಾಜನಗರ, ಮೈಸೂರು, ಮಂಡ್ಯ, ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಶನಿವಾರದಿಂದ ಮುಂದಿನ ಒಂದು ವಾರ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಎರಡು ದಿನ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವೆಡೆ ಸಂಜೆ ಅಥವಾ ರಾತ್ರಿ ಅವಧಿಯಲ್ಲಿ ಮಳೆ ಬರುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಸೋಮವಾರ ಏ.13 ರಂದು ಉದ್ಘಾಟನೆಗೊಳ್ಳಲಿರುವ ನರಸಿಂಹರಾಜಪುರದ ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶಾಸಕ ರಾಜೇಗೌಡ ಆಮಂತ್ರಿಸಿದರು. ಈ ವೇಳೆ ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್ ಇದ್ದರು.

ಕಾನೂನು ಕವಚ-ದಿ ಲೀಗಲ್ ಶೀಲ್ಡ್ ಫಾರ್ ಕಿಡ್ಸ್ ಆರಂಭ

ಬೆಂಗಳೂರು: ವೇಗವಾಗಿ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ ಮಕ್ಕಳು ಅನೇಕ ಅಪಾಯಗಳಿಗೆ ಒಳಗಾಗುತ್ತಿರುವ ಸಂದರ್ಭದಲ್ಲಿ, ಕ್ಲಾಸಿಯಾ ಗ್ರೂಪ್‌ನ ಡಿಜಿಟಲ್ ವೇದಿಕೆಯಾದ ಕ್ಲಾಸಿಯಾ ಎಜು ಹಾಗೂ ಅದರ ಪ್ರಮುಖ ಕಾರ್ಯಕ್ರಮ 'ಕಾನೂನು ಕವಚ-ದಿ ಲೀಗಲ್ ಶೀಲ್ಡ್ ಫಾರ್ ಕಿಡ್ಸ್' ಅನ್ನು ಪ್ರಾರಂಭಿಸಲಾಗಿದೆ ಎಂದು ಸಂಸ್ಥೆಯ ಮ್ಯಾನೇಜರ್ ನಜೀರ್ ಉದ್ದೀನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ,ಇದು ಮಕ್ಕಳ ಬಾಲ್ಯ ಮತ್ತು ಭವಿಷ್ಯವನ್ನು ರಕ್ಷಿಸುವ ಒಂದು ಮಿಷನ್.ಡ್ರಗ್ಸ್ ಪ್ರಭಾವ, ಶಾಲಾ-ಕಾಲೇಜುಗಳ ರ‍್ಯಾಗಿಂಗ್, ಮಕ್ಕಳ ಮೇಲಿನ ಹಿಂಸೆ ಮತ್ತು ಪೀಡೆ,ಸೈಬರ್ ಬುಲ್ಲಿಂಗ್, ಆನ್‌ಲೈನ್ ಮೋಸಗಳು, ಲೈಂಗಿಕ ದುರುಪಯೋಗ ಹಾಗೂ ಅಸುರಕ್ಷಿತ ಸಾಮಾಜಿಕ ಸಂಪರ್ಕಗಳು.ಹೀಗೆ ಇಂದಿನ ಮಕ್ಕಳು ಅನೇಕ ಅಪಾಯಗಳಿಂದ ಕೂಡಿದ ಜಗತ್ತಿನಲ್ಲಿ ಮೌನವಾಗಿ ಸಾಗುತ್ತಿದ್ದಾರೆ. ಅಲ್ಲದೇ ಅಪರಿಚಿತ ಮೈನರ್‌ಗಳೊಂದಿಗೆ ಆನ್‌ಲೈನ್ ಚಾಟ್,ಸಾಮಾಜಿಕ ಮಾಧ್ಯಮದಲ್ಲಿ ಅಸಭ್ಯ ಅಥವಾ ಅನುಚಿತ ಸಂಭಾಷಣೆ,ಹಾನಿಕಾರಕ ವಿಷಯಗಳನ್ನು ಪೋಸ್ಟ್ ಅಥವಾ ಫಾರ್ವರ್ಡ್ ಮಾಡುವುದು.ಹೀಗೆ ಡಿಜಿಟಲ್ ಯುಗದಲ್ಲಿ ನಿರಪರಾಧವಾಗಿ ಕಾಣುವ ಕ್ರಿಯೆಗಳು ಕೂಡ ಅಪಾಯಕಾರಿ ಆಗಬಹುದು.ಈ ರೀತಿ ಅರಿವಿಲ್ಲದೆ ನಡೆಯುವ ಕ್ರಿಯೆಗಳು ಪೋಕ್ಸೋ,ಸೈಬರ್ ಹಾಗೂ ಇತರೆ ಕ್ರಿಮಿನಲ್ ಕಾನೂನು ಪರಿಣಾಮಗಳಿಗೆ ಕಾರಣವಾಗಬಹುದು.ಇಂದಿನ ಕಾಲದಲ್ಲೂ ಕಾನೂನಿನ ದೃಷ್ಟಿಯಲ್ಲಿ ಯಾವುದು ಸರಿ ಅಥವಾ ತಪ್ಪು, ಅಪಾಯಕಾರಿ ಪರಿಸ್ಥಿತಿಗಳನ್ನು ಹೇಗೆ ಗುರುತಿಸಬೇಕು ಎಂಬ ವಿಷಯಗಳನ್ನು ಶಾಲೆಗಳಲ್ಲಿ ಮಕ್ಕಳಿಗೆ ಕಲಿಸಲಾಗುತ್ತಿಲ್ಲ. ಈ ಕೊರತೆಯನ್ನು ತುಂಬಲು 'ಕಾನೂನು ಕವಚ' ಆನ್‌ಲೈನ್ ಸೆಷನ್‌ಗಳನ್ನು ಸಂಸ್ಥೆ ಪ್ರಾರಂಭಿಸಿದೆ ಎಂದರು.ಈ ವೇಳೆ ಅಡ್ವೊಕೇಟ್ ಭೂಮಿಕಾ ಎಂ.ಗೌಡ,ಸಂಸ್ಥೆಯ ಮುಖ್ಯಸ್ಥ ಇಮ್ರಾನ್ ಖಾನ್ ಸೇರಿದಂತೆ ಮತ್ತಿತರರು ಇದ್ದರು.

PUBLIC NOTICE

This is to inform general public that my client/s have negotiated to purchase the Schedule Property from its owner **Sri.A.SHANMUGAM,** S/o. Late M.P.Arunachalam Mudaliar, Aged about 68 years, Residing at No.39, 8th Cross, Lakshmipuram, Halasuru, Bangalore-560 008 **[Aadhar No.3436 0821 8045]** that he is the true and absolute owner of the Schedule Property he having acquired the same by way of inheritance from his father Late M.P.Arunachalam Mudaliar and also by virtue of the Registered Release deed dated 11/01/2021, Registered as Document No.KRI-1-07965/2020-21, of Book-1, Stored in CD No.KRID1145, Registered in the office of the Additional Sub Registrar K.R.Puram, Bangalore executed by his younger sister **Smt.J.SHANTHI**, D/o. Late M.P.Arunachalam Mudaliar,W/o. Sri.Jothi Appan, Aged about 62 years, Residing at No.39, 8th Cross, Lakshmipuram, Halasuru, Bangalore-560 008 **[Aadhar No.6890 2433 8763]** and that his other 3 sisters namely **Smt.K.LAKSHMI, Smt.S.KASTHURI & Smt.A.MEENAKSHI** died issueless and that he nor any of his family members have not entered into any manner of transactions in respect of the said property and that the same is free from all manner of Liens, Charges, Court litigations, minor claims or any manner of encumbrances..

My client informs me that the owner **Sri.A. SHANMUGAM** has also represented that the **Original Sale Deed dated 09/02/1959, Registered as Document No.4316/1958-59, of Book-1 Vol.95, Written at pages 79 to 83, Registered in the office of Sub- Registrar Bangalore South Taluk** under which the Schedule Property was acquired by his father i.e Late M.P.Arunachalam Mudaliar from one Sri.B.M.Ramaswamy, S/o B. M. Muniswamy, has been **misplaced or lost in transit on 17/12/2025** while he was taking the said Document for photo copy/Xerox at C.M.H Road, Indiranagar, Bangalore-560 038 and an online police complaint has been lodged by my client to the said effect **vide Lost Article Report No.1963151/2025 to the Indiranagar Police, Bangalore City on 18/12/2025.**

Any person/s claiming any manner of right, title or interest in the SCHEDULE PROPERTY shall lodge their claim in writing with supporting documents within 15 days, after the publication of this notice, to the undersigned, failing which, my client/s shall proceed with the transaction to acquire the SCHEDULE PROPERTY from the aforesaid owners and their family members and subsequent claims will not be entertained thereafter.

SCHEDULE PROPERTY

ALL THAT PIECE AND PARCEL of the of the Immovable Property **bearing Site No.73,** Formed in **Property No.109, Katha No.109/73,** Situated at **BYYAPPANAHALLI @ KAYAMGUTTA VILLAGE, BYYAPPANAHALLI, KRISHNARAJAPURA HOBLI, Erstwhile BANGALORE SOUTH TALUK, NOW BANGALORE EAST TALUK, Now falls under the Jurisdiction of BRUHATH BANGALORE MAHANAGARA PALIKE, BANGALORE** and Now assigned **New Municipal Katha No.3, 5th Cross Road, Byappanahalli Extension, Bangalore, PID No.85-16-3 and New E-Khata No.1694660, Bangalore** and measuring **EAST to WEST: 30 Feet or 9.144018 Meters and NORTH to SOUTH: 40 Feet or 12.192024 Meters, in all measuring 1200 Square Feet or 111.4841 Square Meters**, with the Building measuring 900 Square Feet or 83.6127 Square Meters and the building is constructed of RCC Roofing, Mosaic Flooring, Honne Wood Doors and Steel Windows, with all civic amenities together with all appurtenances whatsoever whether underneath or above the surface and bounded by:

ON THE EAST BY : SITE No. 72; **ON THE WEST BY** : SITE No. 74;
ON THE NORTH BY : 15 FEET ROAD; **ON THE SOUTH BY** : 15 FEET ROAD.

VELLANKI RAVI, ADVOCATE
 # 321, 1st Floor, C.M.H. Road, Indiranagar, Bangalore – 560 038. Tel: 98441 21658 (Mobile).

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **10.11.2025** ರಂದು ಕರೆದು ಸಾಲಗಾರ **ರವಿ ಕುಮಾರ್ ಎಂ ಮಾಲೀಕರು M/s ವೈ ಎಂ ಆರ್ ಎಂಟರ್‌ಪ್ರೈಸಸ್ ಮತ್ತು ವೆಂಕಟಲಕ್ಷ್ಮಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 28,75,066.62 (ಇಪ್ಪತ್ತೆಂಟು ಲಕ್ಷದ ಎಪ್ಪತ್ತೈದು ಸಾವಿರದ ಅರವತ್ತಾರು ರೂಪಾಯಿಗಳು ಮತ್ತು ಅರವತ್ತೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HLLABGM00508209** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **07.11.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **08.04.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 28,75,066.62 (ಇಪ್ಪತ್ತೆಂಟು ಲಕ್ಷದ ಎಪ್ಪತ್ತೈದು ಸಾವಿರದ ಅರವತ್ತಾರು ರೂಪಾಯಿಗಳು ಮತ್ತು ಅರವತ್ತೆರಡು ಪೈಸೆ ಮಾತ್ರ) 07.11.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆ ಎಲ್ಲಾ ತುಂಡು ಮತ್ತು ಪಾರ್ಸೆಲ್ ಕೋಡಿಹಳ್ಳಿ ಗ್ರಾಮ ಪಂಚಾಯತ್ ಖಾತಾ ಬೇರಿಂಗ್ ಸಂಖ್ಯೆ 1333/1130/705, ಪಿಐಡಿ ಸಂಖ್ಯೆ 152900200900201328, ಸರ್ವೆ ಸಂಖ್ಯೆ 431/9ಅ ನಿಂದ ಕೆತ್ತಲಾಗಿದೆ, ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ, ಗ್ರಾಮ ಮತ್ತು ಹೋಬಳಿಯಲ್ಲಿ ನೆಲೆಗೊಂಡಿದೆ, ಪೂರ್ವದಿಂದ ಪಶ್ಚಿಮಕ್ಕೆ 10.67 ಮೀಟರ್ ಮತ್ತು ಉತ್ತರಕ್ಕೆ 19.20 ಮೀಟರ್ ಅಳತೆ ಹೊಂದಿದೆ, ಒಟ್ಟಾರೆಯಾಗಿ 204.85 ಚದರ ಮೀಟರ್ ಅಳತೆ ಹೊಂದಿದೆ ಮತ್ತು 123.56 ಚದರ ಮೀಟರ್ ನಿರ್ಮಿತ ಪ್ರದೇಶವನ್ನು ಹೊಂದಿದೆ ಮತ್ತು ಇವುಗಳನ್ನು ಹೊಂದಿದೆ:

ಪೂರ್ವ : ಶ್ರೀಮತಿ ಲಕ್ಷ್ಮಮ್ಮ ಅವರ ಒಡೆತನದ ಆಸ್ತಿ.
ಪಶ್ಚಿಮದಲ್ಲಿ : ಉಳಿದ ಭಾಗ ಮತ್ತು ಆಸ್ತಿ ವೆಂಕಟಸ್ವಾಮಿ ಅವರಿಗೆ ಸೇರಿದ್ದು
ಉತ್ತರದಲ್ಲಿ : ಶ್ರೀ ಲೋಕೇಶ್ ಅವರಿಗೆ ಸೇರಿದ್ದು
ದಕ್ಷಿಣದಲ್ಲಿ : ಸಾರ್ವಜನಿಕ ರಸ್ತೆ

ಅಧಿಕಾರವಿರುವ ಅಧಿಕಾರಿ
ದಿನಾಂಕ: 08.04.2026 **ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್**
ಸ್ಥಳ : ರಾಮನಗರ (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**)

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ವಿನಂತಿ, ಶ್ರೀಮತಿ.ಸಾಕಮ್ಮ ಕೋ. ಶ್ರೀ.ನಾಗೇಶ ರವರು, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಅಜ್ಜನಹಳ್ಳಿ ದಾಖಲೆ, ಚಂದ್ರಪ್ಪ ಸರ್ಕಲ್ ಗ್ರಾಮದ ಸರ್ವೇ ನಂ.58 ರಲ್ಲಿ ನಿರ್ಮಿಸಿರುವ, ಹಾಲಿ ಅಜ್ಜನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಖಾತ ನಂ.92/93, ಪಿ.ಐ.ಡಿ.ನಂ.150200302403902891, ನಿವೇಶನ ಸಂಖ್ಯೆ.93 ರ ವಿಸ್ತೀರ್ಣ ಪೂರ್ವ-ಪಶ್ಚಿಮ 5.48 ಮೀಟರ್ ಅಥವಾ 18 ಅಡಿ ಮತ್ತು ಉತ್ತರ- ದಕ್ಷಿಣ 7.92 ಮೀಟರ್ ಅಥವಾ 26 ಅಡಿ, ಒಟ್ಟು 43.47 ಚದರ ಮೀಟರ್ ಅಥವಾ 468 ಚದರ ಅಡಿಗಳ್ಳುಳ ಸ್ವತ್ತು ಹಾಗೂ ಇದರಲ್ಲಿ ನಿರ್ಮಿಸಿರುವ ಆರ್.ಸಿ.ಸಿ ಭಾವಣಿಯುಳ್ಳ ಮನೆಗೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾಲ್ಲೂಕು ಪಂಚಾಯ್ತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಂದ ದಿನಾಂಕ 31.01.2004 ರಂದು ಶ್ರೀಮತಿ.ಸರಸ್ವತಿ ಕೋ. ಶ್ರೀ.ಚಂದ್ರು ರವರಿಗೆ ವಿತರಿಸಲ್ಪಟ್ಟಂತಹ ಅಸಲಿ ಹಕ್ಕು ಪತ್ರ (ನಂ.1029) ಅನ್ನು ಕಳೆದುಕೊಂಡಿರುತ್ತಾರೆ. ಈ ವಿಷಯವಾಗಿ ಬೆಂಗಳೂರು ಸಿಟಿ ಪೊಲೀಸ್ ಠಾಣೆಯಲ್ಲಿ ನಂ.2149832/2026 ದಿನಾಂಕ: 10.04.2026 ರಂದು ದೂರು ಸಲ್ಲಿಸಲಾಗಿದೆ. ಈ ಮೇಲ್ಕಂಡ ಮೂಲ ದಾಖಲೆ ಸಿಕ್ಕಿದಲ್ಲಿ/ದೊರೆತಲ್ಲಿ ಕೂಡಲೇ ಪೊಲೀಸ್ ಠಾಣೆ ಅಥವಾ, ಈ ಕೆಳಕಂಡ ವಿಳಾಸಕ್ಕೆ ಏಳು ದಿನದೊಳಗೆ ಮರಳುವಿಕೆ ಅಥವಾ ಖುದ್ದು ಸಂಪರ್ಕಿಸಲು ಕೋರಿದೆ.

ಶ್ರೀಯುತ ಪ್ರಶಾಂತ್ ಕುಮಾರ್.ಕೆ. ಬಿ.ಎ. ಎಲ್.ಎಲ್.ಬಿ, ವಕೀಲರು, "ಲೆಕ್ಸ್‌ಫಾಕ್ಸಮ್" ನಂ.690, 2ನೇ ಮಹಡಿ, 36ನೇ ಕ್ರಾಸ್ ರಸ್ತೆ, 11ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 263/2026

ಅರ್ಜಿದಾರರು: ಶ್ರೀ ಶಿವರಾಜು ಬಿನ್ ಲೇಟ್ ದೊಡ್ಡತಮ್ಮೇಗೌಡ @ ದೊಡ್ಡತಮ್ಮಯ್ಯ ವಯಸ್ಸು 51 ವರ್ಷ ವಾಸ: ಸಾಸಲಾಪುರ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ, 2. ಗ್ರಾಮ ಲೆಕ್ಕಾಧಿಕಾರಿಗಳು, ಹೊನ್ನಿಗನಹಳ್ಳಿ ವೃತ್ತ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ದೊಡ್ಡತಮ್ಮೇಗೌಡ @ ದೊಡ್ಡತಮ್ಮಯ್ಯ ಬಿನ್ ಲೇಟ್ ಜವರೇಗೌಡ ರವರು, ದಿನಾಂಕ 11.11.1998 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಸಾಸಲಾಪುರ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 01.07.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ: 8ನೇ ಏಪ್ರಿಲ್ 2026ರ ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಪ್ರಕಾಶ.ಕೆ., ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 02/04/2026

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶ ನಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 646/2025.

ಅರ್ಜಿದಾರರು: ಶ್ರೀ ವೀರಭದ್ರೇಗೌಡ ಬಿನ್. ಲೇಟ್ ಮಾದೇಗೌಡ, ವಯಸ್ಸು 65 ವರ್ಷ, ವಾಸ : ದುನ್ನಸಂದ್ರ ಗ್ರಾಮ, ಮರಳವಾಡಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು, ದುನ್ನಸಂದ್ರ ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, ಅರ್ಜಿದಾರರ ತಾಯಿಯವರಾದ ಶ್ರೀಮತಿ ಲಕ್ಷ್ಮಮ್ಮ ಕೋಂ ಲೇಟ್ ಮಾದೇಗೌಡ ರವರು ದಿನಾಂಕ: 22.06.2000 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ದುನ್ನಸಂದ್ರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 16.04.2026 ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 09ನೇ ಏಪ್ರಿಲ್ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ.
ಅರ್ಜಿದಾರರ ಪರ ವಕೀಲರು
ಎಸ್.ಆರ್. ಶಶಿಕುಮಾರ್, ವಕೀಲರು
ಕನಕಪುರ
ದಿನಾಂಕ : 09/04/2026

ಅಜಾಕರೂಕತೆಯಿಂದ ಕಾರು ಓಡಿಸಿದ್ದ ಚಾಲಕನಿಗೆ ಛೇಡಿಸಿದ ಹೈಕೋರ್ಟ್

ಲ್ಯಾಂಬೊರ್ಗಿನಿ ಕಾರಲ್ಲಿ ಹೋಗಿ ಕಸ ಗುಡಿಸಿ

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಕಾರು ಓಡಿಸಿದ ಆರೋಪಕ್ಕೆ ಗುರಿಯಾಗಿರುವ ಬೆಂಗಳೂರಿನ ವ್ಯಕ್ತಿಯು ಸಮುದಾಯ ಸೇವೆ ಮಾಡುವುದಾಗಿ ಹೇಳಿರುವುದನ್ನು ಪರಿಗಣಿಸಿರುವ ಕರ್ನಾಟಕ ಹೈಕೋರ್ಟ್ ಹಸಿರು ಲ್ಯಾಂಬೊರ್ಗಿನಿ ಕಾರಿನಲ್ಲಿ ಹೋಗಿ ರಸ್ತೆ ಕಸ ಗುಡಿಸಿ, ಮತ್ತೆ ಲ್ಯಾಂಬೊರ್ಗಿನಿಯಲ್ಲಿ ಬನ್ನಿ ಎಂದು ಮೌಖಿಕವಾಗಿ ಹೇಳಿದೆ.

ಅಂತಿಮವಾಗಿ ಯಾವ ರೀತಿಯ ಸಮುದಾಯ ಸೇವೆಯನ್ನು ಸಿ.ವಿ.ರಾಮನ್ ನಗರದ ಬಿ.ಆರ್.ಚಿರಂತ್ ಮಾಡಬೇಕು ಎಂಬುದನ್ನು ಆದೇಶದಲ್ಲಿ ವಿವರಿಸುವುದಾಗಿ ಹೇಳಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಅರ್ಜಿ ಇತ್ಯರ್ಥಪಡಿಸಿದೆ. ವಿಚಾರಣೆ ಆರಂಭವಾಗುತ್ತಿದ್ದಂತೆ ಪೀಠವು ಚಿರಂತ್‌ಗೆ ಪಶ್ಚಾತ್ತಾಪವಾಗಿದೆ. ಬಿಎನ್‌ಎಸ್‌ಎಸ್‌ನಲ್ಲಿ 10 ರೀತಿಯ ಸಮುದಾಯ ಸೇವೆಗಳಿವೆ. ಲ್ಯಾಂಬೊರ್ಗಿನಿಯಲ್ಲಿ ಹೋಗಿ, ರಸ್ತೆ ಕಸ ಗುಡಿಸಿ, ಮತ್ತೆ ಲ್ಯಾಂಬೊರ್ಗಿನಿಯಲ್ಲಿ ಬನ್ನಿ. ಸಂಚಾರ ನಿಯಮ ಉಲ್ಲಂಘಿಸಿರುವುದರಿಂದ ಸಂಚಾರ ನಿಯಮದ ಪಾಠ ಮಾಡುತ್ತೀರಾ? ನಿಯಮ ಉಲ್ಲಂಘಿಸಿ, ಕಲಿಯುವುದು ಹೇಗೆ ಎಂದು ಮಕ್ಕಳು ಕಲಿಯುತ್ತಾರೆ. ಯಾವ ಸೇವೆ ಮಾಡಬೇಕು ಎಂದು ಬರೆಯುತ್ತೇನೆ, ಅದನ್ನು ಮಾಡಬೇಕು ಎಂದಿತು.

ಅರ್ಜಿದಾರರ ಪರ ವಕೀಲ ರಜತ್ ಅವರು ಚಿರಂತ್ ಅವರನ್ನು ಅಫೆಂಡರ್ ಎಂದು ತೋರಿಸಲಾಗಿದೆ. ಚಿರಂತನ್ ಅವರು ಯಾವುದೇ ಅಪರಾಧ ಮಾಡಿಲ್ಲ. ಆದರೂ, ಅವರು ಸಮುದಾಯ ಸೇವೆ ಮಾಡುವ ಇಚ್ಛೆ ಹೊಂದಿದ್ದಾರೆ. ಸಂಚಾರ ನಿಯಮಗಳ ಬಗ್ಗೆ ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತಾರೆ. ಸಂಚಾರ ನಿಯಮ ಉಲ್ಲಂಘಿಸದಂತೆ ಮಕ್ಕಳಿಗೆ ತಿಳಿಸುತ್ತಾರೆ. ಬೇರೊಂದು ಪ್ರಕರಣದಲ್ಲಿ ವೈದ್ಯರೊಬ್ಬರಿಗೆ ಸರಕಾರಿ ಶಾಲೆಯಲ್ಲಿ ಪ್ರತಿ ಭಾನುವಾರ ಆರು ತಿಂಗಳ ಕಾಲ ಸಮುದಾಯ ಸೇವೆ ಮಾಡುವಂತೆ ನ್ಯಾಯಾಲಯ ನಿರ್ದೇಶಿಸಿದೆ. ಇಡೀ ದೇಶದಲ್ಲೇ ಇದು ಮೊದಲ ಪ್ರಕರಣವಾಗಲಿದೆ. ವಿನಾಯಿತಿ ತೋರಬೇಕು ಎಂದರು. ಹೆಚ್ಚುವರಿ ಸರಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಲ್ಯಾಂಬೊರ್ಗಿನಿ ಕಾರನ್ನು ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡಿದ ವ್ಯಕ್ತಿ ಶಾಲೆಯಲ್ಲಿ ಸಂಚಾರ ನಿಯಮದ ಪಾಠ ಮಾಡುವುದೇ? ಗಿಡಗಳನ್ನು ನೆಡುವುದು ಸೂಕ್ತ ಎಂದರು. ವಾದ ಆಲಿಸಿದ ಪೀಠವು ಅರ್ಜಿ ಇತ್ಯರ್ಥಪಡಿಸಿದೆ.

ಪ್ರಕರಣದ ಹಿನ್ನೆಲೆ

ಮನುಷ್ಯನ ಪ್ರಾಣಕ್ಕೆ ಹಾನಿಯಾಗುವಂಥ ಸೈಲೆನ್ಸರ್ ಅಳವಡಿಸಿಕೊಂಡಿರುವ ಲ್ಯಾಂಬೊರ್ಗಿನಿ ಕಾರನ್ನು ಮೈಸೂರು ರಸ್ತೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿರುವ ವಿಡಿಯೊವನ್ನು ಸನಾತನ ಎಂಬ ಟ್ವಿಟರ್ ಖಾತೆಯಲ್ಲಿ ವೀಕ್ಷಿಸಿರುವುದಾಗಿ ಕರ್ತವ್ಯನಿರತ ಪಿಎಸ್‌ಐ ಆರ್.ರಾಮಸ್ವಾಮಿ ದೂರು ನೀಡಿದ್ದರು. ಇದರ ಅನ್ವಯ ಬೆಂಗಳೂರಿನ ಕೆಂಗೇರಿ ಸಂಚಾರಿ ಠಾಣೆಯಲ್ಲಿ ಜನವರಿ 20ರಂದು -281 ಮತ್ತು ಭಾರತೀಯ ಮೋಟಾರು ವಾಹನಗಳ ಕಾಯಿದೆ 120 ಮತ್ತು177ರ ಅಡಿ ಚಿರಂತನ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

ಗ್ರೇಡಿಂಗ್ ಪ್ರಶ್ನಿಸಿದ್ದಕ್ಕೆ ದಂಡ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವ ಸಂಬಂಧ ಸರಕಾರದ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳ ವರದಿ ಆಧರಿಸಿ ಪಿಐಎಲ್ ಸಲ್ಲಿಸಿದ್ದ ಅರ್ಜಿದಾರರಿಗೆ ಹೈಕೋರ್ಟ್ 1 ಲಕ್ಷ ರು. ದಂಡ ವಿಧಿಸಿ ಆದೇಶಿಸಿದೆ.

ಬೆಂಗಳೂರಿನ ಎಚ್.ಎನ್.ಚಂದನಾ ಮತ್ತು ಎಸ್.ವೆಂಕಟೇಶ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾ.ವಿಭು ಬಖ್ರು ಮತ್ತು ನ್ಯಾ.ಸಿ.ಎಂ.ಪೂಣಚ್ಚ ಅವರಿದ್ದ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗಳಿಗೆ ಅಂಕಗಳ ಬದಲಿಗೆ ಶ್ರೇಣಿಗಳನ್ನು ನೀಡುವ ವ್ಯವಸ್ಥೆಯ ಕುರಿತ ಶಿಕ್ಷಣ ಸಚಿವರ ಹೇಳಿಕೆಗೆ ಸಂಬಂಧಿಸಿದಂತೆ ಪತ್ರಿಕಾ ವರದಿಗಳನ್ನು ಆಧರಿಸಿ ಅರ್ಜಿ ಸಲ್ಲಿಸಲಿದ್ದಾರೆ. ಅರ್ಜಿದಾರರ ಈ ನಡೆ ಅತ್ಯಂತ ಅಗೌರವಯುತವಾಗಿದೆ. ಇಂತಹ ಪತ್ರಿಕಾ ಹೇಳಿಕೆಗಳನ್ನು ರದ್ದುಗೊಳಿಸುವುದಕ್ಕೆ ಹೈಕೋರ್ಟ್‌ಗೆ ಅಸಾಧಾರಣವಾದ ವಿಶೇಷ ನ್ಯಾಯವ್ಯಾಪ್ತಿ ಚಲಾಯಿಸಬೇಕಾಗುತ್ತದೆ ಎಂದು ಪೀಠ ತಿಳಿಸಿದೆ.

ಜತೆಗೆ, ಇದೊಂದು ಪ್ರಚಾರಕ್ಕಾಗಿ ಸಲ್ಲಿಸಿರುವ ಅರ್ಜಿಯಾಗಿದ್ದು, ಅರ್ಜಿದಾರರಿಗೆ 50 ಸಾವಿರ ರು. ದಂಡ ವಿಧಿಸಲಾಗುವುದು. ದಂಡದ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು ಎಂದು ಪೀಠ ತಿಳಿಸಿತು. ಒಂದು ವೇಳೆ ದಂಡದ ಮೊತ್ತವನ್ನು ಪಾವತಿ ಮಾಡದಿದ್ದಲ್ಲಿ, ಅವರ ಭೂ ಕಂದಾಯಕ್ಕೆ ಬಾಕಿ ಮೊತ್ತವನ್ನಾಗಿ ಪರಿಗಣಿಸಿ ವಸೂಲಿ ಮಾಡಬಹುದಾಗಿದೆ ಎಂದು ತಿಳಿಸಿತು.

ಅರ್ಜಿ ವಿವರ: ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ, ಹಿಂದಿ ಭಾಷೆ ಸೇರಿದಂತೆ ತೃತೀಯ ಭಾಷೆಗಳು ಕಡ್ಡಾಯವಲ್ಲ. ಈ ಭಾಷೆಗಳಿಗೆ ಅಂಕಗಳ ಬದಲಿಗೆ ಗ್ರೇಡ್‌ಗಳನ್ನಾಗಿ ಪರಿಗಣಿಸಲಾಗುತ್ತದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದಲೇ ದ್ವಿಭಾಷಾ ಸೂತ್ರವನ್ನು ಜಾರಿಗೆ ತರುವುದಾಗಿ ತಿಳಿಸಿದ್ದಾರೆ. ಅಲ್ಲದೆ, ಸಚಿವರು ಈ ನಿರ್ಧಾರವನ್ನು ಪ್ರಕಟಿಸುವುದಕ್ಕೂ ಮುನ್ನ ಸಾರ್ವಜನಿಕವಾಗಿ ಚರ್ಚೆ ನಡೆಸಿಲ್ಲ. ಸಚಿವ ಸಂಪುಟದ ಅನುಮೋದನೆ ಪಡೆದಿಲ್ಲ ಹಾಗೂ ಭಾಷಾ ತಜ್ಞರ ಸಲಹೆ ಇಲ್ಲದೇ ಏಕಪಕ್ಷೀಯವಾಗಿ ತೆಗೆದುಕೊಂಡಿದ್ದಾರೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಪ್ರವಾಹ: ಯೋಜನೆ ರೂಪಿಸಿ

ಬೆಂಗಳೂರು: ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಗಾಲ ಪೂರ್ವಸಿದ್ಧತೆಯೊಂದಿಗೆ ಪ್ರವಾಹ ತಡೆಗೆ ಸಮಗ್ರ ಕಾರ್ಯಯೋಜನೆ ರೂಪಿಸಿ ಎಂದು ಅಧಿಕಾರಿಗಳಿಗೆ ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್ ರಮೇಶ್ ಸೂಚನೆ ನೀಡಿದರು. ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಗಾಲದ ಸಂದರ್ಭದಲ್ಲಿ ಸಂಭವಿಸಬಹುದಾದ ಪ್ರವಾಹ, ನೀರು ನಿಲ್ಲುವ ಸಮಸ್ಯೆಗಳು ಹಾಗೂ ಮೂಲಸೌಕರ್ಯ ತೊಂದರೆಗಳನ್ನು ಸಮರ್ಥವಾಗಿ ನಿಭಾಯಿಸು ಉದ್ದೇಶದಿಂದ ಸಭೆ ಕರೆಯಲಾಗಿದ್ದು, ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿ, ಮಳೆಗಾಲದ ಪೂರ್ವಸಿದ್ಧತೆ, ವಿಪತ್ತು ನಿರ್ವಹಣೆ, ಇಲಾಖೆಗಳ ಸಮನ್ವಯ ಹಾಗೂ ತುರ್ತು ಪರಿಹಾರ ಕ್ರಮಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಮಗ್ರವಾಗಿ ಚರ್ಚಿಸಿದರು.

ಸಂಚಾರ ಪೊಲೀಸರಿಗೆ ಸೌಲಭ್ಯ ಕಲ್ಪಿಸಲು ಮನವಿ

ಬೆಂಗಳೂರು: ಸಂಚಾರ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಕರ್ತವ್ಯದ ಸ್ಥಳ (ಸಿಗ್ನಲ್)ಗಳಲ್ಲಿ ತಾತ್ಕಾಲಿಕ ನೆರಳು, ಮಾಸ್ಕ್ ಸೇರಿ ಮೂಲ ಸೌಲಭ್ಯ ಒದಗಿಸುವಂತೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ ಎಂ.ಎ.ಸಲೀಂ ಅವರಿಗೆ ಪತ್ರ ಬರೆದಿದ್ದಾರೆ.

ರಾಜ್ಯದಲ್ಲಿ ಬೇಸಿಗೆ ಆರಂಭವಾಗಿದ್ದು, ವರ್ಷದಿಂದ ವರ್ಷಕ್ಕೆ ತಾಪಮಾನ ಹೆಚ್ಚಾಗುತ್ತಿದೆ. ಸರಕಾರದ ಇತರ ಎಲ್ಲ ಇಲಾಖೆಗಳಿಗಿಂತ ಪೊಲೀಸ್ ಇಲಾಖೆಯು ವಿಭಿನ್ನವಾಗಿದ್ದು, ತುರ್ತು ಸೇವೆಯಾಗಿರುವುದರಿಂದ ದಿನದ 24 ಗಂಟೆಗಳ ಕಾಲ ಸನ್ನದ್ಧರಾಗಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಪ್ರಸ್ತುತ 5 ಕೋಟಿಗೂ ಅಧಿಕ ಜನಸಂಖ್ಯೆ ವಾಸಿಸುವ ರಾಜ್ಯದಲ್ಲಿ ಬಿಸಿಲ ಬೇಗೆ ಹೆಚ್ಚಾಗಿದ್ದು, ವಾಹನಗಳಿಂದ ಹೊರಸೂಸುವ ಹೊಗೆ, ವಿವಿಧ ಇಲಾಖೆಗಳಿಂದ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಂದ ಬೃಹತ್ ಮಟ್ಟದ ಮಣ್ಣಿನ ಧೂಳು ಬೆಂಗಳೂರಿನಲ್ಲಿ ಸಂಪೂರ್ಣವಾಗಿ ಆವರಿಸುತ್ತಿದೆ. ಆದ್ದರಿಂದ ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸ್ ಸಿಬ್ಬಂದಿಯ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯದ ಸಂಚಾರ ವಿಭಾಗದಲ್ಲಿ ವಾಹನ ತಪಾಸಣಾ ಮತ್ತು ಸಂಚಾರ ನಿಯಮಗಳ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಸಿಗ್ನಲ್ ಮತ್ತು ಸ್ಥಳಗಳಲ್ಲಿ ತ್ವರಿತವಾಗಿ ಪ್ಯಾರಾಚೂಟ್ ಕೊಡೆಗಳನ್ನು ಮತ್ತು ವಾಯುಮಾಲಿನ್ಯದ ರಕ್ಷಣೆ ಪಡೆಯಲು ಉತ್ತಮ ಗುಣಮಟ್ಟದ ಮಾಸ್ಕ್‌ಗಳನ್ನು ಹಾಗೂ ಬೇಸಿಗೆ ಕಾಲ ಮುಗಿಯುವವರೆಗೆ ದೇಹ ಡಿಹೈಡ್ರೇಟೆಡ್ ಆಗದಂತೆ ನಿರಂತರ ಕುಡಿಯುವ ನೀರು ಮತ್ತು ಎಲೆಕ್ಟ್ರೋಲೈಟ್ ಪಾನೀಯಗಳನ್ನು ನೀಡುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಪತ್ರದಲ್ಲಿ ಕೋರಲಾಗಿದೆ.

ಝೂಂಬಿ ಮಾದಕ ಪೂರೈಕೆ ಆರೋಪ ತಪ್ಪು ಸಂದೇಶ ಹರಿಬಿಟ್ಟಿದ್ದವ ಬಂಧನ

ಬೆಂಗಳೂರು: ಸಾಮಾಜಿಕ ಜಾಲತಾಣದ ಮೂಲಕ ತಪ್ಪು ಸಂದೇಶದ ವಿಡಿಯೋ ಹಂಚಿಕೊಂಡಿದ್ದ ಆರೋಪಿಯನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ವ್ಯಕ್ತಿಯೊಬ್ಬ ಝೂಂಬಿ 'ಡ್ರಗ್ಸ್ ಅಥವಾ ಝೈಲಾಜಿನ್' ಸೇವಿಸಿದ್ದಾನೆ ಎಂದು ವಿಡಿಯೋ ಹರಿಬಿಟ್ಟಿದ್ದ ಆರೋಪದಡಿ ಹೇಮಂತ್ (29) ಎಂಬಾತನನ್ನು ಬಂಧಿಸಲಾಗಿದೆ. ಬಾಗಲೂರು ರಸ್ತೆಯಲ್ಲಿ ವ್ಯಕ್ತಿಯೊಬ್ಬ ಮೈಮೇಲೆ ಪ್ರಜ್ಞೆ ಇಲ್ಲದವನಂತೆ ವಿಚಿತ್ರವಾಗಿ ಕೈ ಕಾಲುಗಳನ್ನು ಆಡಿಸುತ್ತಾ ನಿಂತಿದ್ದ. ಆತ ಎಲ್ಲಿಗೆ ಹೋಗುತ್ತಿದ್ದಾನೆ ಅಥವಾ ಏನು ಮಾಡುತ್ತಿದ್ದಾನೆ ಎಂಬ ಅರಿವಿಲ್ಲದಂತೆ ವರ್ತಿಸುತ್ತಿದ್ದುದನ್ನು ಕಂಡ ಆರೋಪಿ, ವಿದೇಶಗಳಲ್ಲಿ ಕಂಡುಬರುವ ಝೂಂಬಿ 'ಡ್ರಗ್ಸ್ ಅಥವಾ ಝೈಲಾಜಿನ್' ನಶೆಯಲ್ಲಿ ಈ ವ್ಯಕ್ತಿ ವಿಚಿತ್ರವಾಗಿ ವರ್ತನೆ ಮಾಡುತ್ತಿರಬಹುದು ಎಂದು ಶಂಕಿಸಿ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದ.ಈ ಸಂಬಂಧ, ಬಾಗಲೂರು ಪೊಲೀಸ್ ಠಾಣೆಯ ಅಧಿಕಾರಿಗಳು ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಸಂಸ್ಥೆ ಸಮೀಪದಲ್ಲಿ ಆ ವ್ಯಕ್ತಿಯನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದುಕೊಂಡು ತಕ್ಷಣ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು. ವೈದ್ಯಕೀಯ ವರದಿಗಳ ಪ್ರಕಾರ, ಆ ವ್ಯಕ್ತಿಯು ಯಾವುದೇ ಮಾದಕವಸ್ತು ಅಥವಾ ಮನೋ ಪ್ರೇರಕ ಪದಾರ್ಥಗಳನ್ನು ಸೇವಿಸಿರುವುದಿಲ್ಲ ಎಂದು ದೃಢಪಟ್ಟಿರುತ್ತದೆ. ವಿಚಾರಣೆ ವೇಳೆಯಲ್ಲಿ ಆ ವ್ಯಕ್ತಿಗೆ ಸಂಧಿವಾತ (ಆರ್ಥೈಟಿಸ್) ಇರುವುದಾಗಿ ತಿಳಿದುಬಂದಿದ್ದು, ವೈದ್ಯರು ನೀಡಿದ ನೋವು ನಿವಾರಕ ಔಷಧಗಳೊಂದಿಗೆ ಮದ್ಯ ಸೇವಿಸಿದ್ದರಿಂದ ಒಂದೇ ಕಡೆ ನಿಂತಿರುವ ಸ್ಥಿತಿಯಲ್ಲಿರುವಂತೆ ವಿಡಿಯೊದಲ್ಲಿ ಕಂಡುಬಂದಿರುವುದು ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಪ್ಪು ಮಾಹಿತಿ ನೀಡುವ ವಿಡಿಯೊ ಅಪ್‌ಲೋಡ್ ಮಾಡಿದ್ದ ವ್ಯಕ್ತಿಯನ್ನು ಬಾಗಲೂರು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ತಾನು ಮಾಡಿದ್ದು ತಪ್ಪು ಎಂದು ಒಪ್ಪಿಕೊಂಡಿರುವ ಆತ, ಈಗ ಕ್ಷಮೆ ಯಾಚಿಸಿ ವಿಡಿಯೊ ಮಾಡಿದ್ದಾನೆ. 'ಏಪ್ರಿಲ್ 7ರಂದು ಕೆಲಸ ಮುಗಿಸಿ ಬಾಗಲೂರಿಂದ ರಾಜನುಕುಂಟೆಗೆ ಹೋಗುತ್ತಿದ್ದಾಗ ನಿಟ್ಟೆ ಮೀನಾಕ್ಷಿ ಕಾಲೇಜು ಬಳಿ ಒಬ್ಬ ವ್ಯಕ್ತಿ ನಿಂತಲ್ಲೇ ನಿಂತಿದ್ದ. ನಾನು ಆ ವೀಡಿಯೊ ಸೆರೆ ಹಿಡಿದು ಆತ ಝೂಂಬಿ ಡ್ರಗ್ಸ್ ಸೇವಿಸಿದ್ದಾನೆ ಎಂದು ವೈರಲ್ ಮಾಡಿದ್ದೆ. ಕರ್ನಾಟಕದ ಜನತೆಯಲ್ಲಿ ಕ್ಷಮೆ ಕೇಳುತ್ತೇನೆ' ಎಂದು ಆರೋಪಿ ಹೇಮಂತ್ ತಿಳಿಸಿದ್ದಾನೆ.

ವಿದೇಶಗಳಲ್ಲಿ ಇಂತಹ ಡ್ರಗ್ಸ್ ಇದೆ ಎಂಬ ಕಾರಣಕ್ಕೆ ಆತ ಇಲ್ಲೂ ಅದೇ ರೀತಿ ಇರಬಹುದು ಎಂದು ಊಹಿಸಿ ಹೇಮಂತ್ ಎಂಬಾತ ವಿಡಿಯೊ ಮಾಡಿದ್ದಾನೆ. ಯಾರೇ ಆಗಲಿ ಆಧಾರರಹಿತ ಮಾಹಿತಿ ಅಥವಾ ವಿಡಿಯೋಗಳನ್ನು ಶೇರ್ ಮಾಡಬಾರದು. ಈ ಸುಳ್ಳು ವಿಡಿಯೋವನ್ನು ಯಾರೆಲ್ಲಾ ಶೇರ್ ಮಾಡಿದ್ದಾರೋ, ಅವರೆಲ್ಲರಿಗೂ ನೋಟಿಸ್ ನೀಡಲಿದ್ದೇವೆ. ಸಾರ್ವಜನಿಕರು ಇಂತಹ ಯಾವುದೇ ದೃಢೀಕರಿಸದ ವಿಡಿಯೋಗಳನ್ನು ನಂಬಬಾರದು ಮತ್ತು ಶೇರ್ ಮಾಡಬಾರದು.

- ಸೀಮಂತ್ ಕುಮಾರ್ ಸಿಂಗ್ ಬೆಂಗಳೂರು ನಗರ ಪೊಲೀಸ್ ಆಯುಕ್ತ

₹ 6 @vishwavaninews epaper.vishwavani.news vishwavani.news ಶನಿವಾರ 11.04.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮತ್ತೆ ಪ್ರಜ್ವಲಿಸಿದ ಸೂರ್ಯ

ಗುವಾಹಟಿಯಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವನ್ನು ರಾಜಸ್ಥಾನ್ ರಾಯಲ್ಸ್ 6 ವಿಕೆಟ್‌ಗಳಿಂದ ಮಣಿಸಿದೆ. ಇದು ರಾಜಸ್ಥಾನಕ್ಕೆ ಸತತ 4ನೇ ಜಯ. ಬೆಂಗಳೂರಿಗೆ ಮೊದಲನೇ ಸೋಲು. ರಾಜಸ್ಥಾನ್ ಮತ್ತೆ ಅಬ್ಬರಿಸಿದ ವೈಭವ್ ಸೂರ್ಯವಂಶಿ 26 ಎಸೆತಕ್ಕೆ 78 ರನ್ ಗಳಿಸಿದರು.

ಸೊಂಪಾದ ಪುಟಗಳು

ಭಾರತಕ್ಕೆ ತನ್ನನ್ನೇ ಅರ್ಪಿಸಿದ ಸಿಸ್ಟರ್ ನಿವೇದಿತಾ

ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಓಜಸ್ಸೇ ಭವ-ಜೀವನದ ಪರಮ ಸಂಪತ್ತು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ. ಸಾಧನಶ್ರೀ 7

ದಾರಿದೀಪೋಕ್ತಿ

ನೀವು ಯಾರೊಂದಿಗಾದರೂ ನಿಜವಾದ ಸಂಬಂಧ ಕಾಪಾಡಿಕೊಳ್ಳಲು ಬಯಸಿದರೆ, ಅವರ ಬಗ್ಗೆ ಕೇಳಿದ್ದನ್ನು ಅಲ್ಲ, ಅವರ ಬಗ್ಗೆ ನಿಮಗೆ ತಿಳಿದಿರುವುದನ್ನು ಮಾತ್ರ ನಂಬಬೇಕು.

ವಕ್ರತುಂಡೋಕ್ತಿ

ಒಬ್ಬರು ಹೇಳ್ತಾನೆ ಇರುತ್ತಾರೆ, ಮಿಕ್ಕವರೆಲ್ಲ ಕಣ್ಣು ಮುಚ್ಚಿ ತಲೆ ತೂಗುತ್ತಿದ್ದರೆ, ನೀವು ಆಫೀಸ್ ಮೀಟಿಂಗ್ ಅಥವಾ ಭಜನಾ ಕಾರ್ಯಕ್ರಮದಲ್ಲಿ ಇದ್ದೀರಿ ಎಂದರ್ಥ.

ಏ.15ಕ್ಕೆ ಪ್ರಧಾನಿ ಚುಂಚನಗಿರಿಗೆ

ಮಂಡ್ಯ: ಪ್ರಧಾನಿ ಮೋದಿ ಏ.15ಕ್ಕೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿರುವ ಆದಿಚುಂಚನಗಿರಿಗೆ ಭೇಟಿ ನೀಡುವುದು ಖಚಿತವಾಗಿದೆ. ಪ್ರಧಾನಿ ಆದಿಚುಂಚನಗಿರಿ ಮಠದಲ್ಲಿ ಬಾಲಗಂಗಾಧರನಾಥ ಶ್ರೀಗಳ ಗದ್ದುಗೆ ಉದ್ಘಾಟನೆ ಮಾಡಲಿದ್ದಾರೆ. ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಲಿದ್ದಾರೆ. ಫೆಬ್ರವರಿ ತಿಂಗಳಲ್ಲಿ ಪ್ರಧಾನಿ ಬರುವ ಕಾರ್ಯಕ್ರಮವಿತ್ತು. ಆದರೆ ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ.

ಅನಿಶ್ಚಿತತೆಯ ನಡುವೆ ಇಸ್ಲಾಮಾಬಾದ್‌ನಲ್ಲಿ ಮಾತುಕತೆಗೆ ವೇದಿಕೆ ಸಿದ್ಧ

ಕದನ ವಿರಾಮವಿದ್ದರೂ ಲೆಬನಾನ್ ವಿರುದ್ಧ ಇಸ್ರೇಲ್ ಬಾಂಬ್ ಸುರಿಮಳೆ

ಪಾಕ್‌ನಲ್ಲಿಂದು ಶಾಂತಿಸಭೆ

ನರಕದಲ್ಲಿ ಬೆಂದು ಹೋಗಿ; ಇಸ್ರೇಲ್‌ಗೆ ಪಾಕ್ ಶಾಪ, ನೆತನ್ಯಾಹು ಕಿಡಿ

ಇಸ್ಲಾಮಾಬಾದ್: ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ತಾತ್ಕಾಲಿಕ ಕದನ ವಿರಾಮ ಘೋಷಣೆಯ ಬಳಿಕವೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿದಿದೆ. ಈ ಅನಿಶ್ಚಿತತೆಯ ನಡುವೆ ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಪಾಕಿಸ್ತಾನದಲ್ಲಿ ವೇದಿಕೆ ಸಿದ್ಧವಾಗಿದೆ. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನೇತೃತ್ವದ ತಂಡ ಈಗಾಗಲೇ ಇಸ್ಲಾಮಾಬಾದ್ ತಲುಪಿದೆ. ಆದರೆ, ಲೆಬನಾನ್ ಸಮರ ನಿಲ್ಲದೆ ಮಾತುಕತೆಗೆ ಮುಂದಾಗುವುದಿಲ್ಲ ಎಂದಿರುವ ಇರಾನ್, ತನ್ನ ಪ್ರತಿನಿಧಿಗಳನ್ನು ಇನ್ನೂ ಕಳುಹಿಸಿ ಕೊಟ್ಟಿಲ್ಲ.

ಟೆಹರಾನ್ ಮತ್ತು ವಾಷಿಂಗ್ಟನ್ ಸಂಧಾನ ಮಾತುಕತೆಗೆ ಮಧ್ಯವರ್ತಿಯಾಗಿ ಹೊರಹೊಮ್ಮಿರುವ ಪಾಕಿಸ್ತಾನವು, ಕದನ ವಿರಾಮದ ಒಪ್ಪಂದವು ಲೆಬನಾನ್ ಸಂಘರ್ಷವನ್ನು ಒಳಗೊಂಡಿದೆ ಎಂದು ಹೇಳಿದೆ. ಆದರೆ ಅಮೆರಿಕ ಮತ್ತು ಇಸ್ರೇಲ್ ಎರಡೂ ಇದನ್ನು ತಿರಸ್ಕರಿಸಿದ್ದು, ಲೆಬನಾನ್ ಮೇಲೆ ದಾಳಿ ಮುಂದುವರಿದಿದೆ. ದಾಳಿ ಸಂಬಂಧ ಇಸ್ರೇಲ್ ವಿರುದ್ಧ ಕಿಡಿಕಾರಿರುವ ಪಾಕಿಸ್ತಾನ, ಅನಿಶ್ಚಿತತೆಯ ನಡುವೆಯೇ ರಾಯಭಾರಕ್ಕೆ ಸಿದ್ಧವಾಗಿದೆ.

ಟ್ರಂಪ್ ಮಾತಿಗೆ ಬೆಲೆ ಇಲ್ಲ

ಬೇರುತ್: ಲೆಬನಾನ್ ಮೇಲಿನ ದಾಳಿಗಳನ್ನು ಹಿಂತೆಗೆದುಕೊಳ್ಳುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಸೂಚಿಸಿದ್ದಾರೆ. ಇಷ್ಟಾದರೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿದೆ. ಇಸ್ರೇಲ್‌ನ ಜೆಟ್‌ಗಳು ಶುಕ್ರವಾರವೂ ಎರಡು ಲೆಬನಾನ್ ಪಟ್ಟಣಗಳ ಮೇಲೆ ವಾಯುದಾಳಿ ನಡೆಸಿವೆ. ಇದಕ್ಕೆ ಪ್ರತಿಯಾಗಿ ಹಿಜ್ಬುಲ್ಲಾ ಉಗ್ರರು ಉತ್ತರ ಇಸ್ರೇಲಿ ಪಟ್ಟಣವನ್ನು ಗುರಿಯಾಗಿಸಿಕೊಂಡು ರಾಕೆಟ್ ದಾಳಿ ನಡೆಸಿದ್ದಾರೆ.

ಮಾತುಕತೆಗಾಗಿ ಇಸ್ಲಾಮಾಬಾದ್‌ಗೆ ಆಗಮಿಸುತ್ತಿರುವ ಅಮೆರಿಕ ಮತ್ತು ಇರಾನ್ ಪ್ರತಿನಿಧಿಗಳು ಹಾಗೂ ಉಭಯ ಪತ್ರಕರ್ತರಿಗೆ ವೀಸಾ ಆನ್ ಆಗಮನ ಸೌಲಭ್ಯವನ್ನು ಪಾಕಿಸ್ತಾನ ಘೋಷಿಸಿದೆ. ಈ ನಿಟ್ಟಿನಲ್ಲಿ, ವೀಸಾ ಇಲ್ಲದ ವ್ಯಕ್ತಿಗಳಿಗೂ ಬೋರ್ಡಿಂಗ್‌ಗೆ ಅನುಮತಿ ನೀಡುವಂತೆ ಎಲ್ಲಾ ವಿಮಾನಯಾನ ಸಂಸ್ಥೆಗಳನ್ನು ವಿನಂತಿಸಲಾಗಿದೆ ಎಂದು ಪಾಕಿಸ್ತಾನ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಇಶಾಕ್ ದಾರ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಇಸ್ರೇಲ್ ಖ್ವಾಜಾ ಆಸಿಫ್ ಶಾಪ: ಸಂಧಾನ ಮಾತುಕತೆಗೆ ಸಿದ್ಧತೆ ನಡೆದಿರುವ ನಡುವೆಯೇ ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ಅವರು,ಇಸ್ರೇಲ್ ವಿರುದ್ಧ ನೀವು ಮಾನವ ಕುಲಕ್ಕೆ ಶಾಪ, ನರಕದಲ್ಲಿ ಬೆಂದು ಹೋಗಿ ಎಂಬ ಕಠಿಣ ಪದಗಳನ್ನು ಬಳಕೆ ಮಾಡಿದ್ದು ಲೆಬನಾನ್‌ನಲ್ಲಿ ಇಸ್ರೇಲ್ ಕೈಗೊಂಡಿರುವ ಕ್ರಮಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. ಇಸ್ರೇಲ್ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಬಳಿಕ, ಖ್ವಾಜಾ ಆಸೀಫ್ ತಮ್ಮ ಜಾಲತಾಣದಲ್ಲಿನ ತಮ್ಮ ಪೋಸ್ಟ್ ಅಳಿಸಿದ್ದಾರೆ.

ಖ್ವಾಜಾ ಆಸಿಫ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಾಕಿದ ಪೋಸ್ಟ್ ನಲ್ಲಿ, 'ಇಸ್ರೇಲ್ ಒಂದು ದುಷ್ಟ ಶಕ್ತಿ ಮತ್ತು ಮಾನವಕುಲಕ್ಕೆ ಶಾಪವಾಗಿದೆ. ಲೆಬನಾನ್‌ನಲ್ಲಿ ನರಮೇಧ ನಡೆಯುತ್ತಿದೆ. ಮೊದಲು ಗಾಜಾ, ನಂತರ ಇರಾನ್, ಈಗ ಲೆಬನಾನ್‌ನಲ್ಲಿ ಇಸ್ರೇಲ್‌ನಿಂದ ಅಮಾಯಕ ನಾಗರಿಕರ ಕೊಲೆಯಾಗುತ್ತಿದೆ. ರಕ್ತಪಾತವು ಅವಿರತವಾಗಿ ಮುಂದುವರಿದಿದೆ ಎಂದು ದೂಷಿಸಿದ್ದಾರೆ. ಯುರೋಪಿಯನ್ ಯಹೂದಿಗಳಿಂದ ಮುಕ್ತಿ ಪಡೆಯಲು ಪ್ಯಾಲೆಸ್ತೀನ್ ಭೂಮಿಯಲ್ಲಿ ಈ 'ಕ್ಯಾನ್ಸರ್ ಕಾರಕ ರಾಷ್ಟ್ರ' ವನ್ನು (ಇಸ್ರೇಲ್) ಸೃಷ್ಟಿಸಿದವರು ನರಕದಲ್ಲಿ ಬೆಂದು ಹೋಗಲಿ ಎಂದು ನಾನು ಪ್ರಾರ್ಥಿಸು ತ್ತೇನೆ' ಎಂದು ಕಿಡಿಕಾರಿದ್ದರು.

ಅಮೆರಿಕದ ಡ್ರೋನ್ ಉಡೀಸ್

ಕದನ ವಿರಾಮ ಘೋಷಣೆಯ ಬಳಿಕ ಹೊರ್ಮುಜ್ ಜಲಸಂಧಿ ಯಲ್ಲಿ ವೈಮಾನಿಕ ಕಣ್ಗಾವಲು ನಡೆಸಲು ಹೊರಟ ಸುಮಾರು 1800 ಕೋಟಿ ರೂ. ಮೌಲ್ಯದ ಡ್ರೋನ್ ನಾಪತ್ತೆಯಾಗಿದೆ. ಹೊರ್ಮುಜ್ ಜಲಸಂಧಿ ಬಳಿ ಅಮೆರಿಕದ ಅತ್ಯಂತ ದುಬಾರಿ ಕಣ್ಗಾವಲು ಡ್ರೋನ್ MQ-4C ಟ್ರೈಟಾನ್ ತುರ್ತು ಎಚ್ಚರಿಕೆ ಕಳುಹಿಸಿ ನಾಪತ್ತೆಯಾಗಿದೆ. ಅಮೆರಿಕ-ಇರಾನ್ ನಡುವಿನ ಉದ್ವಿಗ್ನತೆಯ ಮಧ್ಯೆ ಈ ಘಟನೆ ನಡೆದಿದೆ. ಈ ನಡುವೆ ಇರಾನ್ ಹೊರ್ಮುಜ್ ಜಲಸಂಧಿಯಲ್ಲಿ ದಿನಕ್ಕೆ ಕೇವಲ 15 ಹಡಗುಗಳ ಸಂಚಾರಕ್ಕೆ ಅನುಮತಿ ನೀಡುವುದಾಗಿ ತಿಳಿಸಿದೆ.

ಕೆಪಿಸಿಸಿ ಕಚೇರಿಯಲ್ಲಿ ಮುಸ್ಲಿಂ ನಾಯಕರ ಸುದ್ದಿಗೋಷ್ಠಿ
ಕೆಲ ಹಿರಿಯರಿಂದಲೇ ಪಕ್ಷದ ಸೋಲಿಗೆ ಷಡ್ಯಂತ್ರ ಆರೋಪ

ಜಮೀರ್ ವಿರುದ್ಧ ಕೈ ನಾಯಕರ ಕಿಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಉಪಸಮರ ಮತದಾನ ಮುಗಿಯುತ್ತಲೇ ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟಗೊಂಡಿದ್ದು, ಈ ಬಾರಿ ಮುಸ್ಲಿಂ ನಾಯಕರೇ ಮುಸ್ಲಿಂ ನಾಯಕರ ವಿರುದ್ಧ ಕಿಡಿಕಾರಿದ್ದಾರೆ. ಮೇಲ್ನೋಟಕ್ಕೆ ಯಾರ ಹೆಸರನ್ನೂ ಪ್ರಸ್ತಾಪಿಸದಿದ್ದರೂ, ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಅಂತರ ಕಾಯ್ದುಕೊಂಡಿದ್ದ ಸಚಿವ ಜಮೀರ್ ಅಹ್ಮದ್, ನಾಸೀರ್ ಹಾಗೂ ಅಬ್ದುಲ್ ಜಬ್ಬಾರ್ ವಿರುದ್ಧ ನಾಯಕರು ಕಿಡಿಕಾರಿದ್ದಾರೆ. 'ನಮ್ಮ ಪಕ್ಷದ ಮುಖಂಡರೇ ನಮ್ಮ ಅಭ್ಯರ್ಥಿ ವಿರುದ್ಧ ಷಡ್ಯಂತ್ರ ರೂಪಿಸಿದ್ದಾರೆ' ಎಂದು ಶಾಸಕ ರಿಜ್ವಾನ್ ಅರ್ಷದ್, ಸಲೀಂ ಅಹ್ಮದ್ ಸೇರಿದಂತೆ ಹಲವು ನಾಯಕರು ಅಸಮಾಧಾನ ವ್ಯಕ್ತಪಡಿಸಿ ದ್ದಾರೆ. ಕಾಂಗ್ರೆಸ್ ಕಚೇರಿಯಲ್ಲಿಯೇ ಸುದ್ದಿಗೋಷ್ಠಿ ನಡೆಸಿರುವ ನಾಯಕರು, ಪಕ್ಷದ ಪ್ರಮುಖ ಮುಸ್ಲಿಂ ನಾಯಕರ ಹೆಸರು ಹೇಳದೆಯೇ ವಾಗ್ದಾಳಿ ನಡೆಸಿದ್ದಾರೆ. → 4

ಅಲ್ಪ ಸಂಖ್ಯಾತ ಮತದಾರರು ಕಾಂಗ್ರೆಸ್‌ಗೆ ಮತ ಚಲಾಯಿಸುವ ಮೂಲಕ ಗೆಲುವಿಗೆ ನಾಂದಿ ಹಾಡಲಿದ್ದಾರೆ. ನಮಗೆ ವಹಿಸಿದ್ದ ಚುನಾವಣಾ ಜವಾಬ್ದಾರಿಯನ್ನು ಸೂಸೂತ್ರವಾಗಿ ನಿಭಾಯಿಸಿದ್ದೇವೆ. ಸಮರ್ಥ್‌ಗೆ ಟಿಕೆಟ್ ನೀಡುವ ಬಗ್ಗೆ ಅಲ್ಪ ಸಂಖ್ಯಾತ ನಾಯಕರ ಸಭೆಯಲ್ಲಿ ನಿರ್ಧಾರವಾಗಿತ್ತು. ಆದರೂ ಕೆಲವರು ಚುನಾವಣೆ ಪ್ರಚಾರಕ್ಕೆ ಬರದೇ, ಕಾಂಗ್ರೆಸ್ ಸೋಲಿಸುವ ಷಡ್ಯಂತ್ರ ರೂಪಿಸಿದರು.

– ಸಲೀಂ ಅಹ್ಮದ್, ವಿಧಾನಪರಿಷತ್ ಮುಖ್ಯ ಸಚೇತಕ

ಸಮುದಾಯ ದ್ರೋಹ ಆರೋಪಕ್ಕೆ ತಿರುಗೇಟು

ರಂಜಾನ್ ಹಬ್ಬದ ದಿನದಂದು ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒಳಗೊಂಡ ಸಭೆಯನ್ನು ಕರೆಯಲಾಗಿತ್ತು. ಜವಾಬ್ದಾರಿ ನೀಡಿದ ಮೇಲೆ ಪ್ರತಿಯೊಬ್ಬ ಅಲ್ಪಸಂಖ್ಯಾತ ಶಾಸಕರು ದಾವಣಗೆರೆಗೆ ತೆರಳಿ ಕೆಲಸ ಮಾಡಿದ್ದಾರೆ. 'ಸಮುದಾಯದ ದ್ರೋಹಿಗಳು' ಎಂದು ಸಾಮಾಜಿಕ ಜಾಲತಾಣದಲ್ಲಿ ಹೇಳುವುದು ಸರಿಯಲ್ಲ. ಒಳಗಡೆ ಒಪ್ಪಿಕೊಂಡು ಹೊರಗಡೆ ವಿರೋಧ ಮಾಡುವುದು ಸರಿಯಲ್ಲ ಎಂದು ಪರೋಕ್ಷವಾಗಿ ಜಮೀರ್ ವಿರುದ್ಧ ನಾಯಕರು ಅಸಮಾಧಾನ ವ್ಯಕ್ತಪಡಿಸಿದರು.

ರಾಷ್ಟ್ರೋತ್ಥಾನ ರೂವಾರಿ ರಾಮಸ್ವಾಮಿ ಇನ್ನಿಲ್ಲ

ಬೆಂಗಳೂರು: ಹಿರಿಯ ವಿದ್ವಾಂಸ. ಲೇಖಕ, ನಾಡೋಜ, ರಾಷ್ಟ್ರೋತ್ಥಾನ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ. ಎಸ್.ಆರ್. ರಾಮಸ್ವಾಮಿ (88 ವರ್ಷ) ಶುಕ್ರವಾರ ಬೆಳಗ್ಗೆ ಬೆಂಗಳೂರಿನ ಶಂಕರಪುರದ ರಂಗರಾವ್ ರಸ್ತೆಯ ಸ್ವಗೃಹದಲ್ಲಿ ವಿಧಿವಶರಾಗಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್‌ನ ನಿಕಟ ಪೂರ್ವ ಅಧ್ಯಕ್ಷರಾಗಿದ್ದ ರಾಮಸ್ವಾಮಿ ಪತ್ರಕರ್ತರಾಗಿ, ಲೇಖಕರಾಗಿ, ಚಿಂತಕರಾಗಿ, ವಿಮರ್ಶಕರಾಗಿ, ಸಾಮಾಜಿಕ ಕಾರ್ಯಕರ್ತರಾಗಿ ನಾಡಿನಲ್ಲಿ ಪರಿಚಿತರು. ಮಧ್ಯಾಹ್ನ 12:00ರ ವರೆಗೆ ರಾಷ್ಟ್ರೋತ್ಥಾನದ ಕೇಂದ್ರ ಕಚೇರಿ, ಕೇಶವ ಶಿಲ್ಪದಲ್ಲಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಚಾಮರಾಜಪೇಟೆಯ ರುದ್ರಭೂಮಿ ಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.



1950ರ ದಶಕದಲ್ಲಿ ಪತ್ರಿಕೋದ್ಯಮ ಪ್ರವೇಶಿಸಿದ ಇವರು, 1972 ರಿಂದ 79ರವರೆಗೆ ಸುಧಾ ವಾರಪತ್ರಿಕೆಯ ಮುಖ್ಯ ಉಪ ಸಂಪಾದಕರಾಗಿ ಸೇವೆ ಸಲ್ಲಿಸಿದರು. 1980 ರಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಉತ್ಥಾನ ಮಾಸಪತ್ರಿಕೆಯ ಗೌರವ ಪ್ರಧಾನ ಸಂಪಾದಕರಾಗಿ ನಿಧನರಾಗುವ ವರೆಗೂ ಸೇವಾನಿರತರಾಗಿದ್ದರು.

ಮೂಲತಃ ಬೆಂಗಳೂರಿನವರೇ ಆದ ರಾಮಸ್ವಾಮಿ ಅವರು ಕನ್ನಡ, ತೆಲುಗು, ಸಂಸ್ಕೃತ, ಹಿಂದಿ, ಇಂಗ್ಲಿಷ್, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿ ದ್ದರು. ರಾಮಸ್ವಾಮಿ ಅವರ ನಿಧನಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹಸರಕಾರ್ಯವಾಹ ಮುಕುಂದ, ಕ್ಷೇತ್ರೀಯ ಸಂಘಚಾಲಕ ಡಾ.ಪಿ.ವಾಮನ್ ಶೆಣೈ, ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಪ್ರಾಂತ ಕಾರ್ಯವಾಹ ಡಾ. ಎಂ. ಜಯಪ್ರಕಾಶ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸಂಸತ್ತಿನ ವಾಗ್ದಂಡನೆ ಪ್ರಕ್ರಿಯೆಯಿಂದ ಪಾರಾದ ಕಳಂಕಿತ ನ್ಯಾಯಾಧೀಶ

ಅಲಹಾಬಾದ್ ಹೈಕೋರ್ಟ್ ಜಡ್ಜ್ ವರ್ಮಾ ರಾಜೀನಾಮೆ

ದೆಹಲಿ: ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಲುಕಿದ್ದ ದೇಶವ್ಯಾಪಿ ಸುದ್ದಿಯಾಗಿದ್ದ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ದಿಢೀರ್ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ ಸಂಸತ್ತಿನಲ್ಲಿ ನಡೆಯಬೇಕಿದ್ದ ವಾಗ್ದಂಡನೆ ಪ್ರಕ್ರಿಯೆಯಿಂದ ಪಾರಾಗಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಬರೆದ ರಾಜೀನಾಮೆ ಪತ್ರದಲ್ಲಿ ನ್ಯಾಯಮೂರ್ತಿ ವರ್ಮಾ ಈ ಹಠಾತ್ ನಿರ್ಧಾರಕ್ಕೆ ಯಾವುದೇ ಕಾರಣವನ್ನು ಉಲ್ಲೇಖಿಸಿಲ್ಲ. 'ಈ ಪತ್ರವನ್ನು ಸಲ್ಲಿಸಲು ನನ್ನನ್ನು ನಿರ್ಬಂಧಿಸಿದ ಕಾರಣಗಳಿಂದ ನಿಮ್ಮ ಗೌರವಾನ್ವಿತ ಕಚೇರಿಯ ಮೇಲೆ ಹೊರೆ ಹಾಕಲು ನಾನು ಉದ್ದೇಶಿಸಿಲ್ಲ. ಅಲಹಾಬಾದ್‌ನ ಗೌರವಾನ್ವಿತ ಹೈಕೋರ್ಟ್ ನ್ಯಾಯಾಧೀಶನ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜೀನಾಮೆ ನೀಡಲು ತೀವ್ರ ದುಃಖವಾಗುತ್ತಿದೆ' ಎಂದು ಏಪ್ರಿಲ್ 9 ರಂದು ಬರೆದ ಪತ್ರದಲ್ಲಿ ಅವರು ತಿಳಿಸಿದ್ದಾರೆ.

ವರ್ಮಾ ಅವರ ರಾಜೀನಾಮೆಯೊಂದಿಗೆ ಹೈಕೋರ್ಟ್ ನ್ಯಾಯಾಧೀಶ ಸ್ಥಾನದಿಂದ ಅವರನ್ನು ಪದಚ್ಯುತಿಗೊಳಿಸುವ 'ಮಹಾಭಿಯೋಗ ಪ್ರಕ್ರಿಯೆ' ಕೊನೆಗೊಳ್ಳಲಿದೆ ಎಂದು ಲೋಕಸಭಾ ಸಚಿವಾಲಯದ ಮೂಲಗಳು ತಿಳಿಸಿವೆ.

ತಮ್ಮ ವಿರುದ್ಧದ ಆರೋಪಗಳ ಸಂಬಂಧ, ಸುದೀರ್ಘ ಕಾನೂನು ಸಮರ ನಡೆಸಿದ ವರ್ಮಾ, ಪಾರಾಗುವ ಎಲ್ಲ ಬಾಗಿಲುಗಳು ಮುಚ್ಚಿದ ಬಳಿಕ ಅಂತಿಮವಾಗಿ ಈ ನಿರ್ಧಾರ ಕೈಗೊಂಡಿದ್ದಾರೆ. → 4

ಸೋತ ದುಃಖ ಇಲ್ಲ, ಜನರ ಜತೆಗಿರುವ ಖುಷಿ ಇದೆ...

ರಾಜ್ಯ ಬಿಜೆಪಿ ಉಪಾಧ್ಯಕ್ಷೆಯಾಗಿ ತಳಮಟ್ಟದಿಂದ ಪಕ್ಷ ಸಂಘಟಿಸುತ್ತಿರುವ ಗಟ್ಟಿಗಿತ್ತಿ ಜನರ ಒಡನಾಡಿ ರೂಪಾಲಿ ನಾಯ್ಕ್ ಅವರ ವಿಶೇಷ ಸಂದರ್ಶನ.

ವಿವರಪುಟ → 5

ಜಿಬಿಎ ಚುನಾವಣೆ ಮುನ್ನ ಬೆಂಗ್ಳೂರಲ್ಲಿ ಬಲಪ್ರದರ್ಶನ

ಇಂದು ಜೆಡಿಎಸ್ ಸಮಾವೇಶ

ಬೆಂಗಳೂರು: ಗ್ರೇಟರ್ ಬೆಂಗಳೂರು (ಜಿಬಿಎ) ಚುನಾವಣೆ ಸಂಬಂಧ ಪಕ್ಷಕ್ಕೆ ಬಲ ತುಂಬಲು ಹಾಗೂ ಸಂಘಟನೆ ಬಲವರ್ಧನೆಗೆ ಬೆಂಗಳೂರಿನ ಕೊಮ್ಮಘಟ್ಟದಲ್ಲಿ ಶನಿವಾರ (ಇಂದು) ಬೆಳ್ಳಿ ಹಬ್ಬ ಸಮಾವೇಶವನ್ನು ಜೆಡಿಎಸ್ ಆಯೋಜಿಸಿದ್ದು ಚುನಾವಣೆ ಮುಂಚಿತವಾಗಿ ಶಕ್ತಿ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದೆ.

ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಸಮಾವೇಶ ಉದ್ಘಾಟನೆ ಮಾಡಲಿದ್ದು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಪಕ್ಷದ ಹಿರಿಯ ನಾಯಕರು ಹಾಗೂ ಮುಖಂಡರು ಭಾಗಿಯಾಗಲಿದ್ದಾರೆ.

ಜಿಬಿಎ ಚುನಾವಣೆಯಲ್ಲೂ ಹೆಚ್ಚಿನ ಸದಸ್ಯರನ್ನು ಹೊಂದುವ ಗುರಿಯೊಂದಿಗೆ ಪಕ್ಷ ಸಂಘಟನೆ ಬಲಪಡಿಸಲು ರಾಜ್ಯಾದ್ಯಂತ ಸಮಾವೇಶಗಳನ್ನು ನಡೆಸಲು ಪಕ್ಷ ಸಿದ್ಧವಾಗಿದ್ದು, ಬೆಂಗಳೂರಿನಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂಬ ಟೀಕೆಗಳಿಗೆ ಉತ್ತರ ವಾಗಿ, ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಯುವ ಜನತಾ ದಳದ ನಿಖಿಲ್ ಕುಮಾರ ಸ್ವಾಮಿ ತಿಳಿಸಿದ್ದಾರೆ.

ಖಾಸಗಿ ಫೈನಾನ್ಸ್ ಕಂಪನಿಗಳಿಗೆ ಸರಕಾರ ಸೂಚನೆ

ಗೃಹಲಕ್ಷ್ಮೀ ಹಣಕ್ಕೆ ಕತ್ತರಿಸಲ್ಲ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯಲ್ಲಿ ಮಹಿಳೆಯರ ಖಾತೆಗೆ ಜಮೆಯಾಗುವ ಹಣವನ್ನು ಖಾಸಗಿ ಫೈನಾನ್ಸ್ ಕಂಪನಿ ಹಾಗೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಹಳೆಯ ಸಾಲದ ಬಾಕಿ ನೆಪದಲ್ಲಿ ಕಡಿತಗೊಳಿಸದಂತೆ ಕ್ರಮ ವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶ ಹೊರಡಿಸಿದ್ದಾರೆ.

ಈ ಸಂಬಂಧ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿರುವ ಅವರು, ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಸಿಇಒಗಳಿಗೆ ಸೂಚನೆ ನೀಡುವಂತೆ ಆದೇಶಿಸಿದ್ದಾರೆ. ಹಲವು ಜಿಲ್ಲೆಗಳಿಂದ ಈ ಸಂಬಂಧ ದೂರು ಬಂದ ಹಿನ್ನೆಲೆಯಲ್ಲಿ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ, ಸಿಎಂ ಹಾಗೂ ಡಿಸಿಎಂಗೆ ಪತ್ರ ಬರೆದು ಗಮನಕ್ಕೆ ತಂದಿದ್ದರು.

ಇದೀಗ ಸಿಎಂ ಸಿದ್ದರಾಮಯ್ಯ ಅವರ ಸೂಚನೆಯಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಸರಕಾರದ ಗೃಹ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳಿಗೆ, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗಳಿಗೆ, ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಒಗಳಿಗೆ ಪತ್ರ ಬರೆದಿದ್ದಾರೆ.

ಮಾಣಿಕ್ಯಧಾರಾದಲ್ಲಿ ಜಾರಿಬಿದ್ದು ಮೃತಪಟ್ಟಿರುವ ಶಂಕೆ

ಶ್ರೀನಂದಾ ಶವವಾಗಿ ಪತ್ತೆ

ಚಿಕ್ಕಮಗಳೂರು: ದತ್ತಪೀಠದ ತಪ್ಪಲಿನಲ್ಲಿ ನಾಪತ್ತೆಯಾಗಿದ್ದ ಕೇರಳದ ಪಾಲಕ್ಕಾಡ್ ಮೂಲದ ಬಾಲಕಿ ಶ್ರೀನಂದಾ (15) ಶವ ಪತ್ತೆಯಾಗಿದೆ. ಅರಿಶಿನ ಗುಪ್ಪೆಯಿಂದ 5 ಕಿ.ಮೀ ದೂರದ, ಸುಮಾರು 1500 ಅಡಿ ಪ್ರಪಾತದಲ್ಲಿ ಬಾಲಕಿ ಮೃತದೇಹ ಪತ್ತೆಯಾಗಿದೆ.

ಏ.7ರಂದು ಸಂಜೆ ಮಾಣಿಕ್ಯಾಧಾರ ಜಲಪಾತ ವೀಕ್ಷಿಸಲು ಹೋಗುವಾಗ ಬಾಲಕಿ ಕಣ್ಮರೆಯಾಗಿದ್ದಳು. 41 ಕುಟುಂಬದ ಸದಸ್ಯರೊಂದಿಗೆ ಹಂಪಿ ಪ್ರವಾಸ ಮುಗಿಸಿ ಇಲ್ಲಿಗೆ ಬಂದಿದ್ದ ಶ್ರೀನಂದಾ, ನಾಪತ್ತೆಯಾಗುವ ಮೊದಲು ತಂದೆಯ ಮೊಬೈಲ್‌ನಲ್ಲಿ ಅತ್ಯಂತ ಖುಷಿಯಿಂದ ರೀಲ್ಸ್ ಮಾಡಿದ್ದಳು.

ಆದರೆ, ಜನ ದಟ್ಟಣೆಯ ನಡುವೆ ಮೆಟ್ಟಿಲುಗಳನ್ನು ಇಳಿದು ಬರುವಾಗ ಅವಳು ಹಠಾತ್ತನೆ ಕಾಣೆಯಾಗಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿತ್ತು. ಇದೀಗ ಬಾಲಕಿ ಶವವಾಗಿ ಪತ್ತೆಯಾಗಿದ್ದಾಳೆ. ರೀಲ್ಸ್ ಮಾಡುವ ಭರದಲ್ಲಿ ಶ್ರೀನಂದಾ ಜಾರಿ ಬಿದ್ದಿರುವ ಶಂಕೆ ವ್ಯಕ್ತವಾಗಿದೆ.

ಫನ್‌ತರಂಗ

– ರಘುಪತಿ ಶೃಂಗೇರಿ –

ವಿಧಾನಮಂಡಲದ ಸದನದ ಕಲಾಪಗಳು ಇನ್ನು ಮುಂದೆ 'ಪೇಪರ್ ಲೆಸ್'

ಒಟ್ಟು ಅಂಕ 625ರಿಂದ 525ಕ್ಕೆ ಇಳಿಕೆ | 173 ಅಂಕ ಪಡೆದರೆ 10ನೇ ತರಗತಿ ತೇರ್ಗಡೆ

ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆಗೆ ಗ್ರೇಡ್ ನಿಗದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ನಡುವೆಯೇ ಶಿಕ್ಷಣ ಇಲಾಖೆಯ ವಿವಾದಿತ ಗ್ರೇಡಿಂಗ್ ವ್ಯವಸ್ಥೆಯ ಮುಂದುವರಿದ ಭಾಗವಾಗಿ, ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದೆ.

ತೃತೀಯ ಭಾಷೆಗೆ ಅಂಕದ ಬದಲು ಗ್ರೇಡಿಂಗ್ ನೀಡಲು ಶಿಕ್ಷಣ ಇಲಾಖೆ ತೀರ್ಮಾನಿಸಿರುವುದು ವಿವಾದಕ್ಕೆ ಕಾರಣವಾಗಿದೆ. ಇದರ ನಡುವೆ ಎ, ಬಿ, ಸಿ ಗ್ರೇಡಿಂಗ್‌ನ್ನು ಇಲಾಖೆ ಪ್ರಕಟಿಸಿದೆ. ಗ್ರೇಡಿಂಗ್ ಪಡೆಯಲು ಆಂತರಿಕ ಹಾಗೂ ಬಾಹ್ಯ ಪರೀಕ್ಷೆಯಲ್ಲಿ ಶೇ.33ರಷ್ಟು ಅಂಕ ಪಡೆಯಬೇಕು ಎಂದು ಸ್ಪಷ್ಟಪಡಿಸಿದೆ.

ಹೇಗಿರಲಿದೆ ಗ್ರೇಡಿಂಗ್

ಗ್ರೇಡ್	ಅಂಕ
ಎ	80-100
ಬಿ	50-79
ಸಿ	49ಕ್ಕಿಂತ ಕಡಿಮೆ

ವಿದ್ಯಾರ್ಥಿ ತೃತೀಯ ಭಾಷೆಯಲ್ಲಿ 80-100 ಅಂಕ ಪಡೆದಿದ್ದರೆ 'ಎ' ಗ್ರೇಡ್, 50ರಿಂದ 79 ಅಂಕ ಪಡೆದರೆ 'ಬಿ' ಗ್ರೇಡ್ ಹಾಗೂ 49ರವರೆಗೆ ಅಂಕ ಪಡೆದರೆ 'ಸಿ' ಗ್ರೇಡ್ ನೀಡಲಾಗುವುದು ಎಂದು ಅಧಿಸೂಚನೆಯಲ್ಲಿ ಸರಕಾರ ಸ್ಪಷ್ಟಪಡಿಸಿದೆ. ಪರೀಕ್ಷೆಯ ಒಟ್ಟು ಅಂಕವನ್ನು 625ರಿಂದ 525ಕ್ಕೆ ಇಳಿಸಿರುವುದರಿಂದ 173 ಅಂಕಗಳನ್ನು ಪಡೆದರೆ ವಿದ್ಯಾರ್ಥಿಗಳನ್ನು ಪಾಸ್ ಎಂದು ಪರಿಗಣಿಸಲಾಗುವುದು ಎಂದು ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೆ ಈಗಲೂ ಅನೇಕರು ಸರಕಾರದ ಈ ತೀರ್ಮಾನವನ್ನು ವಿರೋಧಿಸಿದ್ದರು. ಪರೀಕ್ಷಾ ಸಮಯದಲ್ಲಿ ಘೋಷಿಸಿದ್ದ ನಡೆ ಹಾಗೂ ಹಿಂದಿಯ ನೆಪದಲ್ಲಿ ತೃತೀಯ ಭಾಷೆಗಳನ್ನು ಕಡೆಗಣಿಸುವುದು ಸರಿಯಲ್ಲ ಎನ್ನುವ ವಾದವನ್ನು ಮಂಡಿಸುತ್ತಿದ್ದಾರೆ.

ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದ ಅರ್ಜಿ ವಜಾ; ದಂಡ: ಇನ್ನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಅರ್ಜಿದಾರರಿಗೆ ಹೈಕೋರ್ಟ್ ಲಕ್ಷ ರು. ದಂಡ ವಿಧಿಸಿ ಆದೇಶಿಸಿದೆ. → 4

ಪಿಯು ಫಲಿತಾಂಶದಲ್ಲಿ ಎಡವಟ್ಟು

ಇನ್ನು ಗುರುವಾರ ಪ್ರಕಟವಾದ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಹಲವು ಎಡವಟ್ಟುಗಳಾಗಿರುವುದು ಬಹಿರಂಗವಾಗಿದ್ದು, ವಿದ್ಯಾರ್ಥಿ ಹಾಗೂ ಪೋಷಕರಲ್ಲಿ ಭಾರಿ ಗೊಂದಲ ಮತ್ತು ಆತಂಕ ಸೃಷ್ಟಿಯಾಗಿದೆ. ಕೆಲವು ವಿದ್ಯಾರ್ಥಿಗಳಿಗೆ 100 ಅಂಕಗಳ ವಿಷಯದಲ್ಲಿ 111 ಅಂಕಗಳನ್ನು ನೀಡಿರುವುದು ಸೇರಿದಂತೆ, ಒಟ್ಟು ಅಂಕಗಳನ್ನು ಸೇರಿಸಿದರೆ 600ಕ್ಕೂ ಹೆಚ್ಚು ಅಂಕ ಬರುತ್ತಿದೆ. ಹಿಂದಿ ವಿಷಯದಲ್ಲಿ ಒಬ್ಬ ವಿದ್ಯಾರ್ಥಿಗೆ 100 ಅಂಕಗಳಿಗೆ 111 ಅಂಕ ನೀಡಲಾಗಿದ್ದು, ಥಿಯರಿ ವಿಭಾಗದಲ್ಲಿ 80 ಅಂಕಗಳಿಗೆ 94 ಅಂಕ ನೀಡಲಾಗಿದೆ. ಕಾಲೇಜು ನೀಡಿದ 17 ಆಂತರಿಕ ಅಂಕಗಳನ್ನು ಸೇರಿಸಿದರೂ, ಒಟ್ಟು ಅಂಕ 111 ಆಗಿರುವುದು ಭಾರಿ ವಿವಾದಕ್ಕೆ ಕಾರಣವಾಗಿದೆ. ಇನ್ನು ಮತ್ತೊಬ್ಬ ವಿದ್ಯಾರ್ಥಿಗೆ 600ಕ್ಕೆ 683 ಅಂಕಗಳನ್ನು ನೀಡಿರುವುದು ಭಾರಿ ವಿವಾದಕ್ಕೆ ಕಾರಣವಾಗಿದೆ.

ಇದು ತಾಂತ್ರಿಕ ದೋಷದಿಂದ ಉಂಟಾದ ಸಮಸ್ಯೆಯಾಗಿದ್ದು, 50 ರಿಂದ 60 ವಿದ್ಯಾರ್ಥಿಗಳ ಅಂಕಗಳಲ್ಲಿ ಈ ರೀತಿಯ ದೋಷ ಕಂಡುಬಂದಿದೆ. ಶುಕ್ರವಾರ ಮಧ್ಯಾಹ್ನದಿಂದಲೇ ಇದನ್ನು ಸರಿಪಡಿಸಿ, ಪರಿಷ್ಕೃತ ಫಲಿತಾಂಶ ಬಿಡುಗಡೆ ಮಾಡಲಾಗಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಗಾಬರಿಯಾಗಬೇಕಿಲ್ಲ ಸಮಸ್ಯೆ ನಿವಾರಣೆಯಾಗಿದೆ .

-ಪ್ರಕಾಶ್ ನಿಟ್ಟಾಲಿ ಅಧ್ಯಕ್ಷ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ

ಡಾ.ಎಸ್.ಆರ್.ರಾಮಸ್ವಾಮಿ ಅನಾರೋಗ್ಯದಿಂದ ನಿಧನ | 55 ಮೇರು ಗ್ರಂಥಗಳನ್ನು ರಚಿಸಿರುವ ಶ್ರೀಯುತರ ಅಗಲಿಕೆಗೆ ಸಾರಸ್ವತ ಲೋಕ ಕಂಬನಿ

ಕಳಚಿದ ರಾಷ್ಟ್ರೋತ್ಥಾನ ಪರಿಷತ್‌ನ ಹಿರಿಯ ಕೊಂಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಿರಿಯ ವಿದ್ವಾಂಸ. ಲೇಖಕ, ನಾಡೋಜ, ರಾಷ್ಟ್ರೋತ್ಥಾನ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ಎಸ್.ಆರ್.ರಾಮಸ್ವಾಮಿ (88 ವರ್ಷ) ಶುಕ್ರವಾರ ಬೆಳಗ್ಗೆ ಬೆಂಗಳೂರಿನ ಶಂಕರಪುರಂನ ರಂಗರಾವ್ ರಸ್ತೆಯ ಸ್ವಗೃಹದಲ್ಲಿ ವಿಧಿವಶರಾಗಿದ್ದಾರೆ.

ಕನ್ನಡ ಸಾರಸ್ವತ ಲೋಕಕ್ಕೆ ಹಲವು ಹೊಸ ಪ್ರತಿಭೆಗಳನ್ನು ಪರಿಚಯಿಸಿದ ರಾಮಸ್ವಾಮಿ ಅವರದ್ದು ವಿದ್ವತ್ ಪ್ರಭಾವಳಿಗೆ ಹೆಸರಾದ ಮೇರು ವಂಶಾವಳಿಯ ಕುಟುಂಬ. ಇವರು, ಶ್ರೇಷ್ಠ ಭಾರತೀಯ ಇತಿಹಾಸ ತಜ್ಞರಾಗಿ ಖ್ಯಾತರಾದ ಎಸ್.ಶ್ರೀಕಂಠಶಾಸ್ತ್ರಿ ಹಾಗೂ ಅಸ್ಥಾನ ವಿದ್ವಾನ್ ಮೋಟಗನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿ ಅವರ ಸೋದರಳಿಯಂದಿರು. ಭಾಗವತವನ್ನು ಮೂಲ ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಿಸಿದ ಮೊದಲ ಮಹಾನುಭಾವರಾದ ಅಸ್ಥಾನ ವಿದ್ವಾನ್ ಮೋಟಗನಹಳ್ಳಿ ರಾಮಶೇಷ ಶಾಸ್ತ್ರಿ ಅವರ ಸೋದರ ಮೊಮ್ಮಗ. ಎಸ್.ಆರ್. ರಾಮಸ್ವಾಮಿಯವರು ಖ್ಯಾತ ಪತ್ರಕರ್ತ ಮತ್ತು ಪ್ರಜಾಮತದ ಫೀಚರ್ ಎಡಿಟರ್ ಆಗಿದ್ದ ಎಸ್.ಆರ್. ಕೃಷ್ಣಮೂರ್ತಿ ಅವರ ಕಿರಿಯ ಸಹೋದರ. ರಾಮಸ್ವಾಮಿಯವರು ಬೆಂಗಳೂರಿನ ಬೆಂಗಳೂರು ಪ್ರೌಢಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣ ಮುಗಿಸಿ ತಮ್ಮ ಮಧ್ಯಂತರ ಕೋರ್ಸ್ ಅಧ್ಯಯನವನ್ನು 1953–54ರಲ್ಲಿ ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ನಡೆಸಿದರು.

ಆರು ದಶಕಗಳ ಕಾಲ ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಡಾ.ಎಸ್.ಆರ್. ರಾಮಸ್ವಾಮಿ ಅವರು 1966ರಿಂದ ರಾಷ್ಟ್ರೋತ್ಥಾನ ಪರಿಷತ್‌ನ ಜತೆಗೆ ನಿಕಟ ಸಂಪರ್ಕ ಹೊಂದಿದವರು. ಕಳೆದ 47 ವರ್ಷಗಳಿಂದ (1979) 'ಉತ್ಥಾನ' ಮಾಸಪತ್ರಿಕೆಯ ಮತ್ತು 'ರಾಷ್ಟ್ರೋತ್ಥಾನ ಸಾಹಿತ್ಯ' ಪ್ರಕಾಶನದ ಪ್ರಧಾನ ಸಂಪಾದಕರಾಗಿದ್ದಾರೆ. 1972–1979ರ ಅವಧಿಯಲ್ಲಿ 'ಸುಧಾ' ವಾರಪತ್ರಿಕೆಯ ಮುಖ್ಯ ಉಪಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ.

ಅನೇಕ ಹಿರಿಯ ಸಾಹಿತಿಗಳ ಒಡನಾಟದಲ್ಲಿದ್ದ ರಾಮಸ್ವಾಮಿಯವರು ಡಿ.ವಿ. ಗುಂಡಪ್ಪ, ವಿ. ಸೀತಾರಾಮಯ್ಯ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ವೀರಕೇಸರಿ ಸೀತಾರಾಮಶಾಸ್ತ್ರಿ ಮೊದಲಾದ ಧೀಮಂತರನ್ನು ಕುರಿತು ಬರೆದ ವ್ಯಕ್ತಿಚಿತ್ರಮಾಲೆ 'ದೀವಟಿಗೆಗಳು' (1998) ಒಂದು ಅನುಪಮ ಕೃತಿಯೆನಿಸಿದೆ. ಈಗಿನ ಜಗದ್ವ್ಯಾಪಿ ತುಮುಲಗಳ ಬೇರುಗಳಿರುವುದು ಎರಡು ಭಿನ್ನ ಜೀವನದೃಷ್ಟಿಗಳಲ್ಲಿ ಎಂದು ಅವರ 'ನಾಗರಿಕತೆಗಳ ಸಂಘರ್ಷ' ಕೃತಿ (2009) ಪ್ರತಿಪಾದಿಸಿದೆ. ಸುಭಾಷ್ ಚಂದ್ರ ಬೋಸ್ ಅವರ ಸಮಗ್ರ ಜೀವನಚರಿತ್ರೆ 'ಕೋಲ್ಮಿಂಚು' (1996), ಜಯಪ್ರಕಾಶ್ ನಾರಾಯಣ್ (2000), ವಲ್ಲಭಭಾಯಿ ಪಟೇಲ್ (2000), ವಿಶ್ವೇಶ್ವರಯ್ಯ (2000) ಮೊದಲಾದ ಹನ್ನೆರಡು ಜೀವಚರಿತ್ರೆಗಳೂ ಸೇರಿದಂತೆ ಸುಮಾರು 55 ಗ್ರಂಥಗಳನ್ನು ಬರೆದಿದ್ದಾರೆ. ಭಾರತದಲ್ಲಿ 'ಸಮಾಜಕಾರ್ಯ' (1992), 'ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು' (1997) ಮೊದಲಾದ ಹಲವಾರು ಪ್ರತಿಷ್ಠಿತ ಕೃತಿಗಳಿಗೆ ವಿಸ್ತೃತ ಸ್ವತಂತ್ರ ಅವಲೋಕನ ಪ್ರಬಂಧಗಳನ್ನು ಬರೆದು ಸಂಪಾದನೆ ಮಾಡಿದ್ದಾರೆ. ಅಭ್ಯುದಯ ಅರ್ಥಶಾಸ್ತ್ರದಲ್ಲಿ ಆಳವಾದ ಪರಿಶ್ರಮ ಮಾಡಿರುವ ಇವರು ಜಾಗತೀಕರಣದ ಹಿನ್ನೆಲೆಯಲ್ಲಿ ಬರೆದ ಆರ್ಥಿಕತೆಯ 'ಎರಡು ಧ್ರುವ' (1994) ಅರ್ಥಶಾಸ್ತ್ರಕ್ಷೇತ್ರದ ಒಂದು ಉನ್ನತ ಕೃತಿಯೆಂದು ಪರಿಗಣಿತವಾಗಿದೆ.

ರಾಷ್ಟ್ರೋತ್ಥಾನ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ.ಎಸ್.ಆರ್. ರಾಮಸ್ವಾಮಿ ಅವರ ಪಾರ್ಥಿವ ಶರೀರದ ಅಂತಿಮ ದರ್ಶನವನ್ನು ಎಂಎಲ್‌ಸಿ ಸಿ.ಟಿ.ರವಿ ಸೇರಿ ಹಲವು ಗಣ್ಯರು ಪಡೆದರು.

ಸಂದ ಪ್ರಶಸ್ತಿ, ಗೌರವಗಳು

ರಾಮಸ್ವಾಮಿಯವರು ಕಳೆದ ಐವತ್ತು ವರ್ಷಗಳಲ್ಲಿ ವಿವಿಧ ಪತ್ರಿಕೆಗಳಲ್ಲಿ 1000ಕ್ಕೂ ಹೆಚ್ಚು ಅಧ್ಯಯನಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಸೋಲಿಗರನ್ನು ಕುರಿತು ಇವರು ಬರೆದ ಲೇಖನಕ್ಕೂ (1983), ಭೂಸುಧಾರಣೆ ಕುರಿತ ಲೇಖನಕ್ಕೂ (1984) ಗ್ರಾಮೀಣ ಬರಹ ಪುರಸ್ಕಾರ ಯೋಜನೆಯಲ್ಲಿ ಕೆನರಾ ಬ್ಯಾಂಕಿನಿಂದ ಪ್ರಥಮ ಬಹುಮಾನ ದೊರೆತಿದೆ. ಪತ್ರಿಕೋದ್ಯಮ ಸೇವೆಗಾಗಿ 2006ರಲ್ಲಿ ಇವರಿಗೆ 'ಆರ್ಯಭಟ ಪ್ರಶಸ್ತಿ' ದೊರೆತಿದೆ. ಸಾಹಿತ್ಯಸೇವೆಗಾಗಿ 2008ರ ಕರ್ನಾಟಕ ರಾಜ್ಯ ಪ್ರಶಸ್ತಿಯೂ ಇವರಿಗೆ ದೊರೆತಿದೆ. 2011ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಇವರ ಸುದೀರ್ಘ ಸಾಹಿತ್ಯಸೇವೆಗಾಗಿ ಗೌರವಾರ್ಥ ಡಾಕ್ಟರೇಟ್ ನೀಡಿದೆ. ಪತ್ರಿಕೋದ್ಯಮ ಕ್ಷೇತ್ರದ ಕೊಡುಗೆ ಪರಿಗಣಿಸಿ, ಹಂಪಿ ಕನ್ನಡ ವಿವಿ 2015ರಲ್ಲಿ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ನೀಡಿದೆ.

ರಾಮಸ್ವಾಮಿ ಅವರ ಸರಳ ಜೀವನ, ಕ್ರಿಯಾಶೀಲ ಬದುಕು, ಅಧ್ಯಯನಪೂರ್ಣ ಬರಹ ಮುಂದಿನ ಪೀಳಿಗೆಗೆ ಸದಾ ಆದರ್ಶ.ಸ್ವಯಂ ಸಂಘವನ್ನು ಒಪ್ಪಿ ಪ್ರವೇಶಿಸಿ ಸಂಘದ ಎಲ್ಲ ಆಯಾಮಗಳನ್ನು ಆಳವಾಗಿ ಅರಿತಿದ್ದಲ್ಲದೇ ಸಂಘದ ಕಾರ್ಯಕರ್ತರಿಗೂ ಸಮಾಜದ ಜನತೆಗೂ ಸಂಘವನ್ನು ವಿವರಿಸಿದ ನಿಷ್ಠಾವಂತ ಸ್ವಯಂಸೇವಕ.
-ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

ಹಿರಿಯ ಸಾಹಿತಿಗಳು, ಪತ್ರಕರ್ತರು ಹಾಗೂ ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾಗಿದ್ದ ನಾಡೋಜ ಡಾ. ರಾಮಸ್ವಾಮಿ ಅವರ ನಿಧನದ ಸುದ್ದಿ ಕೇಳಿ ತೀವ್ರ ದುಃಖವಾಯಿತು. ಸಾಹಿತ್ಯ, ಸಮಾಜ ಮತ್ತು ರಾಷ್ಟ್ರ ಚಿಂತನೆಗೆ ಅವರ ಕೊಡುಗೆ ಅಪಾರವಾಗಿದೆ. ಅವರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟ. ಮೃತರ ಆತ್ಮಕ್ಕೆ ಶಾಂತಿ ದೊರೆಯಲಿ.
-ಬಸವರಾಜ ಬೊಮ್ಮಾಯಿ, ಸಂಸದ

ಖ್ಯಾತ ವಿದ್ವಾಂಸರು, ಹಿರಿಯ ಬರಹಗಾರರು ಹಾಗೂ ರಾಷ್ಟ್ರೋತ್ಥಾನ ಪರಿಷತ್ತಿನ ಮಾಜಿ ಅಧ್ಯಕ್ಷರಾದ ನಾಡೋಜ ರಾಮಸ್ವಾಮಿ ಅವರು ವಿಧಿವಶರಾಗಿರುವುದು ನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟ. ತಮ್ಮ ಪಾಂಡಿತ್ಯ ಮತ್ತು ಲೇಖನದಿಂದ ಸಮಾಜಕ್ಕೆ ದಾರಿದೀಪವಾಗಿದ್ದ ಅವರು, ರಾಷ್ಟ್ರಚಿಂತನೆ ಮತ್ತು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ಸರಳ ಸಜ್ಜನಿಕೆಯ ವ್ಯಕ್ತಿತ್ವ ಮತ್ತು ಜ್ಞಾನದ ಹಸಿವು ಎಂದೆಂದಿಗೂ ನಮಗೆಲ್ಲ ಸ್ಫೂರ್ತಿ.
-ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಜಮೀರ್ ವಿರುದ್ಧ ಕಿಡಿ

← ಮೊದಲಪುಟದಿಂದ

ಮುಸ್ಲಿಂ ನಾಯಕರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್, ದಾವಣಗೆರೆ ಉಪಚುನಾವಣೆಯ ಪ್ರಚಾರಕ್ಕೆ ಬರದೇ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ನಮ್ಮ ಪಕ್ಷದ ಮುಖಂಡರು ಷಡ್ಯಂತ್ರ ಮಾಡಿದ್ದರು. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಿಗೆ ಮಾಹಿತಿ ನೀಡಲಾಗಿದೆ ಎಂದು ಆರೋಪಿಸಿದರು. ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ನಾನೇ ಸೂಕ್ತ ಅಭ್ಯರ್ಥಿ ಎಂದು ಒತ್ತಡ ಹಾಕಿದ್ದರು. ಈ ಕುರಿತು ಅಲ್ಪಸಂಖ್ಯಾತ ಶಾಸಕರು, ಸಚಿವರು ಮೂರು ನಾಲ್ಕು ಬಾರಿ ಸಭೆ ಸೇರಿದ್ದೆವು. ಅಲ್ಲಿ ಜಮೀರ್ ಅಹ್ಮದ್, ಹ್ಯಾರಿಸ್, ತನ್ವೀರ್ ಸೇಠ್, ನಸೀರ್ ಅಹಮದ್, ರಹೀಂಖಾನ್ ಸೇರಿ ಪ್ರಮುಖರೆಲ್ಲರೂ ಇದ್ದರು. ನಾವೆಲ್ಲರೂ ಸೇರಿ ಅಬ್ದುಲ್ ಜಬ್ಬಾರ್ ಅವರಿಗೆ ನೀಡುವುದು ಎಂದು ತೀರ್ಮಾನ ಮಾಡಿ ದೆವು. ಆದರೆ ತಳ ಮಟ್ಟದ ಕಾರ್ಯಕರ್ತರು, ಕೆಲ ಮುಖಂಡರು ಅವರಿಗೆ ಜನಪ್ರಿಯತೆ ಇಲ್ಲ. ಜತೆಗೆ ಸ್ಥಾನ ಗೆಲ್ಲಲಾಗುವುದಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಆದರೂ ನಾವು ಕೊನೆವರೆಗೂ ಅವರ ಹೆಸರನ್ನೇ ಹೇಳಿದ ಕಾರಣಕ್ಕೆ ನಮಗೆ ಹಿನ್ನಡೆ ಉಂಟಾಯಿತು. ನಾವು ನಾಲ್ಕೈದು ಜನರ ಹೆಸರನ್ನು ಸೂಚಿಸಬೇಕಾಗಿತ್ತು ಅಥವಾ ಎಸ್.ಎಸ್.ಮಲ್ಲಿಕಾರ್ಜುನ ಅವರಿಗೆ ನೀವೇ ಮುಸ್ಲಿಂ ಅಭ್ಯರ್ಥಿ ಹೆಸರನ್ನು ಸೂಚಿಸಿ, ನಾವೆಲ್ಲರೂ ಸೇರಿ ಕೆಲಸ ಮಾಡುತ್ತೇವೆ ಎಂದು ಹೇಳಬೇಕಿತ್ತು. ಇದನ್ನು ಮಾಡದೇ ಇದ್ದ ಕಾರಣಕ್ಕೆ ನಾವು ಎಡವಿದೆವು ಎಂದು ಆತ್ಮಾವಲೋಕನ ಮಾಡಿಕೊಂಡಿದ್ದಾರೆ.

ಹರಿಹರದ ಹೊರವಲಯದದಲ್ಲಿರುವ ಶ್ರೀ ಪಂಚಮಸಾಲಿ ಹರಪೀಠದಲ್ಲಿ ಯುವಪೀಳಿಗೆ ಮತ್ತು ಮಕ್ಕಳ ಆಂತರಿಕ ಬೆಳವಣಿಗೆ ಅರಳಿಸುವ ಉನ್ನತ ಆಶಯದಿಂದ 'ಸಂಸ್ಕಾರ ಶಿಕ್ಷಣ ಶಿಬಿರ' ಆಯೋಜಿಲಾಗಿದೆ.

ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆಗೆ ಗ್ರೇಡ್ ನಿಗದಿ

← ಮೊದಲಪುಟದಿಂದ

ಬೆಂಗಳೂರಿನ ಎಚ್.ಎನ್.ಚಂದನಾ ಮತ್ತು ಎಸ್.ವೆಂಕಟೇಶ್ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗಳಿಗೆ ಅಂಕಗಳ ಬದಲಿಗೆ ಶ್ರೇಣಿಗಳನ್ನು ನೀಡುವ ವ್ಯವಸ್ಥೆಯ ಕುರಿತ ಶಿಕ್ಷಣ ಸಚಿವರ ಹೇಳಿಕೆಗೆ ಸಂಬಂಧಿಸಿದಂತೆ ಪತ್ರಿಕಾ ವರದಿಗಳನ್ನು ಆಧರಿಸಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಈ ನಡೆ ಅತ್ಯಂತ ಅಗೌರವಯುತವಾಗಿದೆ. ಪತ್ರಿಕಾ ಹೇಳಿಕೆಗಳನ್ನು ಆಧರಿಸಿದ ಅರ್ಜಿ ರದ್ದುಗೊಳಿಸುವುದಕ್ಕೆ ಹೈಕೋರ್ಟ್ ಅಸಾಧಾರಣವಾದ ವಿಶೇಷ ನ್ಯಾಯ ವ್ಯಾಪ್ತಿ ಚಲಾಯಿಸಬೇಕಾಗುತ್ತದೆ ಎಂದು ಪೀಠ ತಿಳಿಸಿದೆ. ಇದೊಂದು ಪ್ರಚಾರಕ್ಕಾಗಿ ಸಲ್ಲಿಸಿರುವ ಅರ್ಜಿ ಯಾಗಿದ್ದು, ಅರ್ಜಿದಾರರಿಗೆ 50 ಸಾವಿರ ರು. ದಂಡ ವಿಧಿಸಲಾಗುವುದು. ದಂಡದ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು ಎಂದು ಪೀಠ ತಿಳಿಸಿದೆ. ಅಲ್ಲದೆ, ಒಂದು ವೇಳೆ ಅರ್ಜಿದಾರರು ದಂಡದ ಮೊತ್ತ ವನ್ನು ಪಾವತಿ ಮಾಡದಿದ್ದಲ್ಲಿ, ಅವರ ಭೂ ಕಂದಾಯಕ್ಕೆ ಬಾಕಿ ಮೊತ್ತವನ್ನಾಗಿ ಪರಿಗ ಣಿಸಿ ವಸೂಲಿ ಮಾಡಬಹುದಾಗಿದೆ ಎಂದು ತಿಳಿಸಿತು. ಇದಾದ ಬಳಿಕವೂ ಅರ್ಜಿ ದಾರರು ಮತ್ತೆ ವಾದ ಮುಂದುವರಿಸಿ, ಹಿಂದಿ ಭಾಷೆಯನ್ನು ತೆಗೆದು ಹಾಕಲಾ ಗುತ್ತದೆ ಎಂದು ಪೀಠಕ್ಕೆ ವಿವರಿಸಿದರು.

ಅಲಹಾಬಾದ್ ಹೈಕೋರ್ಟ್ ಜಡ್ಜ್ ವರ್ಮಾ ರಾಜೀನಾಮೆ

← ಮೊದಲಪುಟದಿಂದ

2025ರ ಮಾರ್ಚ್ 14ರಂದು ದೆಹಲಿಯ ನ್ಯಾಯಮೂರ್ತಿ ವರ್ಮಾ ಅವರ ಅಧಿಕೃತ ನಿವಾಸದ ಸ್ಟೋರ್ ರೂಂನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ನಂದಿಸಲು ಹೋದ ಸಿಬ್ಬಂದಿ ಮತ್ತು ಅಧಿಕಾರಿಗಳು ಅಲ್ಲಿ 500 ರೂಪಾಯಿ ಮುಖಬೆಲೆಯ ನೋಟಿನ ಕಂತೆಗಳುಳ್ಳ ರಾಶಿಯನ್ನು ನೋಡಿ ದಂಗಾಗಿದ್ದರು. ನೋಟಿನ ಕಂತೆಗಳ ವಿಡಿಯೋ ವೈರಲ್ ಆಗಿ ದೇಶಾದ್ಯಂತ ಸುದ್ದಿಯಾಗಿತ್ತು. ಘಟನೆ ಸಮಯದಲ್ಲಿ ನ್ಯಾಯ ಮೂರ್ತಿ ವರ್ಮಾ ಮತ್ತು ಅವರ ಪತ್ನಿ ಭೋಪಾಲ್‌ನಲ್ಲಿದ್ದರು. ತಾವು ಅಥವಾ ತಮ್ಮ ಕುಟುಂಬ ಸದಸ್ಯರು ಸ್ಟೋರ್ ರೂಂನಲ್ಲಿ ಎಂದಿಗೂ ಹಣವನ್ನು ಇಟ್ಟುಕೊಂಡಿಲ್ಲ ಎಂದು ಅವರು ಹೇಳಿಕೊಂಡಿದ್ದರು. ಆದರೆ ಈ ಹಣ ಅಲ್ಲಿಗೆ ಹೇಗೆ ಬಂತು ಎನ್ನುವುದರ ವಿವರ ನೀಡಲು ಅವರು ವಿಫಲರಾಗಿದ್ದರು. ಈ ವಿಷಯದ ಬಗ್ಗೆ ಆಂತರಿಕ ತನಿಖೆ ನಡೆಸಲು ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡ ಮೂವರು ನ್ಯಾಯಾಧೀಶರ ಸಮಿತಿಯೂ ವರ್ಮಾ ಅವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿತ್ತು. ವಿವಾದದ ಬಳಿಕ ವರ್ಮಾ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾ ಯಿಸಲಾಗಿತ್ತು. ಈ ನಡುವೆ ಸಂಸತ್ತಿನಲ್ಲಿ ಅವರ ಪದಚ್ಯುತಿ ಪ್ರಕ್ರಿಯೆ ಆರಂಭವಾಗಿತ್ತು. ಸುಪ್ರೀಂಕೋರ್ಟ್ ಈ ಪ್ರಕ್ರಿಯೆಗೆ ತಡೆ ನೀಡಲು ನಿರಾಕರಿಸಿತ್ತು.

ಸಿಇಟಿ ಪ್ರವೇಶ ಪತ್ರ ಬಿಡುಗಡೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.23 ಮತ್ತು 24ರಂದು ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಏ.22 ರಂದು ನಡೆ ಯುವ ಕನ್ನಡ ಭಾಷಾ ಪರೀಕ್ಷೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾ ರವು ಪ್ರವೇಶ ಪತ್ರ ಬಿಡುಗಡೆ ಮಾಡಿದೆ. ಅರ್ಹ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ಗೆ ಭೇಟಿ ನೀಡಿ, ನಿಗದಿತ ಲಿಂಕ್ ಮೂಲಕ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ. ಪ್ರವೇಶ ಪತ್ರದ ಜೊತೆಗೆ ಅಭ್ಯರ್ಥಿಗಳಿಗೆ ನೀಡಲಾಗುವ ಸೂಚನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಮಾರ್ಗದರ್ಶನಗಳನ್ನು/ ಕಾರ್ಯವಿಧಾನಗಳನ್ನು ತಪ್ಪದೇ ಅನುಸರಿಸಲು ಸೂಚಿಸಲಾಗಿದೆ. ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ ಕನ್ನಡ ಭಾಷೆ ಪರೀಕ್ಷೆಯನ್ನು ಬೆಂಗಳೂರು, ಬೆಳಗಾವಿ ಮತ್ತು ಮಂಗಳೂರು ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುತ್ತದೆ ಎಂದು ವಿವರಿಸಿದ್ದಾರೆ.

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಚೇರಿ, ಭದ್ರಾವತಿ
Ph: Email: cmobdvt@gmail.com
Phone- 9164823174 & 7349760984
ಸಂಖ್ಯೆ/ಸಾಆಭ/ಹೊಗು/30/2026–27 ದಿ: 09/04/2026

ವಿಷಯ :– 2026–27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಮತ್ತು ನಾನ್–ಕ್ಲಿನಿಕಲ್ ಸೇವೆ ಪಡೆಯುವ ಕುರಿತು ಇ–ಟೆಂಡರ್ ಆಹ್ವಾನ.
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿ ಇಲ್ಲಿಗೆ 2026–27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ ಮತ್ತು ನಾನ್–ಕ್ಲಿನಿಕಲ್ ಸೇವೆ ಪಡೆಯುವ ಕುರಿತು, ಕರ್ನಾಟಕ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ–ಲಕೋಟೆ ಪದ್ಧತಿಯ (Two Cover system) ಪ್ರಕಾರ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿಗೆ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ, ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https:://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಚೇರಿ ಕಾರ್ಯಾಲಯದ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 734960984
Last Date for Submission of Tender is : 20.04.2026
ಟೆಂಡರ್‌ನ ಒಟ್ಟು ಮೊತ್ತ ರೂ 76.00 ಲಕ್ಷಗಳು (ರೂ ಎಪ್ಪತ್ತಾರು ಲಕ್ಷ ಮಾತ್ರ
ಸಹಿ/– ಮುಖ್ಯ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/26–27/73/04/75

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142
ಫೋನ್ ನಂ: 7338590199
ಇ–ಮೇಲ್: eeyediyur1@gmail.com
ಅಲ್ಪಾವಧಿ ಪ್ರಕಟಣೆ ಸಂಖ್ಯೆ: 01/2026–27
ದಿನಾಂಕ : 08.04.2026
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 03 ಕಾಮಗಾರಿಗಳಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ ರೂ. 263.04 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.215.47 ಲಕ್ಷ ರೂಪಾಯಿಗಳು.
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 13.04.2025 ಮಧ್ಯಾಹ್ನ 4.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 21.04.2026 ಮಧ್ಯಾಹ್ನ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22.04.2026 ಬೆಳಿಗ್ಗೆ 4:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಎಡೆಯೂರು
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/034/2026–27

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–1/ಎಇ–1/2026–27 ದಿನಾಂಕ:– 10.04.2026
ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 1/ಎಇ–1/2026–27 ದಿನಾಂಕ: 10.04.2026.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ ಮತ್ತು ಜಗಳೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿಗಳ ನಿರ್ವಹಣೆ ಅಡಿ 1 ಕಾಮಗಾರಿಗೆ ಮೊತ್ತ ರೂ. 37.25 ಲಕ್ಷ. (ಇಂಡೆಂಟ್ ಸಂಖ್ಯೆ 33974–3ನೇ ಕರೆ) ಲೆಕ್ಕಶೀರ್ಷಿಕೆ: 3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆಅಡಿ 1 ಕಾಮಗಾರಿಗೆ ಮೊತ್ತ ರೂ. 110.90 ಲಕ್ಷ. (ಇಂಡೆಂಟ್ ಸಂಖ್ಯೆ 33959–3ನೇ ಕರೆ) ಮತ್ತು ಲೆಕ್ಕಶೀರ್ಷಿಕೆ: 4059~80~051~0~60~132~ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ಅಡಿ 1 ಕಾಮಗಾರಿಗೆ ರೂ. 150.00 ಲಕ್ಷ(ಇಂಡೆಂಟ್ ಸಂಖ್ಯೆ 34200) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ನಿಗಧಿತ ದಿನಾಂಕಗಳ ವಿವರ	ಇಂಡೆಂಟ್ ಸಂ. 34200	ಇಂಡೆಂಟ್ ಸಂ. 33974 & 33959 (3ನೇ ಕರೆ)
ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ	10.04.2026 ಸಂಜೆ 4.00 ಗಂಟೆಗೆ	15.04.2026 ಸಂಜೆ 4.00 ಗಂಟೆಗೆ
ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿನಾಂಕ	13.04.2026 ಬೆಳಗ್ಗೆ 11.30 ಗಂಟೆಗೆ	–
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ :	17.04.2026 ಸಂಜೆ 4.00 ಗಂಟೆಗೆ	22.04.2026 ಸಂಜೆ 4.00 ಗಂಟೆಗೆ
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ :	18.04.2026 ಸಂಜೆ 4.30 ಗಂಟೆಗೆ	23.04.2026 ಸಂಜೆ 4.30 ಗಂಟೆಗೆ

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿವಿಜಿ/17/ ಕೆಎಸ್‌ಎಂಸಿಎ/2026–27
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ: ಕೇಂದ್ರ ಕಛೇರಿ, ಶಾಂತಿನಗರ: ಬೆಂಗಳೂರು–27,
ಸಂ: ಬೆಮಸಾಸಂ/ಉ&ಖ/ಕೇಂ.ಉ/ಎಸ್.ಡಿ.ಎಸ್/025/2026–27 ದಿನಾಂಕ: 10.04.2026
"ಇ – ಹರಾಜು ಪ್ರಕಟಣೆ"
ಬೆಂ.ಮ.ಸಾರಿಗೆ ಸಂಸ್ಥೆಯ **ನಿರುಪಯುಕ್ತ ವಸ್ತುಗಳನ್ನು ಮತ್ತು ಆರ್.ವಿ.ಎಸ್.ಎಫ್.ರಡಿಯಲ್ಲಿ ಸ್ಕ್ರ್ಯಾಪ್ ವಾಹನಗಳನ್ನು ಮೆ॥ ಎಂ.ಎಸ್.ಟಿ.ಸಿ (ಭಾರತ ಸರ್ಕಾರದ ಅಧೀನ ಸಂಸ್ಥೆ)** ಇವರು ನಡೆಸುವ ಇ–ಹರಾಜು ಪ್ರಕ್ರಿಯೆ ಮೂಲಕ ಮಾರಾಟ ಮಾಡಲಾಗುವುದು.
ನಿರುಪಯುಕ್ತ ವಸ್ತುಗಳು ಮತ್ತು ಆರ್.ವಿ.ಎಸ್.ಎಫ್.ರಡಿಯಲ್ಲಿ ಸ್ಕ್ರ್ಯಾಪ್ ವಾಹನಗಳ ಇ–ಹರಾಜು ಪ್ರಕ್ರಿಯೆ ನಡೆಯುವ ದಿನಾಂಕ: 23.04.2026. ಆಸಕ್ತಿಯುಳ್ಳ ಬಿಡ್ದುದಾರರು ವೆಬ್‌ಸೈಟ್: **www.mstcecommerce.com** ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು. **ಕಛೇರಿ ವಿಳಾಸ:** ಮೆ॥ ಎಂ.ಎಸ್.ಟಿ.ಸಿ ಲಿಮಿಟೆಡ್, ನಂ. 19/5, 19/6, ಮೂರನೆ ಮಹಡಿ, ಕರೀಮ್‌ಟವರ್, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052. ದೂರವಾಣಿ. ಸಂ: 080–22260054/22266417/22287356. ಬೆಂ.ಮ.ಸಾರಿಗೆ ಸಂಸ್ಥೆ ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ : + 91 7760991157.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಶಿರಸಿ ಉಪ ವಿಭಾಗ, ಶಿರಸಿ–581401
ದೂರವಾಣಿ (PHONE): 08384-226445 e_mail: acfsirsi445@gmail.com
ಕ್ರ.ಸಂ.: ಎ2/ಟೆಂಡರ/KPPP/ಶಿರಸಿ/ವಿವ–06 (2)/2026–27/68 ದಿನಾಂಕ: 23–03–2026
ಟೆಂಡರ್ ಪ್ರಕಟಣೆ
2026–27 ನೇ ಸಾಲಿನಲ್ಲಿ ಮುಂಗಡ ಕಾಮಗಾರಿ, ಮನ್ಸೂನ್ ನೆಡುತೋಪು ರಚನೆ, ನೆಡುತೋಪು ನಿರ್ವಹಣೆ, ನೆಡುತೋಪು ರಚನೆ, ನರ್ಸರಿ ಕಾಮಗಾರಿ ಮತ್ತು ಇತರೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ KPPP ಪೋರ್ಟಲ್ (https://kppp.karnataka.gov.in) ಮೂಲಕ ಇ_ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 21–04–2026 ಆಗಿದ್ದು, ಹೆಚ್ಚಿನ ಮಾಹಿತಿ/ ವಿವರವಾದ ಟೆಂಡರ ಪ್ರಕಟಣೆಯನ್ನು ಕಛೇರಿ ವೇಳೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿರಸಿ ಉಪ ವಿಭಾಗ, ಶಿರಸಿರವರನ್ನು ಸಂಪರ್ಕಿಸುವುದು.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ಉಪ ವಿಭಾಗ, ಶಿರಸಿ.
DIPR/KWR/KSMCA/37/26-27 Dt.10.04.2026

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ಚಿಕ್ಕಬಳ್ಳಾಪುರ
ಸಂಖ್ಯೆ: ಚಿಸಾವಿ/ಹೊಗುಟೆಂ/ಸಿಆರ್–01/2026–27 ದಿನಾಂಕ: 06.04.2026
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026–27ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವಸಂಪನ್ಮೂಲವನ್ನು ಪೂರೈಸುವ ಸಂಬಂಧ **"ಟೆಂಡರ್ ಪ್ರಕಟಣೆ"**ಯಲ್ಲಿ ತೋರಿಸಿರುವಂತೆ ನೊಂದಾಯಿತ ಗುತ್ತಿಗೆದಾರರು/ ಏಜೆನ್ಸಿಯವರಿಂದ ಮಾನವ ಸಂಪನ್ಮೂಲವನ್ನು ಪೂರೈಸಲು ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0ರ **(https://kppp.karnataka.gov.in)** ಮೂಲಕ ಆಹ್ವಾನಿಸಲಾಗಿದೆ. **ಷರತ್ತುಗಳು:** (1) ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 21.04.2026 ಅಪರಾಹ್ನ 5:00 ಗಂಟೆ,** ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 22.04.2026 ರಂದು ಅಪರಾಹ್ನ 5:00 ಗಂಟೆಗೆ** ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು ಹಾಗೂ **ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 23.04.2026 ರಂದು ಅಪರಾಹ್ನ 5:00 ಗಂಟೆಗೆ ತೆರೆಯಲಾಗುವುದು** ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ:22/2026–27

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂ:01/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಎ.ಇಂ/ವಾಹನ ಟೆಂಡರ್/ 2026–27/**14** ದಿನಾಂಕ: 06.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2025–26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2026–27 ನೇ ಸಾಲಿಗೆ ಏಕ–ಲಕೋಟೆ ಪದ್ಧತಿಯಲ್ಲಿ ತುಮಕೂರು ಜಿಲ್ಲೆ ವ್ಯಾಪ್ತಿಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಉಪ ವಿಭಾಗ, ಕುಣಿಗಲ್ ಈ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಉತ್ತಮ ಕಾರ್ಯ ನಿರ್ವಹಣೆಯಲ್ಲಿರುವ ಟಾಟಾಸುಮೊ/ ಬೊಲೆರೋ/ಕ್ವಾಲಿಸ್/Maruthi Swift Dzire/ ETIOS ವಾಹನಗಳನ್ನು ಹೊಂದಿರುವಂತಹ ಕರ್ನಾಟಕ ರಾಜ್ಯದಲ್ಲಿ ನೋಂದಣೆ ಮಾಡಿ ಸ್ವಂತ ವಾಹನಗಳನ್ನು ಹೊಂದಿರುವ ಟ್ರಾವೆಲ್ ಏಜೆನ್ಸಿಗಳು/ ವಾಹನ ಮಾಲೀಕರು ಟೆಂಡರನ್ನು ಇ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಮೊತ್ತ ರೂ 4.20 ಲಕ್ಷಗಳು, ಇ.ಎಂ.ಡಿ ಮೊತ್ತ ರೂ 10,500/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: 21–04–2026 ಸಂಜೆ 5:00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 22–04–2026 ಸಂಜೆ 5.30ರ ಘಂಟೆಯ ನಂತರ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು
DIPR/TMK/14/KSMCA/2026-27

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ
ಅಖಂಡೇಶ್ವರ ಗಂಜ್, ಬೀದರ–ಬೆಂಗಳೂರ ಮುಖ್ಯ ರಸ್ತೆ, ಜೇವರ್ಗಿ–585 310, ಜಿ.ಕಲಬುರಗಿ
e-mail : apmcjewargi@gmail.com
ಸಂಖ್ಯೆ : ಕೃಮಾಇ/ಕೃಉಮಾಸ/ಜೇ/08/2026–27 ದಿನಾಂಕ : 08.04.2026
ಪ್ರಕಟಣೆ
ಸಾರ್ವಜನಿಕ, ರೈತರ ಮತ್ತು ಪೇಟೆಕಾರ್ಯಕರ್ತರ ಗಮನಕ್ಕೆ ತರಬಯಸುವುದೇನೆಂದರೆ, ಜೇವರ್ಗಿ ಕೃಷಿ, ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಮೀತಿಯಿಂದ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ 85, ಮತ್ತು 47 ಹಾಗೂ ಅವುಗಳಲ್ಲಿ ನಿರ್ಮಿಸಿರುವ ಅಂಗಡಿ–ವ–ಗೋದಾಮಿನ ಮಾಲೀಕರು ಮರಣ ಹೊಂದಿರುವ ಪ್ರಯುಕ್ತ, ಅದರ ವಾರಸುದಾರ ವರ್ತಕರು ಖಾತೆ ಬದಲಾವಣೆ ಮಾಡಿ ಶುದ್ಧಕ್ರಯ ಪತ್ರ ಮಾಡಿಕೊಡಲು ಕೋರಿ ಮನವಿ ಸಲ್ಲಿಸಿರುತ್ತಾರೆ, ಪ್ರಯುಕ್ತ ಸಾರ್ವಜನಿಕರು ಕೆಳಕಾಣಿಸಿದ ನಿವೇಶನ ಮತ್ತು ಅದರಲ್ಲಿನ ಕಟ್ಟಡ ವರ್ಗಾವಣೆ ಕುರಿತು ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕ ದಿಂದ 07 ದಿನಗಳೊಳಗಾಗಿ ಲಿಖಿತ ಆಕ್ಷೇಪಣೆಗಳನ್ನು ಪೂರಕ ದಾಖಲಾತಿಗಳೊಂದಿಗೆ ಈ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯ ನಂತರದಲ್ಲಿ ಸಲ್ಲಿಸುವ ಆಕ್ಷೇಪಣೆಗಳು ಪರಿಗಣಿಸಲಾಗುವುದಿಲ್ಲ.
ಕ್ರ.ಸಂ.01 ನಿವೇಶನ ಮತ್ತು ಅಂಗಡಿ–ವ–ಗೋದಾಮು **ಸಂಖ್ಯೆ 85,** ಹಂಚಿಕೆಯಾದ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಎಂ.ಎ.ನಹಿಮ ಫಕೀರ್ ಅಹ್ಮದ** (ಮಾಲಿಕರು: ದಿವಂಗತ ಶ್ರೀ ಮೋಹಮ್ಮದ್ ಅಬ್ದುಲ್ ನಹಿಮ್ ಜೇವರ್ಗಿ) ಖಾತೆ ಬದಲಾವಣೆ ಬಯಸಿರುವ ವಾರಸುದಾರ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಇದ್ರಿಸ್ ಟ್ರೇಡಿಂಗ್ ಕಂಪನಿ ಜೇವರ್ಗಿ** (ಮಾಲೀಕರು, ಶ್ರೀಮತಿ ಸುಭಿಯಾ ಬೇಗಂ ಗಂಡ ದಿ.ಶ್ರೀ ಮೋಹಮ್ಮದ್ ಅಬ್ದಲ್ ನಹಿಮ್ ಜೇವರ್ಗಿ), 2) ನಿವೇಶನ ಮತ್ತು ಅಂಗಡಿ–ವ–ಗೋದಾಮು ಸಂಖ್ಯೆ 47, ಹಂಚಿಕೆಯಾದ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಕುಮಾರ ಮಾರ್ಕೆಟಿಂಗ್ ಜೇವರ್ಗಿ,** (ಮಾಲಿಕರು: ದಿವಂಗತ ಶ್ರೀ ಸಿದ್ದಪ್ಪ ತಂದೆ ಹಾವಣ್ಣ ಅವರಾದ ಸಾ॥ ಹಾಲಗಡ್ಲಾ) ಖಾತೆ ಬದಲಾವಣೆ ಬಯಸಿರುವ ವಾರಸುದಾರ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಕುಮಾರ ಮಾರ್ಕೆಟಿಂಗ್ ಜೇವರ್ಗಿ** (ಮಾಲೀಕರು, ಶ್ರೀಮತಿ ಸರಸ್ವತಿ ಗಂಡ ಸಿದ್ದಪ್ಪ ಅವರಾದ ಸಾ॥ ಹಲಗಡ್ಲಾ),
ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ
ವಾ.ಸಾ.ಸಂ.ಇ./ಕಲಬುರಗಿ/20 /ದೇಶಪಾಂಡೆ ಪಬ್ಲಿಸಿಟಿ/2026–27

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ಸಂ: ಬೆಂಅಪ್ರಾ/ನಯೋಸ/CLU-131/25-26/111/2026-27 ದಿನಾಂಕ: 09.04.2026
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶೀಮತಿ ರಾಧಾಗುಬ್ಬಿ ಹಲ್ ನಂ. 404, ಪೂರ್ವ ವೆನೆಜಿಯಾ ಮೇಜರ್ ಉನ್ನಿಕೃಷ್ಣನ್ ರೋಡ್,ಯಲಹಂಕ, ಬೆಂಗಳೂರು–560064.	ಯಲ ಹಂಕ	ಯಲಹಂಕ	ಸಿಂಗ ನಾಯಕನ ಹಳ್ಳಿ	96/2A2	0ಎ–08.12ಗುಂ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ವಸತಿ ಪ್ಲಾಟ್‌ಗಳನ್ನು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ ಹಾಗೂ ಗುಣಮಟ್ಟದ ವಸತಿ ಪ್ಲಾಟ್‌ಗಳನ್ನು ಖರೀದಿದಾರರು ಯೋಗ್ಯವಾದ ಹೂಡಿಕೆ ಮಾಡಲು ಉತ್ತಮ ಅವಕಾಶವಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯದೊಂದಿಗೆ ಯೋಜನಾಬದ್ಧ ವಸತಿ ಪ್ಲಾಟ್‌ಗಳನ್ನು ಅಭಿವೃದ್ಧಿ ಕಲ್ಪಿಸುವುದರಿಂದ ಖರೀದಿದಾರರಿಗೆ ಕಡಿಮೆದರದಲ್ಲಿ ಉತ್ತಮ ವಸತಿ ಪ್ಲಾಟ್‌ಗಳನ್ನು ಖರೀದಿಸಲು ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ ವಾಟ್ಸಪ್: 94831 66622 (24x7). X @BDAOfficialGoK
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ರಾಜ್ಯ ಬಿಜೆಪಿ ಉಪಾಧ್ಯಕ್ಷೆಯಾಗಿ ತಳಮಟ್ಟದಿಂದ ಪಕ್ಷ ಸಂಘಟಿಸುತ್ತಿರುವ ಗಟ್ಟಿಗಿತ್ತಿ ಜನರ ಒಡನಾಡಿ ರೂಪಾಲಿ ನಾಯ್ಕ್

ಸೋತ ದುಃಖ ಇಲ್ಲ, ಜನರ ಜತೆಗಿರುವ ಖುಷಿ ಇದೆ

ಪ್ರಧಾನಿ ನರೇಂದ್ರ ಮೋದಿಯವರು ಉತ್ತರ ಕನ್ನಡ ಜಿಲ್ಲೆಗೆ ಆಗಮಿಸಿದ ವೇಳೆ ಅವರಿಗೆ ಮೊದಲು ಶಾಲು ಹಾಕುವ ಅವಕಾಶ ನನಗೆ ಸಿಕ್ಕಿತು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಿದ್ದಕ್ಕೆ ತುಂಬಾ ಧನ್ಯವಾದಗಳು ಎಂದು ನಾನು ಮನಸ್ಸಲ್ಲೇ ಹೇಳಿಕೊಂಡು ಕಣ್ಣೀರಿಟ್ಟೆ. ಇದನ್ನು ಕಂಡು ಮೋದಿಯವರ ಕಣ್ಣುಗಳೂ ತೇವಗೊಂಡವು. ಆ ಒಂದು ಕ್ಷಣ ನನಗೆ, ದೇವರ ದರ್ಶನವಾದ ಅನುಭವ ಆಯಿತು. ಚುನಾವಣೆಯಲ್ಲಿ ಸೋತೆನೆಂದು ದುಃಖವಿಲ್ಲ. ಜನರ ಒಡನಾಡಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂಬ ಸಂತೋಷ ಇದೆ ಎನ್ನುತ್ತಾರೆ ಕಾರವಾರ ವಿಧಾನಸಭಾ ಕ್ಷೇತ್ರದ ಬಿಜೆಪಿ ನಾಯಕಿ ರೂಪಾಲಿ ನಾಯ್ಕ್. ವಿಶ್ವವಾಣಿ ನಡೆಸಿದ ವಿಶೇಷ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

ವಿಶ್ವವಾಣಿ ಸಂದರ್ಶನ
ವಿನುತಾ ಹೆಗಡೆ, ಶಿರಸಿ

ರೂಪಾಲಿ ನಾಯ್ಕ್ ಉತ್ತರ ಕನ್ನಡ ಜಿಲ್ಲೆಯ ಕಾರವಾರ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸಿದ್ದ ಜನನಾಯಕಿ. ಬಿಜೆಪಿಯ ನಿಷ್ಠಾವಂತ ನಾಯಕಿಯಾಗಿರುವ ಅವರು ತಳಮಟ್ಟದಿಂದ ಮೇಲೇರಿ ಪಕ್ಷದಲ್ಲಿ ಮಹತ್ವದ ಸ್ಥಾನ ಪಡೆದವರು. 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಪ್ರತಿನಿಧಿಸಿ ಕಾರವಾರದಿಂದ ಗೆದ್ದರು. 2023ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಸತೀಶ ಸೈಲ್ ವಿರುದ್ಧ ಕೇವಲ 2,138 ಮತಗಳ ಅಂತರದಿಂದ ಸೋತರು. ಮಹಿಳೆಯರು ಹಾಗೂ ಶೋಷಿತರ ಪರ ಸದಾ ಧ್ವನಿ ಎತ್ತುತ್ತ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿರುವ ರೂಪಾಲಿ ಅವರು ಸಾರಿಗೆ ಸಂಸ್ಥೆಯನ್ನೂ ಮುನ್ನಡೆಸುತ್ತಿದ್ದಾರೆ. ಅವರ ಪತಿ ಸಂತೋಷ್ ನಾಯಕ್ ಗುತ್ತಿಗೆದಾರರಾಗಿದ್ದಾರೆ. ರೂಪಾಲಿ ಅವರು ತಮ್ಮ ರಾಜಕೀಯ ಪಯಣ, ಸಮಾಜ ಸೇವೆ ಬಗ್ಗೆ ವಿಶ್ವವಾಣಿ ಜತೆ ಮುಕ್ತವಾಗಿ ಮಾತನಾಡಿದರು.

● ರಾಜಕೀಯ ಹಾದಿ ಹೇಗಿತ್ತು?

ಗ್ರಾಮ ಪಂಚಾಯಿತಿ ಚೆಂಡಿಯಾ ನಮ್ಮ ಊರು. ಅಲ್ಲಿಂದ ನಾನು 2004ರಲ್ಲಿ ಪಂಚಾಯಿತಿ ಸದಸ್ಯೆಯಾಗಿ ಆಯ್ಕೆಯಾಗಿದ್ದೆ. ಆಗ ನನಗೆ 26 ವರ್ಷ. ಊರ ಹಿರಿಯರ ಆಶೀರ್ವಾದದಂತೆ ಎಲ್ಲರೂ ಸೇರಿ ನನ್ನನ್ನು ಅಭ್ಯರ್ಥಿಯನ್ನಾಗಿ ಮಾಡಿದರು. ಆಗ ನಮಗೆ ರಾಜಕೀಯ ಬಗ್ಗೆ ಏನು ಗೊತ್ತಿರಲಿಲ್ಲ. ಉತ್ಸಾಹಿ ಯುವಜನರ ಪಡೆ ಜತೆಗೆ ಅಭಿವೃದ್ಧಿಯ ಉತ್ಸಾಹ ಇತ್ತು. ಇದಾಗಿ ಒಂದು ವರ್ಷದಲ್ಲಿ ತಾಲೂಕು ಪಂಚಾಯತಿ ಚುನಾವಣೆ ಬಂತು. ಅಲ್ಲಿಯೂ ಎಲ್ಲರ ಬೆಂಬಲದಿಂದ ಆಯ್ಕೆಯಾದೆ. ಮಹಿಳಾ ಆದ್ಯತೆ ಇದ್ದುದರಿಂದ ತಾಲೂಕು ಪಂಚಾಯತಿ ಅಧ್ಯಕ್ಷೆಯೂ ಆದೆ. ಆ ಅವಧಿಯಲ್ಲಿ ನಮ್ಮ ತಾಲೂಕಿಗೆ ಸ್ವಚ್ಛತಾ ರಾಷ್ಟ್ರೀಯ ಪುರಸ್ಕಾರ ಕೂಡ ಸಿಕ್ಕಿತು. ನಂತರ ಬಿಜೆಪಿ ಕಾರ್ಯಕಾರಣಿ ಸದಸ್ಯೆಯಾಗಿ, ಜಿಲ್ಲಾ ಮಹಿಳಾ ಮೋರ್ಚಾ ಪ್ರಭಾರಿಯಾಗಿ ಸೇವೆ ಸಲ್ಲಿಸಿದೆ. 2018ರ ವಿಧಾನಸಭಾ ಚುನಾವಣೆ ಬಂತು. ಅಲ್ಲಿಯೂ ನಮ್ಮ ನಾಯಕರು ನನ್ನನ್ನು ಅಭ್ಯರ್ಥಿಯಾಗಿ ಮಾಡಿದರು. ಗೆದ್ದು ಬಂದೆ.

● ರಾಜಕೀಯ ಏಕೆ ಬೇಕಿತ್ತು ಅಂತ ಯಾವತ್ತಾದರೂ ಅನಿಸಿದೆಯಾ?

ನಾನು ಬಿಸಿನೆಸ್ ಮಾಡ್ತಾ ಇದ್ದೆ. ಆದರೆ ಅನಿರೀಕ್ಷಿತವಾಗಿ ರಾಜಕೀಯಕ್ಕೆ ಬಂದೆ. ಎಲ್ಲೋ ಒಂದು ಕಡೆಗೆ ರಾಜಕಾರಣದಲ್ಲಿ ಕೆಲವೊಂದು ಸುಳ್ಳುಗಳನ್ನು ಹೇಳಬೇಕಾಗುತ್ತೆ. ಯಾಕೆಂದ್ರೆ, ನಾವು ಹೇಳಿದ ಕೆಲಸ ಆಗುವುದಿಲ್ಲ. ನಾವು ಸತ್ಯದಿಂದಲೇ ಹೋರಾಡ್ತಾ ಇರ್ತೀವಿ. ಆದರೆ ಪಂಚಾಯತ್ ಲೆವೆಲ್ ಅಥವಾ ಮೇಲಿನ ಲೆವೆಲ್‌ನಲ್ಲಿ ಆ ಕೆಲಸಗಳು ಆಗದೆ ಇರೋದನ್ನು ನೋಡಿದರೆ ಸುಳ್ಳುಗಾರರಾಗ್ತೀವಿ. ರಾಜಕಾರಣಿಗಳು ಸರಿ ಇಲ್ಲ ಎಂಬ ಮಾತು ಬರುತ್ತದೆ. ಆ ಥರದಲ್ಲಿ ನನಗೆ ತುಂಬಾ ನೋವಾಗಿದೆ. ಜನರ ಸೇವೆ ಮಾಡಬೇಕು, ಅಭಿವೃದ್ಧಿ ಮಾಡಬೇಕು, ಜನರ ಜತೆ ಚೆನ್ನಾಗಿರಬೇಕು ಅಂತ ಆಸೆ ಇದೆ. ಅಧಿಕಾರಿಗಳು ಕೆಲವೊಮ್ಮೆ ನಾವು ಹೇಳಿದ ಕೆಲಸ ತಕ್ಷಣ ಮಾಡುವುದಿಲ್ಲ, ಕೆಲವೊಮ್ಮೆ ನಮ್ಮ ಸರಕಾರ ಇರೋದಿಲ್ಲ.

● ಶಾಸಕಿಯಾದ ವೇಳೆ ನೆನಪಿಟ್ಟುಕೊಳ್ಳುವ ಸಮಾಜಮುಖಿ ಕೆಲಸಗಳೇನು?

ನಮ್ಮ ನಾಯಕರಾದ ಯಡಿಯೂರಪ್ಪ, ಅನಂತ್ ಕುಮಾರ್ ಹೆಗಡೆ, ಕಾಗೇರಿ ಅವರ ಮಾರ್ಗದರ್ಶನ, ನೆರವಿನಿಂದ 2018ರಿಂದ 23ರವರೆಗೆ ಕಾರವಾರ ಅಂಕೋಲಾ ಕ್ಷೇತ್ರದಲ್ಲಿ ಹಲವಾರು ಸಮಾಜಮುಖಿ ಕೆಲಸಗಳನ್ನು ಮಾಡಿರುವೆ. ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಆಗಬೇಕು ಎಂಬ ಬೇಡಿಕೆ ಬಹಳ ವರ್ಷಗಳಿಂದ ಇತ್ತು. ಯಡಿಯೂರಪ್ಪನವರು ಕಾರವಾರದಲ್ಲಿ ಹಾಸ್ಪಿಟಲ್‌ಗೆ 160 ಕೋಟಿ ಅನುದಾನ ಕೊಟ್ಟರು. ಅದು ಇವತ್ತು ರೆಡಿಯಾಗಿದೆ. ಈ ಸಲ ಕಾಂಗ್ರೆಸ್‌ನವರು ಬಜೆಟ್‌ನಲ್ಲಿ 100 ಕೋಟಿ ಘೋಷಣೆ ಮಾಡಿದ್ದಾರೆ. ಆದರೆ ನಾವು 160 ಕೋಟಿ ಪ್ಲಸ್ 30 ಕೋಟಿ ಅಂದ್ರೆ, 190 ಕೋಟಿ ಹಿಂದಿನ ನಮ್ಮ ಬಿಜೆಪಿ ಸರಕಾರದಲ್ಲೇ ಘೋಷಣೆಯಾಗಿ, ಆಸ್ಪತ್ರೆಯೂ ರೆಡಿಯಾಗಿದೆ. ಆದರೆ ಡಾಕ್ಟರ್‌ಗಳ ಕೊರತೆ ಇದೆ. ಇಬ್ಬರು ನ್ಯೂರೋಸರ್ಜನ್, ಹಾರ್ಟ್ ಸರ್ಜನ್ ಬೇಕು. ಎಂಆರ್‌ಐ ಮಷೀನ್ ತಂದಿಲ್ಲ ಕಾಂಗ್ರೆಸ್‌ನವರು. ಬಂದು ಉದ್ಘಾಟನೆ ಮಾಡಿ ಹೋಗಿದ್ದಾರೆ. ನಾವು ಮಾಡಿದ್ದಕ್ಕೆ ಅವರ ಹೆಸರು ಹಾಕಿಕೊಂಡು ಹೋಗಿದ್ದಾರೆ.

ಬಿಜೆಪಿ ಸರಕಾರ ಇದ್ದಾಗ ಬಹಳಷ್ಟು ಸೇತುವೆಗಳಾಗಿವೆ. ರಾಮನಗುಳ ಸೇತುವೆ ಆ ಟೈಮಿಗೆ ಪ್ರವಾಹ ಬಂದು ಕುಸಿದು ಹೋಗಿತ್ತು. 25 ಕೋಟಿ ರೂಪಾಯಿ ವೆಚ್ಚದಲ್ಲಿ ದೊಡ್ಡದಾದ ಬ್ರಿಡ್ಜ್ ನಿರ್ಮಾಣ ಮಾಡಿದ್ದೇವೆ. ಕಡವಾಡದಲ್ಲಿ ಬ್ರಿಡ್ಜ್ ನಿರ್ಮಾಣ ಆಗಿದೆ. ಸಿದ್ದರದಲ್ಲಿ ಬ್ರಿಡ್ಜ್ ನಿರ್ಮಾಣ ಆಗಿದೆ. ಇಡೀ ಉತ್ತರ ಕನ್ನಡ ಜಿಲ್ಲೆಗೆ ಒಂದು ಮಹಿಳಾ ಕಾಲೇಜ್ ಮೇಲ್ದರ್ಜೆಗೆ ಮಾಡಲಾಗಿದೆ. ಅಲ್ಲಿ ಹಳ್ಳಿಗಳಿಂದ ಬಂದ ಮಹಿಳೆಯರಿಗೆ ಹಾಸ್ಟೆಲ್ ನಿರ್ಮಾಣ ಮಾಡಿದ್ದೇವೆ. ನಾಲ್ಕು ಕೋಟಿ ವೆಚ್ಚದಲ್ಲಿ ಶಾಸಕರ ಸ್ಕೂಲ್ ಅಭಿವೃದ್ಧಿ ಮಾಡಲಾಗಿದೆ. ಕಾರವಾರದಲ್ಲಿ ಇರುವ ಮಾಲಾದೇವಿ ಗ್ರೌಂಡ್‌ನಲ್ಲಿ ಶೌಚಾಲಯ, ಚೇಂಜ್ ರೂಮ್, ವಿಶ್ರಾಂತಿ ಗೃಹ ಐದು ಕೋಟಿ ವೆಚ್ಚದಲ್ಲಿ ಮಾಡಿದ್ದೇವೆ. ಪ್ರವಾಸಿ ಮಂದಿರ ಕೂಡ 10 ಕೋಟಿಯಲ್ಲಿ ಮಾಡಿದ್ದೇವೆ. ಗೋಕರ್ಣ, ಸಿರಸಿ, ಅಚವೆ ಭಾಗಗಳಿಗೆ 10 ಕೋಟಿ ವೆಚ್ಚದಲ್ಲಿ ಒಳ್ಳೆಯ ಸಿಮೆಂಟ್ ರೋಡ್ ಮಾಡಿಕೊಟ್ಟಿದ್ದೇವೆ. ಶಾಲೆಗಳಲ್ಲಿ ಕಂಪ್ಯೂಟರ್‌ಗಳು ಕೊಟ್ಟಿದ್ದಿನಿ. ಯಾರೂ ಹೋಗದೆ ಇರುವಂತಹ ಜಾಗಕ್ಕೆ ಹೋಗಿ ಅಲ್ಲಿಯ ಜನರಿಗೆ ಮೂಲಭೂತ ಸೌಕರ್ಯಗಳಾದ ರೋಡು, ನೀರಿನ ವ್ಯವಸ್ಥೆ ಮಾಡಿಕೊಟ್ಟಿದ್ದೇನೆ.

● ಕ್ಷೇತ್ರದಲ್ಲಿ ಸದ್ಯ ಯಾವ ಸಮಸ್ಯೆ ನಿವಾರಣೆ ಆಗಬೇಕಿದೆ?

ದೊಡ್ಡ ಸಮಸ್ಯೆ ಅಂದರೆ ನಿರುದ್ಯೋಗ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಬಂದಿವೆ. ಇಲ್ಲಿ ಕೈಗಾ ಪ್ರಾಜೆಕ್ಟ್ ಇದೆ, ನೌಕಾನೆಲೆ ಬೇಸ್ ಇದೆ. ಇನ್ನೂ ದೊಡ್ಡ ಯೋಜನೆಗಳು ಬರ್ತಾ ಇವೆ. ಆದರೆ ನಮ್ಮ ಮಕ್ಕಳಿಗೆ ನೌಕರಿ ಸಿಗ್ತಾ ಇಲ್ಲ. ಮುಡುಗೇರಿಯಲ್ಲಿ ಪ್ರಾಜೆಕ್ಟ್‌ಗೆ ಸುಮಾರು 2009 ಎಕರೆ ಜಮೀನು ಸ್ವಾಧೀನ ಮಾಡಿಕೊಂಡಿದ್ದಾರೆ. ಆ ರೈತರಿಗೆ ಈ ತನಕ ಒಂದು ರುಪಾಯಿ ಕೊಟ್ಟಿಲ್ಲ. 10ರಿಂದ 15 ಸಾವಿರಕ್ಕಾಗಿ ಇಲ್ಲಿಂದ ಗೋವಾಗೆ, ಹುಬ್ಬಳ್ಳಿಗೆ, ಬೆಂಗಳೂರಿಗೆ ಹೋಗ್ತಾರೆ. ಗ್ಯಾರಂಟಿ ಆಸೆ ತೋರಿಸಿ ಅಧಿಕಾರದಲ್ಲಿ ಕೂತ್ಕೊಂಡಿದ್ದಾರೆ. ಆದರೆ ಈಗ ಅಧಿಕಾರ ನಡೆಸಲಿಕ್ಕೆ ಅವರ ಹತ್ರ ಹಣ ಇಲ್ಲ. ಜನರ ಮೇಲೆ ತೆರಿಗೆ ಭಾರ ಹಾಕ್ತಾ ಇದ್ದಾರೆ. ಬೇರೆ ಬೇರೆ ರೀತಿಯಲ್ಲಿ ಹಣ ವಸೂಲಿ ಆಗ್ತಾ ಇದೆ. ಬಿಜೆಪಿ ಸರಕಾರ ಇದ್ದಾಗ ನಮ್ಮ ಊರಿನ ಅಭಿವೃದ್ಧಿಗೆ 490 ಕೋಟಿ ರು.ತಂದಿದ್ದೆವು. ಈಗಿನ ಶಾಸಕರು ಅದನ್ನೇ ಮುಂದುವರಿಸಿಕೊಂಡು ಹೋಗ್ತಾ ಇದ್ದಾರೆ ಹೊರತು ಹೊಸದಾಗಿ ಏನೂ ತಂದಿಲ್ಲ.

● ಗ್ಯಾರಂಟಿ ಸ್ಕೀಮ್ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಗ್ಯಾರಂಟಿ ಕೊಡುವುದು ಬೇಡ ಎಂದು ಯಾರೂ ಹೇಳಲ್ಲ. ಜನರಿಗೆ ಒಳ್ಳೆಯದಾಗಬೇಕು ಅಂತ ಇದ್ದರೆ ಮನೆಗೆ ಒಂದು ನೌಕರಿ ಕೊಡಬಹುದಿತ್ತಲ್ಲ? ಕಲಿತವರು ಎಷ್ಟೋ ಜನ ಇದ್ದರು. ಎಷ್ಟೋ ಬಡವರು, ಅವರ ಮಕ್ಕಳಿದ್ದಾರೆ. 'ಮನೆಗೆ ಒಂದು ನೌಕರಿ' ಘೋಷಣೆ ಮಾಡಬಹುದಿತ್ತಲ್ಲ? ತೆರಿಗೆ ಮೂಲಕ ಜನರಿಂದ ಹಣ ಲೂಟಿ ಮಾಡಿ ಗ್ಯಾರಂಟಿ ಕೊಡ್ತಾ ಇದ್ದೀರಿ. ಮಹಿಳೆಯರಿಗೆ ಉಚಿತ ಸಾರಿಗೆ ಮಾಡಿದ್ರಿ, ಪುರುಷರು ಇಲ್ವಾ, ಕಾಲೇಜಿಗೆ ಹೋಗುವ ಹುಡುಗರು ಇಲ್ವಾ? ಒಂದು ವೋಟಿನ ಸಲವಾಗಿ 2000 ಕೊಟ್ಟು ಮನೆಯಲ್ಲಿ ಮಹಿಳೆಯರು ಕಿತ್ತಾಡುವ ಹಾಗೆ ಮಾಡಿದ್ರಲ್ಲ.

● ಮೀನುಗಾರರ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಯಾವ ಕಾರ್ಯಗಳು ಆಗಬೇಕಿದೆ?

ಹಿಂದೆ ಸಾಗರಮಾಲಾ ಯೋಜನೆ ಮಾಡಿದ್ರು. ಇವತ್ತು ಕೇಣಿಯಲ್ಲಿ ಮಾಡ್ತಾ ಇದ್ದಾರೆ. ಯಾವುದೇ ಯೋಜನೆ ಬರಲಿ, ಜನರ ಮನಸ್ಥಿತಿಯನ್ನು ಗುರುತು ಮಾಡಿಕೊಂಡು ಯೋಜನೆ ತರಬೇಕು. ಇವತ್ತು ನೋಡಿ ನೇವಲ್ ಬೇಸ್, ಇದು ಬಹಳ ಮುಖ್ಯವಾಗಿ ಬೇಕಾಗಿತ್ತು. ಜನರಿಗೆ ನ್ಯಾಯ ಸಿಗಬೇಕು. ಅಲ್ಲಿ ನೌಕರಿ ಸಿಗಬೇಕು. ಅವರನ್ನು ಒಕ್ಕಲೆಬ್ಬಿಸಿ ಸರಿಯಾಗಿ ಪರಿಹಾರ ಕೊಡದೆ ಎಲ್ಲೋ ಒಂದು ಸ್ಮಶಾನಕ್ಕೆ ಹಾಕಿಬಿಟ್ರೆ? ಬಹಳಷ್ಟು ಯೋಜನೆಗಳನ್ನು ತರ್ತಾ ಇದ್ದಾರೆ. ಆದರೆ ಅಲ್ಲಿಯ ಜನರ ವಿಶ್ವಾಸ ಗಳಿಸುವಲ್ಲಿ ಸರಕಾರ ಯಶಸ್ವಿಯಾಗಿಲ್ಲ.

● ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಹುದ್ದೆಯನ್ನು ಹೇಗೆ ನಿಭಾಯಿಸುತ್ತಿದ್ದೀರಾ?

ಹೋರಾಟ ಮಾಡಲು ಅಥವಾ ಸಂಘಟನೆ ಮಾಡಲು ನನಗೆ ಯಾವುದೇ ರೀತಿಯ ಸಮಸ್ಯೆ ಆಗಲಿಲ್ಲ. ತಳಮಟ್ಟದಿಂದ ಬಂದ ನನಗೆ ಸಂಘನೆಯಲ್ಲಿ ಹಿಡಿತವಿದೆ. ನನಗೆ ಸಿಕ್ಕಿರುವುದು ಗೌರವದ ಸ್ಥಾನ. ಬಹಳ ಖುಷಿಯಿಂದ ನಿಭಾಯಿಸಿದ್ದೇನೆ. ಎಲ್ಲಾ ಕಡೆಗೆ ತಿರುಗಾಡ್ತಾ ಇದ್ದೇನೆ. ಪಕ್ಷ ಕೊಟ್ಟ ಜವಾಬ್ದಾರಿ ಚಾಚೂ ತಪ್ಪದೆ ಮಾಡ್ತಾ ಇದ್ದೇನೆ. ಬಿಜೆಪಿ ತಾಯಿ ಸಮಾನ ಇರುವ ಪಕ್ಷ. ನಾವು ತಾಯಿಗೆ ಮೋಸ ಮಾಡಬಾರದು. ರಾಜಕಾರಣಕ್ಕೆ ಮಹಿಳೆಯರು ಹೆಚ್ಚೆಚ್ಚು ಬರಬೇಕು. ಉನ್ನತ ಅಧಿಕಾರ ಪಡೆಯಬೇಕು.

● ರಾಜಕಾರಣದಲ್ಲಿ ಮಹಿಳಾ ಪ್ರಾಬಲ್ಯ, ಇದಕ್ಕೆ ನಿಮ್ಮ ಅಭಿಪ್ರಾಯ?

ಗಂಡಸರಿಗೆ ಸಮಾನವಾಗಿ ಮಹಿಳೆ ಕೆಲಸ ಮಾಡೋದು ನೋಡ್ತಾ ಇದ್ದೇವೆ. ನಮ್ಮ ನಿರ್ಮಲಾ ಸೀತಾರಾಮನ್ ನೋಡಿ. ವಿತ್ತ ಸಚಿವೆ ಆಗಿ ನಮ್ಮ ದೇಶವನ್ನು ಮುನ್ನಡೆಸ್ತಾ ಇದ್ದಾರೆ. ರಾಷ್ಟ್ರಪತಿ ಮುರ್ಮು ಮೇಡಂ ಅವರನ್ನು ನೋಡಿ. ಯಾವುದೇ ರೀತಿಯ ಜವಾಬ್ದಾರಿ ಕೊಟ್ಟರೂ ಮಹಿಳೆ ಮಾಡಿಕೊಂಡು ಹೋಗಲಿಕ್ಕೆ ಸಾಧ್ಯ ಇದೆ ಅಂತ ತೋರಿಸಿಕೊಟ್ಟಿದ್ದಾರೆ. ಮಹಿಳೆಯರು ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣಕ್ಕೆ ಬರಬೇಕು. ನಮ್ಮ ಸಂವಿಧಾನ ಕೂಡ ನಮಗೆ ಅಷ್ಟೇ ಗೌರವ ಕೊಟ್ಟಿದೆ. ಆ ಸಂವಿಧಾನಕ್ಕೂ ಅಂಬೇಡ್ಕರ್ ಅವರಿಗೂ ನಾವು ಧನ್ಯವಾದ ಹೇಳಬೇಕಿದೆ.

● ರಾಜಕೀಯದಲ್ಲಿ ನಿಮಗೆ ಗುರು, ಸ್ಫೂರ್ತಿ ಯಾರು?

ನನಗೆ ಯಾರು ರಾಜಕೀಯ ಗುರುಗಳು ಇಲ್ಲ. ನಮ್ಮ ಊರ ನಾಗರಿಕರು, ನಮ್ಮ ಯುವಕ ಯುವತಿಯರೇ ನನಗೆ ಗುರುಗಳು. ನಂತರ ಯಡಿಯೂರಪ್ಪಾಜಿ, ಅನಂತ ಕುಮಾರ್ ಹೆಗಡೆ ನನಗೆ ತುಂಬಾ ಆಶೀರ್ವಾದ ಮಾಡಿದ್ದಾರೆ, ಬೆಂಬಲಿಸಿದ್ದಾರೆ.

● ಕಾಗೇರಿ ಅವರನ್ನು ಗೆಲ್ಲಿಸಲು ತುಂಬಾ ಶ್ರಮ ಪಟ್ಟಿದ್ದೀರಾ, ಅನುಭವ ಹೇಗಿತ್ತು?

ಮೋದಿಯವರು ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬ ಮಹತ್ವಾಕಾಂಕ್ಷೆ, ಕೇಂದ್ರದಲ್ಲಿ ಭಾರತೀಯ ಜನತಾ ಪಾರ್ಟಿ ಅಧಿಕಾರಕ್ಕೆ ಬರಬೇಕಿತ್ತು. ಇದೊಂದು ಚಾಲೆಂಜ್ ಆಗಿ ನಾವು ಸ್ವೀಕಾರ ಮಾಡಿದ್ವಿ. ಯಾವುದೇ ಒಂದು ಪರಿಸ್ಥಿತಿಯಲ್ಲಿ ನಮ್ಮ ಒಂದೇ ಒಂದು ಮತ ಈ ಕಡೆಯಿಂದ ಬೇರೆ ಆಗಬಾರದು ಅನ್ನೋ ನಿಟ್ಟಿನಲ್ಲಿ ಇಡೀ ಉತ್ತರ ಕನ್ನಡ ಜಿಲ್ಲೆ ತಿರುಗಾಟ ಮಾಡಿದ್ದೇವೆ. ನಮ್ಮ ಕಾರ್ಯಸೂಚಿಗಳಂತೆ ನಮಗೆ ಜನ ಆಶೀರ್ವಾದ ಮಾಡಿದರು.

● 2028ಕ್ಕೆ ಕಾರವಾರ-ಅಂಕೋಲದಿಂದ ಮತ್ತೆ ರೂಪಾಲಿ ಅವರ ಸ್ಪರ್ಧೆ ಖಚಿತವೇ, ಸಿದ್ಧತೆ ಹೇಗಿದೆ?

ಸಿದ್ಧತೆ ಅಂತ ಏನಿಲ್ಲ. ಏನು ಕೆಲಸ ಮಾಡಬೇಕು ಅದು ಮಾಡ್ತಾ ಇದ್ದೇನೆ. ಚುನಾವಣೆ ಬಂದಾಗ ಅಷ್ಟೇ ಕೆಲಸ ಮಾಡೋದಲ್ಲ. ನಾನು ಸೋತಿದ್ದೇನೆ ಅಂತ ನನಗೆ ಅನಿಸ್ತಾ ಇಲ್ಲ. ನಾವು ಇರುವಷ್ಟು ದಿವಸ ಜನರ ಸೇವೆ ಮಾಡಬೇಕಾಗಿದೆ. ಅವರಿಗೆ ಮತ್ತೆ ಮತ್ತೆ ನಾವು ಸಿಗಬೇಕು, ಜನರ ಜತೆಗೆ ಇರಬೇಕು. ಈ ಭಾವನೆಯೊಂದಿಗೆ ನಾವು ಜನರ ಜತೆಗೆ ಇದ್ದು ಕೆಲಸ ಮಾಡ್ತಾ ಇದ್ದೇವೆ.

● ನೀವು ಶಾಸಕಿ ವೇಳೆ ಬಿಎಸ್‌ವೈ ಸಿಎಂ ಆಗಿದ್ರು, ಆ ಸಂದರ್ಭ ಹೇಗಿತ್ತು?

2005ರಲ್ಲೇ ಯಡಿಯೂರಪ್ಪ ಅವರ ಪರಿಚಯವಾಗಿತ್ತು. ಕಾರವಾರದಲ್ಲಿ ಗುಡ್ಡ ಕುಸಿತ ಆದಾಗ ನಾನು ತಾಲೂಕು ಪಂಚಾಯಿತಿ ಅಧ್ಯಕ್ಷೆ ಆಗಿದ್ದೆ. ಆಗ 19 ಜನ ಮೃತಪಟ್ಟಿದ್ರು. ಯಡಿಯೂರಪ್ಪ ಅವರು ಅಲ್ಲಿಗೆ ಭೇಟಿ ನೀಡಿದ್ದ ವೇಳೆ ಅವರ ಮಾತುಗಳಿಂದ ಪ್ರಭಾವಿತಳಾದೆ. ಯಾವಾಗಲೂ ನಮಗೆ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ. ಸಂಘಟನೆ ವಿಷಯದಲ್ಲಿ ಇವತ್ತು ಕೂಡ ಗಟ್ಟಿಯಾಗಿ ನಿಲ್ಲುತ್ತಿದ್ದಾರೆ. ಅವರ ನಾಯಕತ್ವ ಮುಂದಿನ ಪೀಳಿಗೆಗೆ ಮಾದರಿ.

● ತಂದೆ ಹಾದಿಯಲ್ಲಿ ವಿಜಯೇಂದ್ರ ಸಾಗ್ತಾ ಇದ್ದಾರೆ, ಕಾರ್ಯವೈಖರಿ ಹೇಗೆ?

ಎಲ್ಲರನ್ನೂ ಮುನ್ನಡೆಸಿಕೊಂಡು ವಿಜಯೇಂದ್ರ ಅವರು ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. ತಂದೆಯವರ ರೀತಿ ಅವರ ಕಾರ್ಯ ವೈಖರಿ ಇದೆ. ಪ್ರತಿ ಜಿಲ್ಲೆಯ ಮೂಲೆಮೂಲೆಗೆ ತೆರಳಿ ಸಂಘಟನೆ ಮಾಡ್ತಾ ಇದ್ದಾರೆ. ಒಳ್ಳೆಯ ಯುವ ನಾಯಕರಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಸಂಘಟನೆಗೆ ಮಹತ್ವ ಕೊಡಬೇಕು, ಎಲ್ಲಿಯೂ ಕೂಡ ಕೀಳುಮಟ್ಟದ ರಾಜಕಾರಣ ನಾವು ಮಾಡಬಾರದು ಎಂಬ ಸೂಚನೆ ವಿಜಯೇಂದ್ರ ಅವರಿಂದ ಬರ್ತಾ ಇರುತ್ತದೆ.

ಪ್ರಧಾನಿ ಮೋದಿ ಅವರ ಜತೆಗಿನ ಮಾತುಕತೆ ಹೇಗಿತ್ತು?

ನಾನು ಐದು ಕಾರ್ಯಕ್ರಮಗಳಲ್ಲಿ ಪ್ರಧಾನಿ ಮೋದಿ ಅವರ ಜತೆ ವೇದಿಕೆ ಹಂಚಿಕೊಂಡಿದ್ದೇನೆ. ಅಂಕೋಲಕ್ಕೆ ನರೇಂದ್ರ ಮೋದಿ ಅವರು ಆಗಮಿಸಿದ ವೇಳೆ ಎರಡು ಲಕ್ಷ ಜನ ಸೇರಿದ್ದರು. ಅದು 42 ವರ್ಷಗಳ ಬಳಿಕ ಪ್ರಧಾನಿಯೊಬ್ಬರು ಅಂಕೋಲಕ್ಕೆ ಆಗಮಿಸಿ ಕಾರ್ಯಕ್ರಮ ಆಗಿತ್ತು. ನೌಕಾಪಡೆಯ ಜಾಗ ಅದು, ರಿಸರ್ವ್ ಆಗಿದೆ, ಅಲ್ಲಿ ಪ್ರಧಾನಿ ಕಾಲಿಡಬಾರದು ಎಂದು ಕಾಂಗ್ರೆಸ್‌ನವರು ಕಿತಾಪತಿ ಮಾಡಿದರು. ನಾನು ಹಠ ಹಿಡಿದು ಯಾವುದೇ ಪರಿಸ್ಥಿತಿಯಲ್ಲಿ ಸಮಾವೇಶ ಆಗಲೇಬೇಕು ಅಂದೆ. ಸಮಾವೇಶಕ್ಕೆ 6 ದಿನ ಬಾಕಿ ಇತ್ತು. ಪ್ರಲ್ಹಾದ್ ಜೋಶಿ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ ಇವರೆಲ್ಲ ಸಹಾಯ ಮಾಡಿದ್ರು. ರಾತ್ರಿ ಹಗಲು ಕೆಲಸ ಮಾಡಿದೆವು. ಆ ಸಮಾವೇಶ ನಡೆಸಿದ್ದಕ್ಕೆ ನನಗೆ ತುಂಬಾ ಖುಷಿ ಇದೆ. ಮೋದಿಜಿ ಅವರು ಕೂಡ ತುಂಬಾ ಖುಷಿ ಪಟ್ಟರು. ಆನಂತರ ಶಿರಸಿಗೆ ಕೂಡ ಬಂದರು. ಅವರಿಗೆ ಮೊದಲ ಶಾಲು ಹಾಕುವ ಅವಕಾಶ ನನಗೆ ಸಿಕ್ಕಿತು. ನನ್ನ ಕಣ್ಣಿಂದ ಆನಂದಭಾಷ್ಪ ಬರ್ತಾ ಇತ್ತು. ನಾನು ಒಂದೇ ಹೇಳ್ಕೊಂಡಿದ್ದು- ತಾವು ಅಯೋಧ್ಯೆಯಲ್ಲಿ ರಾಮ ಮಂದಿರ ಮಾಡಿದ್ದಕ್ಕೆ ತುಂಬಾ ಧನ್ಯವಾದಗಳು. ನನ್ನ ಕಣ್ಣಲ್ಲಿ ನೀರು ಬರ್ತಾ ಇದ್ದಂತೆ ಅವರು ಕೂಡ ಕಣ್ಣಲ್ಲಿ ನೀರು ಹಾಕಿಬಿಟ್ರು. ಮೋದಿ ಅವರು ಭಾವುಕರಾದ ಕ್ಷಣ ಕಂಡು ನನಗೆ ಎಲ್ಲೋ, ದೇಗುಲಕ್ಕೆ ಬಂದಿದ್ದೇನೆ ದೇವರ ದರ್ಶನ ಆಗ್ತಾ ಇದೆ ಅಂತ ಭಾಸವಾಯಿತು. ಆ ಕ್ಷಣವನ್ನು ನಾನು ಯಾವತ್ತೂ ಮರೆಯಲಾರೆ.

ಸಮಾಚಾರ ಸಣ್ಣದಲ್ಲ

ಮೀಸಲು ವಿಚಾರಕ್ಕಾಗಿ ಸಿಎಂ ದೆಹಲಿ ಪ್ರವಾಸ

ದಾವಣಗೆರೆ: ಕ್ಷೇತ್ರ ಪುನರ್ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಕುರಿತಂತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿ ಪ್ರವಾಸ ಹೋಗಿದ್ದಾರೆ ಎಂದು ವಿಪ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ. ಹರಿಹರ ತಾ.ಬೆಳ್ಳೂಡಿಯ ಕಾಗಿನೆಲೆ ಕನಕ ಗುರು ಪೀಠದ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೇಳೆ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನವೆಂಬರ್‌ನಿಂದಲೇ ಹೇಳುತ್ತಿದ್ದಾರೆ. ಅದರ ಬಗ್ಗೆ ಜಾಸ್ತಿ ಮಾತನಾಡಬೇಕಾಗಿಲ್ಲ. ಸಿಎಂ ಸಿದ್ದರಾಮಯ್ಯ ಸದನದಲ್ಲೇ ಅದರ ಬಗ್ಗೆ ಉತ್ತರ ನೀಡಿದ್ದಾರೆ ಎಂದು ಉತ್ತರಿಸಿದರು.

ಲೋಕಾ ಬಲೆಗೆ ಬಿದ್ದ ಪಪಂ ಮುಖ್ಯಾಧಿಕಾರಿ

ರಾಯಚೂರು: ಜಿಲ್ಲೆಯ ಸಿರವಾರ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸುರೇಶ್ ಶೆಟ್ಟಿ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾನೆ. ಈ-ಖಾತೆ ಮಾಡಲು 2 ಲಕ್ಷ ರು.ಲಂಚಕ್ಕೆ ಬೇಡಿಕೆ ಇಟ್ಟಿದ್ದ. ಅದರಂತೆ 1 ಲಕ್ಷ ರು. ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾನೆ. ರಾಘವೇಂದ್ರ ರೆಡ್ಡಿ ಎಂಬವರಿಗೆ 2 ಲಕ್ಷ ರು.ಬೇಡಿಕೆ ಇಟ್ಟಿದ್ದ ಮುಖ್ಯಾಧಿಕಾರಿ ಅಡ್ವಾನ್ಸ್ ಆಗಿ ಒಂದು ಲಕ್ಷ ರು. ತೆಗೆದುಕೊಳ್ಳುವಾಗ ಸಿಕ್ಕಿಬಿದ್ದಿದ್ದಾನೆ.ಲೋಕಾ ಎಸ್‌ಪಿ ಸಿದ್ದರಾಜು ನೇತೃತ್ವದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ರವಿ ಪುರು ಷೋತ್ತಮ್, ಸಿಬ್ಬಂದಿ ವಿಜಯ ಕುಮಾರ್, ಅಮರೇಶ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ದಿನ ವಿಶೇಷ

11 ಎಪ್ರಿಲ್ 2026 ಶನಿವಾರ

» ಸೂರ್ಯೋದಯ	:	6-20
» ಸೂರ್ಯಾಸ್ತ	:	6-41
» ತಿಥಿ	:	ನವಮಿ
» ನಕ್ಷತ್ರ	:	ಉತ್ತರಾಷಾಢ
» ಸಂವತ್ಸರ	:	ಪರಾಭವ
» ಅಯನ	:	ಉತ್ತರಾಯನ
» ಋತು	:	ವಸಂತ
» ಮಾಸ	:	ಚೈತ್ರ
» ಪಕ್ಷ	:	ಕೃಷ್ಣಪಕ್ಷ

ಹೊಸ ನಾಯಕತ್ವಕ್ಕೆ ಹೊಸ ಹುರುಪು | ಜಿಬಿಎ ಚುನಾವಣೆ ಹಿನ್ನೆಲೆ ಪಕ್ಷ ಸಂಘಟನೆಗೆ ಒತ್ತು: ನಿಖಿಲ್

ಬೆಂಗಳೂರಿನಲ್ಲಿ ಜೆಡಿಎಸ್ ಬೆಳ್ಳಿಹಬ್ಬದ ಸಮಾವೇಶ ಇಂದು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನಲ್ಲಿ ಅನೇಕ ಸಮಸ್ಯೆಗಳಿದ್ದು ಜನರು ಎಚ್ಚೆತ್ತುಕೊಳ್ಳಲು ಸಮಾವೇಶ ನಡೆಸಲಾಗುತ್ತಿದೆ. ಅಲ್ಲದೆ, ಬೆಂಗಳೂರಿನಲ್ಲಿ ನಮಗೂ ಶಕ್ತಿ ಇದ್ದು, ಸಂಘಟನೆ ಒತ್ತು ನೀಡಲು ಹಾಗ್ಯೆ ಜಿಬಿಎ ಚುನಾವಣೆಯಲ್ಲಿ ಹೊಸ ನಾಯಕರು ಸೃಷ್ಟಿ ಆಗುತ್ತಾರೆ ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಸಮಾವೇಶದ ಪೂರ್ವ ಸಿದ್ಧತೆ ಪರಿಶೀಲನೆ ನಡೆಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶ ಹೊಸ ನಾಯಕತ್ವಕ್ಕೆ ಹೊಸ ಹುರುಪು ತುಂಬಲಿದೆ. ಒಂದು ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ವಿಶ್ವಾಸವಿದೆ. ದೇವೇಗೌಡರು ಸಮಾವೇಶ ಉದ್ಘಾಟನೆ ಮಾಡಲಿದ್ದಾರೆ. ಜಿಬಿಎ ಚುನಾವಣೆ ಹಿನ್ನೆಲೆ ಪಕ್ಷವನ್ನು ಸಂಘಟಿತಗೊಳಿಸುವ ಕಾರ್ಯ ನಡೆಯುತ್ತಿದೆ. ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಅವಧಿಯಲ್ಲಿ ಬೆಂಗಳೂರಿಗೆ ನೀಡಿದ ಕೊಡುಗೆಗಳನ್ನು ಜನರಿಗೆ ತಿಳಿಸಲಾಗುವುದು ಎಂದರು.

ರಾಜ್ಯದ ಎಂಟು ಕಡೆ ಸಮಾವೇಶ: ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆ ರಾಜ್ಯದ ಎಂಟು ಕಡೆ ಸಮಾವೇಶಗಳನ್ನು ಆಯೋಜಿಸಲಾಗುತ್ತಿದ್ದು, ಅದರ ಆರಂಭ ಬೆಂಗಳೂರಿನಿಂದ ಆಗಲಿದೆ. ತುಮಕೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ರಜತ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಬೆಂಗಳೂರಿನ ಕೊಮ್ಮಘಟ್ಟದಲ್ಲಿ ನಡೆಯಲಿರುವ ಜೆಡಿಎಸ್ ಬೆಳ್ಳಿಹಬ್ಬದ ಸಮಾವೇಶ ಸಂಬಂಧ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸುದ್ದಿಗೋಷ್ಠಿ ನಡೆಸಿದರು.

ಜಿಬಿಎ ಚುನಾವಣೆಯಲ್ಲೂ ಹೆಚ್ಚಿನ ಸದಸ್ಯರನ್ನು ಹೊಂದುವ ಗುರಿಯೊಂದಿಗೆ ಪಕ್ಷ ಸಂಘಟನೆ ಬಲಪಡಿಸಲು ಈ ಸಮಾವೇಶಗಳು ನೆರವಾಗಲಿವೆ. ಬೆಂಗಳೂರಿನಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂಬ ಟೀಕೆಗಳಿಗೆ ಉತ್ತರವಾಗಿ, ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು.

ಬೆಂಗಳೂರು ಅಭಿವೃದ್ಧಿಗೆ ದೇವೇಗೌಡರ ಕೊಡುಗೆ ಅಪಾರವಾಗಿದ್ದು, ನಗರಕ್ಕೆ ಕಾವೇರಿ ನೀರು ತಂದವರು ದೇವೇಗೌಡರು, ಫ್ಲೈ ಓವರ್ ಯೋಜನೆಗಳನ್ನು ಜಾರಿಗೆ ತಂದವರೂ ಅವರೇ. ಜಿಬಿಎ ಚುನಾವಣೆಯಲ್ಲಿ ಪ್ರತ್ಯೇಕ ಅಥವಾ ಸ್ವತಂತ್ರ ಸ್ಪರ್ಧೆ ಕುರಿತಂತೆ ಇನ್ನೂ ಯಾವುದೇ ನಿರ್ಧಾರವಾಗಿಲ್ಲ. ಚುನಾವಣೆ ಘೋಷಣೆಯಾದ ಬಳಿಕ ಈ ಕುರಿತು ಚರ್ಚೆ ನಡೆಯಲಿದೆ ಎಂದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಶರವಣ, ಜವರೇಗೌಡ, ಮಾಜಿ ಶಾಸಕ ವೈಎಸ್‌ವಿ ದತ್ತಾ, ರಮೇಶ್ ಗೌಡ, ತಿಪ್ಪೇಸ್ವಾಮಿ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಮೈತ್ರಿ ಬಗ್ಗೆ ಚರ್ಚೆ ಆಗಿಲ್ಲ: ಸದ್ಯಕ್ಕೆ ಮೈತ್ರಿ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಚುನಾವಣೆ ಘೋಷಣೆ ಆದ ಮೇಲೆ ಚರ್ಚೆ ಶುರು ಮಾಡ್ತೀವಿ. ಒಟ್ಟಾಗಿ ಹೋಗಬೇಕಾ? ಏಕಾಂಗಿಯಾಗಿ ಹೋಗಬೇಕಾ? ಅಂತ ಎರಡು ಪಕ್ಷದ ವರಿಷ್ಠರು ತೀರ್ಮಾನ ಮಾಡ್ತಾರೆ. ನಾವು ಪಕ್ಷ ಸಂಘಟನೆ ಮಾಡೋ ಕೆಲಸ ಮಾಡುತ್ತೇವೆ. ಲೋಕಸಭೆ ಚುನಾವಣೆಯಲ್ಲಿ ನಾವು ಒಟ್ಟಾಗಿ ಹೋಗಿದ್ವಿ. ಈಗಲೂ ಬಿಜೆಪಿ ಕೇಂದ್ರ ಮತ್ತು ರಾಜ್ಯದ ನಾಯಕರ ಜೊತೆ ಸೌಹಾರ್ದಯುತವಾಗಿ ಹೊಂದಾಣಿಕೆ ಮಾಡಿಕೊಳ್ತೀವಿ. ಒಟ್ಟಿನಲ್ಲಿ ರಾಜ್ಯದ ಅಭಿವೃದ್ಧಿ ಆಗಬೇಕು. ರಾಜ್ಯಕ್ಕೆ ಒಳ್ಳೆಯದಾಗಬೇಕು ಅನ್ನೋದು ನಮ್ಮ ಉದ್ದೇಶದಿಂದ ಹೊಂದಾಣಿಕೆ ಬಗ್ಗೆ ಮಾತುಕತೆ ಆಗುತ್ತದೆ ಎಂದು ತಿಳಿಸಿದರು.

ಪಕ್ಷ ಬಲವರ್ಧನೆಗೆ ಕ್ರಮ

ಬೆಂಗಳೂರು ಚುನಾವಣೆಗೆ ಕಾರ್ಯಕರ್ತರು ಮತ್ತು ಮುಖಂಡರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕೂಡ ಸಭೆಯಲ್ಲಿ ಈಗಾಗಲೇ ಹಲವು ಸಮಲೋಚನೆ ನಡೆಸಲಾಗಿದೆ. ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಸಮಾವೇಶದಲ್ಲಿ ಪಾಲ್ಗೊಳ್ಳುವ ಬಗ್ಗೆ ನಾಯಕಿಯರ ಜೊತೆ ಚರ್ಚೆ ನಡೆಸಲಾಗಿದೆ. ಬೆಂಗಳೂರು ನಗರದಲ್ಲಿ ಗ್ರೇಟರ್ ಬೆಂಗಳೂರು ರಚನೆಯಾಗಿ ಐದು ಇದು ಪಾಲಿಕೆಗಳು ಅಸ್ತಿತ್ವಕ್ಕೆ ಬಂದ ನಂತರ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಕೂಡ ಪಕ್ಷ ಬಲವರ್ಧನೆಗೆ ಆದ್ಯತೆ ನೀಡಲು ಹಾಗೂ ಮುಖ್ಯವಾಗಿ ಬೂತ್ ಮತ್ತು ವಾರ್ಡ್ ಮಟ್ಟದಲ್ಲಿ ಮಹಿಳಾ ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಲು ಈಗಾಗಲೇ ಹಲವು ಹಂತದ ಸಭೆಗಳನ್ನು ನಡೆಸಲಾಗಿದೆ.

ಕಾಂಗ್ರೆಸ್ ಪಕ್ಷ ಸ್ಟಾಲಿನ್ ಪರ ನಿಲ್ಲಲಿದೆ: ಡಿಕೆಶಿ

ಬೆಂಗಳೂರು: ಕಾಂಗ್ರೆಸ್ ಪಕ್ಷವು ಸಿಎಂ ಸ್ಟಾಲಿನ್ ಅವರ ಪರವಾಗಿ ನಿಲ್ಲಲಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ತಿಳಿಸಿದರು.

ತಮಿಳುನಾಡು ವಿಧಾನಸಭೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ಮೈತ್ರಿಕೂಟದ ಅಭ್ಯರ್ಥಿಗಳ ಪರ ಪ್ರಚಾರ ಸಭೆಯಲ್ಲಿ ಶಿವಕುಮಾರ್ ಅವರು ಗುರುವಾರ ಭಾಗವಹಿಸಿ ಮಾತನಾಡಿದರು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ರಾಹುಲ್ ಗಾಂಧಿ ಅವರು ಈ ಕಾರ್ಯಕ್ರಮಕ್ಕೆ ಶುಭಕೋರಿ ಸಂದೇಶ ರವಾನಿಸಿದ್ದಾರೆ. ಕರ್ನಾಟಕದ ಡಿಸಿಎಂ ಆಗಿ ನಾನು ಈ ಕಾರ್ಯಕ್ರಮಕ್ಕೆ ಬಂದಿಲ್ಲ. ನಮ್ಮ ನಾಯಕರ ಪರವಾಗಿ ನಾನು ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ ಎಂದು ತಿಳಿಸಿದರು.

ಸ್ಟಾಲಿನ್ ಅವರು ನಮ್ಮ ಮೈತ್ರಿಕೂಟದಿಂದ ಸ್ಪರ್ಧೆ ಮಾಡುತ್ತಿರುವ ಹೊಸ ಅಭ್ಯರ್ಥಿಗಳನ್ನು ಪರಿಚಯಿಸಿ, ನಿಮ್ಮ ಮಡಿಲಿಗೆ ಹಾಕಿದ್ದಾರೆ. ನೀವು ನಿಮ್ಮ ಕೈಗಳಿಂದ ಅವರಿಗೆ ಹರಸಿ, ಮತ ಹಾಕಿ ಬೆಂಬಲಿಸಿ. ನಮ್ಮ ಮೈತ್ರಿಕೂಟದಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದು, ನಮ್ಮ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು. ಆ ಮೂಲಕ ಡಿಎಂಕೆ ನೇತೃತ್ವದ ನಮ್ಮ ಮೈತ್ರಿಕೂಟ ಮತ್ತೆ ಗೆದ್ದು ನಿಮ್ಮ ಸೇವೆ, ದೇಶದ ಪ್ರಗತಿಗೆ ಕೆಲಸ ಮಾಡಲಿದೆ ಎಂದು ಭರವಸೆ ನೀಡಿದರು. ಸಿನಿಮಾ ರಂಗದವರು ರಾಜಕೀಯಕ್ಕೆ ಪ್ರವೇಶಿಸುವುದನ್ನು ಟೀಕಿಸಿದ ಶಿವಕುಮಾರ್, ರಾಜಕೀಯವನ್ನು ಕೃಷಿಗೆ ಹೋಲಿಸಿದರು, ಇದಕ್ಕೆ ರಾತ್ರೋರಾತ್ರಿ ಯಶಸ್ಸಿನ ಬದಲು ದೀರ್ಘಕಾಲೀನ ತಾಳ್ಮೆ ಮತ್ತು ತಳಮಟ್ಟದ ಕೆಲಸ ಬೇಕಾಗುತ್ತದೆ ಎಂದು ಒತ್ತಿ ಹೇಳಿದರು.

ಸಿಎಂ ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟನೆ, ವಿಶ್ವೇಶ್ವರ ಭಟ್ ಪ್ರಧಾನ ಭಾಷಣ

ರಾಜ್ಯ ಪತ್ರಕರ್ತರ ಸಮ್ಮೇಳನಕ್ಕೆ ಸಿದ್ಧತೆ

ಬೀದರ್: ನಗರದ ಝಿರಾ ಕನ್ವೆನ್ಶನ್ ಹಾಲ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) 40ನೇ ರಾಜ್ಯ ಮಟ್ಟದ ಸಮ್ಮೇಳನವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕರು ವಿಶ್ವೇಶ್ವರ ಭಟ್ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ. ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ನೇತೃತ್ವದಲ್ಲಿ ಸಮ್ಮೇಳನಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

2006ರಲ್ಲಿ 29ನೇ ರಾಜ್ಯ ಸಮ್ಮೇಳನ ಬೀದರ್‌ನಲ್ಲಿ ಆಗಿತ್ತು. 20 ವರ್ಷಗಳ ಬಳಿಕ ಮತ್ತೆ ಬೀದರ್‌ನಲ್ಲಿ 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಜರುಗಲಿದೆ. ರಾಜ್ಯದೆಲ್ಲೆಡೆಯಿಂದ ನಾಲ್ಕು ಸಾವಿರಕ್ಕೂ ಹೆಚ್ಚು ಪತ್ರಕರ್ತರು ಸಮ್ಮೇಳನಕ್ಕೆ ಬರುವ ನಿರೀಕ್ಷೆಯಿದೆ. ಏ.11 ರಂದು ಬೆಳಗ್ಗೆ ಬಸವೇಶ್ವರ ವೃತ್ತದಿಂದ ಮೆರವಣಿಗೆ ಆರಂಭ ಆಗಲಿದೆ. ಸಮ್ಮೇಳನ ಉದ್ಘಾಟನೆ ನಂತರ ಹಲವಾರು ವಿಷಯಗಳ ಕುರಿತು ವಿಚಾರಗೋಷ್ಠಿಗಳು ಜರುಗಲಿದೆ. ಏಪ್ರಿಲ್ 12 ರಂದು ಪ್ರತಿನಿಧಿಗಳ ಸಮಾವೇಶ. ಸರ್ವ ಸದಸ್ಯರ ಸಭೆ ನಡೆಯಲಿದೆ.ಅಂದು ಮಧ್ಯಾಹ್ನ 3 ಗಂಟಗೆ ಸಮಾರೋಪ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭ ಜರುಗಲಿದೆ. ವಿರೋಧಪಕ್ಷದ ನಾಯಕ ಆರ್ ಅಶೋಕ. ವಿಧಾನ ಸಭಾಧ್ಯಕ್ಷರು ಯು.ಟಿ.ಖಾದರ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.



ಬೀದರ್‌ನ ಝೀರಾ ಕನ್ವೆನ್ಶನ್ ಹಾಲ್‌ನಲ್ಲಿ ನಡೆಯಲಿರುವ ಪತ್ರಕರ್ತರ ರಾಜ್ಯ ಸಮ್ಮೇಳನದ ಅಂತಿಮ ಹಂತದ ಸಿದ್ಧತೆಯನ್ನು ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ವೀಕ್ಷಿಸಿದರು.

ಮಾದರಿ ಸಮ್ಮೇಳನಕ್ಕೆ ಸರ್ವ ಪ್ರಯತ್ನ

ಬೀದರ್‌ನಲ್ಲಿ ನಡೆಯುವ ಪತ್ರಕರ್ತರ ರಾಜ್ಯ ಸಮ್ಮೇಳನವನ್ನು ಮಾದರಿ ಆಗಿಸುವ ದಿಸೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರು ಸಂಘವು ಜಿಲ್ಲೆಯ ಎಲ್ಲ ಪತ್ರಕರ್ತರ ಜತಗೂಡಿ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ ತಿಳಿಸಿದರು. ರಾಜ್ಯದ ವಿವಿಧೆಡೆಯಿಂದ ಬರುವ ಪತ್ರಕರ್ತರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸಮ್ಮೇಳನದಲ್ಲಿ ನೋಂದಣಿ ಸೇರಿ 22 ಮಳಿಗೆಗಳು ಇರಲಿವೆ ಎಂದು ಹೇಳಿದರು.

ಹುಲಿಕಲ್ ಘಾಟಿಯಲ್ಲಿ ಮಣ್ಣು ಕುಸಿದು ಮೂವರ ಸಾವು

ಮೃತಪಟ್ಟ ಕಾರ್ಮಿಕರಿಗೆ ತಲಾ ಐದು ಲಕ್ಷ ರು. ಸಿಎಂ ಪರಿಹಾರ

ಬೆಂಗಳೂರು: ಹೊಸನಗರದ ಹುಲಿಕಲ್ ಘಾಟಿಯಲ್ಲಿ ರಸ್ತೆ ಅಂಚಿನ ಮಣ್ಣು ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದ್ದಂತೆ ಅವರ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಬಗ್ಗೆ ಅವರು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಹುಲಿಕಲ್ ಘಾಟಿ ತಿರುವಿನಲ್ಲಿ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿಯ ವೇಳೆ ಮಣ್ಣು ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಸುದ್ದಿ ಕೇಳಿ ದುಃಖವಾಯಿತು. ಮೃತ ದುರ್ದೈವಿ ಕಾರ್ಮಿಕರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ಸದಸ್ಯರಿಗೆ ನೋವು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಘಟನೆ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರೊಂದಿಗೆ ಮಾತುಕತೆ ನಡೆಸಿ, ಮಾಹಿತಿ ಪಡೆದಿದ್ದೇನೆ. ಕುಟುಂಬಕ್ಕೆ ಆಧಾರವಾಗಿದ್ದ ದುಡಿಯುವ ಜೀವಗಳು ಈ ಘಟನೆಯಲ್ಲಿ ಬಲಿಯಾಗಿದ್ದು, ಮಾನವೀಯ ನೆಲೆಯಲ್ಲಿ ಮೃತ ಕಾರ್ಮಿಕರ ಕುಟುಂಬಕ್ಕೆ ತಲಾ 5 ಲಕ್ಷ ನೀಡಲಾಗುವುದು ಎಂದು ಸಿಎಂ ತಿಳಿಸಿದ್ದಾರೆ.

ನಾಲ್ವರ ಸ್ಥಿತಿ ಗಂಭೀರ

ಕೆಲಸದಲ್ಲಿ ನಿರತರಾಗಿದ್ದ ಇತರ ನಾಲ್ವರು ಕಾರ್ಮಿಕರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯಲ್ಲಿ ಮೃತಪಟ್ಟಿರುವ ಕಾರ್ಮಿಕರು ಹಾವೇರಿ ಜಿಲ್ಲೆಯವರು ಎಂದು ಪೊಲೀಸರು ತಿಳಿಸಿದ್ದಾರೆ. ಹುಲಿಕಲ್ ಘಾಟಿಯ ಚಂಡಿಕಾಂಬಾ ದೇವಸ್ಥಾನದ ಸಮೀಪದ ಹೇರ್‌ಪಿನ್ ತಿರುವಿನ ಬಳಿ ದುರಸ್ತಿ ಕಾರ್ಯ ನಡೆಯುತ್ತಿದ್ದು, ಕಾಮಗಾರಿ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆಯೇ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ಪರಿಣಾಮ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ.

ಸಂಪಾದಕೀಯ

ನ್ಯಾ.ವರ್ಮಾ ಪ್ರಕರಣ ಇತ್ಯರ್ಥವಾಗಲಿ

ಭಾರತೀಯ ನ್ಯಾಯಾಲಯದ ಇತಿಹಾಸದಲ್ಲಿ ಮಾದರಿ ಅನ್ನುವಂತಹ ಘಟನೆಗಳೇ ಜಾಸ್ತಿ ನಡೆದಿವೆ. ನ್ಯಾಯಾಂಗದ ಬಗ್ಗೆ ಪ್ರಶ್ನೆ ಬರುವಂತಹ ಘಟನೆಗಳು ತೀರಾ ಅಪರೂಪ ಎಂದೇ ಹೇಳಬಹುದು. ಇಂತಹ ಹೊತ್ತಿನಲ್ಲೇ ಕಳೆದ ವರ್ಷ ದೆಹಲಿ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯಾಗಿದ್ದ ಯಶವಂತ ವರ್ಮಾ ನಿವಾಸದಲ್ಲಿ ಲಭಿಸಿದ ಕಂತೆಕಂತೆ ಸುಟ್ಟ ನೋಟುಗಳು, ಅತಿದೊಡ್ಡ ಪ್ರಶ್ನೆಗಳಿಗೆ ಕಾರಣವಾಗಿದೆ. ವರ್ಮಾ ಮನೆಗೆ ಬೆಂಕಿಬಿದ್ದ ಹಿನ್ನೆಲೆಯಲ್ಲಿ ಅವರ ಮನೆಯಲ್ಲಿ ಭಾರೀ ಪ್ರಮಾಣದ ನೋಟುಗಳು ಇದ್ದವು ಎಂದು ಗೊತ್ತಾಗಿತ್ತು. ಅದು ಹೇಗೆ ಬಂತು, ಯಾಕೆ ಬಂತು, ಒಬ್ಬ ನ್ಯಾಯಮೂರ್ತಿ ಆ ಪ್ರಮಾಣದಲ್ಲಿ ನಗದನ್ನು ಮನೆಯಲ್ಲಿ ಯಾಕೆ ಇಟ್ಟುಕೊಂಡಿದ್ದರು... ಈ ಯಾವ ಪ್ರಶ್ನೆಗಳಿಗೂ ಉತ್ತರ ಸಿಕ್ಕಿಲ್ಲ. ಅವರನ್ನು ವಿಚಾರಣೆ ನಡೆಸಲು ಲೋಕಸಭಾ ಸ್ಪೀಕರ್ ತನಿಖಾ ಸಮಿತಿ ರಚಿಸಿದ್ದರು. ವಾಗ್ದಂಡನೆಗೂ ಸಿದ್ಧತೆ ನಡೆಸಲಾಗಿದೆ. ಇಂತಹ ಹೊತ್ತಿನಲ್ಲೇ ಪ್ರಸ್ತುತ ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯಾಗಿರುವ ವರ್ಮಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇಲ್ಲಿಯವರೆಗೆ ಅವರ ಮೇಲೆ ರಾಜೀನಾಮೆಯ ಒತ್ತಡವಿದ್ದರೂ ಅವರದಕ್ಕೆ ತಲೆಕೆಡಿಸಿಕೊಂಡಿರಲಿಲ್ಲ. ವಾಗ್ದಂಡನೆಗೆ ಸಿದ್ಧತೆ ಸಾಗಿರುವಾಗ ನೀಡಿರುವ ರಾಜೀನಾಮೆಗೇನು ಕಾರಣ ಎಂದು ಗೊತ್ತಾಗಿಲ್ಲ. ಇಲ್ಲಿಯವರೆಗೆ ವರ್ಮಾ ಅವರ ಪ್ರಕರಣದಲ್ಲಿ ಬಹಳ ಮಾಹಿತಿಗಳೇನು ಹೊರಬಂದಿಲ್ಲ. ಆದರೆ ಜನಸಾಮಾನ್ಯರ ನಡುವೆ ನ್ಯಾಯವ್ಯವಸ್ಥೆಯ ಬಗ್ಗೆ ಒಳ್ಳೆಯ ಮಾತುಗಳೇನಿಲ್ಲ. ಇಲ್ಲೂ ಇತರೆ ಕಡೆ ಇರುವಂತಹ ಭ್ರಷ್ಟಾಚಾರ ಇದೆ ಎಂದು ಜನರು ಮಾತನಾಡಿಕೊಳ್ಳುವುದು ಎಲ್ಲರ ಕಿವಿಗೂ ಬಿದ್ದಿರುತ್ತದೆ. ವರ್ಮಾ ಪ್ರಕರಣದಲ್ಲಿರುವಂತಹ ನೂರಾರು ಪ್ರಶ್ನೆಗಳು ಜನರ ನಡುವಿರುವ ಅಭಿಪ್ರಾಯಗಳನ್ನು ಪುಷ್ಟೀಕರಿಸುವಂತೆ ಕಂಡರೆ, ಅದನ್ನು ನಿರಾಕರಿಸಲೂ ಸಾಧ್ಯವಿಲ್ಲ. ಕೆಲವು ವರ್ಷಗಳ ಹಿಂದೆ ಜನಾರ್ದನ ರೆಡ್ಡಿ ಪ್ರಕರಣದಲ್ಲಿ ನ್ಯಾಯಾಧೀಶರೊಬ್ಬರನ್ನು ಬಂಧಿಸಲಾಗಿತ್ತು. ಆಗಲೂ ಜನರ ನಡುವೆ ಬಹಳ ಚರ್ಚೆಗಳು ನಡೆದಿದ್ದವು. ಇಂತಹ ಚರ್ಚೆಗಳು ನಿಲ್ಲಬೇಕಿದ್ದರೆ, ಈ ವ್ಯವಸ್ಥೆಯಲ್ಲಿ ಎಲ್ಲೇ ಲೋಪಗಳು ಕಂಡುಬಂದರೂ ಅದನ್ನು ದಿಢೀರ್ ಪತ್ತೆ ಹಚ್ಚಬೇಕು. ಅದಕ್ಕೆ ಸಂಬಂಧಿಸಿದಂತೆ ಹುಟ್ಟಿಕೊಳ್ಳುವ ಎಲ್ಲ ಪ್ರಶ್ನೆಗಳಿಗೆ ಪಾರದರ್ಶಕ ಉತ್ತರ ನೀಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಯಶವಂತ ವರ್ಮಾ ಪ್ರಕರಣಕ್ಕೆ ಒಂದು ತಾರ್ಕಿಕ ಅಂತ್ಯ ಕಾಣಿಸಬೇಕು.

ಸೊಂಪಾದಕೀಯ

ಲಂಚ ಕೇಳದವರು ಯಾರಾದ್ರೂ ಉಂಟೇ?

ಸರ್ಕಾರಿ ಕಚೇರಿಗಳಲ್ಲಿ ಯಾರಿಗೂ ಲಂಚ ಕೊಡಬೇಡಿ' ಎಂಬ ಸೂಚನೆಯುಳ್ಳ ಬೋರ್ಡನ್ನು ಎಲ್ಲಾ ಕಚೇರಿಗಳಲ್ಲಿ ಹಾಕಿಸುವಂತೆ ರಾಜ್ಯ ಸರ್ಕಾರ ಇತ್ತೀಚೆಗೆ ಆದೇಶಿಸಿದೆ. ಈಗ ಜನಸಾಮಾನ್ಯರ ಪ್ರಶ್ನೆಯೇನೆಂದರೆ, 'ಜನರಿಗೇನು ದುಡ್ಡು ಒತ್ತುತ್ತಿರುತ್ತದೆಯೇ ಜೇಬಿನಿಂದ ತಗೆದುಕೊಡಲು? ಲಂಚ ಕೊಡದೆ ಕೆಲ್ಸ ಆಗಲ್ಲ ಅನ್ನುವಂಥ ಪರಿಸ್ಥಿತಿ ತಂದು ನಿಲ್ಲಿಸಿರೋದು ಕಚೇರಿ ಸಿಬ್ಬಂದಿಯೇ ತಾನೇ? ಅವರಿಗೆ ಲಂಚ ಕೇಳಬೇಡಿ ಅಂತ ಹೇಳೋದು ಬಿಟ್ಟು, ನಮ್ಮಂಥ ಜನಸಾಮಾನ್ಯರಿಗೆ ಯಾಕ್ರೀ ಸೂಚನೆ ಹಾಕ್ತೀರಿ' ಅಂತ ಗೊಣಗಲಾರಂಭಿಸಿದ್ದಾರೆ. ಕೆಲವರಂತೂ, ''ಲಂಚ ಕೇಳದವ್ರು ಯಾರವ್ರೇ... ಲಂಚ ಪಡೆಯವ್ರು ಎಲ್ಲವ್ರೇ...'' ಅಂತ ಹಾಡು ಹಾಡ್ತಿದ್ದಾರೆ! ಅಂತೂ ಇಂತೂ, 'ಜನರೇ ಲಂಚವನ್ನು ನಿಯಂತ್ರಿಸಬೇಕು. ಸರ್ಕಾರದಿಂದ ಲಂಚ ನಿಯಂತ್ರಣ ಸಾಧ್ಯವಿಲ್ಲ' ಎಂದು ಸರ್ಕಾರವೇ ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ ಎಂಬುದು ಈ ಆದೇಶದಿಂದ ತಿಳಿದುಬರುತ್ತದೆ. ಈ ಸೂಚನೆಯ ಬದಲು, ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ತನ್ನ ಸಿಬ್ಬಂದಿಗಳನ್ನೇ ಉದ್ದೇಶಿಸಿ 'ಕಚೇರಿಗೆ ಬರುವ ಯಾರಲ್ಲೂ ಲಂಚ ಕೇಳಬೇಡಿ' ಎಂಬ ಸೂಚನಾ ಫಲಕ ಹಾಕಿಸಬಹುದಿತ್ತಲ್ಲವಾ? ಎಂಬ ಮಾತುಗಳು ಕೇಳಿಬರುತ್ತಿವೆ. ಈ ಮಾತಿಗೆ ಟಾಂಗ್ ಕೊಟ್ಟ ಹಿರಿಯರೊಬ್ಬರು, ಕಚೇರಿಗೆ ಬರುವ ಜನರಲ್ಲಿ ಲಂಚ ಕೇಳಬೇಡಿ ಎಂದು ಬೋರ್ಡು ಹಾಕಿದರೆ, ಕಚೇರಿಯಿಂದಾಚೆಗೆ ಕರೆದುಕೊಂಡು ಹೋಗಿ ಕೇಳ್ತಾರೆ. ನಮ್ಮ ಸರ್ಕಾರಿ ಸಿಬ್ಬಂದಿಯು ಅಷ್ಟು ನಿಷ್ಠುರು ಎಂದು ಚಟಾಕಿ ಹಾರಿಸಿದ್ದಾರೆ. ಇನ್ನೂ ಕೆಲವರು, ''ಹಿಂದೆ ನಾಟಕವೊಂದರಲ್ಲಿ ಹಿಂದೆ ಮಾಸ್ಟರ್ ಹಿರಣ್ಣಯ್ಯನವರು ಹೇಳಿದಂತೆ, ಯಾವ್ಯಾವ ಕೆಲಸಕ್ಕೆ ಎಷ್ಟೆಷ್ಟು ಕೊಡಬೇಕು, ಯಾರ್‍ಯಾರಿಗೆ ತಲುಪಿಸಬೇಕು ಎಂಬೆಲ್ಲಾ ಮಾಹಿತಿಯುಳ್ಳ ಬೋರ್ಡ್ ಹಾಕಿಸಿದ್ದಿದ್ದರೆ ಚೆನ್ನಾಗಿರ್ತಿತ್ತು. ಜನರಿಗೆ ನೇರವಾಗಿ ಮಾಹಿತಿ ಸಿಕ್ಕುತ್ತಿತ್ತು. ಕೆಲಸಗಳೂ ಸಲೀಸಾಗಿ ಆಗ್ತಿದ್ದವು'' ಎಂದು ಹೇಳಿದ್ದಾರೆ.

ಸಂಪಾದಕರ ಸದ್ಯಶೋಧನೆ

ಆವಕಾಡೊ ಮತ್ತು ಅಪರಾಧ

ಆವಕಾಡೊಗಳಿಗೂ, ಅಪರಾಧಗಳಿಗೂ ನೇರವಾದ ಸಂಬಂಧವಿದೆ ಅಂದರೆ ಆಶ್ಚರ್ಯವಾಗಬಹುದು. ಇದು ಅರ್ಥಶಾಸ್ತ್ರದ 'ಬೇಡಿಕೆ ಮತ್ತು ಪೂರೈಕೆ'ಯ ನಿಯಮ ಹಾಗೂ ಮನುಷ್ಯನ ದುರಾಸೆಯ ಕರಾಳ ಮುಖವನ್ನು ಪ್ರತಿಬಿಂಬಿಸುತ್ತದೆ. ಇಂದು ಆವಕಾಡೊ ಕೇವಲ ಒಂದು ಹಣ್ಣಲ್ಲ, ಅದು ಜಾಗತಿಕ ಮಾರುಕಟ್ಟೆಯಲ್ಲಿ ಹಸಿರು ಚಿನ್ನ (Green Gold) ಎಂದೇ ಕರೆಯುವ ಬೆಲೆಬಾಳುವ ಸರಕು. ಆವಕಾಡೊಗಳ ಜನಪ್ರಿಯತೆ ಹೆಚ್ಚಲು ಮುಖ್ಯ ಕಾರಣ ಅವುಗಳಲ್ಲಿರುವ 'ಒಮೆಗಾ-3' ಫ್ಯಾಟಿಆಸಿಡ್ ಮತ್ತು ಹೃದಯದ ಆರೋಗ್ಯಕ್ಕೆ ಪೂರಕವಾದ ಅಂಶಗಳು. ಸಾಮಾಜಿಕ ಜಾಲತಾಣಗಳಲ್ಲಿ 'ಆವಕಾಡೊ ಟೋಸ್ಟ್' ಫೋಟೋಗಳು ವೈರಲ್ ಆದಂತೆಲ್ಲ, ಇದರ ಬೇಡಿಕೆ ಪಾಶ್ಚಿಮಾತ್ಯ ದೇಶಗಳಲ್ಲಿ ಗಗನಕ್ಕೇರಿತು. ಚೀನಾದಂಥ ಹೊಸ ಮಾರುಕಟ್ಟೆಗಳು ತೆರೆದುಕೊಂಡಾಗ, ಬೇಡಿಕೆ ಪೂರೈಕೆಗಿಂತ ಎಷ್ಟೋ ಪಟ್ಟು ಹೆಚ್ಚಾಯಿತು. ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿ ಯಾದಂಥ ದೇಶಗಳಲ್ಲಿ ಹವಾಮಾನ ವೈಪರೀತ್ಯದಿಂದ ಬೆಳೆ ನಾಶವಾದಾಗ, ಒಂದು ಹಣ್ಣಿನ ಬೆಲೆ ಸಾಮಾನ್ಯ ಜನರಿಗೆ ಎಟುಕವುದಂತಾಯಿತು. ಇದು ಸ್ಥಳೀಯ ಮಟ್ಟದಲ್ಲಿ ಆವಕಾಡೊ 'ಕಳ್ಳತನ'ಕ್ಕೆ ನಾಂದಿ ಹಾಡಿತು. ಕಳ್ಳರು ತೋಟಗಳಿಗೆ ನುಗ್ಗಿ ಸಾವಿರಾರು ಹಣ್ಣುಗಳನ್ನು ಕದ್ದು, ಅವುಗಳನ್ನು ರಸ್ತೆಬದಿಯ ವ್ಯಾಪಾರಿಗಳಿಗೆ ಅಥವಾ ಸಣ್ಣ ರೆಸ್ಟೋರೆಂಟ್‌ಗಳಿಗೆ ಕಪ್ಪು ಮಾರುಕಟ್ಟೆಯಲ್ಲಿ ಮಾರಾಟ ಮಾಡತೊಡಗಿದರು. ಕೋಸ್ಟರಿಕಾದಂಥ ದೇಶಗಳಲ್ಲಿ ನಿರ್ದಿಷ್ಟ ತಳಿಯ ಆವಕಾಡೊಗಳ ಮೇಲೆ ನಿಷೇಧ ಹೇರಿದಾಗ, ಗಡಿ ದಾಟಿ ಹಣ್ಣುಗಳನ್ನು ಕಳ್ಳಸಾಗಣೆ ಮಾಡುವ ಮಾಫಿಯಾಗಳು ಹುಟ್ಟಿಕೊಂಡವು. ಆವಕಾಡೊ ಅಪರಾಧದ ಅತ್ಯಂತ ಭಯಾನಕ ರೂಪ ಕಾಣಸಿಗುವುದು ಮೆಕ್ಸಿಕೊದಲ್ಲಿ. ಜಗತ್ತಿನ ಮೂರನೇ ಒಂದು ಭಾಗದಷ್ಟು ಆವಕಾಡೊ ಮೆಕ್ಸಿಕೊದ 'ಮಿಕೋಕಾನ್' ಪ್ರಾಂತ್ಯದಿಂದ ಬರುತ್ತದೆ. ವರ್ಷಕ್ಕೆ ಬಿಲಿಯನ್ ಡಾಲರ್ ಆದಾಯ ತರುತ್ತದೆ. ಇಲ್ಲಿನ ಲಾಭವನ್ನು ಕಂಡ ಡ್ರಗ್ ಕಾರ್ಟೆಲ್‌ಗಳು ಈಗ ತಮ್ಮ ಗಮನವನ್ನು ಆವಕಾಡೊ ಕಡೆಗೆ ಹರಿಸಿವೆ. ಕಾರ್ಟೆಲ್‌ಗಳು ರೈತರಿಂದ 'ರಕ್ಷಣಾ ಶುಲ್ಕ' ವಸೂಲಿ ಮಾಡುತ್ತವೆ. ಪ್ರತಿ ಎಕರೆಗೆ ಅಥವಾ ಮಾರಾಟವಾದ ಪ್ರತಿ ಕಿಲೋ ಹಣ್ಣಿಗೆ ಇಂತಿಷ್ಟು ಹಣ ನೀಡಬೇಕೆಂದು ಬೆದರಿಸುತ್ತವೆ. ಆವಕಾಡೊ ಬೆಳೆಯಲು ಹೆಚ್ಚು ಜಾಗ ಬೇಕು. ಕಾರ್ಟೆಲ್‌ಗಳ ಹಿಡಿತದಲ್ಲಿರುವ ಗುಂಪುಗಳು ರಾತ್ರೋರಾತ್ರಿ ಪೈನ್ ಕಾಡುಗಳನ್ನು ಕಡಿದು, ಅಲ್ಲಿ ಅಕ್ರಮವಾಗಿ ಆವಕಾಡೊ ತೋಟಗಳನ್ನು ನಿರ್ಮಿಸುತ್ತಿವೆ. ಇದರಿಂದ ಪರಿಸರ ವ್ಯವಸ್ಥೆಗೆ ಭಾರಿ ಪೆಟ್ಟು ಬೀಳುತ್ತಿದೆ. ಈ ವ್ಯವಹಾರದ ಮೇಲೆ ಹಿಡಿತ ಸಾಧಿಸಲು ಕಾರ್ಟೆಲ್‌ಗಳ ನಡುವೆ ಗ್ಯಾಂಗ್ ವಾರ್‌ಗಳು ನಡೆಯುತ್ತಿವೆ. ಇವು ಎಷ್ಟು ಭೀಕರವಾಗಿವೆ ಎಂದರೆ, ಪ್ರಮುಖ ರಸ್ತೆಗಳಲ್ಲಿ ಶವಗಳನ್ನು ನೇತುಹಾಕುವುದು ಮತ್ತು ಸಾಮೂಹಿಕ ಹತ್ಯೆಗಳ ಮೂಲಕ ಪ್ರತಿಸ್ಪರ್ಧಿಗಳಿಗೆ ಎಚ್ಚರಿಕೆ ನೀಡುವುದು ಸಾಮಾನ್ಯವಾಗಿದೆ. ಸರಕಾರದ ಅಸಹಾಯಕತೆಯಿಂದಾಗಿ ರೈತರೇ ಇಂದು ಸಶಸ್ತ್ರ ಪಡೆಗಳನ್ನು ಕಟ್ಟಿಕೊಂಡು ತಮ್ಮ ತೋಟಗಳನ್ನು ಕಾಯುತ್ತಿದ್ದಾರೆ. ಪ್ರತಿ ವರ್ಷ ಸಾವಿರಾರು ಜೀವಗಳು ಈ 'ಹಸಿರು ಚಿನ್ನ'ದ ಸಂಘರ್ಷಕ್ಕೆ ಬಲಿಯಾಗುತ್ತಿರುವುದು ಜಾಗತಿಕ ಮಾರುಕಟ್ಟೆಯ ಕರಾಳ ಮುಖವನ್ನು ಅನಾವರಣಗೊಳಿಸಿದೆ. ಇದು ಕೇವಲ ಹಣ್ಣಿನ ವ್ಯಾಪಾರವಾಗಿ ಉಳಿಯದೇ, ರಕ್ತಸಿಕ್ತ ಸಂಘರ್ಷವಾಗಿ ಬದಲಾಗಿದೆ. ಆವಕಾಡೊ ಬೆಳೆಯಲು ವಿಪರೀತ ನೀರಿನ ಅವಶ್ಯಕತೆಯಿದೆ (ಒಂದು ಕಿಲೋ ಆವಕಾಡೊಗೆ ಸುಮಾರು 1000 ಲೀಟರ್ ನೀರು ಬೇಕು). ನೀರಿನ ಅಕ್ರಮ ಬಳಕೆ ಮತ್ತು ಕಾಡುಗಳ ನಾಶದಿಂದಾಗಿ ಸ್ಥಳೀಯ ಸಮುದಾಯಗಳು ನೀರಿನ ಅಭಾವ ಎದುರಿಸುತ್ತಿವೆ. ಕಳ್ಳತನ ಮತ್ತು ಮಾಫಿಯಾ ಹಾವಳಿಯಿಂದಾಗಿ ಸಣ್ಣ ರೈತರು ತಮ್ಮ ತೋಟಗಳನ್ನು ಕಾಯಲು ಸಶಸ್ತ್ರ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಆವಕಾಡೊ ಮತ್ತು ಅಪರಾಧದ ನಡುವಿನ ಈ ಸಂಬಂಧವು ನಮಗೆ ಒಂದು ಎಚ್ಚರಿಕೆಯ ಗಂಟೆಯಾಗಿದೆ. ಯಾವುದೇ ಒಂದು ನೈಸರ್ಗಿಕ ಉತ್ಪನ್ನವು ಅತಿಯಾದ ಬೇಡಿಕೆಯಿಂದ 'ಐಷಾರಾಮಿ ಸರಕು' ಆಗಿ ಬದಲಾದಾಗ, ಅದು ಅಪರಾಧಿ ಲೋಕದ ಕಣ್ಣಿಗೆ ಬೀಳುತ್ತದೆ. ಹಸಿರು ಬಣ್ಣದ ಈ ಸುಂದರ ಹಣ್ಣಿನ ಹಿಂದೆ ಕಪ್ಪು ಮಾರುಕಟ್ಟೆಯ ಕರಾಳ ನೆರಳಿದೆ ಎಂಬುದು ಕಹಿ ಸತ್ಯ. ಗ್ರಾಹಕರಾಗಿ ನಾವು ಬಳಸುವ ವಸ್ತುಗಳು ಎಲ್ಲಿಂದ ಬರುತ್ತವೆ ಮತ್ತು ಯಾರ ರಕ್ತ ಅಥವಾ ಶ್ರಮದ ಫಲವಾಗಿವೆ ಎಂಬುದನ್ನು ಯೋಚಿಸುವುದು ಇಂದಿನ ಅಗತ್ಯವಾಗಿದೆ.

ಭಾರತಕ್ಕೆ ತನ್ನನ್ನೇ ಅರ್ಪಿಸಿದ ಸಿಸ್ಟರ್ ನಿವೇದಿತಾ

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಭಾರತದ ಇತಿಹಾಸದಲ್ಲಿ ವಿದೇಶಿ ಮೂಲದವರಾದರೂ, ತಮ್ಮ ಜೀವನವನ್ನೇ ಈ ದೇಶದ ಪುನರುತ್ಥಾನಕ್ಕೆ ಅರ್ಪಿಸಿದ ಮಹನೀಯರು ಬಹಳ ವಿರಳ. ಅಂತಹ ಅಪರೂಪದ ವ್ಯಕ್ತಿತ್ವಗಳಲ್ಲಿ ಅತ್ಯಂತ ಪ್ರಭಾವಶಾಲಿಯಾದವರು 'ಸಿಸ್ಟರ್ ನಿವೇದಿತಾ'. ಐರ್ಲ್ಯಾಂಡ್‌ನಲ್ಲಿ ಮಾರ್ಗರೇಟ್ ಎಲಿಜಬೆತ್ ನೋಬಲ್ ಎಂದು ಜನಿಸಿದ ಮಹಿಳೆ, ಸನಾತನ ಸಿಂಹ 'ಸ್ವಾಮಿ ವಿವೇಕಾನಂದ'ರ ಸಾನ್ನಿಧ್ಯದಲ್ಲಿ ತನ್ನ ಬದುಕಿನ ಅರ್ಥವನ್ನೇ ಹೊಸದಾಗಿ ಕಂಡುಕೊಂಡರು. 1867ರಲ್ಲಿ ಜನಿಸಿದ ಮಾರ್ಗರೇಟ್, ಬಾಲ್ಯದಿಂದಲೇ ಧಾರ್ಮಿಕ ಮೌಲ್ಯಗಳು ಮತ್ತು ಮಾನವೀಯತೆಯ ಮೇಲೆ ಆಳವಾದ ಆಸಕ್ತಿ ಹೊಂದಿದ್ದರು. ಶಿಕ್ಷಕಿಯಾಗಿ ತನ್ನ ವೃತ್ತಿಜೀವನ ಆರಂಭಿಸಿದ ಅವರು, ಸಮಾಜ ಸುಧಾರಣೆಗಾಗಿ ಶಿಕ್ಷಣವೇ ಮುಖ್ಯ ಸಾಧನವೆಂದು ನಂಬಿದ್ದರು. ಆದರೆ, 1895ರಲ್ಲಿ ಲಂಡನ್‌ನಲ್ಲಿ ಸ್ವಾಮಿ ವಿವೇಕಾನಂದರನ್ನು ಭೇಟಿಯಾದ ಕ್ಷಣ ಅವರ ಜೀವನದಲ್ಲಿ ಮಹತ್ವದ ತಿರುವು ಪಡೆದುಕೊಂಡಿತು. 'ಪಾರ್ಲಿಮೆಂಟ್ ಆಫ್ ವರ್ಲ್ಡ್ ರಿಲಿಜನ್ಸ್'ನಲ್ಲಿ ವಿಶ್ವದ ಗಮನ ಸೆಳೆದಿದ್ದ ಸ್ವಾಮಿ ವಿವೇಕಾನಂದರ ಆಲೋಚನೆಗಳು, ವೇದಾಂತ, ಮಾನವ ಸೇವೆ, ಮತ್ತು ಭಾರತೀಯ ಸಂಸ್ಕೃತಿಯ ಮಹತ್ವಗಳು ಮಾರ್ಗರೇಟ್ ಮನಸ್ಸನ್ನು ಸಂಪೂರ್ಣವಾಗಿ ಗೆದ್ದವು. ವಿವೇಕಾನಂದರ ಆ ಒಂದು ಸಂದೇಶ ಅವರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಿತು. ಸ್ವಾಮಿ ವಿವೇಕಾನಂದರ ಆ ಒಂದು ಭೇಟಿ ಅವರ ಜೀವನವನ್ನು ಬದಲಿಸಿದ ಆಧ್ಯಾತ್ಮಿಕ ಸ್ಪರ್ಶವಾಯಿತು.

1898ರಲ್ಲಿ ಭಾರತಕ್ಕೆ ಬಂದ ನಂತರ, ಮಾರ್ಗರೇಟ್‌ಗೆ ನಿವೇದಿತಾ ಎಂಬ ಹೆಸರು ಬಂತು, ಇದು ಕೇವಲ ಒಂದು ಹೆಸರಲ್ಲ, ಒಂದು ಸಂಕಲ್ಪ, ಒಂದು ವ್ರತವಾಗಿತ್ತು. ಸಿಸ್ಟರ್ ನಿವೇದಿತಾ ತಮ್ಮ ಪಾಶ್ಚಾತ್ಯ ಬದುಕನ್ನು ಸಂಪೂರ್ಣವಾಗಿ ಬದಿಗಿಟ್ಟು, ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡರು. ಅವರು ಸರಳ ಜೀವನವನ್ನು ಅನುಸರಿಸಿ, ಸಾಮಾನ್ಯ ಜನರ ಜತೆಗೆ ಬೆರೆತು ಬದುಕಲು ಆರಂಭಿಸಿದರು. ಅವರಿಗೆ ಭಾರತ ದೇಶದ ಪರಂಪರೆ ಮತ್ತು ಇತಿಹಾಸ ಕೇವಲ ಒಂದು ಅಧ್ಯಯನದ ವಿಷಯವಾಗಿರಲಿಲ್ಲ, ಬದಲಾಗಿ ಜೀವನದ ಧ್ಯೇಯವಾಗಿತ್ತು. ಸ್ವಾಮಿ ವಿವೇಕಾನಂದರಿಂದ ಪ್ರೇರಿತರಾಗಿ 'ಜೀವನದ ಪರಮಾರ್ಥ ಮಾನವ ಸೇವೆಯಲ್ಲಿ ಇದೆ' ಎಂಬ ಗಟ್ಟಿಯಾದ ತತ್ವವನ್ನು ನಂಬಿದ್ದವರು ಸಿಸ್ಟರ್ ನಿವೇದಿತಾ.

ರಾಷ್ಟ್ರದ ಪುನರುತ್ಥಾನದ ಬುನಾದಿಗೆ ಸ್ವಾಮಿ ವಿವೇಕಾನಂದರು ಸದಾ ಹೇಳುತ್ತಿದ್ದ ಮಾತು 'ಮಹಿಳೆಯರ ಸಬಲೀಕರಣವಿಲ್ಲದೆ ರಾಷ್ಟ್ರದ ಅಭಿವೃದ್ಧಿ ಸಾಧ್ಯವಿಲ್ಲ'. ಈ ಮಾತನ್ನು ನಿಜಜೀವನದಲ್ಲಿ ಅನುಷ್ಠಾನಗೊಳಿಸಿದವರು ಸಿಸ್ಟರ್ ನಿವೇದಿತಾ. ಕೊಲ್ಕತ್ತಾದಲ್ಲಿ ಆರಂಭಿಸಿದ ಅವರ ಬಾಲಕಿಯರ ಶಾಲೆ ಕೇವಲ ವಿದ್ಯಾಭ್ಯಾಸದ ಕೇಂದ್ರವಾಗಿರಲಿಲ್ಲ, ಅದು ಒಂದು ಆಳವಾದ ಚಿಂತನೆಯ ಕೇಂದ್ರವಾಗಿತ್ತು. ಅವರು ವಿದ್ಯಾರ್ಥಿನಿಯರಲ್ಲಿ ಆತ್ಮವಿಶ್ವಾಸ, ದೇಶಭಕ್ತಿ, ಸಂಸ್ಕೃತಿಯ ಅರಿವುಗಳನ್ನು ಬೆಳೆಸಲು ಶ್ರಮಿಸಿದರು. ಆ ಕಾಲದಲ್ಲಿ ಸಮಾಜದಲ್ಲಿ ಇದ್ದ ಅನೇಕ ನಿರ್ಬಂಧಗಳ ನಡುವೆಯೂ, ಅವರ ಈ ಪ್ರಯತ್ನಗಳು ನಿಜಕ್ಕೂ ಕ್ರಾಂತಿಕಾರಿಯಾಗಿದ್ದವು. ಇತಿಹಾಸದ ಪುಟಗಳಲ್ಲಿ ಸಿಸ್ಟರ್ ನಿವೇದಿತಾ ಪಟ್ಟ ಶ್ರಮದ ಬಗ್ಗೆ ಶಾಲಾ ಪಠ್ಯಗಳಲ್ಲಿ ಹೆಚ್ಚಾಗಿ ಉಲ್ಲೇಖವಾಗದಿರುವುದು ದುರದೃಷ್ಟಕರ ಸಂಗತಿ.

ಸಿಸ್ಟರ್ ನಿವೇದಿತಾ ಕೇವಲ ತತ್ವಗಳನ್ನು ನಂಬಿದವರಲ್ಲ; ಅವರು ಅವನ್ನು ಜೀವನದಲ್ಲಿ ಅನುಸರಿಸಿದವರು. ಕೊಲ್ಕತ್ತಾದಲ್ಲಿ ಪ್ಲೇಗ್ ರೋಗ ಹರಡಿದಾಗ, ಅವರು ನಿರ್ಭಯವಾಗಿ ಜನರ ನಡುವೆ ಹೋಗಿ ಸೇವೆ ಸಲ್ಲಿಸಿದರು. ಸ್ವಾಮಿ ವಿವೇಕಾನಂದರು ಬೋಧಿಸಿದ 'ದರಿದ್ರ ನಾರಾಯಣ ಸೇವೆ' ಎಂಬ ತತ್ವವನ್ನು ಅವರು ತನ್ನ ಬದುಕಿನ ಧ್ಯೇಯವನ್ನಾಗಿಸಿಕೊಂಡವರು. ಇದು ಅವರಿಗೆ ಆಧ್ಯಾತ್ಮಿಕತೆಯ ನಿಜವಾದ ಅರ್ಥವನ್ನು ತಿಳಿಸಿತ್ತು. ಕಷ್ಟದಲ್ಲಿರುವ ಮನುಷ್ಯರಿಗೆ ಸೇವೆ ಸಲ್ಲಿಸುವುದು ಜೀವನದ ಪರಮೋಚ್ಚ ಧರ್ಮವೆಂದು ನಂಬಿದ್ದವರು ಸಿಸ್ಟರ್ ನಿವೇದಿತಾ.

ತಮ್ಮ ಜನಸೇವೆಯ ಮೂಲಕ ಆಧ್ಯಾತ್ಮಿಕತೆಯನ್ನು ಕಾಣುತ್ತಿದ್ದ ಮಹಿಳೆಯಾಗಿದ್ದರು. ರೋಗಿಗಳ ಸೇವೆ ಮಾಡಿದ್ದಾರೆಂದು 'ಮದರ್ ತೆರೇಸಾ' ಅವರಿಗೆ ನೊಬೆಲ್ ಪ್ರಶಸ್ತಿ ನೀಡಲಾಗಿತ್ತು, ಸಿಸ್ಟರ್ ನಿವೇದಿತಾರಂತಹ ಜನಸೇವಕಿಯ ಇತಿಹಾಸ ಪಠ್ಯಗಳಲ್ಲೂ ಅಳವಡಿಕೆಯಾಗಲಿಲ್ಲ. 1902ರಲ್ಲಿ ಸ್ವಾಮಿ ವಿವೇಕಾನಂದರು ಅಗಲಿದ ನಂತರ, ಸಿಸ್ಟರ್ ನಿವೇದಿತಾರ ಮುಂದೆ ದೊಡ್ಡ ಸವಾಲಿತ್ತು. ಗುರುವಿನ ಕನಸನ್ನು ಮುಂದುವರಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅದರಿಂದ ಅವರು ಹಿಂದೆ ಸರಿಯಲಿಲ್ಲ. ಬದಲಾಗಿ, ಇನ್ನಷ್ಟು ಉತ್ಸಾಹದಿಂದ ಸಮಾಜ ಮತ್ತು ರಾಷ್ಟ್ರ ಸೇವೆಯಲ್ಲಿ ತೊಡಗಿಕೊಂಡರು. ಅವರು ತನ್ನ ಗುರು ಸ್ವಾಮಿ ವಿವೇಕಾನಂದರು ಹೇಳಿದ ಆದರ್ಶಗಳನ್ನು ಕಾರ್ಯರೂಪಕ್ಕೆ ತಂದು, ಒಂದು ಜೀವಂತ ಚಳುವಳಿಯಾಗಿ ರೂಪಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿನ ತೀವ್ರ ನಿಲುವು ಮತ್ತು ರಾಷ್ಟ್ರಭಕ್ತಿ,ನಿವೇದಿತಾರ ಜೀವನದ ಮತ್ತೊಂದು ಪ್ರಮುಖ ಅಂಶ. ಅವರು ಬಾಲ ಗಂಗಾಧರ ತಿಲಕ್ ಮತ್ತು ಅರವಿಂದ

ಘೋಷ್ ಮುಂತಾದ ನಾಯಕರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಅವರು ಬ್ರಿಟಿಷ್ ಆಡಳಿತದ ಅನ್ಯಾಯಗಳನ್ನು ಬಹಿರಂಗವಾಗಿ ಟೀಕಿಸುತ್ತಿದ್ದರು, ಸದಾ ಭಾರತದ ಸ್ವಾತಂತ್ರ್ಯದ ಪರವಾಗಿ ಧ್ವನಿ ಎತ್ತಿದ್ದರು. ಅವರ ಮನೆಯಲ್ಲಿ ಸ್ವಾತಂತ್ರ ಹೋರಾಟಗಾರರ ನಡುವೆ ನಡೆದ ಅನೇಕ ಚರ್ಚೆಗಳು, ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. 1905ರ ಬಂಗಾಳ ವಿಭಜನೆಯ ನಂತರ ಪ್ರಾರಂಭವಾದ ಸ್ವದೇಶಿ ಚಳುವಳಿಗೆ ಸಿಸ್ಟರ್ ನಿವೇದಿತಾ ಸಂಪೂರ್ಣ ಬೆಂಬಲ ನೀಡಿದರು. ಭಾರತೀಯ ಉತ್ಪನ್ನಗಳನ್ನು ಬಳಸಲು ಪ್ರೋತ್ಸಾಹಿಸಿದರು ಮತ್ತು ಬ್ರಿಟಿಷರ ವಸ್ತುಗಳನ್ನು ಬಹಿಷ್ಕರಿಸಲು ಕರೆ ನೀಡಿದರು. ಅವರ ದೃಷ್ಟಿಯಲ್ಲಿ ಸ್ವದೇಶಿ ಕೇವಲ ಆರ್ಥಿಕ ನೀತಿ ಅಲ್ಲ 'It was a symbol of resistance and Self&respect'

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸಿಸ್ಟರ್ ನಿವೇದಿತಾ ಯುವಕರಿಗೆ ತಮ್ಮ ಆತ್ಮಗೌರವವನ್ನು ಮರಳಿ ಪಡೆಯಲು ಕರೆ ನೀಡಿದರು. ಭಾರತದ ಸಂಸ್ಕೃತಿ, ಪರಂಪರೆ ಮತ್ತು ಇತಿಹಾಸವು ದುರ್ಬಲತೆ ಅಲ್ಲ, ಬಲವೆಂದು ಅವರು ಪ್ರತಿಪಾದಿಸಿದರು. ತಮ್ಮ ಮೂಲಗಳನ್ನು ಅರ್ಥಮಾಡಿಕೊಳ್ಳಬೇಕು, ತಮ್ಮ ನಾಗರಿಕತೆಯ ಮೇಲೆ ಹೆಮ್ಮೆ ಪಡಬೇಕು ಮತ್ತು ಪರರ ಪ್ರಭಾವದಿಂದ ತಪ್ಪಿಸಿಕೊಳ್ಳಬೇಕು ಎಂದು ಅವರು ಯುವಕರಿಗೆ ಪ್ರೇರಣೆ ನೀಡಿದರು. ಅವರ ದೃಷ್ಟಿಯಲ್ಲಿ ರಾಷ್ಟ್ರೀಯ ಗೌರವ ಸ್ವಾತಂತ್ರ್ಯ ಮತ್ತು ಪ್ರಗತಿಯ ಮೂಲಭೂತ ಅಡಿಪಾಯವಾಗಿತ್ತು.

ನಿವೇದಿತಾರ ದೂರದೃಷ್ಟಿ ಶಿಕ್ಷಣ ಮತ್ತು ರಾಜಕೀಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವರು ಖ್ಯಾತ ವಿಜ್ಞಾನಿ ಜಗದೀಶ ಚಂದ್ರ ಬೋಸ್ ಅವರ ಸಂಶೋಧನೆಗಳಿಗೆ ಬೆಂಬಲ ನೀಡಿದ್ದರು, ಅವರಿಗೆ ಜಾಗತಿಕ ಮಾನ್ಯತೆ ದೊರಕಲು ನೆರವಾದವರಲ್ಲಿ ಪ್ರಮುಖರಾಗಿದ್ದರು. ಅದೇ ರೀತಿ, ಭಾರತೀಯ ಕಲೆಯನ್ನು ಉತ್ತೇಜಿಸುವ ಸಲುವಾಗಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಸಂಸ್ಕೃತಿ ಮತ್ತು ಕಲೆಗಳು ರಾಷ್ಟ್ರದ ಆತ್ಮ, ಸಾಹಿತ್ಯದಲ್ಲಿ ಅಮೂಲ್ಯ ಕೊಡುಗೆಯಾಗುತ್ತವೆಯೆಂಬುದು ಅವರ ದೃಢ ನಂಬಿಕೆಯಾಗಿತ್ತು. ಸಿಸ್ಟರ್ ನಿವೇದಿತಾ ತಮ್ಮ ಬರಹಗಳ ಮೂಲಕ ಭಾರತೀಯ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದರು. 'The Web of Indian Life', 'Kali the Mother' ಮುಂತಾದ ಕೃತಿಗಳು ಪಾಶ್ಚಾತ್ಯರ ತಪ್ಪು ಕಲ್ಪನೆಗಳನ್ನು ಸರಿಪಡಿಸಿದ್ದವು. ಅವರು ಬರೆದ 'The Master as I Saw Him' ಕೃತಿ, ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ಜೀವಂತ ಚಿತ್ರಣವಾಗಿದೆ. ಭಾರತದ ಇತಿಹಾಸದಲ್ಲಿ ಎಲೆಮರೆ ಕಾಯಿಯಂತೆ ಸ್ವತಂತ್ರಕ್ಕೆ ಹೋರಾಡಿದ ಸಾವಿರಾರು ಮಹಿಳೆಯರಿದ್ದಾರೆ, ಅವರ ಹೋರಾಟವನ್ನು ಹೈ-ಜಾಕ್ ಮಾಡಿ ಸ್ವಾರ್ಥದ ರಾಜಕೀಯ ಉದ್ದೇಶಕ್ಕೆ ಬಳಸಿಕೊಂಡ ಕಾಂಗ್ರೆಸ್ ಪಕ್ಷ ಅನೇಕರ ಹೋರಾಟವನ್ನು ಇತಿಹಾಸದ ಪುಟಗಳಿಂದ ಅಳಿಸಿಹಾಕಿತ್ತು. ಇತಿಹಾಸವನ್ನು ತಿಳಿಸುವ ಪುಸ್ತಕಗಳ ಬರವಣಿಗೆಗಳನ್ನು ಎಡಚರರ ಕೈಗೆ ನೀಡಿದ ಪರಿಣಾಮ, ಸಿಸ್ಟರ್ ನಿವೇದಿತಾರಂತಹ ಮಹಿಳೆಯರ ಇತಿಹಾಸ ಜನರಿಗೆ ತಲುಪುವುದು ತಡವಾಯಿತು. ಜನಸೇವೆಯೆಂದು ಹೇಳಿ ಭಾರತಕ್ಕೆ ಬಂದ ಕೆಲ ಕ್ರಿಶ್ಚಿಯನ್ ಮಿಷನರಿಗಳು ಸೇವೆಯ ಹೆಸರಿನಲ್ಲಿ ತಮ್ಮ ಧರ್ಮದ ಸಿದ್ಧಾಂತಗಳನ್ನು ರೋಗಿಗಳಿಗೆ ಹೇಳಿದ್ದಾರೆ. ಆದರೆ, ಪಾಶ್ಚಿಮಾತ್ಯ ಮೂಲದ ಸಿಸ್ಟರ್ ನಿವೇದಿತಾ ತನ್ನ ಮೂಲ ಧರ್ಮವನ್ನು ಬಿಟ್ಟು ಸ್ವಾಮಿ ವಿವೇಕಾನಂದರ ಶಿಷ್ಯೆಯಾಗಿ ಸನಾತನ ಧರ್ಮವನ್ನು ಜೀವನಶೈಲಿಯಾಗಿಸಿಕೊಂಡಿದ್ದರು.

ಸಿಸ್ಟರ್ ನಿವೇದಿತಾ ಮತ್ತು ಸ್ವಾಮಿ ವಿವೇಕಾನಂದರ ಸಂಬಂಧ ಕೇವಲ ಜ್ಞಾನದ ಹಂಚಿಕೆಯಾಗಿರಲಿಲ್ಲ; ಅದು ಒಂದು ಆತ್ಮೀಯ ಬಾಂಧವ್ಯವಾಗಿತ್ತು. ಸ್ವಾಮಿ ವಿವೇಕಾನಂದರು ನಿವೇದಿತಾರಲ್ಲಿ ಕಂಡ ಶಕ್ತಿ ಮತ್ತು ಸಮರ್ಪಣೆ, ಅವರನ್ನು ಭಾರತ ಮಾತೆಯ ಸೇವೆಗೆ ಸಮರ್ಪಿಸಲು ಪ್ರೇರೇಪಿಸಿತ್ತು. ನಿವೇದಿತಾ, ತನ್ನ ಗುರುಆದರ್ಶನವನ್ನು ಜೀವನದಲ್ಲಿ ಅಳವಡಿಸಿಕೊಂಡು, ಅವರ ಆದರ್ಶಗಳನ್ನು ಕಾರ್ಯರೂಪಕ್ಕೆ ತಂದರು. ಇಂದಿನ ಸಮಾಜದಲ್ಲಿ ವಿಭಜನೆ, ಸ್ವಾರ್ಥ ಮತ್ತು ಮೌಲ್ಯಗಳ ಕುಸಿತ ಹೆಚ್ಚುತ್ತಿರುವ ಸಂದರ್ಭದಲ್ಲಿ, ನಿವೇದಿತಾರ ಜೀವನ ನಮಗೆ ಒಂದು ದೀಪಸ್ತಂಭವಾಗಿ ಕಾಣುತ್ತದೆ. ಅವರ ಜೀವನ ಶೈಲಿ ನಮಗೆ ಕಲಿಸುವ ಪಾಠವೇನೆಂದರೆ, ರಾಷ್ಟ್ರಭಕ್ತಿ ಎಂದರೆ ಕೇವಲ ಮಾತಲ್ಲ, ಸಮಾಜ ಸೇವೆ, ಆಧ್ಯಾತ್ಮಿಕತೆ ಮತ್ತು ನಮ್ಮ ಸಂಸ್ಕೃತಿಯ ಮೇಲಿನ ಹೆಮ್ಮೆ ನಮ್ಮ ರಾಷ್ಟ್ರವನ್ನು ಬಲಪಡಿಸುತ್ತದೆ. ಸಿಸ್ಟರ್ ನಿವೇದಿತಾ ಅವರ ಜೀವನ ಒಂದು ಪ್ರೇರಣಾದಾಯಕ ಕಾವ್ಯ, ವಿದೇಶಿ ಮೂಲದವರಾದರೂ ಸಹ, ಭಾರತವನ್ನು ತನ್ನ ತಾಯ್ನಾಡೆಂದು ಸ್ವೀಕರಿಸಿ, ತನ್ನನ್ನೇ ಸಂಪೂರ್ಣವಾಗಿ ಅರ್ಪಿಸಿಕೊಂಡ ದಿಟ್ಟ ಮಹಿಳೆ. ಸ್ವಾಮಿ ವಿವೇಕಾನಂದರ ಮಾರ್ಗದರ್ಶನದಲ್ಲಿ, ಅವರು ಕೇವಲ ಶಿಷ್ಯೆಯಾಗಿರಲಿಲ್ಲ, ಒಂದು ಚಳುವಳಿಯ ಜೀವಂತ ರೂಪವಾಗಿಯೇಬಿಟ್ಟಿದ್ದರು.

ಮಹಾತ್ಮ ಫುಲೆ: ಇಂದಿಗೂ ಭಾರತಕ್ಕೆ ದಾರಿ ದೀಪ

ಸಂಸ್ಮರಣೆ
ಶ್ರೀ ನರೇಂದ್ರ ಮೋದಿ
vveditoped@gmail.com

ಇಂದು, ಏಪ್ರಿಲ್ 11, ನಮ್ಮೆಲ್ಲರಿಗೂ ಅತ್ಯಂತ ವಿಶೇಷವಾದ ದಿನ. ಇದು ಭಾರತದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರು ಮತ್ತು ತಲೆಮಾರುಗಳಿಗೆ ಮಾರ್ಗದರ್ಶಕರಾಗಿರುವ ಮಹಾತ್ಮ ಜ್ಯೋತಿರಾವ್ ಫುಲೆ ಅವರ ಜನ್ಮದಿನೋತ್ಸವ. ಪ್ರಸಕ್ತ ವರ್ಷ ಈ ಸಂದರ್ಭವು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಇದು ಅವರ 200ನೇ ಜಯಂತಿ ಆಚರಣೆಯ ಆರಂಭವನ್ನು ಸೂಚಿಸುತ್ತದೆ. ಮಹಾತ್ಮ ಫುಲೆ ಅವರು ಕೇವಲ ಒಬ್ಬ ಮಹಾನ್ ಸುಧಾರಕರಷ್ಟೇ ಅಲ್ಲ, ಅವರ ಜೀವನವು ನೈತಿಕ ಧೈರ್ಯ, ನಿರಂತರ ಅನ್ವೇಷಣೆ ಮತ್ತು ಸಾಮಾಜಿಕ ಒಳಿತಿಗಾಗಿ ಅಚಲವಾದ ಬದ್ಧತೆಯಿಂದ ಕೂಡಿತ್ತು. ತಾವು ಕಟ್ಟಿದ ಸಂಸ್ಥೆಗಳು ಮತ್ತು ಮುನ್ನಡೆಸಿದ ಚಳುವಳಿಗಳಿಗಾಗಿ ಮಹಾತ್ಮ ಫುಲೆ ಅವರು ಸ್ಮರಣೀಯರು. ಅದೇ ಸಮಯದಲ್ಲಿ, ನಮ್ಮ ನಾಗರಿಕತೆಯ ಪಯಣಕ್ಕೆ ಅವರ ದೊಡ್ಡ ಕೊಡುಗೆ ಎಂದರೆ ಅವರು ಜನರಲ್ಲಿ ಮೂಡಿಸಿದ ಭರವಸೆ, ತುಂಬಿದ ಆತ್ಮವಿಶ್ವಾಸ ಮತ್ತು ಅವರ ಪ್ರಖರ ಆಲೋಚನೆಗಳು ಇಂದಿಗೂ ದೇಶದ ಕೋಟ್ಯಂತರ ಜನರಿಗೆ ನೀಡುತ್ತಿರುವ ಅತೀವ ಶಕ್ತಿಯಾಗಿದೆ.

1827ರಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಹಾತ್ಮ ಫುಲೆ ಅವರು ಸಾಮಾನ್ಯ ಹಿನ್ನೆಲೆಯಿಂದ ಬಂದವರು. ಆದರೆ, ಅವರ ಆರಂಭಿಕ ಸಂಕಷ್ಟಗಳು ಅವರ ಕಲಿಕೆ, ಧೈರ್ಯ ಅಥವಾ ಸಮಾಜದ ಬಗೆಗಿನ ಬದ್ಧತೆಗೆ ಎಂದಿಗೂ ಅಡ್ಡಿಯಾಗಲಿಲ್ಲ. ಸವಾಲುಗಳು ಏನೇ ಇರಲಿ, ಕಷ್ಟಪಟ್ಟು ಕೆಲಸ ಮಾಡಬೇಕು, ಜ್ಞಾನವನ್ನು ಪಡೆಯಬೇಕು ಮತ್ತು ಸುಮ್ಮನೆ ಕುಳಿತುಕೊಳ್ಳುವ ಬದಲಿಗೆ ಆ ಸವಾಲುಗಳನ್ನು ಎದುರಿಸಬೇಕು ಎಂಬುದು ಅವರ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದ ಗುಣವಾಗಿತ್ತು. ತಮ್ಮ ಶಾಲಾ ದಿನಗಳಿಂದಲೂ, ಯುವ ಜ್ಯೋತಿರಾವ್ ಅವರು ತೀವ್ರ ಕುತೂಹಲಿಗಳಾಗಿದ್ದರು ಮತ್ತು ಅತೀವ ಓದುಗರಾಗಿದ್ದರು. ಅವರು ತಮ್ಮ ವಯಸ್ಸಿನ ಮಕ್ಕಳು ಓದಬೇಕೆಂದು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಓದುತ್ತಿದ್ದರು. ನಾವು ಎಷ್ಟು ಹೆಚ್ಚು ಪ್ರಶ್ನೆಗಳನ್ನು ಹುಟ್ಟುಹಾಕುತ್ತೇವೆಯೋ, ಅಷ್ಟು ಹೆಚ್ಚು ಜ್ಞಾನವು ಅವುಗಳಿಂದ ಹೊರಹೊಮ್ಮುತ್ತದೆ ಎಂದು ಅವರು ಹೇಳುತ್ತಿದ್ದರು. ಬಾಲ್ಯದಿಂದಲೇ ಅವರಿಗೆ ಲಭಿಸಿದ್ದ ವಿಮರ್ಶಾ ಮನೋಭಾವವು ಅವರ ಪ್ರಯಾಣದುದ್ದಕ್ಕೂ ಸ್ಥಿರವಾಗಿ ಉಳಿದಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ತಮ್ಮ ಜೀವನದುದ್ದಕ್ಕೂ ಕಲಿಕೆ ಮತ್ತು ಶಿಕ್ಷಣವು ಮಹಾತ್ಮ ಫುಲೆ ಅವರ ಉದ್ದೇಶದ ಕೇಂದ್ರಬಿಂದುವಾಗಿತ್ತು. ಜ್ಞಾನವು ಕೇವಲ ಕೆಲವರ ಪಾಲಿನ ಸ್ವತ್ತಲ್ಲ, ಬದಲಾಗಿ ಅದು ಎಲ್ಲರಿಗೂ ಹಂಚಲ್ಪಡಬೇಕಾದ ಶಕ್ತಿ ಎಂಬುದನ್ನು ಅವರು ಬಹಳ ಸ್ಪಷ್ಟವಾಗಿ ಗುರುತಿಸಿದ್ದರು. ಕಲಿಕೆಯ ಅವಕಾಶವು ಅನೇಕರಿಗೆ ನಿರಾಕರಿಸಲ್ಪಟ್ಟಿದ್ದ ಕಾಲದಲ್ಲಿ, ಅವರು ಹೆಣ್ಣುಮಕ್ಕಳಿಗಾಗಿ ಮತ್ತು ಔಪಚಾರಿಕ ಶಿಕ್ಷಣದಿಂದ ಹೊರಗುಳಿದವರಿಗಾಗಿ ಶಾಲೆಗಳನ್ನು ತೆರೆದರು. ತಾಯಂದಿರ ಮೂಲಕ ಮಕ್ಕಳಲ್ಲಿ ಉಂಟಾಗುವ ಯಾವುದೇ ಸುಧಾರಣೆಯು ಅತ್ಯಂತ ಅಮೂಲ್ಯವಾದುದು. ಆದ್ದರಿಂದ, ಶಾಲೆಗಳನ್ನು ತೆರೆಯುವುದಾದರೆ, ಅವುಗಳನ್ನು ಮೊದಲು ಹೆಣ್ಣುಮಕ್ಕಳಿಗಾಗಿ ತೆರೆಯಬೇಕು ಎಂದು ಅವರು ಹೇಳುತ್ತಿದ್ದರು. ತರಗತಿಯು ನ್ಯಾಯ ಮತ್ತು ಸಮಾನತೆಯ ಸಾಧನವಾಗುವಂತಹ ಹೊಸ ಸಾಮಾಜಿಕ ಕಲ್ಪನೆಯನ್ನು ಸೃಷ್ಟಿಸಲು ಅವರು ಕೆಲಸ ಮಾಡಿದರು.

ಶಿಕ್ಷಣದ ಬಗ್ಗೆ ಅವರಿಗಿದ್ದ ದೂರದೃಷ್ಟಿಯು ನಮಗೆ ಹೆಚ್ಚಿನ ಸ್ಫೂರ್ತಿ ನೀಡುತ್ತದೆ. ಕಳೆದ ದಶಕದಲ್ಲಿ, ನಾವು ಸಂಶೋಧನೆ ಮತ್ತು ನಾವೀನ್ಯತೆಯನ್ನು ಭಾರತದ ಯುವಜನರ ಮೂಲಾಧಾರವನ್ನಾಗಿ ಮಾಡಲು ಕೆಲಸ ಮಾಡಿದ್ದೇವೆ. ಯುವ ಮನಸ್ಸುಗಳನ್ನು ಪ್ರಶ್ನಿಸಲು, ಅನ್ವೇಷಿಸಲು ಮತ್ತು ಆವಿಷ್ಕರಿಸಲು ಪ್ರೋತ್ಸಾಹಿಸುವ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ. ಜ್ಞಾನ, ಕೌಶಲ್ಯ ಮತ್ತು ಅವಕಾಶಗಳಲ್ಲಿ ಹೂಡಿಕೆ ಮಾಡುವ ಮೂಲಕ, ಭಾರತವು ತನ್ನ ಯುವಜನತೆಯ ಸಮಸ್ಯೆಗಳನ್ನು ಬಗೆಹರಿಸುವವರನ್ನಾಗಿ ಮತ್ತು ರಾಷ್ಟ್ರೀಯ ಪ್ರಗತಿಯ ಚಾಲಕರನ್ನಾಗಿ ಸಬಲೀಕರಿಸುತ್ತಿದೆ.ತಮ್ಮ ಜ್ಞಾನ ಮತ್ತು ಬುದ್ಧಿವಂತಿಕೆಯಿಂದಾಗಿ ಮಹಾತ್ಮ ಫುಲೆ ಅವರು ಕೃಷಿ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಬಲವಾದ ತಿಳುವಳಿಕೆಯನ್ನು ಬೆಳೆಸಿಕೊಂಡಿದ್ದರು. ನಮ್ಮ ರೈತರು ಮತ್ತು ಕಾರ್ಮಿಕರಿಗೆ ಆಗುವ ಅನ್ಯಾಯವು ನಮ್ಮ ಸಮಾಜವನ್ನು ದುರ್ಬಲಗೊಳಿಸುತ್ತದೆ ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು. ಸಾಮಾಜಿಕ ಅಸಮಾನತೆಗಳು ಹೊಲಗಳಲ್ಲಿ ಅಥವಾ ಹಳ್ಳಿಗಳಲ್ಲಿ

ದೈನಂದಿನ ಜೀವನದಲ್ಲಿ ಹೇಗೆ ವ್ಯಕ್ತವಾಗುತ್ತವೆ ಎಂಬುದನ್ನು ಅವರು ಕಂಡಿದ್ದರು. ಆದ್ದರಿಂದ, ಅವರು ಬಡವರು, ತುಳಿತಕ್ಕೊಳಗಾದವರು ಮತ್ತು ಸಮಾಜದ ಅಂಚಿನಲ್ಲಿರುವವರಿಗೆ ಘನತೆಯನ್ನು ಖಚಿತಪಡಿಸಿಕೊಳ್ಳಲು ತಮ್ಮನ್ನು ತೊಡಗಿಸಿಕೊಂಡರು. ಅದೇ ಸಮಯದಲ್ಲಿ, ಸಾಮಾಜಿಕ ಸಾಮರಸ್ಯವನ್ನು ಕಾಪಾಡಲು ಅವರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು.

ಮಹಾತ್ಮ ಫುಲೆ ಅವರು ಅಭಿಪ್ರಾಯಪಟ್ಟಂತೆ, ಸಮಾಜದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ಸಿಗುವವರೆಗೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲ. ಅದಕ್ಕಾಗಿ, ಅವರು ಈ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತರುವಂತಹ ಸಂಸ್ಥೆಗಳನ್ನು ಕಟ್ಟಿದರು, ಸಮ ಸಮಾಜಕ್ಕೆ ಕೊಡುಗೆ ನೀಡಿದರು. ಅವರು ಸ್ಥಾಪಿಸಿದ 'ಸತ್ಯಶೋಧಕ ಸಮಾಜ'ವು ಆಧುನಿಕ ಭಾರತದ ಪ್ರಮುಖ ಸಮಾಜ ಸುಧಾರಣಾ ಚಳುವಳಿಗಳಲ್ಲಿ ಒಂದಾಗಿದೆ. ಇದು ಸಮಾಜ ಸುಧಾರಣೆ, ಸಮುದಾಯ ಸೇವೆ ಮತ್ತು ಮಾನವ ಘನತೆಯನ್ನು ಹೆಚ್ಚಿಸುವಲ್ಲಿ ಮುಂಚೂಣಿಯಲ್ಲಿತ್ತು. ಇದು ಮಹಿಳೆಯರು, ಯುವಕರು ಮತ್ತು ಹಳ್ಳಿಗಳಲ್ಲಿ ವಾಸಿಸುವವರ ಪರಿಣಾಮಕಾರಿ ಧ್ವನಿಯಾಯಿತು. ನ್ಯಾಯ, ಪ್ರತಿಯೊಬ್ಬ ವ್ಯಕ್ತಿಯ ಗೌರವ ಮತ್ತು ಸಾಮೂಹಿಕ ಪ್ರಗತಿಯ ಮನೋಭಾವವನ್ನು ಕೇಂದ್ರದಲ್ಲಿ ಇರಿಸುವ ಮೂಲಕ ಸಮಾಜವನ್ನು ಬಲಪಡಿಸಬಹುದು ಎಂಬ ಮಹಾತ್ಮ ಫುಲೆ ಅವರ ಅಚಲ ನಂಬಿಕೆಯನ್ನು ಈ ಚಳುವಳಿಯು ಪ್ರತಿಬಿಂಬಿಸಿತು. ಅವರ ವೈಯಕ್ತಿಕ ಜೀವನವೂ ಸಹ ಧೈರ್ಯದ ಮಹಾನ್ ಪಾಠಗಳನ್ನು ಒಳಗೊಂಡಿದೆ. ಸದಾ ಜನರ ನಡುವೆ ಇರುತ್ತಾ, ಅವರಿಗಾಗಿ ಅಹೋರಾತ್ರಿ ಶ್ರಮಿಸಿದ್ದು ಫುಲೆ ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರಿತು. ಆದರೆ ಎಂತಹ ಗಂಭೀರ ಆರೋಗ್ಯ ಸವಾಲುಗಳೂ ಅವರ ಸಂಕಲ್ಪವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ. ಪಾರ್ಶ್ವವಾಯುವಿನಂತಹ ಕಠಿಣ ಸ್ಥಿತಿಗೆ ಒಳಗಾದ ನಂತರವೂ, ಅವರು ತಮ್ಮ ದೂರದೃಷ್ಟಿಯ ಗುರಿಗಳನ್ನು ಈಡೇರಿಸಲು ಕೆಲಸ ಮಾಡುವುದನ್ನು ಮುಂದುವರಿಸಿದರು. ಹೌದು, ಅವರ ದೇಹಕ್ಕೆ ಕಠಿಣ ಪರೀಕ್ಷೆ ಎದುರಾಗಿತ್ತು. ಆದರೆ, ಸಮಾಜದ ಬಗೆಗಿನ ಅವರ ಬದ್ಧತೆ ಮಾತ್ರ ಕಿಂಚಿತ್ತೂ ಕದಲಲಿಲ್ಲ. ಇಂದಿಗೂ, ವಿಶೇಷವಾಗಿ ಸಂಘರ್ಷಗಳ ನಡುವೆ ಧೈರ್ಯವನ್ನು ಹುಡುಕುವ ಕೋಟ್ಯಂತರ ಜನರಿಗೆ ಅವರ ಜೀವನದ ಈ ಆಯಾಮವು ಅತ್ಯಂತ ಶಕ್ತಿಶಾಲಿ ಪ್ರೇರಣೆಯಾಗಿದೆ.

ಮಹಾತ್ಮ ಫುಲೆ ಅವರ ಸ್ಮರಣೆಯು ನಮ್ಮ ರಾಷ್ಟ್ರದ ಶ್ರೇಷ್ಠ ಸುಧಾರಕರಲ್ಲಿ ಒಬ್ಬರಾದ ಸಾವಿತ್ರಿಬಾಯಿ ಫುಲೆ ಅವರ ಉಲ್ಲೇಖವಿಲ್ಲದೆ ಎಂದಿಗೂ ಪೂರ್ಣಗೊಳ್ಳದು. ಭಾರತದ ಪ್ರವರ್ತಕ ಮಹಿಳಾ ಶಿಕ್ಷಕಿಯಾಗಿ, ಅವರು ಹೆಣ್ಣುಮಕ್ಕಳ ಶಿಕ್ಷಣದ ಕ್ರಾಂತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದರು ಮತ್ತು ಅವರ ಕನಸುಗಳಿಗೆ ರೆಕ್ಕೆ ಕಟ್ಟಿದರು. ಮಹಾತ್ಮ ಫುಲೆ ಅವರ ನಿಧನದ ನಂತರವೂ ಸಾವಿತ್ರಿಬಾಯಿ ಅವರು ಸುಧಾರಣೆಯ ಆ ಜ್ಯೋತಿಯನ್ನು ಎತ್ತಿ ಹಿಡಿದರು. 1897ರಲ್ಲಿ ಪ್ಲೇಗ್ ಸಾಂಕ್ರಾಮಿಕ ಹರಡಿದಾಗ, ಅವರು ರೋಗಪೀಡಿತರ ಸೇವೆಗೆ ಎಷ್ಟರಮಟ್ಟಿಗೆ ಸಮರ್ಪಿಸಿಕೊಂಡರೆಂದರೆ, ಅವರು ಸ್ವತಃ ಅದೇ ಕಾಯಿಲೆಗೆ ತುತ್ತಾಗಿ ಕೊನೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದರು.

ನಮ್ಮ ಪುಣ್ಯಭೂಮಿಯು ಕಾಲಕಾಲಕ್ಕೆ ಮಹಾನ್ ಪುರುಷರು ಮತ್ತು ಮಹಿಳೆಯರ ಆಶೀರ್ವಾದಕ್ಕೆ ಪಾತ್ರವಾಗಿದೆ; ಇವರು ತಮ್ಮ ಉದಾತ್ತ ಆಲೋಚನೆ, ಅಪ್ರತಿಮ ತ್ಯಾಗ ಮತ್ತು ಕರ್ತವ್ಯ ನಿಷ್ಠೆಯ ಮೂಲಕ ಸಮಾಜವನ್ನು ಬಲಪಡಿಸಿದ್ದಾರೆ. ಇವರು ಬದಲಾವಣೆಗಾಗಿ ಯಾರೋ ಬರುತ್ತಾರೆಂದು ಕಾಯಲಿಲ್ಲ, ಬದಲಾಗಿ ತಾವೇ ಆ ಬದಲಾವಣೆಯ ಮೂಲಶಕ್ತಿಯಾದರು. ನೂರಾರು ವರ್ಷಗಳಿಂದ ನಮ್ಮ ನಾಡಿನಲ್ಲಿ ಸಾಮಾಜಿಕ ಸುಧಾರಣೆಯ ಕರೆಯು ಸಮಾಜದ ಒಳಗಿನಿಂದಲೇ ಮೊಳಗುತ್ತಾ ಬಂದಿದೆ. ಜನಸಾಮಾನ್ಯರ ಕಷ್ಟ-ಕಾರ್ಪಣ್ಯಗಳನ್ನು ಕಣ್ಣಾರೆ ಕಂಡು, ಅದನ್ನು 'ಹಣೆಬರಹ' ಎಂದು ಒಪ್ಪಿಕೊಳ್ಳಲು ನಿರಾಕರಿಸಿದ ಧೀಮಂತ ವ್ಯಕ್ತಿಗಳಿಂದ ಈ ಕ್ರಾಂತಿ ಉದ್ಭವಿಸಿದೆ. ಮಹಾತ್ಮ ಜ್ಯೋತಿರಾವ್ ಫುಲೆ ಅಂತಹ ಕ್ರಾಂತಿಕಾರಿ ಧ್ವನಿಗಳಲ್ಲಿ ಒಬ್ಬರು.

2022ರಲ್ಲಿ ಪುಣೆಗೆ ಭೇಟಿ ನೀಡಿದಾಗ ಅಲ್ಲಿನ ಅವರ ಭವ್ಯ ಪ್ರತಿಮೆಗೆ ನಾನು ಗೌರವ ಸಲ್ಲಿಸಿದ್ದನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ನಾವು ಅವರ ದ್ವಿಶತಮಾನೋತ್ಸವದ ವರ್ಷದ ಆರಂಭವನ್ನು ಗುರುತಿಸುತ್ತಿರುವಾಗ, ಮಹಾತ್ಮ ಜ್ಯೋತಿರಾವ್ ಫುಲೆ ಅವರಿಗೆ ಸಲ್ಲಿಸುವ ಅತ್ಯಂತ ಸೂಕ್ತ ಗೌರವವೆಂದರೆ 'ನವೀಕರಣ'. ಅವರಿಗೆ ಹತ್ತಿರವಾದ ಶಿಕ್ಷಣದಂತಹ ವಿಷಯಗಳಿಗೆ ನಮ್ಮ ಬದ್ಧತೆಯನ್ನು ನವೀಕರಿಸುವುದು. ಅನ್ಯಾಯದ ಬಗ್ಗೆ ನಮ್ಮ ಸಂವೇದನಾಶೀಲತೆಯನ್ನು ನವೀಕರಿಸುವುದು. ಸಮಾಜವು ಒಳಗಿನಿಂದಲೇ ತನ್ನನ್ನು ತಾನು ಸುಧಾರಿಸಿಕೊಳ್ಳಬಲ್ಲದು ಎಂಬ ನಮ್ಮ ನಂಬಿಕೆಯನ್ನು ನವೀಕರಿಸುವುದು. ನೈತಿಕ ಸ್ಪಷ್ಟತೆ ಮತ್ತು ಸಾರ್ವಜನಿಕ ಉದ್ದೇಶದೊಂದಿಗೆ ಸೇರಿದಾಗ ಸಮುದಾಯದ ಶಕ್ತಿಯು ಭಾರತದಲ್ಲಿ ಅದ್ಭುತಗಳನ್ನು ಸಾಧಿಸಬಲ್ಲದು ಎಂದು ಅವರ ಜೀವನ ನಮಗೆ ಹೇಳುತ್ತದೆ. ಅದಕ್ಕಾಗಿಯೇ ಅವರು ಇಂದಿಗೂ ಲಕ್ಷಾಂತರ ಜನರಿಗೆ ಶಕ್ತಿ ನೀಡುತ್ತಾರೆ. ಅದಕ್ಕಾಗಿಯೇ ಅವರ ಮಾತುಗಳು ಮತ್ತು ಕೆಲಸಗಳು ಇಂದಿಗೂ ಭರವಸೆಯನ್ನು ನೀಡುತ್ತವೆ ಮತ್ತು ಅದಕ್ಕಾಗಿಯೇ, ಅವರು ಜನಿಸಿದ ಎರಡು ನೂರು ವರ್ಷಗಳ ನಂತರವೂ ಮಹಾತ್ಮ ಜ್ಯೋತಿರಾವ್ ಫುಲೆ ಅವರು ಕೇವಲ ಭೂತಕಾಲದ ವ್ಯಕ್ತಿಯಲ್ಲ, ಬದಲಾಗಿ ಭಾರತದ ಭವಿಷ್ಯಕ್ಕೆ ದಾರಿದೀಪವಾಗಿದ್ದಾರೆ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮುಖ್ಯ ರಸ್ತೆಗೆ ಕಾಯಕಲ್ಪ ಬೇಕಾಗಿದೆ!

ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ತಾಲೂಕು ಮಟ್ಟದಲ್ಲಿ (ಕೆಎಚ್‌ಬಿ) ಕಾಲೋನಿ. ಕರ್ನಾಟಕ ಗೃಹ ಮಂಡಳಿ ಇಂದ ಮನೆಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡಿದ್ದು, ನಂಜನಗೂಡಿನಲ್ಲೇ ಮೊದಲು. ಬಹುಶ ಎಲ್ಲ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೂ ಇದೇ ನಿದರ್ಶನ. ಇದಾದ ನಂತರವೇ ರಾಜ್ಯದ ವಿವಿಧ ತಾಲೂಕು, ಜಿಲ್ಲಾ ಕೇಂದ್ರಗಳಿಗೂ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ ಕಾಲೋನಿ ನಿರ್ಮಾಣ) ನಡೆದದ್ದು, ಇಷ್ಟೆಲ್ಲಾ ಇತಿಹಾಸ ಇರುವಂತಹ ನಂಜನಗೂಡಿನ ಹೌಸಿಂಗ್ ಬೋರ್ಡ್ ಕಾಲೋನಿಗೆ ಸಂಪರ್ಕ ಕೊಂಡಿಯಾಗಿರುವ ಮುಖ್ಯ ರಸ್ತೆಗೆ ಅನಿವಾರ್ಯತೆಯ ಕಾಯಕಲ್ಪ ಬೇಕಾಗಿದೆ. ವಾರ್ಡ್ ನಂಬರ್ 21, 22 ಹಾಗೂ 23 ಸಂಬಂಧಿಸಿದಂತೆ ನಂಜನಗೂಡಿನ ಗ್ರಾಮಾಂತರ ಪೊಲೀಸ್ ಠಾಣೆ ಎದುರುಗಡೆಯ ಮುಖ್ಯ ರಸ್ತೆ ಇದಾಗಿದ್ದು, ತೀರಾ ಅಧೋಗತಿಯಲ್ಲಿದ್ದು, ವಾಹನ ಸಂಚಾರ ಬಳಕೆಗೆ ಹಾಗೂ ಪಾದಚಾರಿಗಳ ನಡೆದುಕೊಂಡು ಹೋಗುವುದಕ್ಕೂ ಯೋಗ್ಯವಲ್ಲದಂತಾಗಿದೆ. ಬೈಕ್‌ನಲ್ಲಿ ಹೋಗುವಾಗ ಕೆಲವರು ಬಿದ್ದು ಗಾಯ ಮಾಡಿಕೊಂಡಿರುವ ಉದಾಹರಣೆಗಳು ಇವೆ.

ಕಳೆದ ಕೆಲವು ವರ್ಷಗಳಿಂದ ಸಾಕಷ್ಟು ಬಾರಿ ಈ ವಾರ್ಡ್‌ಗಳನ್ನು ಪ್ರತಿನಿಧಿಸಿದ ಸದಸ್ಯರು ರಸ್ತೆಯ ದುರಸ್ತಿ ಕಾರ್ಯ ಅಥವಾ ಮರು ಡಾಂಬರೀಕರಣ ಸಂಬಂಧಿಸಿದಂತೆ ಸಾಕಷ್ಟು ಮನವಿ ಪತ್ರಗಳನ್ನು ಈ ಹಿಂದಿನ ಅವಧಿಗಳಲ್ಲಿ ಶಾಸಕರಾಗಿದ್ದ ಕಳಲೆ ಕೇಶವಮೂರ್ತಿ ಅನಂತರ ಹರ್ಷವರ್ಧನ್ ಅವರ ಕಾಲಾವಧಿಯಲ್ಲಿ ಈಗ ಪ್ರಸ್ತುತ ಶಾಸಕರಾಗಿರುವ ದರ್ಶನ್ ಧ್ರುವನಾರಾಯಣ್ ಅವರಿಗೂ ಮನವಿ ಸಲ್ಲಿಸಲಾಗಿದ್ದರು ಯಾವುದೇ ಉಪಯೋಗಕ್ಕೆ ಬಾರದೆ ಪರಿಸ್ಥಿತಿ ಹೇಳತೀರದಾಗಿದೆ.

ಸದ್ಯ, ನಗರಸಭಾ ಸದಸ್ಯರ ಅವಧಿ ಮುಕ್ತಾಯವಾಗಿದ್ದು ಮತ್ತೆ ವಾರ್ಡ್ ಚುನಾವಣೆ ನಡೆದು ಸದಸ್ಯರ ಆಯ್ಕೆ ಆದ ನಂತರವಾದರೂ ಈ ರಸ್ತೆ ಅಭಿವೃದ್ಧಿ ಕಾಣಬೇಕಾಗಿದೆ.!

ಅತಿ ಹೆಚ್ಚಿನ ವಿವಿಧ ಇಲಾಖೆಗಳ ಸರಕಾರಿ ಅಧಿಕಾರಿಗಳು, ರಾಜಕೀಯ ನಾಯಕರು, ಸುಶಿಕ್ಷಿತರು, ಖಾಸಗಿ ಕಂಪನಿಗಳ ನೌಕರರು ವಾಸ ಮಾಡುವಂತಹ ಪಟ್ಟಣದ ಪ್ರಮುಖ ಬಡಾವಣೆಯೆ ಕೆಎಚ್‌ಬಿ ಕಾಲೋನಿ ಆಗಿದ್ದು, ಗಮನಾರ್ಹ ಸಂಗತಿ ಏನೆಂದರೆ, ನಂಜನಗೂಡು ಪಟ್ಟಣದ ಭಾಗಶಃ ಜನಸಂಖ್ಯೆ ಈ ಭಾಗದಲ್ಲೇ ಇದ್ದು ಹೌಸಿಂಗ್ ಬೋರ್ಡ್ ರಚನೆ ಆದ ನಂತರ ಇದರ ಅಕ್ಕ-ಪಕ್ಕ ಸರಿ ಸುಮಾರು 15-20ಕ್ಕೂ ಹೆಚ್ಚು ಲೇಔಟ್‌ಗಳು ಇವತ್ತಿನವರೆಗೆ ನಿರ್ಮಾಣಗೊಂಡಿವೆ. ಆದ್ದರಿಂದ ಪಟ್ಟಣದ ಜನಸಂಖ್ಯೆಯ ಅರ್ಧಭಾಗ ಈ ವ್ಯಾಪ್ತಿಯಲ್ಲಿ ಕಂಡು ಬರುತ್ತದೆ.

ಕಳೆದ ಹತ್ತಾರು ವರ್ಷಗಳಿಂದ ರಸ್ತೆ ಸುಗಮ ಸಂಚಾರಕ್ಕೆ ಅನಾನುಕೂಲವಾಗಿದ್ದರು ಸರಿಪಡಿಸಲು ಯಾರು ಮುಂದೆ ಬಾರದಿದ್ದು ಅತ್ಯಂತ ವಿಷಾದನೀಯ. ಇನ್ನಾದರೂ, ಶಾಸಕ ದರ್ಶನ ಧ್ರುವ ನಾರಾಯಣ ವಾಸ್ತವತೆಯನ್ನು ಅರಿತು ಈ ಮುಖ್ಯ ರಸ್ತೆ ಸರಿಪಡಿಸಲು ಅಗತ್ಯವಾಗಿ ಮುಂದಾಗಬೇಕಿದೆ.

- ಅನಿಲ್ ಕುಮಾರ್, ನಂಜನಗೂಡು.

ಜನಗಣತಿ ನಿಖರ ಹಾಗೂ ಪಾರದರ್ಶಕವಾಗಿರಲಿ...

ಭಾರತದ ಜನಗಣತಿ ಕಾಯ್ದೆ 1948ರ ಪ್ರಕಾರ ಈ ಬಾರಿಯ ಜನಗಣತಿ 2027ರ ಕಾರ್ಯವು ಎರಡು ಹಂತಗಳಲ್ಲಿ ನಡೆಯುತ್ತಿದ್ದು, ಈ ಜನಗಣತಿಯು ಭಾರತದ ಮೊದಲ ಡಿಜಿಟಲ್ ಜನಗಣತಿಯಾಗಿರುವುದು ವಿಶೇಷವಾಗಿದೆ. ಗಣತಿದಾರರು ತಮ್ಮ ಸ್ವಂತ ಮೊಬೈಲ್ ಫೋನ್ ಬಳಸಿ ಮೊಬೈಲ್ App ನಿಂದ ಕುಟುಂಬಗಳಿಂದ ಡಿಜಿಟಲ್ ರೂಪದಲ್ಲಿ ಮಾಹಿತಿಗಳನ್ನು ಸಂಗ್ರಹಿಸಲು ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೆ ಏಪ್ರಿಲ್ ಒಂದರಿಂದ ಏಪ್ರಿಲ್ 15 ರವರೆಗೆ ಸ್ವಯಂ ಗಣತಿಗೆ ಅವಕಾಶ ಕಲ್ಪಿಸಲಾಗಿದ್ದು, ಸರಳವಾದ ಹಂತಗಳನ್ನು ಅನುಸರಿಸುವ ಮೂಲಕ 15 ರಿಂದ 20 ನಿಮಿಷಗಳಲ್ಲಿ ತಮ್ಮ ಮನೆಯ ಸ್ವಂತ ಗಣತಿಯನ್ನು ಮಾಡಿಕೊಂಡು ಸ್ವಯಂ ಗಣತಿಯ ಗುರುತಿನ ಸಂಖ್ಯೆ ಪಡೆದುಕೊಂಡು ಇದೇ ಏಪ್ರಿಲ್ 16 ರಿಂದ ಮೇ

15ರವರೆಗೆ ಗಣತಿದಾರರು ಮನೆಗೆ ಭೇಟಿ ನೀಡಿದಾಗ ವಿಶೇಷ ಸಂಖ್ಯೆ ನೀಡಿ ಗಣತಿದಾರರ ಗಣತಿ ಕಾರ್ಯವನ್ನು ಸರಳಗೊಳಿಸಿ ಯಶಸ್ವಿಗೊಳಿಸಲು ಎಲ್ಲರೂ ನೆರವಾಗಬೇಕಿದೆ.

ಈ ಜನಗಣತಿಯಲ್ಲಿ ಸಂಗ್ರಹಿಸುವ ಮಾಹಿತಿ, ಹೆಸರು, ಗುರುತು ಗೌಪ್ಯವಾಗಿ ಇರಿಸಲಾಗುತ್ತದೆ ಹಾಗೂ ಯಾವುದೇ ತೆರಿಗೆ ಅಥವಾ ಪರಿಶೋಧನೆ ಉದ್ದೇಶಕ್ಕೆ ದತ್ತಾಂಶವನ್ನು ಬಳಸಿಕೊಳ್ಳುವುದಿಲ್ಲ. ಇದು ಸುರಕ್ಷಿತವಾಗಿರುತ್ತದೆ ಎಂದು ಈಗಾಗಲೇ ಸರಕಾರ ಸ್ಪಷ್ಟಪಡಿಸಿದ್ದು, ಹೀಗಾಗಿ ಗಣತಿದಾರರು ತಮ್ಮ ಮನೆಗೆ ಬಂದಾಗ ಮಾಹಿತಿದಾರರು ಯಾವುದೇ ಅಳುಕಿಲ್ಲದೆ, ಸಂಶಯಪಡದೇ ಗಣತಿದಾರರು ಕೇಳುವ 34 ಸರಳ ಪ್ರಶ್ನೆಗಳಿಗೆಲ್ಲ ಅತ್ಯಂತ ಪಾರದರ್ಶಕ ಹಾಗೂ ವಾಸ್ತವಾಂಶದೊಂದಿಗೆ ಮಾಹಿತಿ ನೀಡಿ ನಮ್ಮ ಮನೆ ಬಾಗಿಲಿಗೆ ಬರುವ ಗಣತಿದಾರರು, ಮೇಲ್ವಿಚಾರಕರು ಮತ್ತು ಇತರೆ ಕಾರ್ಯಕರ್ತರನ್ನು ಸಂತೋಷದಿಂದ ಸ್ವಾಗತಿಸಬೇಕಿದೆ. ಏಕೆಂದರೆ ನಾವು ನೀಡುವ ಮಾಹಿತಿಯು ರಾಷ್ಟ್ರದ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಅಗತ್ಯ ಮಾಹಿತಿಗಳನ್ನು ಪೂರೈಸುತ್ತದೆ. ಇದಲ್ಲದೇ ಗಣತಿದಾರರು ಕೂಡ ಮನೆಗಣತಿಯಲ್ಲಿ ನೀಡಲಾದ ಪ್ರಶ್ನೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಶ್ನೆಗಳನ್ನು ಕುಟುಂಬದ ಮಾಹಿತಿದಾರರಿಗೆ ಕೇಳಿ, ಕಿರಿಕಿರಿಗೊಳಿಸದೆ ಮಾಹಿತಿದಾರರು ಒದಗಿಸಿದ ಸರಿಯಾದ ಮಾಹಿತಿಯನ್ನು ದಾಖಲಿಸಿಕೊಂಡು ಈ ಬಾರಿಯ ಜನಗಣತಿಯನ್ನು ಯಶಸ್ವಿಗೊಳಿಸುವುದು ಅಗತ್ಯವಾಗಿದೆ.

- ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಸರಳ ಸಜ್ಜನಿಕೆಯ ಮೂರ್ತಿ ಎಸ್.ಆರ್. ರಾಮಸ್ವಾಮಿ

ಮರೆಯಲಾಗದ ಮುತ್ತು ಎಸ್.ಆರ್. ರಾಮಸ್ವಾಮಿ ಅವರ ವ್ಯಕ್ತಿತ್ವ ಬದುಕು, ಬರವಣಿಗೆ ಜೀವನ ಶೈಲಿ, ನಾನು ಡಿವಿಜಿ ಅವರನ್ನು ನೋಡಿಲ್ಲ ಆದರೆ ಸದಾ ಡಿವಿಜಿ ಹಾಕಿಕೊಟ್ಟ ಆದರ್ಶದ ಬದುಕು ಸವೆಸಿದ ಮಹಾತ್ಮ ಎಸ್.ಆರ್.ಆರ್ ನಾನು ಅನೇಕ ಭಾರಿ ಜೀವಂತವಾಗಿ ಆದರ್ಶ ತೆಗೆದುಕೊಳ್ಳಲು ನಿಮಗೆ ಎಸ್.ಆರ್.ರಾಮಸ್ವಾಮಿ ಅವರಲ್ಲಿ ಇದೆ ನೋಡಿ ಎಂದು ಹೇಳುತ್ತಿದ್ದೆ. ಉತ್ಥಾನ ಮಾಸ ಪತ್ರಿಕೆ ನನಗೆ ಕಸ್ತೂರಿ ಮಾಸ ಪತ್ರಿಕೆಯಷ್ಟೇ ಇಷ್ಟ ಅವರ ಸಂಪಾದಕೀಯ ಅತ್ಯುತ್ತಮ ಬರವಣಿಗೆ ನನ್ನನ್ನು ಚುಂಬಕದಂತೆ ಆಕರ್ಷಿಸುತ್ತಿತ್ತು ಬದುಕಿದರೆ ಹಾಗೆ ಬದುಕಬೇಕು ಎನ್ನುವ ಮತ್ಸರ ನನಗೆ ಇದ್ದೇ ಇತ್ತು. ನನ್ನ ಬದುಕಿನಲ್ಲಿ ಆದರ್ಶದ ಮೇರು ಶಿಖರಗಳಲ್ಲಿ ಅವರು ಸಹ ಒಬ್ಬರು. ಅವರಿಗೆ ಭಾವ ಪೂರ್ಣ ಶ್ರದ್ಧಾಂಜಲಿ.

-ಎಂ. ಪರಮೇಶ್ವರ. ಮದ್ದಿಹಳ್ಳಿ, ಹಿರಿಯೂರು ತಾಲ್ಲೂಕು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಸಂತೋಷ ಕೊಡ್ಕಣಿ, (ಇಮೇಲ್ ಮೂಲಕ)**
ಭಟ್ರೇ, ಮದುವೆಗೂ ಮತ್ತು ಯುದ್ಧಕ್ಕೂ ಇರುವ ಸಾಮ್ಯತೆ ಏನು?
- **ಎರಡರಲ್ಲೂ 'ಶರಣಾಗತಿ' ಆದವನಿಗೇ ಹೆಚ್ಚು ನೆಮ್ಮದಿ!**

- **ಕೆ.ಜಿ. ಶೇಷಾದ್ರಿ, ಬೆಂಗಳೂರು**
ಭಟ್ರೇ, ಒಬ್ಬ ಆಲಸಿ ವ್ಯಕ್ತಿಗೂ, ಗಡಿಯಾರಕ್ಕೂ ಇರುವ ವ್ಯತ್ಯಾಸವೇನು?
- **ಗಡಿಯಾರ ಓಡುತ್ತಾ ಕೆಲಸ ಮಾಡುತ್ತದೆ, ಆಲಸಿ ವ್ಯಕ್ತಿ ಕೆಲಸದಿಂದ ಓಡಿ ಹೋಗುತ್ತಾನೆ!**

- **ಬಾಬು ಕುಂದಾಪುರ, (ಇಮೇಲ್ ಮೂಲಕ)**
ಭಟ್ರೇ, ಸ್ಕೂಲ್ ಬ್ಯಾಗ್ ಯಾಕೆ ಅಷ್ಟು ಭಾರವಾಗಿರುತ್ತದೆ?
- **ಯಾಕೆಂದರೆ ಅದರಲ್ಲಿ ವಿದ್ಯಾರ್ಥಿಯ 'ಭವಿಷ್ಯ' ಇರುತ್ತದೆಯಲ್ಲ, ಅದಕ್ಕೆ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಕೂದಲು ಉದುರುವುದು ಮತ್ತು ಸಂಬಳ ಖಾಲಿಯಾಗುವುದು ಈ ಎರಡರಲ್ಲಿ ಯಾವುದು ನೋವು?
- **ಎರಡೂ ನೋವೇ, ಏಕೆಂದರೆ ಎರಡೂ ಹೋದ ಮೇಲೆ 'ತಲೆ' ಖಾಲಿಯಾದ ಅನುಭವವಾಗುತ್ತದೆ!**

- **ಮಂಡ್ಯ ಸತೀಶ, ಮಂಡ್ಯ**
ಭಟ್ರೇ, ಲಾಯರ್ ಮತ್ತು ತೆಂಗಿನ ಮರದ ನಡುವಿನ ವ್ಯತ್ಯಾಸವೇನು?
- **ತೆಂಗಿನ ಮರದ ಮೇಲೆ ಹೋದರೆ ಎಳನೀರು ಸಿಗುತ್ತದೆ, ಲಾಯರ್ ಹತ್ತಿರ ಹೋದರೆ ಕಣ್ಣೀರು ಬರುತ್ತದೆ !**

- **ಬಾಲಕೃಷ್ಣ ಪುತ್ತೂರು, ಬೆಂಗಳೂರು**
ಭಟ್ರೇ, ಹಣ ಮತ್ತು ಸಮಯ ಇವೆರಡರಲ್ಲಿ ಯಾವುದು ಮುಖ್ಯ?
- **ಹಣವೇ ಮುಖ್ಯ, ಯಾಕೆಂದರೆ ಸಮಯ ಕಳೆಯಲು ಹಣ ಬೇಕಲ್ಲ!**

- **ವಿಶ್ವನಾಥ ಕುಲಕರ್ಣಿ, ಧಾರವಾಡ**
ಭಟ್ರೇ, ಎರಡರಲ್ಲೂ ಸ್ಟೋರೇಜ್ ಇರುತ್ತದೆ, ಆದರೆ ನಮಗೆ ಬೇಕಾದಾಗ ಮಾತ್ರ 'ಡಾಟಾ' ಸಿಗೋದಿಲ್ಲ! ಇದು ಉತ್ತರ. ಪ್ರಶ್ನೆ ಏನು?
- **ಮಿದುಳಿಗೂ, ಪೆನ್-ಡ್ರೈವ್‌ಗೂ ಇರುವ ಸಾಮ್ಯತೆ ಏನು?**

- **ಸಂದೀಪ ಭಟ್, ಉಡುಪಿ**
ಭಟ್ರೇ, ನನ್ನ ಸ್ನೇಹಿತನೊಬ್ಬ ಅಸಂಬದ್ಧ ಪ್ರಶ್ನೆಗಳನ್ನು ಕೇಳುತ್ತಾ ಇರುತ್ತಾನಲ್ಲ?
- **ಪ್ರಕಾಶ ರೈ ಕಾಯಿಲೆ ಅಂಟಿಸಿಕೊಂಡಿರಬೇಕು!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಹಳೆ ಗೆಳೆಯರಿಗೂ, ಹಳೆ ಮೊಬೈಲ್ಗೂ ಏನು ವ್ಯತ್ಯಾಸ?
- **ಹಳೆ ಮೊಬೈಲ್ ಹ್ಯಾಂಗ್ ಆಗುತ್ತದೆ, ಹಳೆ ಗೆಳೆಯರು ಸಿಕ್ಕರೆ ಹ್ಯಾಂಗ್ ಓವರ್ ಆಗುತ್ತದೆ!**

- **ಮಂಜುನಾಥ ಸಿ.,ಹೊನ್ನಾಳಿ**
ಭಟ್ರೇ, ಅಮೆರಿಕ-ಇರಾನ್ ಯುದ್ಧ ನಿಲ್ಲಿಸಿದ್ದು ಪಾಕ್ ಪ್ರಧಾನಿಯಂತೆ?
- **ಮೊದಲು ಆತ ಹೇಳಿದಂತೆ ಆತನ ಸೇನಾ ಮುಖ್ಯಸ್ಥ ಕೇಳಲಿ!**

ಓಜಸ್ವೀ ಭವ- ಜೀವನದ ಪರಮ ಸಂಪತ್ತು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ. ಸಾಧನಶ್ರೀ
vveditoped@gmail.com

ಒಂದು ಸಣ್ಣ ಹಳ್ಳಿಯಲ್ಲಿ ವಾಸಿಸುತ್ತಿದ್ದ ಅರ್ಜುನ್ ಎಂಬ ಬಾಲಕನ ಮನಸ್ಸು ದೊಡ್ಡ ಕನಸುಗಳಿಂದ ತುಂಬಿತ್ತು. ಅವನು ಜೀವನದಲ್ಲಿ ಐಶ್ವರ್ಯ, ಯಶಸ್ಸು ಮತ್ತು ಖ್ಯಾತಿ ಎಲ್ಲವನ್ನೂ ಪಡೆಯ ಬೇಕೆಂದು ಬಯಸುತ್ತಿದ್ದ. ಒಂದು ದಿನ ಅವನು ಹಳ್ಳಿಯ ಜ್ಞಾನಸಂಪನ್ನ ವೃದ್ಧರನ್ನು ಭೇಟಿಯಾಗಿ, ನನ್ನ ಜೀವನದಲ್ಲಿ ಎಲ್ಲವೂ ಸಿಗುವಂತೆ ಆಶೀರ್ವಾದ ಮಾಡಿ ಎಂದು ವಿನಂತಿಸಿದ. ವೃದ್ಧರು ಮೃದುವಾಗಿ ನಗುತ್ತ, ಅವನ ತಲೆಯ ಮೇಲೆ ಕೈ ಇಟ್ಟು ಕೇವಲ ಎರಡು ಪದಗಳನ್ನು ಉಚ್ಚರಿಸಿದರು– 'ಓಜಸ್ವೀ ಭವ.'

ಆ ಕ್ಷಣದಲ್ಲಿ ಅರ್ಜುನ್‌ಗೆ ಸ್ವಲ್ಪ ನಿರಾಶೆ ಆಯಿತು. ಅವನು ನಿರೀಕ್ಷಿಸಿದ್ದದ್ದು ಧನ, ಯಶಸ್ಸು ಅಥವಾ ಖ್ಯಾತಿಗೆ ಸಂಬಂಧಿಸಿದ ಆಶೀರ್ವಾದ. ಆದರೆ ದಿನಗಳು ಕಳೆಯುತ್ತಿದ್ದಂತೆ, ಅವನೊಳಗೆ ಒಂದು ಸೂಕ್ಷ್ಮವಾದ ಬದಲಾವಣೆ ಪ್ರಾರಂಭವಾಯಿತು. ದೇಹದಲ್ಲಿ ಚೈತನ್ಯ ಹೆಚ್ಚಿತು, ಮನಸ್ಸಿನಲ್ಲಿ ಶಾಂತಿ ನೆಲಸಿತು, ಚಿಂತನೆಗಳಲ್ಲಿ ಸ್ಪಷ್ಟತೆ ಮೂಡಿತು. ಅವನು ತೆಗೆದುಕೊಂಡ ನಿರ್ಧಾರಗಳು ದೃಢವಾಗುತ್ತಿದ್ದವು, ಅವನ ಸಾನ್ನಿಧ್ಯವೇ ಇತರರಿಗೆ ಪ್ರೇರಣೆಯಾಯಿತು. ಅವನು ಏನನ್ನೇ ಕೈಗೊಂಡರೂ ಅದರಲ್ಲಿ ಸಮತೋಲನ ಮತ್ತು ಯಶಸ್ಸು ಸಹಜವಾಗಿ ಹರಿಯತೊಡಗಿತು.

ಆಗ ಅವನಿಗೆ ಅರಿವಾಯಿತು ವೃದ್ಧರು ನೀಡಿದ ಓಜಸ್ವೀ ಭವ ಎಂಬ ಆಶೀರ್ವಾದವೇ ಅವನಿಗೆ ಬೇಕಿದ್ದ ಎಲ್ಲದರ ಮೂಲ. ಏಕೆಂದರೆ ಒಬ್ಬನು ಓಜಸ್ವಿಯಾಗಿದ್ದರೆ ದೇಹ, ಮನಸ್ಸು ಮತ್ತು ಆತ್ಮ ಸಮೃದ್ಧವಾಗುತ್ತವೆ, ಜೀವನವು ಸಹಜವಾಗಿ ಶ್ರೇಷ್ಠತೆಯತ್ತ ಸಾಗುತ್ತದೆ. ಇದೇ 'ಓಜಸ್' ಎಂಬ ಆಯುರ್ವೇದದ ಮಹತ್ವಪೂರ್ಣ ತತ್ವದ ಸಾರ. ವ್ಯಕ್ತಿಯ ಸಮಗ್ರ ಆರೋಗ್ಯ, ಪ್ರತಿರೋಧಕ ಶಕ್ತಿ ಮತ್ತು ಆಂತರಿಕ ಕಾಂತಿಯ ಮೂಲವಾಗಿರುವ ಈ ಓಜಸ್ಸನ್ನು ಅರಿತು ಪೋಷಿಸುವುದೇ ನಿಜವಾದ ಸ್ವಾಸ್ಥ್ಯದ ದಾರಿಯಾಗಿದೆ. ಮುಂದಿನ ಭಾಗದಲ್ಲಿ ಈ ಓಜಸ್ಸಿನ ಸ್ವರೂಪ, ಅದರ ಪ್ರಾಮುಖ್ಯತೆ ಮತ್ತು ಅದನ್ನು ಕಾಪಾಡಿಕೊಳ್ಳುವ ವಿಧಾನಗಳನ್ನು ವಿವರವಾಗಿ ತಿಳಿಯೋಣ.

'ಓಜಸ್' ಎಂದರೆ ಏನು?

ಆಯುರ್ವೇದದ ಪ್ರಕಾರ, ನಾವು ಸೇವಿಸುವ ಆಹಾರವು ಕ್ರಮೇಣ ರಸ, ರಕ್ತ, ಮಾಂಸ, ಮೇದ, ಅಸ್ಥಿ, ಮಜ್ಜಾ ಮತ್ತು ಶುಕ್ರ ಎಂಬ ಏಳು ಧಾತುಗಳಾಗಿ ಪರಿವರ್ತನೆಗೊಳ್ಳುತ್ತದೆ. ಈ ಧಾತುಗಳ ಸಮರ್ಪಕ ಪೋಷಣೆಯ ನಂತರ ಕೊನೆಯಲ್ಲಿ ಉತ್ಪತ್ತಿಯಾಗುವ ಸೂಕ್ಷ್ಮ ಸಾರವೇ ಓಜಸ್. ಇದು ದೇಹದ ಪ್ರತಿಯೊಂದು ಅಂಗಕ್ಕೂ ಜೀವಶಕ್ತಿಯನ್ನು ನೀಡುತ್ತದೆ. ಹೃದಯದಲ್ಲಿ ನೆಲೆಸಿರುವ ಈ ಓಜಸ್ ದೇಹದ ಸಂಪೂರ್ಣ ಕಾರ್ಯಚಟುವಟಿಕೆಯನ್ನು ನಿಯಂತ್ರಿಸುತ್ತದೆ.

ಓಜಸ್ಸಿನ ಪ್ರಾಮುಖ್ಯತೆ ಏನು?

ಓಜಸ್ಸನ್ನು ಆಯುರ್ವೇದದಲ್ಲಿ 'ಬಲ' ಎಂದು ಕರೆಯಲಾಗಿದೆ. ಆದರೆ ಇಲ್ಲಿ ಉಲ್ಲೇಖಿಸಲ್ಪಡುವ ಬಲವು ಕೇವಲ ದೇಹಬಲವಲ್ಲ; ಇದು ಮನೋಬಲ ಮತ್ತು ಆತ್ಮಬಲವನ್ನು ಒಳಗೊಂಡ ಸಮಗ್ರ ಶಕ್ತಿಯಾಗಿದೆ. ಒಬ್ಬ ವ್ಯಕ್ತಿಯ ಆರೋಗ್ಯ, ಚೈತನ್ಯ, ಸ್ಥೈರ್ಯ ಮತ್ತು ಆಂತರಿಕ ಸಂತೃಪ್ತಿಯನ್ನು ನಿರ್ಧರಿಸುವ ಮೂಲತತ್ವವೇ ಓಜಸ್.

ಓಜಸ್ ಸಮೃದ್ಧವಾಗಿದ್ದರೆ, ದೇಹದ ಪ್ರತಿಯೊಂದು ಧಾತುವೂ ಸಮರ್ಪಕವಾಗಿ ಪೋಷಣೆಯನ್ನು ಪಡೆಯುತ್ತದೆ. ಇದರ ಪರಿಣಾಮವಾಗಿ ದೇಹವು ರೋಗಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆದ್ದರಿಂದಲೇ ಓಜಸ್ಸನ್ನು ರೋಗನಿರೋಧಕ ಶಕ್ತಿಯ ಆಧಾರವೆಂದು ಪರಿಗಣಿಸಲಾಗುತ್ತದೆ. ಕೇವಲ ದೇಹವಲ್ಲ, ಮನಸ್ಸಿನ ಮೇಲೂ ಇದರ ಪ್ರಭಾವ ಅತ್ಯಂತ ಮಹತ್ವದ್ದಾಗಿದೆ. ಓಜಸ್ ಸಮತೋಲನದಲ್ಲಿದ್ದರೆ ಮನಸ್ಸು ಶಾಂತವಾಗಿರುತ್ತದೆ, ಚಿಂತನೆಗಳು ಸ್ಪಷ್ಟವಾಗುತ್ತವೆ ಮತ್ತು ನಿರ್ಧಾರಗಳು ಸಮರ್ಪಕವಾಗಿ ಮೂಡುತ್ತವೆ.

ಇದೇ ಕಾರಣದಿಂದ, ಓಜಸ್ ಅನ್ನು ವ್ಯಕ್ತಿತ್ವದ ಆಂತರಿಕ ಕಾಂತಿಯ ಮೂಲವೆಂದು ಹೇಳಬಹುದು. ಕೆಲವರಲ್ಲಿ ಕಾಣುವ ಸಹಜ ಆಕರ್ಷಣೆ, ಅವರ ಮಾತಿನ ಪ್ರಭಾವ, ಮತ್ತು ಸಾನ್ನಿಧ್ಯದ ಶಾಂತತೆ ಇವೆಲ್ಲವೂ ಬಲವಾದ ಓಜಸ್ಸಿನ ಪ್ರತಿಬಿಂಬಗಳಾಗಿವೆ. ಓಜಸ್ ಸಮೃದ್ಧವಾಗಿದ್ದಾಗ ವ್ಯಕ್ತಿ ಕೇವಲ ಆರೋಗ್ಯವಾಗಿರುವುದಲ್ಲ; ಆತನು ಸುತ್ತಮುತ್ತಲಿನವರಿಗೂ ಸಕಾರಾತ್ಮಕ ಶಕ್ತಿ ನೀಡುವವನಾಗುತ್ತಾನೆ.

ಇಂದಿನ ವೇಗದ ಜೀವನಶೈಲಿಯಲ್ಲಿ, ನಾವು ಈ ಮೂಲಭೂತ ತತ್ವವನ್ನು ಬಹುಮಟ್ಟಿಗೆ ನಿರ್ಲಕ್ಷಿಸುತ್ತಿದ್ದೇವೆ. ಅತಿಯಾದ ಕೆಲಸದ ಒತ್ತಡ, ಅಸಮರ್ಪಕ ಆಹಾರ ಪದ್ಧತಿ, ಸಂಸ್ಕರಿಸಿದ ಆಹಾರಗಳ ಬಳಕೆ, ನಿದ್ರಾಭಾವ ಮತ್ತು ನಿರಂತರ ಮಾನಸಿಕ ಚಿಂತನೆ– ಇವುಗಳೆಲ್ಲವೂ ಓಜಸ್ಸನ್ನು ನಿಧಾನವಾಗಿ ಕುಗ್ಗಿಸುತ್ತವೆ. ವಿಶೇಷವಾಗಿ, ರಾತ್ರಿ ಜಾಗರಣೆ ಮತ್ತು ಉಪಕರಣಗಳ ಅತಿಯಾದ ಬಳಕೆ ದೇಹದ ನೈಸರ್ಗಿಕ ಚಕ್ರವನ್ನು ಹಾನಿಗೊಳಿಸಿ ಓಜಸ್ ಕುಗ್ಗುವಿಕೆಗೆ ಕಾರಣವಾಗುತ್ತದೆ.ಇದರ ಪರಿಣಾಮವಾಗಿ, ದೇಹದ ರೋಗನಿರೋಧಕ ಶಕ್ತಿ ಕುಂದುತ್ತದೆ, ಸಾಮಾನ್ಯವಾಗಿ ಕಾಣದಿದ್ದ ರೋಗಗಳು ಸಹ ಸುಲಭವಾಗಿ ಕಾಣಿಸಿಕೊಳ್ಳುತ್ತವೆ. ದೌರ್ಬಲ್ಯ, ಆಲಸ್ಯ, ಮನಸ್ಸಿನ ಅಶಾಂತಿ, ನಿರಾಸಕ್ತಿ – ಇವುಗಳೆಲ್ಲ ಓಜಸ್ ಕುಗ್ಗುವಿಕೆಯ ಲಕ್ಷಣಗಳಾಗಿವೆ. ಈ ಸ್ಥಿತಿ ಮುಂದುವರಿದರೆ ದೇಹದ ಧಾತುಗಳು ದುರ್ಬಲಗೊಂಡು ಗಂಭೀರ ಕಾಯಿಲೆಗಳಿಗೆ ದಾರಿ ಮಾಡಿಕೊಡಬಹುದು.

ಓಜಸ್ಸಿನ ವಿಧಗಳು ಯಾವುವು?

ಆಯುರ್ವೇದದ ಪ್ರಕಾರ ಓಜಸ್ ಎರಡು ವಿಧಗಳಾಗಿದೆ.

1. ಪರಾ ಓಜಸ್
ಪರಾ ಓಜಸ್ ಅತ್ಯಂತ ಮಹತ್ವಪೂರ್ಣವಾದುದು. ಇದು ಜೀವದ ಮೂಲ ಆಧಾರವಾಗಿದ್ದು, ಜೀವದ ಸ್ಥಿತಿಯೇ ಇದರ ಮೇಲೆ ಅವಲಂಬಿತವಾಗಿದೆ. ಇದರ ಪ್ರಮಾಣ ಎಂಟು ಬಿಂದುಗಳಷ್ಟು ಎಂದು ವರ್ಣಿಸಲಾಗಿದ್ದು ಇದು ಹೃದಯದಲ್ಲಿ ನೆಲೆಸಿದೆ .ಇದಕ್ಕೆ ಹಾನಿಯಾದರೆ ಜೀವಾಪಾಯ ಉಂಟಾಗಬಹುದು.

2. ಅಪರಾ ಓಜಸ್
ಅಪರಾ ಓಜಸ್ ಆರೋಗ್ಯದ ನಿರ್ವಹಣೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಇದು ಅರ್ಧ ಅಂಜಲಿಯಷ್ಟು ಪ್ರಮಾಣದಲ್ಲಿದ್ದು ದೇಹದಾದ್ಯಂತ ಸಂಚರಿಸುತ್ತದೆ. ರೋಗನಿರೋಧಕ ಶಕ್ತಿ ಮತ್ತು ದೇಹಬಲ ಇದರ ಮೇಲೆ ಅವಲಂಬಿತವಾಗಿದೆ.

ಓಜಸ್ಸಿನ ಗುಣಗಳು ಯಾವುವು?

ಓಜಸ್ಸಿಗೆ ಹತ್ತು ಪ್ರಮುಖ ಗುಣಗಳನ್ನು ವಿವರಿಸಲಾಗಿದೆ:

ಗುರು – ದೇಹಕ್ಕೆ ಸ್ಥೈರ್ಯ ನೀಡುವುದು
ಶೀತ – ತಂಪನ್ನು ಕಾಪಾಡುವುದು
ಮೃದು – ಸೌಮ್ಯತೆ ನೀಡುವುದು
ಶ್ಲಕ್ಷ್ಣ – ಸರಾಗತೆ ನೀಡುವುದು
ಬಹಳ – ದಟ್ಟತೆ ಹೆಚ್ಚಿಸುವುದು
ಮಧುರ – ಪೋಷಕ ಗುಣ
ಸ್ಥಿರ – ಸ್ಥೈರ್ಯ ಕಾಪಾಡುವುದು
ಪ್ರಸನ್ನ – ಮನಸ್ಸಿನ ಶಾಂತಿ ಮತ್ತು ನಿರ್ಮಲತೆ
ಪಿಚ್ಛಿಲ – ರಕ್ಷಣಾತ್ಮಕ ಲೇಪನ
ಸ್ನಿಗ್ಧ – ಜಿಡ್ಡಿನ ಪೋಷಣೆ

ಓಜಸ್ ಕಡಿಮೆಯಾಗುವ ಕಾರಣಗಳು ಯಾವುವು?

ಕ್ರೋಧ, ಚಿಂತನೆ, ಭಯ, ದುಃಖ ಇಂತಹ ಭಾವನೆಗಳು ಓಜಸ್ಸನ್ನು ಕ್ಷೀಣಗೊಳಿಸುತ್ತವೆ.

ಅತಿಯಾದ ವ್ಯಾಯಾಮ ಮತ್ತು ಶ್ರಮವೂ ಒಂದು ಕಾರಣವಾಗುತ್ತದೆ.

ದೀರ್ಘಕಾಲ ಉಪವಾಸ
ಅಲ್ಪ ಪ್ರಮಾಣದ ಆಹಾರ
ಅಶುದ್ಧ ಮತ್ತು ಶುದ್ಧ ಆಹಾರದ ಮಿಶ್ರ ಸೇವನೆ
ಅತಿಯಾದ ಸಂಸ್ಕಾರಿತ ಮತ್ತು ಶೇಖರಿಸಿದ ಆಹಾರ
ಮದ್ಯಪಾನ
ರಾತ್ರಿ ಜಾಗರಣೆ
ಗಾಯಗಳು ಮತ್ತು ರಕ್ತಸ್ರಾವ
ದೇಹದ ಅತಿಯಾದ ಶೋಧನ
ವಿಷಪದಾರ್ಥಗಳ ಸೇವನೆ
ಸೂಕ್ಷ್ಮಜೀವಿಗಳ ಸೋಂಕು

ಓಜಸ್ಸಿನ ಕ್ಷಯದ ಲಕ್ಷಣಗಳು ಯಾವುವು?

ಆಯುರ್ವೇದದಲ್ಲಿ ಓಜಸ್ ಕುಗ್ಗುವಿಕೆ ಹಠಾತನೆ ಆಗುವುದಿಲ್ಲ; ಅದು ಹಂತ ಹಂತವಾಗಿ ಬೆಳೆಯುವ ಪ್ರಕ್ರಿಯೆಯಾಗಿದೆ. ಆಯುರ್ವೇದದಲ್ಲಿ ಓಜಸ್ ಕ್ಷಯವನ್ನು ಮೂರು ಹಂತಗಳಲ್ಲಿ ವಿವರಿಸಲಾಗಿದೆ.

1. ಮೊದಲ ಹಂತ: ಓಜೋ ವಿಸ್ರಂಸ
ಈ ಹಂತದಲ್ಲಿ ದೇಹದಲ್ಲಿ ಸೂಕ್ಷ್ಮವಾದ ಅಸಮತೋಲನಗಳು ಕಾಣಿಸಿಕೊಳ್ಳುತ್ತವೆ.

ಸಂಧಿ ವಿಶ್ಲೇಷ – ಸಂಧಿಗಳಲ್ಲಿ ನೋವು ಮತ್ತು ಬಲಹೀನತೆ

ಗಾತ್ರ ಸಾದ – ದೇಹದಲ್ಲಿ ದೌರ್ಬಲ್ಯ ಮತ್ತು ಶ್ರಮ

ದೋಷ ಚ್ಯವನ – ದೋಷಗಳ ಅಸಮತೋಲನ ಹೆಚ್ಚಾಗುವುದು

ಕ್ರಿಯಾಸನ್ನಿರೋಧ – ದೇಹದ ಸಹಜ ಕ್ರಿಯೆಗಳು ಸರಿಯಾಗಿ ನಡೆಯದಿರುವುದು

2. ಎರಡನೇ ಹಂತ: ಓಜೋ ವ್ಯಾಪತ್
ಈ ಹಂತದಲ್ಲಿ ಲಕ್ಷಣಗಳು ಹೆಚ್ಚು ಸ್ಪಷ್ಟವಾಗುತ್ತವೆ ಮತ್ತು ದೇಹದ ಮೇಲೆ ಪರಿಣಾಮ ಹೆಚ್ಚಾಗುತ್ತದೆ.

ಸ್ತಬ್ಧ ಗುರುಗಾತ್ರತಾ – ದೇಹದಲ್ಲಿ ಸ್ತಬ್ಧತೆ ಮತ್ತು ಭಾರಿತನ

ವಾತ ಶೋಫ – ವಾತದ ಹೆಚ್ಚಳದಿಂದ ಉಂಟಾಗುವ ಊತ

ವರ್ಣ ಭೇದ – ಚರ್ಮದ ಬಣ್ಣದಲ್ಲಿ ಬದಲಾವಣೆ
ಗ್ಲಾನಿ – ದೌರ್ಬಲ್ಯ ಮತ್ತು ಉತ್ಸಾಹದ ಕೊರತೆ
ತಂದ್ರಾ – ಅಲಸ್ಯ ಮತ್ತು ಇಂದ್ರಿಯಗಳ ಅಸಮರ್ಪಕ ಕಾರ್ಯ
ನಿದ್ರೆ ಅಧಿಕ್ಯ – ಅತಿಯಾದ ನಿದ್ರೆ

3. ಮೂರನೇ ಹಂತ: ಓಜೋಕ್ಷಯ
ಇದು ಅತ್ಯಂತ ಗಂಭೀರ ಹಂತವಾಗಿದ್ದು, ಜೀವಕ್ಕೆ ಅಪಾಯ ಉಂಟುಮಾಡಬಹುದು.

ಮೂರ್ಛಾ – ಅಚೇತನ ಸ್ಥಿತಿ
ಮಾಂಸ ಕ್ಷಯ – ಮಾಂಸಕೋಶಗಳ ಕುಗ್ಗುವಿಕೆ
ಮೋಹ – ಗೊಂದಲ ಮತ್ತು ಅಸ್ಪಷ್ಟ ಚಿಂತನೆ
ಪ್ರಲಾಪ – ಅಸಂಬದ್ಧ ಮಾತು
ಮರಣ – ಜೀವಾಪಾಯದ ಅಂತಿಮ ಸ್ಥಿತಿ

ಈ ರೀತಿಯಾಗಿ ಓಜಸ್ ಕುಗ್ಗುವಿಕೆ ಹಂತ ಹಂತವಾಗಿ ಬೆಳೆಯುತ್ತದೆ. ಆದ್ದರಿಂದ ಪ್ರಾರಂಭಿಕ ಲಕ್ಷಣಗಳಲ್ಲೇ ಗಮನ ನೀಡಿ, ಜೀವನಶೈಲಿ ಮತ್ತು ಆಹಾರದಲ್ಲಿ ಬದಲಾವಣೆ ಮಾಡುವುದು ಅತ್ಯಂತ ಮುಖ್ಯ. ಓಜಸ್ಸನ್ನು ಕಾಪಾಡಿಕೊಳ್ಳುವುದು ಎಂದರೆ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಆಗಿದೆ.

ಓಜಸ್ ಹೆಚ್ಚಿದಾಗ– ಓಜಸ್ ಸಮೃದ್ಧವಾಗಿದ್ದರೆ ಮನಸ್ಸಿನಲ್ಲಿ ಸಂತೋಷ ಮತ್ತು ತೃಪ್ತಿ ಉಂಟಾಗುತ್ತದೆ. ದೇಹವು ಪೋಷಿತವಾಗಿ ಬಲಿಷ್ಠವಾಗುತ್ತದೆ. ಉತ್ಸಾಹ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ.

ಓಜಸ್ಸನ್ನು ಹೆಚ್ಚಿಸುವ ವಿಧಾನಗಳು – ಓಜಸ್ ಅನ್ನು ಹೆಚ್ಚಿಸುವುದು ಎಂದರೆ ಕೇವಲ ಒಂದು ಔಷಧಿ ಅಥವಾ ಒಂದು ವಿಧಾನದಿಂದ ಸಾಧ್ಯವಲ್ಲ, ಅದು ಆಹಾರ, ಜೀವನಶೈಲಿ ಮತ್ತು ಮನಸ್ಸಿನ ಸ್ಥಿತಿಯ ಸಮನ್ವಯದಿಂದ ಸಾಧ್ಯವಾಗುವ ಪ್ರಕ್ರಿಯೆ. ಆಯುರ್ವೇದದಲ್ಲಿ ಇದನ್ನು ಆಹಾರ, ವಿಹಾರ ಮತ್ತು ವಿಚಾರ ಎಂಬ ಮೂರು ಮುಖ್ಯ ಅಂಶಗಳ ಮೂಲಕ ವಿವರಿಸಲಾಗಿದೆ.

ಆಹಾರ

ಸರಿಯಾದ ಆಹಾರವೇ ಓಜಸ್ ನಿರ್ಮಾಣದ ಮೂಲ. ಪೋಷಕ, ಸಾತ್ವಿಕ ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರಗಳನ್ನು ಸೇವಿಸುವುದು ಅತ್ಯಂತ ಮುಖ್ಯ. ಹಾಲು, ತುಪ್ಪ, ಬೆಣ್ಣೆ ಇಂತಹ ಪೋಷಕ ಆಹಾರಗಳು, ಬಾದಾಮಿ, ದ್ರಾಕ್ಷಿ, ಖರ್ಜೂರ, ಅಂಜೂರ ಇಂತಹ ಶಕ್ತಿದಾಯಕ ದ್ರವ್ಯಗಳು, ತಾಜಾ ಹಣ್ಣುಗಳು, ಸಾತ್ವಿಕ, ಮತ್ತು ತಾಜಾ ಆಹಾರ, ಸಮರ್ಪಕ ಪ್ರಮಾಣದಲ್ಲಿ, ಸಮಯಕ್ಕೆ ತಕ್ಕಂತೆ ಆಹಾರ ಸೇವನೆ.

ತಪ್ಪಿಸಬೇಕಾದವು: ಅತಿಯಾಗಿ ಒಣ, ಖಾರ , ಉಷ್ಣ , ಶೀತ, ಹಾಳಾದ ಅಥವಾ ಮರುಬಿಸಿ ಮಾಡಿದ ಆಹಾರ, ಅಸಮರ್ಪಕ ಆಹಾರ ಸಂಯೋಜನೆಗಳು.

ವಿಹಾರ

ನಿತ್ಯ ಜೀವನದಲ್ಲಿ ಅನುಸರಿಸುವ ಕ್ರಮಗಳು ಓಜಸ್ ಅನ್ನು ಬಹಳ ಮಟ್ಟಿಗೆ ಪ್ರಭಾವಿಸುತ್ತವೆ. ಸಮರ್ಪಕ ಮತ್ತು ಗಾಢ ನಿದ್ರೆ,

ನಿಯಮಿತ ಜೀವನಶೈಲಿ, ಮಿತವಾದ ವ್ಯಾಯಾಮ, ಯೋಗ ಮತ್ತು ಪ್ರಾಣಾಯಾಮ ಅಭ್ಯಾಸ, ಅಭ್ಯಂಗ ಸ್ನಾನ, ಪ್ರಕೃತಿಯೊಂದಿಗೆ ಸಂಪರ್ಕದಲ್ಲಿರುವುದು.

ತಪ್ಪಿಸಬೇಕಾದವು: ರಾತ್ರಿ ಜಾಗರಣೆ, ಅತಿಯಾದ ಶಾರೀರಿಕ ಶ್ರಮ, ಅತಿಯಾದ ವ್ಯಾಯಾಮ, ಅನಿಯಮಿತ ಜೀವನಶೈಲಿ.

ವಿಚಾರ

ಮನಸ್ಸಿನ ಸ್ಥಿತಿ ಓಜಸ್ಸಿನ ಮೇಲೆ ಅತ್ಯಂತ ಸೂಕ್ಷ್ಮವಾದ ಪ್ರಭಾವ ಬೀರುತ್ತದೆ.

ಸಕಾರಾತ್ಮಕ ಚಿಂತನೆ, ಶಾಂತ ಮನೋಭಾವ, ಧ್ಯಾನ ಮತ್ತು ಆತ್ಮಪರಿಶೀಲನೆ, ಕೃತಜ್ಞತೆ ಮತ್ತು ಸಂತೃಪ್ತಿ ಭಾವ, ಸತ್ಸಂಗ ಮತ್ತು ಉತ್ತಮ ಸಂಸರ್ಗ

ತಪ್ಪಿಸಬೇಕಾದವು: ಕ್ರೋಧ, ಭಯ, ಚಿಂತನೆ, ಅಸೂಯೆ, ದುಃಖ ಮುಂತಾದ್ ನಕಾರಾತ್ಮಕ ಭಾವನೆಗಳು.

ಆಹಾರದಿಂದ ದೇಹ ಪೋಷಿತವಾಗುತ್ತದೆ, ವಿಹಾರದಿಂದ ದೇಹ ಸಮತೋಲನದಲ್ಲಿರುತ್ತದೆ, ಮತ್ತು ವಿಚಾರದಿಂದ ಮನಸ್ಸು ಶುದ್ಧವಾಗುತ್ತದೆ. ಈ ಮೂರೂ ಒಂದಾಗುವಾಗ ಓಜಸ್ ಸಹಜವಾಗಿ ವೃದ್ಧಿಯಾಗುತ್ತದೆ. ಹೀಗಾಗಿ, ಓಜಸ್ ಅನ್ನು ಹೆಚ್ಚಿಸಲು ನಾವು ನಮ್ಮ ದಿನಚರಿಯಲ್ಲಿ ಸಣ್ಣ ಆದರೆ ಮಹತ್ವಪೂರ್ಣ ಬದಲಾವಣೆಗಳನ್ನು ತರಬೇಕು. ಇದೇ ಆರೋಗ್ಯಕರ, ಸಮೃದ್ಧ ಮತ್ತು ಶ್ರೇಷ್ಠ ಜೀವನದ ದಾರಿಯಾಗಿದೆ.

ಸ್ನೇಹಿತರೆ, ಓಜಸ್ಸೇ ಎಲ್ಲ ಜೀವಿಗಳನ್ನು ಪೋಷಿಸಿ, ಚೈತನ್ಯದಿಂದ ತುಂಬಿಸುವ ಮೂಲ ಶಕ್ತಿ. ಓಜಸ್ ಇಲ್ಲದೆ ಜೀವನವೇ ಅಸಾಧ್ಯ. ಜೀವದ ಅಸ್ತಿತ್ವ, ಸ್ಥೈರ್ಯ ಮತ್ತು ಬೆಳವಣಿಗೆಯ ಹಿಂದೆ ಇರುವ ಸೂಕ್ಷ್ಮ ತತ್ವವೇ ಓಜಸ್. ಗರ್ಭದ ನಿರ್ಮಾಣದ ಪ್ರಾರಂಭದಲ್ಲೇ ಓಜಸ್ ತನ್ನ ಪಾತ್ರವನ್ನು ಆರಂಭಿಸುತ್ತದೆ. ಗರ್ಭರೂಪದ ಪ್ರಾರಂಭಿಕ ಹಂತದಲ್ಲೇ ಇದು ಉಂಟಾಗಿ, ಗರ್ಭವನ್ನು ಪೋಷಿಸುವ ದ್ರವವಾಗಿ ಕಾರ್ಯನಿರ್ವಹಿಸುತ್ತದೆ. ಇದೇ ಓಜಸ್ ಹೃದಯದಲ್ಲಿ ಪ್ರವೇಶಿಸಿ, ಜೀವಚಟುವಟಿಕೆಗಳ ಆಧಾರವಾಗುತ್ತದೆ. ಹೀಗಾಗಿ, ಜೀವದ ಆರಂಭದಿಂದಲೇ ಓಜಸ್ ಅತಿ ಮುಖ್ಯ ಸ್ಥಾನವನ್ನು ಹೊಂದಿದೆ. ಓಜಸ್ ನಷ್ಟವಾಗುವುದು ಎಂದರೆ ಜೀವಶಕ್ತಿಯ ನಷ್ಟವಾಗುವುದೇ ಆಗಿದೆ. ಆದ್ದರಿಂದಲೇ ಆಯುರ್ವೇದದಲ್ಲಿ ಓಜಸ್ ಅನ್ನು ಜೀವದ ಆಧಾರವೆಂದು ಪರಿಗಣಿಸಲಾಗಿದೆ. ಇದು ಹೃದಯದಲ್ಲಿ ನೆಲೆಸಿದ್ದು, ದೇಹದ ಎಲ್ಲ ಕಾರ್ಯಗಳನ್ನು ನಿರಂತರವಾಗಿ ಪೋಷಿಸಿ, ಜೀವವನ್ನು ಧಾರಣೆ ಮಾಡುತ್ತದೆ.

ಓಜಸ್ ದೇಹದ ಎಲ್ಲ ಧಾತುಗಳ ಸಾರವಾಗಿದೆ. ರಸದಿಂದ ಶುಕ್ರದವರೆಗೆ ಎಲ್ಲ ಧಾತುಗಳು ಸಮರ್ಪಕವಾಗಿ ಪೋಷಿತವಾದಾಗ, ಅವುಗಳ ಅಂತಿಮ ಮತ್ತು ಸೂಕ್ಷ್ಮ ರೂಪವಾಗಿ ಓಜಸ್ ಉಂಟಾಗುತ್ತದೆ. ಹೀಗಾಗಿ, ಓಜಸ್ಸು ದೇಹದ ಸಮಗ್ರ ಪೋಷಣೆಯ ಪ್ರತೀಕವಾಗಿದೆ. ಈ ಜೀವಚೈತನ್ಯವು ಓಜಸ್ ನಿಂದಲೇ ವ್ಯಕ್ತವಾಗುತ್ತದೆ. ದೇಹದಲ್ಲಿ ಕಾಣುವ ಉತ್ಸಾಹ, ಕಾಂತಿ, ಚೈತನ್ಯ ಮತ್ತು ಪ್ರೇರಣೆ ಇವೆಲ್ಲವೂ ಓಜಸ್ಸಿನ ಪ್ರಭಾವದ ಫಲಗಳು.

ಓಜಸ್ ತನ್ನ ಕಾರ್ಯವನ್ನು ದೇಹದ ವಿವಿಧ ಭಾಗಗಳಿಗೆ ತಲುಪಿಸಲು ಹೃದಯಕ್ಕೆ ಸಂಬಂಧಿಸಿದ ದಶ ಧಮನಿಗಳ ಮೂಲಕ ಸಂಚರಿಸುತ್ತದೆ. ಈ ಧಮನಿಗಳು ಓಜಸ್‌ನ ಹರಿವಿಗೆ ಮಾರ್ಗಗಳಾಗಿ ಕೆಲಸ ಮಾಡುತ್ತವೆ. ಆದ್ದರಿಂದ, ಹೃದಯ ಮತ್ತು ಈ ಧಮನಿಗಳ ಸಮರ್ಪಕ ಕಾರ್ಯಚಟುವಟಿಕೆಗಳು ಜೀವದ ನಿರ್ವಹಣೆಯಲ್ಲಿ ಅತ್ಯಂತ ಮುಖ್ಯವಾಗಿವೆ.

ಒಟ್ಟಿನಲ್ಲಿ, ಓಜಸ್ ಜೀವದ ಸಾರ, ಪೋಷಣೆಯ ಮೂಲ ಮತ್ತು ಜೀವಚೈತನ್ಯದ ಆಧಾರವಾಗಿದೆ. ಇದನ್ನು ಕಾಪಾಡಿಕೊಳ್ಳುವುದೇ ಆರೋಗ್ಯಕರ ಮತ್ತು ಸಮತೋಲನಯುತ ಜೀವನದ ಕೀಲಿಕೈ.

ಓಜಸ್ವೀ ಭವ ಎಂಬ ಆಶೀರ್ವಾದವು ಕೇವಲ ಮಾತಲ್ಲ, ಅದು ಸಮಗ್ರ ಜೀವನದ ಪರಿಪೂರ್ಣತೆಗೆ ದಾರಿ ತೋರಿಸುವ ತತ್ವವಾಗಿದೆ.

ಅಭಿಮತ

ಶಿವರಾಜ ಸೂ. ಸಣಮನಿ

ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಕುಸಿತದ ಬೆತ್ತಲೆ ಸತ್ಯ

ಪ್ರತಿ ವರ್ಷ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾದಾಗಲೂ ಕರಾವಳಿಯ ಜಿಲ್ಲೆಗಳು ಸಂಭ್ರಮದ ಮಳೆಯಲ್ಲಿ ನೆನೆಯುತ್ತಿದ್ದರೆ, ಇತ್ತ ಕಲ್ಯಾಣ ಕರ್ನಾಟಕದ ಯಾದಗಿರಿ, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳು ಫಲಿತಾಂಶದ ಪಟ್ಟಿಯ ತಳದಲ್ಲಿ ನಿಂತು ತಲೆತಗ್ಗಿಸುತ್ತವೆ. ಮಾಧ್ಯಮಗಳು ಇದನ್ನು ಕೇವಲ ಶೈಕ್ಷಣಿಕ ಹಿನ್ನಡೆ ಎಂದು ವ್ಯಾಖ್ಯಾನಿಸಿ, ಒಂದೆರಡು ದಿನ ಚರ್ಚೆ ನಡೆಸಿ ಕೈತೊಳೆದುಕೊಳ್ಳುತ್ತವೆ. ವಾಸ್ತವದಲ್ಲಿ, ಈ ಕೊನೆಯ ಸ್ಥಾನ ವಿದ್ಯಾರ್ಥಿ ಗಳ ಬೌದ್ಧಿಕ ದಿವಾಳಿತನವಲ್ಲ. ಇದು ದಶಕಗಳಿಂದ ನಮ್ಮ ನಡುವೆಯೇ ಬೇರೂರಿರುವ ವ್ಯವಸ್ಥಿತ ನಿರ್ಲಕ್ಷ್ಯದ 'ಸಾಮಾಜಿಕ ಮರಣೋತ್ತರ ಪರೀಕ್ಷೆ'ಯ ವರದಿಯಾಗಿದೆ.

ಯಾದಗಿರಿ, ಕಲಬುರಗಿ ಮತ್ತು ರಾಯಚೂರಿನ ತರಗತಿಗಳ ಖಾಲಿ ಬೆಂಚುಗಳನ್ನು ದಿಟ್ಟಿಸಿ ನೋಡಿದರೆ, ಅಲ್ಲಿ ದಡ್ಡತನವಿಲ್ಲ, ಬದಲಾಗಿ ಹಸಿವು, ಅಸಹಾಯಕತೆ ಮತ್ತು ಬದುಕಿನ ಹೋರಾಟ ಎದ್ದು ಕಾಣುತ್ತದೆ. ಶೈಕ್ಷಣಿಕ ಕುಸಿತದ ಅಸಲಿ ಬೇರುಗಳು ಯಾವುದೇ ಒಂದು ಪ್ರದೇಶದ ಶೈಕ್ಷಣಿಕ ಹಿನ್ನಡೆಯನ್ನು ಕೇವಲ ಪಠ್ಯಪುಸ್ತಕಗಳ ಗುಣಮಟ್ಟದಿಂದಾಗಲಿ ಅಥವಾ ಬೋಧನಾ ವಿಧಾನದಿಂದಾಗಲಿ ಅಳೆಯುವುದು ಮೇಲ್ನೋಟದ ತೀರ್ಮಾನವಾಗುತ್ತದೆ. ಆದರೆ, ಅದರ ಅಸಲಿ ಕಾರಣಗಳನ್ನು ಅಲ್ಲಿನ ಸಾಮಾಜಿಕ ಸ್ಥಿತಿಗತಿಗಳಲ್ಲಿ ಹುಡುಕಬೇಕಾಗುತ್ತದೆ. ಕಲ್ಯಾಣ ಕರ್ನಾಟಕದ ಪಿಯುಸಿ ಫಲಿತಾಂಶದ ರಕ್ತಹೀನತೆಗೆ ಕಾರಣವಾಗಿರುವ ಪ್ರಮುಖ ಸಾಮಾಜಿಕ ರೋಗಲಕ್ಷಣಗಳು ಎಂದರೆ ಬರಗಾಲ ಮತ್ತು ಗುಳೆ. ಮಳೆಯಾಶ್ರಿತ ಕೃಷಿಯನ್ನೇ ನಂಬಿರುವ ಈ ಭಾಗದಲ್ಲಿ ಬರಗಾಲವೆಂಬುದು ಕರೆಯದೆ ಬರುವ ಅತಿಥಿ. ಜಮೀನುಗಳು ಬಿರುಕು ಬಿಟ್ಟಾಗ, ಬದುಕು ಕಟ್ಟಿಕೊಳ್ಳಲು ಇಡೀ ಕುಟುಂಬ ಬೆಂಗಳೂರು, ಮುಂಬೈ, ಪುಣೆ ಗಳತ್ತ 'ಗುಳೆ' ಹೊರಡುತ್ತದೆ. ತಂದೆ-ತಾಯಿಯ ಬೆನ್ನೇರಿ ಗುಳೆ ಹೋಗುವ ಮಕ್ಕಳ ಭವಿಷ್ಯವು, ಬಸ್ಸಿನ ಟಾಪ್‌ಲ್ಲಿ ಕಟ್ಟಿದ ಗಂಟುಮೂಟೆಯಂತಾಗುತ್ತದೆ. ತಿಂಗಳುಗಟ್ಟಲೆ ಶಾಲೆಗೆ ಗೈರಾಗುವ, ಊರೂರು ಅಲೆಯುವ ಮಗುವಿನಿಂದ ರ್‍ಯಾಂಕ್ ನಿರೀಕ್ಷಿಸುವುದು ವ್ಯವಸ್ಥೆಯ ಕ್ರೂರ ಹಾಸ್ಯವಲ್ಲದೆ ಮತ್ತೇನು?

ಬಡತನ ಮತ್ತು ಸಾಲದ ಶೂಲ: ಆರ್ಥಿಕ ಭದ್ರತೆ ಇಲ್ಲದ ಮನೆಯಲ್ಲಿ, ಶಿಕ್ಷಣವೆಂಬುದು ಇಂದಿಗೂ ಗಗನ ಕುಸುಮವಾಗಿದೆ. ಸಾಲದ ಸುಳಿಗೆ ಸಿಲುಕಿದ ರೈತ ನೇಣಿಗೆ ಶರಣಾದರೆ, ಆ ಮನೆಯ ಮಗನ ಕೈಯಲ್ಲಿ ಪೆನ್ನಿನ ಬದಲು ಗುದ್ದಲಿ, ಸಲಿಕೆ ಬಂದು ಸೇರುತ್ತವೆ. **ಸರಾಯಿ:** ಈ ಭಾಗದ ಹಳ್ಳಿಗಳನ್ನು ಕಾಡುತ್ತಿರುವ ಬಹುದೊಡ್ಡ ಪಿಡುಗು ಮದ್ಯವ್ಯಸನ. ಅಪ್ಪನ ಕುಡಿತದ ಚಟಕ್ಕೆ, ಮನೆಯ ನೆಮ್ಮದಿ ಮಾತ್ರವಲ್ಲ, ಮಕ್ಕಳ ಅಕ್ಷರಗಳೂ ಬಲಿಯಾಗುತ್ತಿವೆ. ಬಾಲಕಾರ್ಮಿಕ **ಪದ್ಧತಿ ಮತ್ತು ಅನಕ್ಷರತೆ:** ಪೋಷಕರಲ್ಲಿರುವ ಅನಕ್ಷರತೆಯಿಂದಾಗಿ ಶಿಕ್ಷಣದ ಮಹತ್ವ ಮುಂದಿನ ಪೀಳಿಗೆಗೆ ಸರಿಯಾಗಿ ದಾಟುತ್ತಿಲ್ಲ. **ಬಾಲ್ಯ ವಿವಾಹದ ಬೇಡಿ:** ಹೆಣ್ಣುಮಕ್ಕಳ ಪಾಲಿಗೆ ಶಿಕ್ಷಣವೆಂಬುದು ಇಂದಿಗೂ ತ್ರಿಶಂಕು ಸ್ಥಿತಿ. ಪ್ರತಿಭಾವಂತ ಹೆಣ್ಣುಮಕ್ಕಳನ್ನು ಪರೀಕ್ಷಾ ಕೊಠಡಿಯಿಂದ ನೇರವಾಗಿ ಹಸೆಮಣೆಗೆ ಎಳೆತರುತ್ತಿದೆ. ಇದು ಅಂಕಗಳ ಕೊರತೆಯಲ್ಲ, ಅನ್ನದ ಕೊರತೆ; ಇದು ಬುದ್ಧಿಯ ಕೊರತೆ ಯಲ್ಲ, ಬದುಕಿನ ಭದ್ರತೆಯ ಕೊರತೆ. ವ್ಯವಸ್ಥೆಯ ಕನ್ನಡಿಯೊಳಗಿನ ಗಂಟು 371(ಜೆ) ಕಲಂ ಅಡಿಯಲ್ಲಿ ವಿಶೇಷ ಸ್ಥಾನಮಾನ ಸಿಕ್ಕಿದ್ದರೂ, ಅದು ಬಹುಪಾಲು ಉದ್ಯೋಗ ಮತ್ತು ನೇಮಕಾತಿಯ ಮೀಸಲಾ ತಿಗೆ ಸೀಮಿತವಾಗಿದೆಯೇ ಹೊರತು, ತಳಮಟ್ಟದ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿಲ್ಲ. ಶಾಲೆಗಳಿಗೆ ಬಣ್ಣ ಬಳಿದರೆ, ಸ್ಮಾರ್ಟ್ ಕ್ಲಾಸ್ ತಂದರೆ ಶಿಕ್ಷಣ ಸುಧಾರಿಸುವುದಿಲ್ಲ. ಪಾಠ ಕೇಳುವ ಮಗುವಿನ ಹೊಟ್ಟೆಯಲ್ಲಿ ಅನ್ನ, ಕಣ್ಣಿನಲ್ಲಿ ಭರವಸೆ ಇರಬೇಕು.

ತರಗತಿಗಳಿಗೆ ಗೈರಾಗುವ ವಿದ್ಯಾರ್ಥಿಗಳನ್ನು ಕೇವಲ ಹಾಜರಾತಿ ಪುಸ್ತಕದಲ್ಲಿ ಗೈರು ಎಂದು ಗುರುತಿಸುವ ಬದಲು, ಅವರು ಏಕೆ ಗೈರಾಗಿದ್ದಾರೆ ಎಂಬ 'ಮೂಲ ಕಾರಣ'ವನ್ನು ಹುಡುಕುವ ಸಾಮಾಜಿಕ ಕಾಳಜಿ ನಮ್ಮ ಶಿಕ್ಷಣ ವ್ಯವಸ್ಥೆಗೆ ಬೇಕಿದೆ. ಈ ಕಳಪೆ ಫಲಿತಾಂಶವನ್ನು ಬದಲಾಯಿಸಲು ಕೇವಲ ಪರೀಕ್ಷಾ ಸಮಯದಲ್ಲಿ 'ವಿಶೇಷ ತರಗತಿ'ಗಳನ್ನು ತೆಗೆದುಕೊಂಡರೆ ಸಾಲದು; ವರ್ಷಪೂರ್ತಿ 'ವಿಶೇಷ ಕಾಳಜಿ'ಯನ್ನು ತೆಗೆದುಕೊಳ್ಳಬೇಕಿದೆ. ಕಲ್ಯಾಣ ಕರ್ನಾಟಕದ ನೆಲದಲ್ಲಿ ಪ್ರತಿಭೆಗೆ ಕೊರತೆಯಿಲ್ಲ. ಈ ನೆಲದ ಮಕ್ಕಳಿಗೆ ಬೇಕಾಗಿ ರುವುದು ಅನುಕಂಪವಲ್ಲ, ಸಮಾನ ಅವಕಾಶ. ಅವರ ಕಾಲಿಗೆ ಕಟ್ಟಿರುವ ಬಡತನ, ಗುಳೆ, ಮತ್ತು ಸಾಲದ ಸರಪಳಿಗಳನ್ನು ತುಂಡ ರಿಸಿದರೆ, ನಾಳೆ ಅದೇ ಮಕ್ಕಳು ಫಲಿತಾಂಶದ ಪಟ್ಟಿಯಲ್ಲಿ ಶಿಖರವೇರಿ ನಿಲ್ಲಬಲ್ಲರು. ಆ ದಿನವೇ ನಿಜವಾದ 'ಕಲ್ಯಾಣ' ಕರ್ನಾಟಕದ ಉದಯ.

ಸಿಎಸ್‌ಇಎಲ್ ಸಂವಹನ ಸಾಧನ: ಸಮರ ಸೈನಿಕರ ಸಂಜೀವಿನಿ!

ರಾಯಲ್‌ಸೀಮೆ

ರವೀ ಸಜಂಗದ್ದೆ
vveditoped@gmail.com

ನಮಗೆ ಒಮ್ಮೊಮ್ಮೆ ಎಷ್ಟೊಂದು ಮರೆವು ಎಂದರೆ ಕನ್ನಡಕ ಎಲ್ಲಿ ಇಟ್ಟಿದ್ದೇವೆ? ಆಗಷ್ಟೇ ನೋಡಿದ ಮೊಬೈಲ್ ಎಲ್ಲಿ ಕುಕ್ಕಿದ್ದೇವೆ? ಸ್ಕೂಟರ್ ಕೀ ಅದಕ್ಕೇ ಬಿಟ್ಟಿದ್ದೇವೆಯೇ ಅಲ್ಲ ಪ್ಯಾಂಟ್ ಕಿಸೆಯಲ್ಲಿಟ್ಟು ಅದಾಗಲೇ ಅದು ವಾಷಿಂಗ್ ಮೆಷಿನ್‌ನಲ್ಲಿ ತಿರುಗುತ್ತಿದೆಯೇ? ಓದಬೇಕು ಎಂದು ವಾರಗಳ ಹಿಂದೆ ಎತ್ತಿಟ್ಟಿದ್ದ ಪುಸ್ತಕ ಈಗ ಎಷ್ಟು ಹುಡುಕಿದರೂ ಕಣ್ಣಿಗೆ ಬೀಳುತ್ತಿಲ್ಲವಲ್ಲ? ಹೀಗೆ ಸಣ್ಣಪುಟ್ಟ ವಸ್ತುಗಳನ್ನು ಹುಡುಕಲು ಆಗೀಗ ಹರಸಾಹಸ ಪಡುತ್ತಿರುತ್ತೇವೆ! ಇನ್ನು ಗೂಗಲ್ ಮ್ಯಾಪ್ ಹಾಕಿ ಯಾವುದೋ ಪರಿಚಯವಿಲ್ಲದ ಪ್ರದೇಶ ಇನ್ನೇನು ತಲುಪಿತು ಎನ್ನುವಾಗ ಎಡ-ಬಲ ಗೊತ್ತಾಗದೆ ಪೇಚಾಡುವ, ಹಲವು ಬಾರಿ 'ರೀ ರೂಟ್' ಆಗಿ ಅಲ್ಲೇ ಗಿರಕಿ ಹೊಡೆದ ಅನುಭವ ಬಹುತೇಕ ನಮಗೆಲ್ಲ ಆಗಿರುತ್ತದೆ. ಇಂಥಾ ಸಣ್ಣಪುಟ್ಟ ಜಂಜಾಟ-ಹುಡುಕಾಟಗಳ ನಡುವೆ, ವೈರಿ ದೇಶದಲ್ಲಿ ಕಣ್ಮರೆಯಾದ ಸೈನಿಕರನ್ನು ಅವರಿದ್ದ ದುರ್ಗಮ ಪ್ರದೇಶಕ್ಕೆ ಹೋಗಿ, ಜೀವಂತವಾಗಿ ಕರೆದುಕೊಂಡು ಬರಲು ಸಹಕಾರಿಯಾಗುವ ಉಪಯುಕ್ತ ಸಾಧನವೊಂದರ ಕುರಿತ ಇಂಟರೆಸ್ಟಿಂಗ್ ವಿಚಾರಗಳು ಇಲ್ಲಿವೆ!

ಯುದ್ಧ ಎಂದರೆ ಶಸ್ತ್ರಾಸ್ತ್ರಗಳ ಅಬ್ಬರ, ಕ್ಷಿಪಣಿಗಳ ಆರ್ಭಟ ಮತ್ತು ಸಾವು-ನೋವುಗಳು ಮಾತ್ರವಲ್ಲ. ಸಾಹಸ, ಬದುಕುಳಿಯುವ ಛಲ ಮತ್ತು ತಂತ್ರಜ್ಞಾನದ ಪರಾಕಾಷ್ಠೆಯನ್ನು ಒರೆಗೆ ಹಚ್ಚುವ ಅಗ್ನಿಪರೀಕ್ಷೆಯ ರಣರಂಗವದು! ಶತ್ರು ರಾಷ್ಟ್ರದ ಪ್ರದೇಶವನ್ನು ಪ್ರವೇಶಿಸಿ, ಅವರದ್ದೇ ನೆಲದಲ್ಲಿ ಪತನಗೊಂಡ ತಮ್ಮ ಯುದ್ಧ ವಿಮಾನದ ಪೈಲಟ್‌ಗಳನ್ನು ಜೀವಂತವಾಗಿ ರಕ್ಷಿಸಿಕೊಂಡು ಬರಲು ಸಾಧ್ಯ ಎಂದಾದರೆ, ಅದು ಯಾವುದೇ ಹಾಲಿವುಡ್ ಸಿನಿಮಾದ ರೋಚಕ ಕಥೆಯನ್ನೂ ಮೀರಿಸುವಂತಹ ವಾಸ್ತವ! ಇತ್ತೀಚೆಗೆ ಇರಾನ್‌ನಲ್ಲಿ ಅಮೆರಿಕದ ಸೇನೆ ನಡೆಸಿದ ಸಾಹಸಮಯ ಕಾರ್ಯಾಚರಣೆ ಹುಬ್ಬೇರಿಸುವಂತೆ, ಜಗತ್ತು ಬೆರಗಾಗುವಂತೆ, ಜಗತ್ತು ಅಚ್ಚರಿ ಪಡುವಂತೆ ಮಾಡಿದೆ. ಶತ್ರು ಪಡೆಗಳ ಹದ್ದಿನ ಕಣ್ಣು, ಪ್ರತಿಕೂಲ ಹವಾಮಾನ, ಕಠಿಣ ಭೌಗೋಳಿಕ ಸವಾಲುಗಳು, ಗೊತ್ತಿರದ ಜಾಗ ಮತ್ತು ಒತ್ತಡಗಳ ನಡುವೆ, ಅಮೆರಿಕ ತನ್ನ ಇಬ್ಬರು ಪೈಲಟ್‌ಗಳನ್ನು ರಕ್ಷಿಸಿದ ಈ ಸಾಹಸಗಾಥೆಯ ಹಿಂದಿರುವುದು 'ಕಾಂಬಾಟ್ ಸರ್ವೈವರ್ ಇವೇಡರ್ ಲೊಕೇಟರ್' (CSEL) ಹೆಸರಿನ ಅತ್ಯಾಧುನಿಕ ತಂತ್ರಜ್ಞಾನ ವ್ಯವಸ್ಥೆ!

ಏನಾಯಿತು? ಶತ್ರುನೆಲದ ಮೃತ್ಯುಕೂಪದಲ್ಲಿ ಯುದ್ಧ ವಿಮಾನದ ಪತನ ಇರಾನ್‌ನ ಅತ್ಯಂತ ಅಪಾಯಕಾರಿ ಹಾಗೂ ದುರ್ಗಮ ಪ್ರದೇಶಗಳಲ್ಲೊಂದಾದ ಜಾಗ್ರೋಸ್ ಪರ್ವತ ಶ್ರೇಣಿಗಳ ನಡುವಲ್ಲಿ ಇರಾನಿನ ದಾಳಿಗೆ ಅಮೆರಿಕದ "F&15E ಸ್ಟ್ರೈಕ್ ಈಗಲ್' ಯುದ್ಧ ವಿಮಾನ ಪತನಗೊಂಡಿತು. ಆ ಸಂದರ್ಭದಲ್ಲಿ ವಿಮಾನದಿಂದ ಇಬ್ಬರು ಪೈಲಟ್‌ಗಳು ಪ್ರಾಣ ರಕ್ಷಣೆಗಾಗಿ ಪ್ಯಾರಾಚೂಟ್ ಮೂಲಕ ಸ್ವಯಂ ಇಜೆಕ್ಟ್ ಆಗಿ ಶತ್ರು ನೆಲದೊಳಗೆ ಅನಿವಾರ್ಯವಾಗಿ ಇಳಿಯಬೇಕಾಯಿತು! ಯುದ್ಧ ವಿಮಾನವನ್ನು ಕಳಕೊಳ್ಳುವುದದ ಜತೆಗೆ ಇಬ್ಬರು ಯೋಧರು ಶತ್ರುಗಳ ಭದ್ರಕೋಟೆಯೊಳಗೆ ಬಿದ್ದು, ಅವರನ್ನೂ ಕಳಕೊಳ್ಳಬೇಕಾದ ಪರಿಸ್ಥಿತಿ ಅಮೆರಿಕಗೆ ಬಂದೊದಗಿತು. ಇದರಲ್ಲಿ 'ಒಬ್ಬ ಪೈಲಟ್ ಅನ್ನು ಜೀವಂತವಾಗಿ ಸೆರೆಹಿಡಿಯಲಾಗಿದೆ' ಎಂದು ಇರಾನ್ ಘೋಷಿಸಿತು ಮತ್ತು ಅಮೆರಿಕ ಕೂಡ 'ನಮ್ಮಿಬ್ಬರು ಪೈಲಟ್‌ಗಳ ಶೋಧ ಮತ್ತು ರಕ್ಷಣಾ ಕಾರ್ಯ ನಡೆಯುತ್ತಿದೆ' ಎಂದು ಪ್ರತಿಕ್ರಿಯಿಸಿತು.

ಈ ಇಬ್ಬರೂ ಪೈಲಟ್‌ಗಳನ್ನು ರಕ್ಷಿಸುವ ಕಾರ್ಯಾಚರಣೆಯ ರೂಪುರೇಷೆ ಗೌಪ್ಯವಾಗಿ ಸಿದ್ಧವಾಗಿ ನುರಿತ ತಂಡ ಫೀಲ್ಡಿಗಿಳಿಯಿತು! ದುರ್ಘಟನೆ ನಡೆದ ಕೆಲವೇ ಗಂಟೆಗಳೊಳಗೆ ಅಮೆರಿಕದ ವಿಶೇಷ ರಕ್ಷಣಾ ಪಡೆಗಳು ಹೆಲಿಕಾಪ್ಟರ್‌ಗಳ ಮೂಲಕ ಮಿಂಚಿನ ದಾಳಿ ನಡೆಸಿ, ಮೊದಲ ಪೈಲಟ್‌ಅನ್ನು ಯಶಸ್ವಿಯಾಗಿ ರಕ್ಷಿಸಿದವು. ಈ ಕಾರ್ಯಾಚರಣೆ ಪೂರ್ಣಗೊಳ್ಳುವಷ್ಟರಲ್ಲಿ ಶತ್ರುಪಡೆಗಳು ಎಚ್ಚೆತ್ತುಕೊಂಡಿದ್ದವು. ಪತನಗೊಂಡ ವಿಮಾನದಿಂದ ಇಜೆಕ್ಟ್ ಆಗಿದ್ದ ಮತ್ತೊರ್ವ ಪೈಲಟ್ ಅದ್ಹೇಗೋ ಶತ್ರು ಸೈನ್ಯದ ಕಣ್ತಪ್ಪಿಸಿ, ದಟ್ಟ ಪರ್ವತ ಪ್ರದೇಶದಲ್ಲಿ ಅಡಗಿಕೊಳ್ಳಬೇಕಾಯಿತು. ಇರಾನ್ ಸೇನೆ ಮತ್ತು ಸ್ಥಳೀಯರು ಆತನನ್ನು ಜೀವಂತವಾಗಿ ಸೆರೆಹಿಡಿಯಲು ಇಡೀ ಪ್ರದೇಶವನ್ನು ಜಾಲಾಡಲಾರಂಭಿಸಿದರು. ಪ್ರತಿ ಸೆಕೆಂಡ್ ಕೂಡ ಆತನ ಜೀವಕ್ಕೆ ಕುತ್ತು ತರುವಂತಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ, ಬಹುತೇಕ 48 ಗಂಟೆಗಳ ಕಾಲ ಸಾವಿನೊಂದಿಗೆ ಕಣ್ಣುಮುಚ್ಚಾಲೆ ಆಡಿದ ಆತನಿಗೆ ಆಶಾಕಿರಣವಾದದ್ದು, ಪುನರ್ಜನ್ಮ ನೀಡಿದ್ದು ಆತನ ಬಳಿಯಿದ್ದ CSEL ಹೆಸರಿನ ಈ ಪುಟ್ಟ, ಜೀವ ರಕ್ಷಕ ಸಾಧನ!

ಇರಾನಿನಲ್ಲಿ ಇಳಿದು ಅನಾಥನಾಗಿದ್ದ ಎರಡನೆಯ ಸೈನಿಕ ತನ್ನಲ್ಲಿರುವ ಈ ಸಾಧನದ ಮೂಲಕ ತಾನು ಎಲ್ಲಿದ್ದೇನೆ, ತನ್ನ ದೈಹಿಕ ಪರಿಸ್ಥಿತಿ ಹೇಗಿದೆ ಮತ್ತು ಸುತ್ತಮುತ್ತಲಿನ ಶತ್ರು ಸೈನಿಕರ ಚಲನವಲನಗಳ ಕುರಿತು ಅತ್ಯಂತ ಮಹತ್ವದ ಮಾಹಿತಿಯನ್ನು ಅಮೆರಿಕದ ರಕ್ಷಣಾ ಕೇಂದ್ರಕ್ಕೆ ನಿರಂತರವಾಗಿ ರವಾನಿಸುತ್ತಿದ್ದನು. ಹೀಗಾಗಿ ಆತನಿರುವ ಜಾಗ ಪತ್ತೆಹಚ್ಚಿ ರಕ್ಷಿಸಲು ಅಮೆರಿಕ ಪಡೆಗೆ ಸಾಧ್ಯವಾಯಿತು.

48 ಗಂಟೆಗಳ ರೋಚಕ ರಕ್ಷಣಾ ಕಾರ್ಯಾಚರಣೆ!

ಪತನಗೊಂಡ ಪೈಲಟ್ ನೀಡುತ್ತಿದ್ದ ಮಾಹಿತಿ ಆಧಾರದ ಮೇಲೆ, ಅಮೆರಿಕನ್ ಕಮಾಂಡೋಗಳು ಮಿಲಿಟರಿ ಇತಿಹಾಸದಲ್ಲೇ ಅತ್ಯಂತ ಸಾಹಸಮಯ, ಅಪಾಯಕಾರಿ ರಕ್ಷಣಾ ಕಾರ್ಯಾಚರಣೆಯ ನೀಲ ನಕ್ಷೆಯನ್ನು ಸಿದ್ಧಪಡಿಸಿ ಅಖಾಡಕ್ಕಿಳಿದರು. ಇರಾನ್‌ನ ಬಲಿಷ್ಠ ಕಣ್ಗಾವಲಿನ ವಾಯುಪ್ರದೇಶವನ್ನು ಭೇದಿಸಿ, ಯಾವುದೇ ಸುಳಿವು ನೀಡದೆ ಒಳನುಗ್ಗುವುದು ಅಸಾಧ್ಯವಾಗಿತ್ತು. 'ನಮ್ಮವರನ್ನು ಎಂದಿಗೂ ಹಿಂದೆ ಬಿಡುವುದಿಲ್ಲ' (Leave No Man Behind) ಎಂಬ ಅಮೆರಿಕನ್ ಸೇನೆಯ ದೃಢ ಸಂಕಲ್ಪ ಈ ಕ್ಲಿಷ್ಟಕರ ಕಾರ್ಯಾಚರಣೆಗೆ ಮುನ್ನುಡಿ ಬರೆಯಿತು. A&10 ಥಂಡರ್ಬೋಲ್ಟ್ ಯುದ್ಧ ವಿಮಾನಗಳು ಮತ್ತು ಶಸ್ತ್ರಸಜ್ಜಿತ ಡ್ರೋನ್‌ಗಳು ಈ ರಕ್ಷಣಾ ಕಾರ್ಯಾಚರಣೆಗೆ ಧುಮುಕಿದವು. ಒಂದು ಕಡೆ ಇರಾನ್ ಸೈನ್ಯವು ಅಮೆರಿಕದ ಪೈಲಟ್ ಅನ್ನು ಹುಡುಕುತ್ತಾ ಪರ್ವತವನ್ನು ಸುತ್ತುವರೆದರೆ, ಮತ್ತೊಂದೆಡೆ ಈ CSEL ಸಾಧನ ನೀಡಿದ ನಿಖರ ಮಾಹಿತಿ-ಮಾರ್ಗದರ್ಶನದೊಂದಿಗೆ ಅಮೆರಿಕದ ವಿಶೇಷ ಪಡೆಗಳ ಹೆಲಿಕಾಪ್ಟರ್‌ಗಳು (HH&60) ಕತ್ತಲನ್ನು ಸೀಳಿಕೊಂಡು ಜಾಗ್ರೋಸ್ ಪರ್ವತ ಶ್ರೇಣಿಯನ್ನು ತಲುಪಿದವು. ಭಾರೀ ದಾಳಿ-ಪ್ರತಿದಾಳಿಯ ನಡುವೆ, ಅಮೆರಿಕ ಕಮಾಂಡೋಗಳು ಶತ್ರುಗಳನ್ನು ಕಂಗೆಡಿಸುವಲ್ಲಿ ಯಶಸ್ವಿಯಾದರಲ್ಲ, CSEL ಸಾಧನದ ಸಂಕೇತಗಳನ್ನು ಹಿಂಬಾಲಿಸಿ, ನಿರ್ದಿಷ್ಟ ಜಾಗವನ್ನು ತಲುಪಿದ ರಕ್ಷಣಾ ಪಡೆ, ತಮ್ಮ ಪೈಲಟ್ನನ್ನು ಸುರಕ್ಷಿತವಾಗಿ ಹೆಲಿಕಾಪ್ಟರ್‌ಗೆ ಹತ್ತಿಸಿಕೊಂಡು ಕುವೈತ್ ದೇಶದಲ್ಲಿ ಜಂಭದಿಂದ ಬಂದಿಳಿಯಿತು! ಈ ರೋಚಕ ಕಾರ್ಯಾಚರಣೆ 48 ಗಂಟೆಗಳೊಳಗೆ ಯಶಸ್ವಿಯಾಗಿ ಪೂರ್ಣವಾಯಿತು.

ಶತ್ರು ರಾಷ್ಟ್ರದ ಒಳನುಗ್ಗಿ, ಅವರದ್ದೇ ನೆಲದಲ್ಲಿ ಸಿಲುಕಿದ್ದ ಸೈನಿಕರನ್ನು ರಕ್ಷಿಸಿ, ಅಮೆರಿಕ ವಾಪಸ್ ಕರೆತಂದ ಈ ಘಟನೆ ಮಿಲಿಟರಿ ಇತಿಹಾಸದಲ್ಲಿ ಬಹಳ ಅಪರೂಪದ್ದು. ಮನುಷ್ಯ ಪ್ರಯತ್ನದೊಡನೆ ಅತ್ಯಾಧುನಿಕ ತಂತ್ರಜ್ಞಾನಗಳು ಜತೆಯಾದರೆ ಪವಾಡ ಸೃಷ್ಟಿಯಾಗುತ್ತದೆ ಎನ್ನುವುದಕ್ಕೆ ಈ ಕಾರ್ಯಾಚರಣೆಗೆ ಅತ್ಯುತ್ತಮ ನಿದರ್ಶನ! CSEL ನಂತಹ ತಂತ್ರಜ್ಞಾನವು ಯುದ್ಧಭೂಮಿಯ ಚಿತ್ರಣ ಸಂಪೂರ್ಣವಾಗಿ ಬದಲಾಯಿಸಿದೆ. ಅಸಾಧ್ಯವೆನಿಸುವ ಕಾರ್ಯಾಚ ರಣೆಗಳನ್ನು ಸಾಧ್ಯವಾಗಿಸಿ, ಶತ್ರು ನೆಲದಲ್ಲಿ ಕಣ್ಮರೆಯಾದ ಯೋಧರಿಗೆ ಅಕ್ಷರಶಃ ಜೀವದಾನ ನೀಡುತ್ತಿದೆ. ಶತ್ರುಗಳ ನೆಲದಲ್ಲಿ ಗಂಟೆಗಳ ನರಕಯಾತನೆ ಅನುಭವಿಸಿ, ಸಾವನ್ನು ಗೆದ್ದು ಬಂದ ಆ ಸೈನಿಕನ ಕಥೆ ಮತ್ತು ಆತನ ಬೆನ್ನೆಲುಬಾಗಿ ನಿಂತ ತಂತ್ರಜ್ಞಾನದ ಸಾಧನೆ, ಸೇನಾಪಡೆಯ ಮುಂದಿನ ಹಲವು ತಲೆಮಾರುಗಳವರೆಗೆ ಸ್ಫೂರ್ತಿಯ ಸೆಲೆಯಾಗಿ, ವಿಜ್ಞಾನ ಮತ್ತು ಶೌರ್ಯದ ಅಜರಾಮರ ಮೈತ್ರಿಗೆ ಸಾಕ್ಷಿ. ಈ ಕಾರ್ಯಾಚರಣೆಗೆ ಅಂದಾಜು 300 ಕೋಟಿ ಡಾಲರ್ ಹಣ ಖರ್ಚಾಗಿದೆಯಂತೆ! ಮುಂದಿನ ದಿನಗಳಲ್ಲಿ ಹಾಲಿವುಡ್‌ನಲ್ಲಿ ಈ ಕುರಿತು ಸಿನಿಮಾ, ವೆಬ್ ಸೀರಿಸ್ ಖಂಡಿತಾ ಬರಲುಬಹುದು. ಜನರ ಮಾರಣಹೋಮ ಶಾಶ್ವತವಾಗಿ ಅಂತ್ಯವಾಗಲಿ, ಪರಸ್ಪರರ ಆಸ್ತಿ ಅಂತಸ್ತು ನಿರ್ನಾಮ ನಿಲ್ಲಲಿ ಮತ್ತು ಸಂಪತ್ತಿನ ಮೇಲಿನ ದೊಡ್ಡ ರಾಷ್ಟ್ರಗಳ ದುರಾಸೆ ಕೊನೆಯಾಗಲಿ. ಓಂ ಶಾಂತಿ ಶಾಂತಿ ಶಾಂತಿಃ!.

ಏನಿದು ಸಿಎಸ್‌ಇಎಲ್ (CSEL) ಸಾಧನ?

ಶತ್ರು ನೆಲದಲ್ಲಿ ಸಿಲುಕಿದ ಸೈನಿಕನಿಗೆ ಜೀವದಾನದ ಆಶಾಕಿರಣವಾಗಿ ಕೆಲಸ ಮಾಡಿದ್ದು ಈ CSEL ಎಂಬ ಅತ್ಯಾಧುನಿಕ ತಂತ್ರಜ್ಞಾನ. ಮೇಲ್ನೋಟಕ್ಕೆ ಇದೊಂದು ವಾಕಿ-ಟಾಕಿಯಂತೆ ಕಂಡರೂ, ಇದು ಮಿಲಿಟರಿ ಬಳಕೆಗಾಗಿ ವಿನ್ಯಾಸಗೊಳಿಸಲಾದ ಅತ್ಯಂತ ಸುರಕ್ಷಿತ, ರಹಸ್ಯ ಮತ್ತು ಬಹುಪಯೋಗಿ ಸಂವಹನ ವ್ಯವಸ್ಥೆ. ಅದರ ಪ್ರಮುಖ **ವಿಶೇಷತೆಗಳು ಇಂತಿವೆ:** ಕಠಿಣ ಹವಾಮಾನ, ಶತ್ರುಗಳ ಸಿಗ್ನಲ್ ಜಾಮರ್‌ಗಳ ನಡುವೆಯೂ, ಈ ಸಾಧನ ಹೊಂದಿರುವ ಸೈನಿಕನಿರುವ ನಿಖರವಾದ ಸ್ಥಳವನ್ನು (pin point location) ಉಪಗ್ರಹಗಳೊಂದಿಗೆ ನಿರಂತರ ಸಂವಹನ ನಡೆಸುವ ಮೂಲಕ ಅಮೆರಿಕದ ಕಮಾಂಡ್ ಸೆಂಟರ್‌ಗೆ ರವಾನಿಸುವ ಸಾಮರ್ಥ್ಯ ಈ ಸಾಧನಕ್ಕಿದೆ. ಶತ್ರುಗಳು ಗುರುತಿಸಲು, ಕೇಳಿಸಿಕೊಳ್ಳಲು ಅಥವಾ ಹ್ಯಾಕ್ ಮಾಡಲು ಸಾಧ್ಯವಾಗದಂತೆ, 100% ಗೂಢಲಿಪೀಕರಣ (encrypt) ಸಾಮರ್ಥ್ಯದೊಂದಿಗೆ, ತಲುಪಬೇಕಾದ ಜಾಗಕ್ಕೆ ಸಂದೇಶಗಳನ್ನು ಈ ಸಾಧನ ಕಳುಹಿಸುತ್ತದೆ. ಶತ್ರು ನೆಲದಿಂದಲೇ ಈ ಸಾಧನ ಬಳಸಿದರೂ ಶತ್ರುವಿಗೆ ಪೈಲಟ್‌ಅನ್ನು ಇರುವಿಕೆಯ ಸುಳಿವು, ಈ ಸಾಧನ ನಡೆಸುವ ಸಂವಹನದ ಯಾವುದೇ ಮಾಹಿತಿ ಸಿಗುವುದೇ ಇಲ್ಲ! ತನ್ನ ದೇಶದ ರಕ್ಷಣಾ ಪಡೆಯ ಹೆಲಿಕಾಪ್ಟರ್‌ಗಳು ಹತ್ತಿರ ಬರುತ್ತಿದ್ದಂತೆ, ಪೈಲಟ್ ನೇರವಾಗಿ ರಕ್ಷಣಾ ತಂಡದೊಂದಿಗೆ ಧ್ವನಿ ಸಂಭಾಷಣೆ ಮೂಲಕ ಮಾತನಾಡಲು ಮತ್ತು ಶತ್ರುಗಳ ಚಲನವಲನಗಳ ಬಗ್ಗೆ ಕರಾರುವಾಕ್ಕಾದ ಎಚ್ಚರಿಕೆ ನೀಡಲು ಈ ಸಾಧನ ಸಹಾಯ ಮಾಡುತ್ತದೆ. ಕತ್ತಲು ಅಥವಾ ಶತ್ರು ದೇಶದ ದಟ್ಟ ಪರ್ವತಗಳ ನಡುವೆ ಸಿಲುಕಿದಾಗ, ಕೇವಲ ತಮ್ಮ ದೇಶದ ರಕ್ಷಣಾ ಪಡೆಗಳ ವಿಶೇಷ ರಡಾರ್‌ಗಳು ಮಾತ್ರ ಗುರುತಿಸಲಾಗುವ ವಿಶೇಷ ರೇಡಿಯೋ ಸಿಗ್ನಲ್‌ಗಳನ್ನು(infrared) ಈ ಉಪಕರಣ ಹೊರಸೂಸುತ್ತದೆ.

CSEL ತಂತ್ರಜ್ಞಾನವು ಸಂಪೂರ್ಣವಾಗಿ ಅಮೆರಿಕಾದ ರಕ್ಷಣಾ ಇಲಾಖೆಯ ಸುಪರ್ದಿಯಲ್ಲಿದೆ. ಖ್ಯಾತ ವಾಯುಯಾನ ಸಂಸ್ಥೆ 'ಬೋಯಿಂಗ್' ಅಭಿವೃದ್ಧಿಪಡಿಸಿರುವ ಈ ಅತ್ಯಾಧುನಿಕ ರಕ್ಷಣಾ ಸಾಧನವನ್ನು ಅಮೆರಿಕದ ಎಲ್ಲ ಯೋಧರು ಯುದ್ಧ ಕಾರ್ಯಾಚರಣೆಯ ವೇಳೆ ಕಡ್ಡಾಯ ರಕ್ಷಣಾ ಸಾಧನವಾಗಿ ಬಳಸುತ್ತಾರೆ. ಈ ತಂತ್ರಜ್ಞಾನವು ಅಮೆರಿಕ ಸೇನೆಯ ಕಟ್ಟುನಿಟ್ಟಿನ ನಿಯಂತ್ರಣದಲ್ಲಿದ್ದರೂ, ಅಮೆರಿಕ ತನ್ನ 'ವಿದೇಶಿ ಮಿಲಿಟರಿ ಮಾರಾಟ' ಯೋಜನೆಯಡಿ ಆಯ್ದ ಮಿತ್ರ ರಾಷ್ಟ್ರಗಳಿಗೆ ಮತ್ತು ಕೆಲವು ನ್ಯಾಟೋ ಸದಸ್ಯ ರಾಷ್ಟ್ರಗಳಿಗೆ ಈ ತಂತ್ರಜ್ಞಾನವನ್ನು ಪೂರೈಸುತ್ತದೆ. ಜಂಟಿ ಸೇನಾ ಕಾರ್ಯಾಚರಣೆಗಳ ಸಮಯದಲ್ಲಿ ರಕ್ಷಣಾ ಕಾರ್ಯಗಳನ್ನು ಸುಲಭಗೊಳಿಸಲು ಮಿತ್ರ ಪಡೆಗಳು ಇದನ್ನು ಬಳಸುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, CSEL ಸಂಪೂರ್ಣವಾಗಿ ಅಮೆರಿಕದ ಸ್ವಂತ ಮಿಲಿಟರಿ ತಂತ್ರಜ್ಞಾನ.

CSELಗೆ ಸಮನಾದ ಇತರ ದೇಶಗಳು ಬಳಸುವ ತಂತ್ರಜ್ಞಾನಗಳು: ಭಾರತೀಯ ವಾಯುಪಡೆ (IAF) ತನ್ನ ಯೋಧರ ಸುರಕ್ಷತೆಗಾಗಿ ದೇಶೀಯ (DRDO ನಿರ್ಮಿತ) ಮತ್ತು ಇಸ್ರೇಲ್‌ನಿಂದ ಆಮದು ಮಾಡಿಕೊಂಡ ತಂತ್ರಜ್ಞಾನ ಸಾಧನ-ಸಂಯೋಜನೆಯನ್ನು ಬಳಸುತ್ತದೆ. ಭಾರತೀಯ ಪೈಲಟ್‌ಗಳು ಸುಧಾರಿತ Personal Locator Beaconsಗಳನ್ನು ಧರಿಸುತ್ತಾರೆ. ತುರ್ತು ಪರಿಸ್ಥಿತಿಯಲ್ಲಿ ಇದು 406 MHz ಕಂಪನಾಂಕದಲ್ಲಿ ಮಿಲಿಟರಿ ಕೋಡ್ ಸಿಗ್ನಲ್ ಕಳುಹಿಸುತ್ತದೆ. ಇದನ್ನು ಇಸ್ರೋದ INMCC (Indian Mission Control Centre) ನಿಯಂತ್ರಣ ಕೊಠಡಿಯು ಗ್ರಹಿಸಿ, ತಕ್ಷಣ ರಕ್ಷಣಾ ಪಡೆಗಳಿಗೆ ಪೈಲಟ್ ಇರುವ ನಿಖರವಾದ ಜಾಗದ ಮಾಹಿತಿ ನೀಡುತ್ತದೆ. ಇಸ್ರೇಲ್‌ನ ರಕ್ಷಣಾ ತಂತ್ರಜ್ಞಾನ ಸಂಸ್ಥೆಯಾದ 'ಎಲ್ಬಿಟ್ ಸಿಸ್ಟಮ್ಸ್' ನಿರ್ಮಿಸಿರುವ PRC&434 ಸರಣಿಯ ಸಾಧನಗಳು ಪ್ರಪಂಚ ದಾದ್ಯಂತ ಅತ್ಯಂತ ಜನಪ್ರಿಯ. ಇಸ್ರೇಲ್ ಮಾತ್ರವಲ್ಲದೆ, ಭಾರತ ಸೇರಿದಂತೆ ಹಲವು ನ್ಯಾಟೋ ಮತ್ತು ಇತರ ಮಿತ್ರ ದೇಶಗಳು ತಮ್ಮ ವಾಯುಪಡೆಯ ಪೈಲಟ್‌ಗಳ ರಕ್ಷಣೆಗೆ ಇದನ್ನು ಬಳಸುತ್ತವೆ.

ರಷ್ಯಾ ದೇಶವು ತನ್ನದೇ ಆದ 'ಗ್ಲೋನಾಸ್' ನ್ಯಾವಿಗೇಷನ್ ಜಾಲವನ್ನು ಬಳಸುವ ರಕ್ಷಣಾ ಸಾಧನಗಳನ್ನು ಹೊಂದಿದೆ. ರಷ್ಯಾದ ಯುದ್ಧವಿಮಾನದ ಪೈಲಟ್‌ಗಳು R&855A1 ಅಥವಾ ಹೊಸ ತಲೆಮಾರಿನ 'ಕೋರ್ಮ' ಪರ್ಸನಲ್ ಲೊಕೇಟರ್ ಬೀಕನ್‌ಗಳನ್ನು ಬಳಸುತ್ತಾರೆ.

ಯುರೋಪಿಯನ್ ದೇಶಗಳು ತಮ್ಮದೇ ದೇಶದ ಕಂಪನಿಗಳು ನಿರ್ಮಿಸಿದ ಸುಧಾರಿತ ರಕ್ಷಣಾ ಸಾಧನಗಳಾದ COSPAS &SARSAT ಮಿಲಿಟರಿ ಬೀಕನ್ಸ್ ಬಳಸುತ್ತವೆ. ಇವು ಅಂತಾರಾಷ್ಟ್ರೀಯ ಉಪಗ್ರಹ ಜಾಲಗಳೊಂದಿಗೆ ಕಾರ್ಯನಿರ್ವಹಿಸುತ್ತವೆ. Becker Avionics ನಿರ್ಮಿಸಿರುವ MR510 ಯುರೋಪಿನಲ್ಲಿ ವ್ಯಾಪಕವಾಗಿ ಬಳಸಲಾಗುವ ಪ್ರಸಿದ್ಧ ಮಿಲಿಟರಿ ಸರ್ವೈವಲ್ ರೇಡಿಯೋ ಆಗಿದೆ. Thales ಕಂಪನಿ ನಿರ್ಮಿಸುವ ಸಾಧನಗಳು ಜಾಗತಿಕ COSPAS&SARSAT ಜಾಲವನ್ನು ಬಳಸಿ ಕಾರ್ಯಾಚರಣೆಗೆ ಸಹಾಯ ಮಾಡುತ್ತವೆ.

ಚೀನಾವು ತನ್ನದೇ ಆದ BeiDou ನ್ಯಾವಿಗೇಷನ್ ಉಪಗ್ರಹ ವ್ಯವಸ್ಥೆಯನ್ನು ಯುದ್ಧ ರಕ್ಷಣಾ ಕಾರ್ಯಾಚರಣೆಗಳಿಗಾಗಿ ಬಳಸಿಕೊಳ್ಳುತ್ತದೆ. ಇದು ಕೇವಲ ಸ್ಥಳವನ್ನು ಟ್ರ್ಯಾಕ್ ಮಾಡುವುದು ಮಾತ್ರವಲ್ಲದೆ, ಉಪಗ್ರಹದ ಮೂಲಕವೇ 'ಶಾರ್ಟ್ ಮೆಸೇಜ್' ಕಳುಹಿಸುವ ಸಾಮರ್ಥ್ಯ ಹೊಂದಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:85

ಸಮಾಚಾರ ಸಣ್ಣದಲ್ಲ

ಮಧ್ಯಪ್ರಾಚ್ಯಕ್ಕೆ 4.65 ಲಕ್ಷ ಕೋಟಿ ರು. ನೆರವು ಅಗತ್ಯ: ಐಎಂಎಫ್

ದೆಹಲಿ: ಮಧ್ಯಪ್ರಾಚ್ಯ ಯುದ್ಧದಿಂದ ಸಂಕಷ್ಟಕ್ಕೆ ಸಿಲುಕಿರುವ ದೇಶಗಳಿಗೆ ಐಎಂಎಫ್ (ಅಂತಾರಾಷ್ಟ್ರೀಯ ಹಣಕಾಸು ನಿಧಿಯು) 50 ಬಿಲಿಯನ್ ಡಾಲರ್ ಅಂದರೆ ಸುಮಾರು 4.62 ಲಕ್ಷ ಕೋಟಿ ರುಪಾಯಿಗಳಷ್ಟು ಆರ್ಥಿಕ ಸಹಾಯ ನೀಡಬೇಕಾಗುತ್ತದೆ ಎಂದು ಐಎಂಎಫ್ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲಿನಾ ಜಾರ್ಜಿವಾ ಹೇಳಿದ್ದಾರೆ. ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಮಧ್ಯಪ್ರಾಚ್ಯ ಯುದ್ಧದ ಪರಿಣಾಮಗಳನ್ನು ಗಮನಿಸಿದರೆ, ಐಎಂಎಫ್ ಪಾವತಿ ಸಮತೋಲನ ಬೆಂಬಲಕ್ಕಾಗಿ ಅಲ್ಪಾವಧಿಯ ಬೇಡಿಕೆಯು 20 ಶತಕೋಟಿ ಡಾಲರ್‌ನಿಂದ 50 ಶತಕೋಟಿ ಡಾಲರ್‌ಗೆ ಏರುವ ನಿರೀಕ್ಷೆಯಿದೆ. ಕದನ ವಿರಾಮ ಮುಂದುವರಿದರೆ ಆರ್ಥಿಕ ಸಹಾಯದ ಮಿತಿ ಕಡಿಮೆ ಇರುತ್ತದೆ ಎಂದು ಕ್ರಿಸ್ಟಲಿನಾ ತಿಳಿಸಿದ್ದಾರೆ.

ಯಮುನಾ ನದಿಯಲ್ಲಿ ದುರಂತ: ದೋಣಿ ಮುಳುಗಿ 6 ಸಾವು

ಮಥುರಾ: ಬೃಂದಾವನದ ಯಮುನಾ ನದಿಯಲ್ಲಿ ಶುಕ್ರವಾರ ಮಧ್ಯಾಹ್ನ ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ದೋಣಿ ಮುಳುಗಡೆಯಾಗಿದ್ದು, ಕನಿಷ್ಠ ಆರು ಜನ ಮೃತಪಟ್ಟಿದ್ದಾರೆ ಮತ್ತು ಹಲವಾರು ಜನ ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಚಂದ್ರ ಪ್ರಕಾಶ್ ಸಿಂಗ್ ಅವರು, ಈ ಸಾವುನೋವುಗಳ ಸಂಖ್ಯೆಯನ್ನು ದೃಢಪಡಿಸಿದ್ದು, ಹಡಗಿನಲ್ಲಿದ್ದ ಎಲ್ಲಾ ಪ್ರವಾಸಿಗರು ಪಂಜಾಬ್ ಮೂಲದವರು ಎಂದು ಹೇಳಿದ್ದಾರೆ. ಆರು ಶವಗಳನ್ನು ಹೊರತೆಗೆಯಲಾಗಿದೆ. ಇಲ್ಲಿಯವರೆಗೆ ಹದಿನಾರರಿಂದ ಹದಿನೇಳು ಜನರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಕಾಣೆಯಾದವರನ್ನು ಪತ್ತೆಹಚ್ಚುವ ಪ್ರಯತ್ನಗಳು ಮುಂದುವರೆದಿವೆ ಎಂದು ಅವರು ತಿಳಿಸಿದ್ದಾರೆ. ದೋಣಿಯಲ್ಲಿ ಎರಡು ಡಜನ್‌ಗೂ ಹೆಚ್ಚು ಪ್ರವಾಸಿಗರಿದ್ದರು ಎಂದು ಹೇಳಲಾಗಿದ್ದು, ಇಲ್ಲಿಯವರೆಗೆ ಸುಮಾರು 15 ಜನರನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಮಿಳುನಾಡು ಚುನಾವಣೆ ವೇಳೆಯೇ 'ಜನನಾಯಗನ್' ಸೋರಿಕೆ: ಸಂಚು ಕಾರಣ?

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತೀವ್ರ ಪ್ರಚಾರ ನಡೆಸುತ್ತಿರುವ ಹೊತ್ತಿನಲ್ಲಿ ದಳಪತಿ ವಿಜಯ್ ಅಭಿನಯದ ಜನನಾಯಗನ್ ಸಿನಿಮಾದ 5 ನಿಮಿಷದ ಎಚ್‌ಡಿ ವಿಡಿಯೋ

ಸೋರಿಕೆಯಾಗಿದೆ. ಅದರ ಬೆನ್ನಲ್ಲೇ ಇಡೀ ಸಿನಿಮಾದ ಹಿಂದಿ ಆವೃತ್ತಿ ಸೋರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಕೆವಿಎನ್ ನಿರ್ಮಾಣ ಸಂಸ್ಥೆ ತನಿಖೆಗೆ ಬೇಡಿಕೆಯಿಟ್ಟಿದೆ. ಈ ಸಿನಿಮಾಗೆ ಇನ್ನೂ ಸೆನ್ಸಾರ್‌ನಿಂದ ಗ್ರೀನ್ ಸಿಗ್ನಲ್ ಸಿಕ್ಕಿಲ್ಲ. ಅದರ ನಡುವೆಯೇ ಚಿತ್ರ ಸೆನ್ಸಾರ್ ಬೋರ್ಡ್‌ಗೆ ವೀಕ್ಷಣೆಗೆ ಹೋದ ನಂತರ, ಸದಾ ಒಂದಲ್ಲಾ ಒಂದು ರೀತಿಯಲ್ಲಿ ವದಂತಿಗಳಿಗೆ ಕಾರಣವಾಗುತ್ತಿದೆ. ಏಪ್ರಿಲ್ 23ರಂದು ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಅಷ್ಟರಲ್ಲೇ ಸಿನಿಮಾಸೋರಿಕೆಯಾಗಿರುವುದು ರಾಜಕೀಯ ವಲಯದಲ್ಲಿ ಸಂಚಲನಕ್ಕೂ ಕಾರಣವಾಗಿದೆ. ಈ ಸಿನಿಮಾವನ್ನು ವಿಜಯ್ ತಮ್ಮ ಕೊನೆಯ ಸಿನಿಮಾ ಎಂದು ಹೇಳಿಕೊಂಡಿದ್ದರು. ರಾಜಕೀಯ ಪ್ರವೇಶಕ್ಕೆ ಲಾಭವಾಗಲಿ ಎನ್ನುವ ಕಾರಣಕ್ಕಾಗಿಯೇ ಇದಕ್ಕೆ ಹೊಂದಿಕೊಳ್ಳುವ ಚಿತ್ರಕಥೆಯನ್ನು ಸಿನಿಮಾಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಚಿತ್ರದ ವಿಜಯ್ ಪ್ರವೇಶ ಮತ್ತು ಕೊನೆಯ ದೃಶ್ಯದಲ್ಲಿ ಮತಯಾಚಿಸುವ ದೃಶ್ಯಗಳಿವೆ. ಅವು ಈಗಾಗಲೇ ಸೋರಿಕೆಯಾಗಿವೆ.

ಮೊನಾಲಿಸಾಗೆ ಬರೀ 16 ವರ್ಷ, ಪತಿ ವಿರುದ್ಧ ಪೋಕ್ಸೋ ಪ್ರಕರಣ!

ಭೋಪಾಲ್: ಕಳೆದ ವರ್ಷ ಉತ್ತರಪ್ರದೇಶದಲ್ಲಿ ನಡೆದಿದ್ದ ಮಹಾಕುಂಭಮೇಳದಲ್ಲಿ ರುದ್ರಾಕ್ಷಿ ಮಾರಿ, ನೀಲಿಗಣ್ಣಿನ ಸುಂದರಿ ಎಂದೇ ಜನಪ್ರಿಯರಾಗಿರುವ ಮೊನಾಲಿಸಾ ಇನ್ನೊಂದು ಅಪಾಯಕ್ಕೆ ಸಿಲುಕಿದ್ದಾರೆ. ಮಾ.11ರಂದು ಅವರು ಕೇರಳದಲ್ಲಿ ಹಿಂದೂ ಸಂಪ್ರದಾಯದಂತೆ ಮುಸ್ಲಿಮ್ ಯುವಕ ಫರ್ಮಾನ್‌ನನ್ನು ವರಿಸಿದ್ದರು. ಆ ವೇಳೆ ತಾನು ಪ್ರಾಪ್ತ ವಯಸ್ಕೆ ಎಂದೇ ಹೇಳಿಕೊಂಡಿದ್ದರು. ಇದೀಗ ಆಕೆ ಅಪ್ರಾಪ್ತ ವಯಸ್ಕಳು ಎಂದು ಪ್ರಮಾಣಪತ್ರ ಸಲ್ಲಿಕೆ ಮಾಡಲಾಗಿದ್ದು, ಪತಿಯ ವಿರುದ್ಧ ಪೋಕ್ಸೋ ಕಾಯ್ದೆಯಡಿ ಮಧ್ಯಪ್ರದೇಶದ ಖಾರ್ಗೋನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಷ್ಟು ಮಾತ್ರವಲ್ಲ ಎಸ್‌ಸಿಎಸ್‌ಟಿ ದೌರ್ಜನ್ಯ ನಿಗ್ರಹ ಕಾಯ್ದೆಯಡಿ ದೌರ್ಜನ್ಯ ಪ್ರಕರಣವೂ ದಾಖಲಾಗಿದೆ. ಆಸ್ಪತ್ರೆಯಲ್ಲಿ ಜನನವಾದ ಮಾಹಿತಿ ಪ್ರಕಾರ, ಬುಡಕಟ್ಟು ಪಂಗಡಗಳ ರಾಷ್ಟ್ರೀಯ ಆಯೋಗ ಮೊನಾಲಿಸಾ ಜನನ ದಿನಾಂಕವನ್ನು 2009, ಡಿ.30 ಎಂದು ಖಚಿತಪಡಿಸಿಕೊಂಡಿದೆ. ಅಲ್ಲಿಗೆ ಮದುವೆ ವೇಳೆಗೆ ಆಕೆಯ ವಯಸ್ಸು 16 ವರ್ಷ 2 ತಿಂಗಳು. ಹೀಗಾಗಿ ಈ ಮದುವೆ ಅಕ್ರಮ ಎಂದು ದೂರು ಸಲ್ಲಿಸಲಾಗಿದೆ. ಮೊನಾಲಿಸಾ ಪರ್ದಿ ಬುಡಕಟ್ಟಿಗೆ ಸೇರಿದ್ದಾರೆ. ಮಲಯಾಳಂ ಚಲನಚಿತ್ರದಲ್ಲೂ ನಟಿಸುತ್ತಿರುವ ಆಕೆ ಕೇರಳದಲ್ಲಿ ಅಲ್ಲಿನ ಗಣ್ಯಾತಿಗಣ್ಯ ರಾಜಕಾರಣಿಗಳ ಸಮ್ಮುಖದಲ್ಲಿ ವಿವಾಹವಾಗಿದ್ದರು.

ತೀವ್ರ ಗೊಂದಲಗಳ ನಡುವೆಯೇ ಶಾಂತಿ ಮಂತ್ರ

ಇಂದಿನಿಂದ ಪಾಕಿಸ್ತಾನದಲ್ಲಿ ಅಮೆರಿಕ-ಇಸ್ರೇಲ್-ಇರಾನ್ ನಡುವೆ ಶಾಂತಿ ಮಾತುಕತೆ | ಇಸ್ಲಾಮಾಬಾದ್‌ನಲ್ಲಿ ಅತಿ ಬಿಗುವಿನ ಸ್ಥಿತಿ
ಪಾಕನ್ನು ತಲುಪಿದ ಅಮೆರಿಕ ನಿಯೋಗ | ಇರಾನ್ ನಿಯೋಗ ತಲುಪಿರುವ ಬಗ್ಗೆ ಸುಳಿವಿಲ್ಲ, ಮಾತುಕತೆ ಬಗ್ಗೆಯೇ ಅನುಮಾನ

ಇಸ್ಲಾಮಾಬಾದ್: ಹಲವಾರು ಗೊಂದಲಗಳ ನಡುವೆಯೇ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಶನಿವಾರ ಅಮೆರಿಕ-ಇಸ್ರೇಲ್-ಇರಾನ್ ನಡುವೆ ಶಾಂತಿ ಮಾತುಕತೆಗೆ ವೇದಿಕೆ ಸಿದ್ಧವಾಗಿದೆ. ಇಡೀ ಇಸ್ಲಾಮಾಬಾದ್ ಕೋಟೆಯಂತೆ ಬದಲಾಗಿದ್ದು, ಪಾಕಿಸ್ತಾನದ ಸೈನಿಕರು ಕಟ್ಟೆಚ್ಚರ ವಹಿಸಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಇಸ್ಲಾಮಾಬಾದ್ ವಿಮಾನ ಹತ್ತಿದ್ದಾರೆ. ಚಾರ್ಲ್ಸ್‌ಟನ್ ಹೆಸರಿನ ಅಮೆರಿಕ ವಾಯುಪಡೆಯ ಸಾರಿಗೆ ವಿಮಾನವು ಇಸ್ಲಾಮಾಬಾದ್‌ನಲ್ಲಿರುವ ನೂರ್ ಖಾನ್ ವಾಯುನೆಲೆಯನ್ನು ತಲುಪಿದೆ. ಆದರೆ ಇರಾನ್ ನಿಯೋಗ ಇನ್ನೂ ತೆರಳಿಲ್ಲ ಎಂದು ಅಲ್ಲಿನ ಸರಕಾರಿ ಮಾಧ್ಯಮಗಳೇ ವರದಿ ಮಾಡಿವೆ. ಮತ್ತೊಂದು ಕಡೆ ಇಸ್ರೇಲ್-ಪಾಕಿಸ್ತಾನದ ನಡುವೆಯೇ ವಾಗ್ಯುದ್ಧಗಳು ನಡೆದಿವೆ. ಇಸ್ರೇಲ್ ಅನ್ನು ಕ್ಯಾನ್ಸರ್ ಎಂದು ಪಾಕ್ ರಕ್ಷಣಾ ಸಚಿವ ಆಸಿಫ್ ಖ್ವಾಜಾ ಕರೆದರೆ, ಸಂಧಾನ ಮಾತುಕತೆಯ ಆತಿಥ್ಯ ವಹಿಸಿರುವ ದೇಶ ತಟಸ್ಥವಾಗಿರಬೇಕು, ಇಂತಹ ಹೊತ್ತಿನಲ್ಲಿ ಪಾಕ್ ಸಚಿವರ ಹೇಳಿಕೆಯೇ ತಪ್ಪು ಎಂದು ಇಸ್ರೇಲ್ ಪ್ರಧಾನಮಂತ್ರಿ ಕಚೇರಿ ಕಿಡಿಕಾರಿದೆ. ಈ ಎಲ್ಲ ಗೊಂದಲಗಳು ಶಾಂತಿ ಮಾತುಕತೆ ಸುಸೂತ್ರವಾಗಿ ನಡೆಯಲಿದೆಯಾ ಎಂಬ ಅನುಮಾನವನ್ನು ಹುಟ್ಟಿಸಿದೆ.

ಈ ನಡುವೆ ಇರಾನ್ ಶಾಂತಿ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲವೇ ಎಂಬ ಅನುಮಾನಗಳು ಹುಟ್ಟಿಕೊಂಡಿವೆ. ಸ್ವತಃ ಇರಾನ್ ಸರಕಾರಿ ಮಾಧ್ಯಮ ತಸ್ನಿಮ್ ಏಜೆನ್ಸಿ, ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿಯಾಗಲೀ, ಸಂಸತ್ತಿನ ವಕ್ತಾರ ಮೊಹಮ್ಮದ್ ಬಖೆರ್ ಖಲಿಬಾಫ್ ಆಗಲೀ ಪಾಕಿಸ್ತಾನಕ್ಕೆ ತೆರಳಿಯೇ ಇಲ್ಲ. ಇಬ್ಬರೂ ಇರಾನ್ ರಾಜಧಾನಿ ಟೆಹರಾನ್‌ನಲ್ಲೇ ಇದ್ದಾರೆ ಎಂದು ಹೇಳಿದೆ. ಈ ಸಂಬಂಧಪಟ್ಟಂತೆ ಪ್ರಕಟವಾಗಿರುವ ವರದಿಯೊಂದರಲ್ಲಿ, ಇಸ್ರೇಲ್ ಲೆಬನಾನ್ ಮೇಲಿನ ದಾಳಿಯನ್ನು ನಿಲ್ಲಿಸುವವರೆಗೆ ತಾನು ಶಾಂತಿ ಮಾತುಕತೆಗೆ ತೆರಳುವುದಿಲ್ಲ ಎಂದು ಹೇಳಿದೆ ಎನ್ನಲಾಗಿದೆ. ಕದನ ವಿರಾಮಕ್ಕೆ ಇರಾನ್ ಹಾಕಿರುವ ಷರತ್ತುಗಳಲ್ಲಿ ಲೆಬನಾನ್ ಮೇಲಿನ ದಾಳಿ ನಿಲ್ಲಬೇಕು ಎನ್ನುವುದೂ ಸೇರಿದೆ. ಕದನ ವಿರಾಮಕ್ಕೆ ರಾಜತಾಂತ್ರಿಕ ಪ್ರಯತ್ನಗಳ ಹೊರತಾಗಿಯೂ ಇಸ್ರೇಲ್ ಲೆಬನಾನ್ ಮೇಲೆ ದಾಳಿ ತೀವ್ರಗೊಳಿಸಿದ್ದರಿಂದ ಇರಾನ್, ಅಮೆರಿಕದೊಂದಿಗೆ ಶಾಂತಿ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲ ಎಂದಿದೆ.

ಪಾಕ್‌ಗೆ ಹೊರಡುವ ಮುನ್ನ ಇರಾನ್‌ಗೆ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಎಚ್ಚರಿಕೆ ನೀಡಿದ್ದಾರೆ. ಇರಾನ್ ಮಾತುಕತೆಯನ್ನು ಗಂಭೀರವಾಗಿ ಪರಿಗಣಿಸಿದೆ ಎಂದು ಭಾವಿಸಿದ್ದೇವೆ ಎನ್ನುವ ಮೂಲಕ, ಇರಾನ್ ಬೇಕಾಬಿಟ್ಟಿ ನಡೆದುಕೊಂಡರೆ ಸರಿಯಿರುವುದಿಲ್ಲ ಎಂಬ ಸುಳಿವು ನೀಡಿದ್ದಾರೆ.

ಪಾಕ್‌ನಿಂದ ಅತಿದೊಡ್ಡ ವಾಯುಪಡೆ ನಿಯೋಜನೆ: ಶಾಂತಿ ಮಾತುಕತೆಯ ಆತಿಥ್ಯ ವಹಿಸಿರುವ ಪಾಕಿಸ್ತಾನಕ್ಕೆ ಅತಿದೊಡ್ಡ ತಲೆಬಿಸಿ ಶುರುವಾಗಿದೆ. ಇಸ್ರೇಲ್ ದಾಳಿಯಿಂದ ಇರಾನ್ ನಿಯೋಗವನ್ನು ಬಚಾವ್ ಮಾಡುವ ಹೊಣೆ ಅದರ ಮೇಲಿದೆ. ಇರಾನ್ ಮೇಲೆ ಇಸ್ರೇಲ್ ಯಾವ ಕ್ರಮಕ್ಕೂ ಹೇಸುವುದಿಲ್ಲ ಎಂಬ ಭೀತಿಯಿರುವುದರಿಂದ ಪಾಕಿಸ್ತಾನದ ಅತ್ಯಂತ ಪ್ರಬಲ ಯುದ್ಧವಿಮಾನಗಳನ್ನು ಇರಾನ್‌ನತ್ತ ಕಳುಹಿಸಿದೆ. ಶಾಂತಿ ಕಾಲದಲ್ಲಿ ನಿಯೋಜಿಸಲಾದ ಪಾಕಿಸ್ತಾನದ ಅತಿದೊಡ್ಡ ವಾಯುಸೇನಾ ಪಡೆ ಇದಾಗಿದೆ. ಅದರ ಪ್ರಮುಖ ಯುದ್ಧವಿಮಾನಗಳಾದ ಸಿ-130, ಇಂಧನ ಮರುಪೂರಣ ಟ್ಯಾಂಕರ್‌ಗಳು, ಅವಾಕ್ಸ್ ವಿಮಾನ ಮಧ್ಯಪ್ರಾಚ್ಯ ಪ್ರವೇಶಿಸಿದೆ.



ಲೆಬನಾನ್‌ನೊಂದಿಗೆ ನೇರ ಮಾತುಕತೆ: ಇಸ್ರೇಲ್ ಪ್ರಧಾನಿ

ಲೆಬನಾನ್ ಮೇಲಿನ ಇಸ್ರೇಲ್ ಕ್ಷಿಪಣಿ ದಾಳಿಗೆ ತೀವ್ರ ಖಂಡನೆ ವ್ಯಕ್ತವಾಗುತ್ತಿದ್ದಂತೆ, ಲೆಬನಾನ್ ಜೊತೆಗೆ ನೇರ ಮಾತುಕತೆ ಆರಂಭಿಸಲು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಂಪುಟಕ್ಕೆ ಆದೇಶಿಸಿದ್ದಾರೆ ಎಂದು ವರದಿಗಳು ತಿಳಿಸಿವೆ. ಒಂದು ಕಡೆ ಅಮೆರಿಕ - ಇರಾನ್ ಕದನ ವಿರಾಮ ಘೋಷಿಸಿ ಮಾತುಕತೆಗೆ ಸಿದ್ಧವಾಗಿವೆ. ಈ ಮಾತುಕತೆಗೆ ಒಪ್ಪಿಗೆ ಸೂಚಿಸಿರುವ ಇಸ್ರೇಲ್ ಈ ನಡುವೆ ಲೆಬನಾನ್ ಗುರಿಯಾಗಿಸಿಕೊಂಡು ದಾಳಿ ಮುಂದುವರಿಸಿದೆ. ಈ ದಾಳಿಯಿಂದ ಮಧ್ಯಪ್ರಾಚ್ಯದಲ್ಲಿ ಸ್ಥಾಪನೆಯಾಗಬಹುದಾದ ಶಾಂತಿಗೆ ಭಂಗ ಉಂಟಾಗುವ ಸಾಧ್ಯತೆ ಇದ್ದು ಲೆಬನಾನ್ ಅನ್ನು ಕದನ ವಿರಾಮದ ಭಾಗವಾಗಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ಹೆಚ್ಚುತ್ತಿದೆ. ಈ ಬೆನ್ನಲ್ಲೇ ನೇರ ಮಾತುಕತೆಗೆ ಇಸ್ರೇಲ್ ತಯಾರಿ ನಡೆಸಿದೆ.ಈ ನಡುವೆ ಮಹತ್ವದ ರಾಜತಾಂತ್ರಿಕ ಬೆಳವಣಿಗೆಯಲ್ಲಿ, ಲೆಬನಾನ್ ಮೇಲೆ ಇಸ್ರೇಲ್‌ನ ಸೇನಾ ಕಾರ್ಯಾಚರಣೆಗಳನ್ನು ಕಡಿಮೆ ಮಾಡುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಒತ್ತಾಯಿಸಿದ್ದಾರೆ. ಇರಾನ್ ಜೊತೆ ನಡೆಯುತ್ತಿರುವ ಮಾತುಕತೆಗಳಿಗೆ ಧಕ್ಕೆ ತರುವಂತಹ ಯಾವುದೇ ಉದ್ವಿಗ್ನತೆಯನ್ನು ತಪ್ಪಿಸಲು ಟ್ರಂಪ್ ಸೂಚಿಸಿದ್ದಾರೆ. ಉಭಯ ನಾಯಕರ ದೂರವಾಣಿ ಸಂಭಾಷಣೆಯ ಸಮಯದಲ್ಲಿ ಲೆಬನಾನ್ ಕದನ ವಿರಾಮ ಚೌಕಟ್ಟಿನ ಭಾಗವಲ್ಲ ಎಂದು ಮಾತನಾಡಿಕೊಂಡಿದ್ದಾರೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಿತ್ಯ 15 ಹಡಗು ಸಾಗಲು ಇರಾನ್ ಅಸ್ತು

ಸದ್ಯ ಜಾರಿಗೆ ಬಂದಿರುವ ಅಮೆರಿಕ, ಇರಾನ್ ಮತ್ತು ಇಸ್ರೇಲ್ ನಡುವಿನ ಕದನವಿರಾಮದ ಷರತ್ತುಗಳ ಪ್ರಕಾರ ದಿನಕ್ಕೆ 15 ನೌಕೆಗಳು ಹೊರ್ಮುಜ್ ಜಲಸಂಧಿಯ ಮೂಲಕ ಸಾಗಲು ಅನುಮತಿಸಲಾಗಿದೆ. ಈ ಬಗ್ಗೆ ಇರಾನ್ ಮಾಧ್ಯಮ ಮಾಡಿರುವ ವರದಿಯಲ್ಲಿ, 'ಯುದ್ಧಸ್ಥಗಿತದ ಭಾಗವಾಗಿ 15 ಹಡಗುಗಳು ಹೊರ್ಮುಜ್ ಮೂಲಕ ಸಾಗಬಹುದಾಗಿದೆ. ಆದರೆ ಅವುಗಳು ಇರಾನ್‌ನಿಂದ ಪೂರ್ವಾನುಮತಿಯನ್ನು ಪಡೆದಿರಬೇಕು. ಈ ಸಂಚಾರವು ಐಆರ್‌ಜಿಸಿಯ ನಿಗಾದಲ್ಲಿ ನಡೆಯಲಿದೆಯೇ ಹೊರತು ಪರಿಸ್ಥಿತಿಯು ಯುದ್ಧಪೂರ್ವ ಸ್ಥಿತಿಗೆ ಮರಳಲು ಸಾಧ್ಯವಿಲ್ಲ ಎನ್ನಲಾಗಿದೆ. ಅತ್ತ, ಪರವಾನಗಿ ಪಡೆದು ಜಲಸಂಧಿಯನ್ನು ಸಾಗುವ ಹಡಗುಗಳಿಂದ ಶುಲ್ಕ ವಸೂಲಿ ಮಾಡಲಾಗುವುದು ಎಂದು ಇರಾನ್ ಘೋಷಿಸಿತ್ತು. ಆದರೆ ಬುಧವಾರ ರಾತ್ರಿ, ಲೆಬನಾನ್ ಮೇಲಿನ ಇಸ್ರೇಲ್ ದಾಳಿಗೆ ಪ್ರತಿಯಾಗಿ ಹೊರ್ಮುಜ್ ಅನ್ನು ಮತ್ತೆ ಮುಚ್ಚುವುದಾಗಿ ಇರಾನ್ ಹೇಳಿತ್ತು. ಈ ಹಿನ್ನೆಲೆಯಲ್ಲಿ ಒಟ್ಟಾರೆ ಸ್ಥಿತಿಯ ಬಗ್ಗೆ ಸ್ಪಷ್ಟತೆಯಿಲ್ಲ.

ಹೊರ್ಮುಜ್ ರಕ್ಷಣೆಗೆ ಧಾವಿಸಿ: ಯೂರೋಪ್‌ಗೆ ಟ್ರಂಪ್ ಕರೆ

ಹೊರ್ಮುಜ್ ಜಲಸಂಧಿಯ ರಕ್ಷಣೆಗೆ ತಾವು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾದ ಯೋಜನೆಯನ್ನು ಕೆಲವೇ ದಿನಗಳ ಒಳಗಾಗಿ ಸಲ್ಲಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುರೋಪಿಯನ್ ದೇಶಗಳಿಗೆ (ಇಯು) ಕೇಳಿದ್ದಾರೆ. ಇರಾನ್ ವಿರುದ್ಧ ಕದನ ವಿರಾಮ ಜಾರಿಯಾದರೂ ಹೊರ್ಮುಜ್ ಕುರಿತಾದ ಗೊಂದಲ ಇನ್ನೂ ಮುಂದುವರಿದಿದೆ. ಈ ನಡುವೆ ಶ್ವೇತಭವನದಲ್ಲಿ ನಡೆದ ಸಭೆಯಲ್ಲಿ, ಜಲಸಂಧಿಯ ರಕ್ಷಣೆಗೆ ಮುಂದಾಗುವಂತೆ ಯುರೋಪಿಯನ್ ಮಿತ್ರರಾಷ್ಟ್ರಗಳಿಗೆ ಮತ್ತೊಮ್ಮೆ ಟ್ರಂಪ್ ಆದೇಶಿಸಿದ್ದಾರೆ. ಈಗಾಗಲೇ 40ಕ್ಕೂ ಅಧಿಕ ದೇಶಗಳನ್ನೊಳಗೊಂಡ ಯೂರೋಪಿಯನ್ ಒಕ್ಕೂಟ, ಜಪಾನ್, ಕೆನಡಾ ಹೊರ್ಮುಜ್ ರಕ್ಷಣೆಯಲ್ಲಿ ನೆರವಾಗುವುದಾಗಿ ಟ್ರಂಪ್‌ಗೆ ವಾಗ್ದಾನ ಮಾಡಿವೆ

ಜಲಸಂಧಿಯಲ್ಲಿ ಸ್ಫೋಟಕ ಇಟ್ಟಿದ್ದ ಇರಾನ್

ಹೊರ್ಮುಜ್‌ನಲ್ಲಿ ಹಡಗುಗಳ ಓಡಾಟವನ್ನು ನಿರ್ಬಂಧಿಸಿದ್ದ ಇರಾನ್, ಆ ಪ್ರದೇಶದಲ್ಲಿ ಜಲಸ್ಫೋಟಕಗಳನ್ನು ಇಟ್ಟಿತ್ತು. ಎಲ್ಲೆಲ್ಲಿ ಸ್ಫೋಟಕ ಇಡಲಾಗಿದೆ ಎಂಬ ಚಾರ್ಟ್ ಸಿದ್ಧಪಡಿಸಿತ್ತು ಎಂದು ಇರಾನಿ ಮಾಧ್ಯಮ ವರದಿ ಮಾಡಿದೆ. ಇದಕ್ಕೆ ಪೂರಕವಾಗಿ ಚಿತ್ರ ಬಿಡುಗಡೆ ಮಾಡಿದ್ದು, ಅದರಲ್ಲಿ ನೌಕೆಗಳು ಸಾಗುವ ಮಾರ್ಗದಲ್ಲಿ ಅಪಾಯದ ಜಾಗಗಳು ಎಂಬ ಗುರುತು ಕಂಡು ಬರುತ್ತದೆ. ಆದರೆ ಕದನ ವಿರಾಮದ ಬಳಿಕ ಅವು ತೆರವಾಗಿವೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಕಳೆದ ತಿಂಗಳು, ಇರಾನ್ ಹೊರ್ಮುಜ್‌ನಲ್ಲಿ ಜಲಸ್ಫೋಟಕ ಇರಿಸಿದೆ ಎಂದಿದ್ದ ಅಮೆರಿಕ, ಅವನ್ನು ಅಳವಡಿಸುತ್ತಿದ್ದ ನೌಕೆಗಳನ್ನು ನಾಶ ಮಾಡಿದ್ದಾಗಿ ಹೇಳಿಕೊಂಡಿತ್ತು.

ಹೊರ್ಮುಜ್‌ನಲ್ಲಿ ಅಮೆರಿಕದ ಅತಿ ದುಬಾರಿ ನಿಗಾ ಡ್ರೋನ್ ನಾಪತ್ತೆ

1857 ಕೋಟಿ ರು. ಮೌಲ್ಯದ ಎಂಕ್ಯೂ-4ಸಿ ಟ್ರೈಟನ್ ಡ್ರೋನ್ ಇರಾನ್ ಸನಿಹದಲ್ಲಿದ್ದಾಗ ಅಪಾಯದ ಸಂಕೇತ ರವಾನೆ, ನಾಪತ್ತೆ

ದೆಹಲಿ: ಒಂದು ಕಡೆ ಹೊರ್ಮುಜ್ ಜಲಸಂಧಿಯನ್ನು ಹಿಂದಿನಂತೆ ಕಾರ್ಯಾಚರಿಸುವಂತೆ ಮಾಡಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಣಗುತ್ತಿದ್ದರೆ, ಇತ್ತಕಡೆ ಹೊರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ಅತ್ಯಂತ ದುಬಾರಿ ಕಣ್ಗಾವಲು ಡ್ರೋನ್ ಎಂಕ್ಯೂ-4ಸಿ ಟ್ರೈಟನ್ ನಾಪತ್ತೆಯಾಗಿದೆ. ತುರ್ತು ಎಚ್ಚರಿಕೆ ಘೋಷಿಸಿದ ನಂತರ ಈ ಡ್ರೋನ್ ನಾಪತ್ತೆಯಾಗಿದೆ ಎಂದು ವರದಿಯಾಗಿದೆ. ಅಮೆರಿಕದ ಯುದ್ಧವಿಮಾನಗಳ ಮೇಲೆ ಕಣ್ಗಾವಲು ಇಡುವ ಈ ಡ್ರೋನ್ ಬೆಲೆ 1857 ಕೋಟಿ ರು. ವರದಿಗಳ ಪ್ರಕಾರ, ಡ್ರೋನ್ ಪರ್ಷಿಯನ್ ಕೊಲ್ಲಿ ಮತ್ತು ಹೊರ್ಮುಜ್ ಜಲಸಂಧಿಯ ಮೇಲ್ಭಾಗದಲ್ಲಿ ಸುಮಾರು ಮೂರು ಗಂಟೆಗಳ ಕಣ್ಗಾವಲು ಹಾರಾಟ ಪೂರ್ಣಗೊಳಿಸಿ ಇಟಲಿಯ ನೌಕಾ ವಾಯುನಿಲ್ದಾಣ ಸೈಗೊನೆಲ್ಲಾದಲ್ಲಿರುವ ತನ್ನ ನೆಲೆಗೆ ಹಿಂತಿರುಗುತ್ತಿರುವ ವೇಳೆ ನಾಪತ್ತೆಯಾಗಿದೆ. ಆನ್‌ಲೈನ್ ವಿಮಾನ ಟ್ರ್ಯಾಕಿಂಗ್ ವೆಬ್‌ಸೈಟ್, ಫ್ಲೈಟ್‌ರಾಡಾರ್ 24 ತೋರಿಸುವಂತೆ, ಈ ಡ್ರೋನ್ 7700 ಕೋಡ್ (ಸಾಮಾನ್ಯ ತುರ್ತು ಪರಿಸ್ಥಿತಿಗಾಗಿ ಕಳುಹಿಸುವ ಕೋಡ್) ಅನ್ನು ಕಳುಹಿಸಿದೆ. ನಂತರ ಇರಾನ್ ಕಡೆಗೆ ಸ್ವಲ್ಪ ತಿರುವು ಪಡೆದುಕೊಂಡು ಬಳಿಕ ಇಳಿಯುವುದಕ್ಕೆ ಆರಂಭಿಸಿದೆ. ಸಿಬ್ಬಂದಿ ಇಲ್ಲದ ಈ ಡ್ರೋನ್ ಕಣ್ಮರೆಯಾಗುವ ಮೊದಲು ವೇಗವಾಗಿ ಎತ್ತರದಿಂದ ಕೆಳಗಿಳಿದಿದೆ ಎಂಬುದು ತಿಳಿದು ಬಂದಿದೆ. ಡ್ರೋನ್ ಪತನಗೊಂಡಿದೆಯೇ ಅಥವಾ ಶತ್ರುಪಡೆಗಳಿಂದ ಹೊಡೆದುರುಳಿಸಲ್ಪಟ್ಟಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಕೊಲ್ಲಿಯಲ್ಲಿ ಕಣ್ಗಾವಲಿಗಾಗಿ ನಿಯೋಜನೆ

ಇದನ್ನು ಗಲ್ಫ್ ಪ್ರದೇಶದಲ್ಲಿ ಕಣ್ಗಾವಲಿಗಾಗಿ ಇರಿಸಲಾಗಿತ್ತು. ಈ ಡ್ರೋನ್ ಸಾಂಪ್ರದಾಯಿಕ ವಿಮಾನಗಳಿಗಿಂತ ಭಿನ್ನವಾಗಿ ಚೋಕ್ ಪಾಯಿಂಟ್‌ಗಳ ಮೇಲೆ ದೀರ್ಘಾವಧಿಯ ಕಾರ್ಯತಂತ್ರದ ಕಣ್ಗಾವಲು ಒದಗಿಸುತ್ತದೆ. ಇದನ್ನು ನಿರಂತರ, ದೊಡ್ಡ ಪ್ರಮಾಣದ ಕಡಲ ಕಣ್ಗಾವಲಿಗಾಗಿ ವಿನ್ಯಾಸಗೊಳಿಸಲಾಗಿದೆ. ಹಾಗೆಯೇ ಆಗಾಗ್ಗೆ ಪಿ-8ಎ ಪೋಸಿಡಾನ್ ಗಸ್ತು ವಿಮಾನಗಳಿಗೆ ಹೆಚ್ಚಿನ ಎತ್ತರದ ಕಣ್ಣುಗಳಾಗಿ ಕಾರ್ಯನಿರ್ವಹಿಸುತ್ತದೆ. ಟ್ರೈಟನ್ 50,000 ಅಡಿಗಳಿಗಿಂತ ಹೆಚ್ಚಿನ ಎತ್ತರದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯವಿರುವ ಏಕೈಕ ಡ್ರೋನ್. 7,400 ನಾಟಿಕಲ್ ಮೈಲುಗಳ ವ್ಯಾಪ್ತಿಯೊಂದಿಗೆ 24ಕ್ಕೂ ಹೆಚ್ಚು ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತದೆ. 2025ರ ಹೊತ್ತಿಗೆ, ಯುಎಸ್ ನೌಕಾಪಡೆಯು ಒಟ್ಟು 20 ಎಂಕ್ಯೂ-4ಸಿ ಟ್ರೈಟನ್ ಡ್ರೋನ್‌ಗಳನ್ನು ಹೊಂದಿದ್ದು, ಇನ್ನೂ ಏಳು ಈ ಡ್ರೋನ್‌ಗಳನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆಯನ್ನು ಹೊಂದಿದೆ ಎಂದು ವರದಿಗಳಿವೆ.

ಪ್ರತಿ ಸೆಕೆಂಡಿಗೆ ಅಮೆರಿಕಕ್ಕೆ 9.8 ಲಕ್ಷ ರು. ಖರ್ಚು

ಇರಾನ್ ವಿರುದ್ಧ ಯುದ್ಧದಲ್ಲಿ ಅಮೆರಿಕ ಪ್ರತಿ ಸೆಕೆಂಡಿಗೆ 10,300 ಡಾಲರ್ (ಸುಮಾರು 9.8 ಲಕ್ಷ ರು.) ಖರ್ಚು ಮಾಡುತ್ತಿದೆ. ಸ್ಟಾಕ್‌ಹೋಮ್ ಇಂಟರ್ ನ್ಯಾಷನಲ್ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ನೀಡುವ ಮಾಹಿತಿಯ ಪ್ರಕಾರ, ಇದರಲ್ಲಿ ಯುದ್ಧಸಾಮಗ್ರಿಗಳು ಮತ್ತು ಕ್ಷಿಪಣಿಗಳು ಅತಿದೊಡ್ಡ ಪಾಲನ್ನು ಹೊಂದಿದ್ದು, ಅಮೆರಿಕಗೆ ಈ ಯುದ್ಧದಿಂದ ದಿನಕ್ಕೆ ಸರಿಸುಮಾರು 890 ಮಿಲಿಯನ್ ಡಾಲರ್ (8455 ಕೋಟಿ ರು.) ಖರ್ಚಾಗುತ್ತಿದೆ. ಅಮೆರಿಕದ ವಾಯು ಕಾರ್ಯಾಚರಣೆಗಳಿಂದ ದಿನಕ್ಕೆ 245 ಮಿಲಿಯನ್ ಡಾಲರ್ ವೆಚ್ಚವಾಗುತ್ತಿದೆ (ಸುಮಾರು 2,327.5 ಕೋಟಿ ರು.) ಎಂದು ಅಂದಾಜಿಸಲಾಗಿದೆ. ಇದು ಇದು ದೈನಂದಿನ ಖರ್ಚಿನ ಪ್ರಮಾಣದ 27.5% ಅನ್ನು ಪ್ರತಿನಿಧಿಸುತ್ತದೆ, ಆದರೆ ನೌಕಾ ಕಾರ್ಯಾಚರಣೆಗಳಿಂದ ದಿನಕ್ಕೆ ಸರಿಸುಮಾರು 155 ಮಿಲಿಯನ್ ಡಾಲರ್ (ಸುಮಾರು 1,472.5 ಕೋಟಿ ರು.) ವೆಚ್ಚವಾಗುತ್ತಿದೆ. ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳಾದ ಥಾಡ್, ಪೇಟ್ರಿಯಾಟ್ ಬ್ಯಾಟರಿಗಳು ಮತ್ತು ಏಜಿಸ್ ಬಿಎಂಡಿ ಪ್ರತಿಬಂಧಕಗಳ ಬಳಕೆಯಿಂದ ದಿನಕ್ಕೆ ಸುಮಾರು 95 ಮಿಲಿಯನ್ ಡಾಲರ್ (902.5 ಕೋಟಿ ರು.) ವೆಚ್ಚವಾಗುತ್ತಿದೆ. ಇದರ ಜೊತೆಗೆ ಗುಪ್ತಚರ ಮತ್ತು ಸೈಬರ್ ಕಾರ್ಯಾಚರಣೆಗಳಿಗೆ ದಿನಕ್ಕೆ ಸುಮಾರು 45 ಮಿಲಿಯನ್ ಡಾಲರ್ (ಸುಮಾರು 427.5 ಕೋಟಿ ರು.), ಮತ್ತು ಸಿಬ್ಬಂದಿ ಮತ್ತು ಸರಕು ಸಾಗಣೆಗೆ ದಿನಕ್ಕೆ ಸುಮಾರು 30 ಮಿಲಿಯನ್ ಡಾಲರ್ (ಸುಮಾರು 285 ಕೋಟಿ ರು.) ವೆಚ್ಚವಾಗುತ್ತದೆ ಎಂದು ವರದಿಯಾಗಿದೆ.

ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲಿ ಅಧ್ಯಕ್ಷ ಖರ್ಗೆ ಆಕ್ರೋಶ

ಸಂಸತ್ ಸದಸ್ಯರ ಸಂಖ್ಯೆ ಹೆಚ್ಚಳ: ಕೈ ವಿರೋಧ

ದೆಹಲಿ: ದೆಹಲಿಯಲ್ಲಿ ಶುಕ್ರವಾರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಕೂಡ ಇದ್ದರು. ಈ ವೇಳೆ ಮಾತನಾಡಿದ ಖರ್ಗೆ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಲು ಹೊರಟಿದೆ. ಲೋಕಸಭಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಹೊರಟಿದೆ. ಇದು ಮಾದರಿ ನೀತಿಸಂಹಿತೆಯ ಉಲ್ಲಂಘನೆಗೆ ಕಾರಣವಾಗಲಿದೆ ಎಂದು ಹೇಳಿದರು.

ಈ ವಿಚಾರದಲ್ಲಿ ಹೆಚ್ಚಿನ ಪರಿಶೀಲನೆ ಅಗತ್ಯವಿದೆ. ಅಷ್ಟೂ ಪ್ರತಿಪಕ್ಷಗಳು ಸಂಘಟಿತವಾಗಿ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯ ತಿಳಿಸಲಿವೆ. ಏ.16ರಿಂದ 18ರವರೆಗೆ ಹಾಕಿಕೊಂಡಿರುವ ವಿಶೇಷ ಸಂಸತ್ ಸಭೆಯ ಔಚಿತ್ಯವನ್ನೂ ಖರ್ಗೆ ಪ್ರಶ್ನಿಸಿದ್ದಾರೆ. ಮೋದಿ ಸರಕಾರ ರಾಜಕೀಯ ಲಾಭಕ್ಕಾಗಿ ಮಾತ್ರ ಇದನ್ನು ಮಾಡುತ್ತಿದೆ ಎಂದಿದ್ದಾರೆ.

ಕಲಹಪೀಡಿತ ನಾಡಿನಲ್ಲಿ ದಾರುಣ ಘಟನೆ, ಮದುವೆ ಮನೆಯಲ್ಲಿ ದುರಂತ

ಸುಡಾನ್‌ನಲ್ಲಿ ಡ್ರೋನ್ ದಾಳಿ: 30 ಮಂದಿ ಸಾವು

ದೆಹಲಿ: ಸುಡಾನ್‌ನ ಉತ್ತರ ದಾರ್ಫುರ್‌ನಲ್ಲಿ ಮದುವೆ ಸಮಾರಂಭವನ್ನು ಗುರಿಯಾಗಿಸಿಕೊಂಡು ಬುಧವಾರ ನಡೆದ ಡ್ರೋನ್ ದಾಳಿಯಲ್ಲಿ, ಕನಿಷ್ಠ 30 ನಾಗರಿಕರು ಸಾವನ್ನಪ್ಪಿದ್ದಾರೆ. ಕುತುಮ್ ಪಟ್ಟಣದಲ್ಲಿ ಈ ದುರ್ಘಟನೆಯಲ್ಲಿ ಸಾವಿನ ಸಂಖ್ಯೆ ಏರುವ ನಿರೀಕ್ಷೆಯಿದೆ. ಸುಡಾನ್‌ನಲ್ಲಿ ಸುಮಾರು ಮೂರು ವರ್ಷಗಳಿಂದ ನಡೆಯುತ್ತಿರುವ ಸಂಘರ್ಷದಲ್ಲಿ 40,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ದಾಳಿಗೆ ಸುಡಾನ್ ಸಶಸ್ತ್ರ ಪಡೆಗಳನ್ನು ಹೊಣೆಗಾರರೆಂದು ಸಾಮಾಜಿಕ ಜಾಲತಾಣಗಳಲ್ಲಿ ಆರೋಪಿಸಲಾಗಿದೆ. ನಾಗರಿಕರ ಮೇಲೆ ನಡೆದ ಈ ದಾಳಿ ಹಾಗೂ ಇತರ ಎಲ್ಲಾ ದಾಳಿಗಳನ್ನು ನಾವು ಖಂಡಿಸುತ್ತೇವೆ ಎಂದು ದುಜಾರಿಕ್ ಹೇಳಿದ್ದಾರೆ. ಈ ಕುರಿತು ಸುಡಾನ್ ಸೇನೆ ತಕ್ಷಣ ಪ್ರತಿಕ್ರಿಯೆ ನೀಡಿಲ್ಲ.

ಎಮರ್ಜೆನ್ಸಿ ಲಾಯರ್ಸ್ ಸಂಸ್ಥೆಯ ಪ್ರಕಾರ, ಮಾರ್ಚ್‌ನಿಂದ ದಕ್ಷಿಣ ಕೊರ್ಡೊಫಾನ್, ಬ್ಲೂ ನೈಲ್, ಪೂರ್ವ, ಕೇಂದ್ರ ಮತ್ತು ದಕ್ಷಿಣ ದಾರ್ಫುರ ಪ್ರದೇಶಗಳಲ್ಲಿ ನಡೆಯುತ್ತಿರುವ ನಿರಂತರ ಡ್ರೋನ್ ದಾಳಿಗಳಿಂದ ಹೆಚ್ಚಿನ ಜನರು ಸ್ಥಳಾಂತರಗೊಳ್ಳುತ್ತಿದ್ದಾರೆ. ಕಳೆದ ವಾರ ದೇಶದ ದಕ್ಷಿಣ-ಮಧ್ಯ ಭಾಗದ ಆಸ್ಪತ್ರೆಯ ಮೇಲೂ

ಡ್ರೋನ್ ದಾಳಿ ನಡೆದಿದ್ದು, ಕನಿಷ್ಠ 10 ಮಂದಿ ಸಾವನ್ನಪ್ಪಿದ್ದರು. ಪ್ರಸ್ತುತ ಘಟನೆಗೆ ನಿರ್ದಿಷ್ಟ ಕಾರಣಗಳು ಕಂಡುಬಂದಿಲ್ಲ. ಆದರೆ ಅದು ಆ ದೇಶದಲ್ಲಿ ನಡೆಯುತ್ತಿರುವ ಅಂತರ್ಯುದ್ಧದ ಪರಿಣಾಮ ಎಂದು ಮೂಲಗಳು ಹೇಳಿವೆ.

ನಿತೀಶ್ ಮುಖ್ಯಮಂತ್ರಿ ಅವಧಿ ಮುಕ್ತಾಯ | ಏ.14ಕ್ಕೆ ಬಿಹಾರಕ್ಕೆ ನೂತನ ಸಿಎಂ ಆಯ್ಕೆ?

ರಾಜ್ಯಸಭಾ ಸದಸ್ಯರಾಗಿ ನಿತೀಶ್ ಪ್ರಮಾಣ ಸ್ವೀಕಾರ

ದೆಹಲಿ: ನಿತೀಶ್ ಕುಮಾರ್ ರಾಜ್ಯಸಭಾ ಸದಸ್ಯರಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದು ರಾಜ್ಯ ಸರ್ಕಾರದಿಂದ ಅವರು ಹೊರಬರುವ ಸೂಚನೆಯಾಗಿದ್ದು, ಬಿಹಾರದಲ್ಲಿ (ಆಜಿಜಚ್ಟ) ಹೊಸ ಸರ್ಕಾರ ರಚನೆಗೆ ದಾರಿ ಸುಗಮಗೊಳಿಸಿದೆ. ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಬಿಹಾರ ಉಪಮುಖ್ಯಮಂತ್ರಿಗಳಾದ ವಿಜಯ್ ಕುಮಾರ್ ಸಿನ್ಹಾ ಮತ್ತು ಸಾಮ್ರಾಟ್ ಚೌಧರಿ ಭಾಗವಹಿಸಿದ್ದರು. ಏ.14ಕ್ಕೆ ಬಿಹಾರಕ್ಕೆ ನೂತನ ಮುಖ್ಯಮಂತ್ರಿ ಆಯ್ಕೆಯಾಗುವ ನಿರೀಕ್ಷೆಯಿದೆ.

ಬಿಹಾರದ ಮುಂದಿನ ಸರ್ಕಾರವನ್ನು ರಾಜ್ಯ ವಿಧಾನಸಭೆಯಲ್ಲಿ ಅತಿದೊಡ್ಡ ಪಕ್ಷವಾದ ಬಿಜೆಪಿ ಮುನ್ನಡೆಸುವ ನಿರೀಕ್ಷೆಯಿದೆ. ಹಲವಾರು ಬಿಜೆಪಿ ನಾಯಕರನ್ನು ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುತ್ತಿದೆ. ಅವರಲ್ಲಿ ಪ್ರಸ್ತುತ ಉಪಮುಖ್ಯಮಂತ್ರಿ ಮತ್ತು ತಾರಾಪುರದ ಶಾಸಕ ಸಾಮ್ರಾಟ್ ಚೌಧರಿ ಕೂಡ ಒಬ್ಬರು, ಗೃಹ ವ್ಯವಹಾರಗಳ ರಾಜ್ಯ ಸಚಿವ ಮತ್ತು ಉಜಿಯಾರಪುರದ ಲೋಕಸಭಾ ಸಂಸದ ನಿತ್ಯಾನಂದ ರೈ

ಕೂಡ ಪ್ರಬಲ ಸ್ಪರ್ಧಿಯಾಗಿದ್ದಾರೆ.

ಏಪ್ರಿಲ್ 15ರಂದು ಬಿಹಾರದ ನೂತನ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದ್ದು, ಪಾಟ್ನಾದ ಗಾಂಧಿ ಮೈದಾನದಲ್ಲಿ ಸಮಾರಂಭ ನಡೆಯುವ ನಿರೀಕ್ಷೆಯಿದೆ. ಕಳೆದ ತಿಂಗಳು ಜೆಡಿಯು ಸೇರಿದ ನಿತೀಶ್ ಅವರ ಪುತ್ರ ನಿಶಾಂತ್ ಅವರನ್ನು ಹೊಸ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ನೇಮಿಸುವ ಸಾಧ್ಯತೆ ಇದೆ ಎನ್ನಲಾಗಿದೆ.ಹೊಸ ಹುದ್ದೆ ವಹಿಸಿಕೊಳ್ಳುವ ಒಂದು ದಿನ ಮೊದಲು ನಿತೀಶ್ ಕುಮಾರ್ ದೆಹಲಿಗೆ ಪ್ರಯಾಣ ಬೆಳೆಸಿ, ಶೀಘ್ರದಲ್ಲೇ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಾಗಿ ದೃಢಪಡಿಸಿದ್ದರು. ಬಿಹಾರದಲ್ಲಿ ನನ್ನ ಹೆಚ್ಚಿನ ಕೆಲಸವನ್ನು ಪೂರ್ಣಗೊಳಿಸಿದ್ದೇನೆ.

ಈಗ ದೆಹಲಿಯಲ್ಲಿ ನನ್ನ ಜವಾಬ್ದಾರಿಗಳತ್ತ ಗಮನಹರಿಸಲು ಉದ್ದೇಶಿಸಿದ್ದೇನೆ ಎಂದು ತಿಳಿಸಿದ್ದರು.

ನಾನು ಅಲ್ಲಿನ ಸಿಎಂ ಸ್ಥಾನದಿಂದ ಕೆಳಗಿಳಿದು ಇಲ್ಲಿ ಕೆಲಸ ಮಾಡುತ್ತೇನೆ. ಮೂರು ಅಥವಾ ನಾಲ್ಕು ದಿನಗಳಲ್ಲಿ ನಾನು ರಾಜೀನಾಮೆ ನೀಡುತ್ತೇನೆ. ಬೇರೆಯವರಿಗೆ ಸಿಎಂ ಸ್ಥಾನ ನೀಡಲಾಗುವುದು ಎಂದು ನಿತೀಶ್ ಹೇಳಿದ್ದರು. ನಿತೀಶ್ ಬಿಹಾರದ ಅತ್ಯಂತ ದೀರ್ಘಾವಧಿಯ ಮುಖ್ಯಮಂತ್ರಿಯಾಗಿದ್ದಾರೆ. 1985 ರಲ್ಲಿ ಶಾಸಕರಾಗಿ ತಮ್ಮ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದರು. ನಂತರ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿದ್ದರು. 2005ರಲ್ಲಿ ಮೊದಲ ಬಾರಿಗೆ ಬಿಹಾರದ ಮುಖ್ಯಮಂತ್ರಿಯಾದರು.

ತೈವಾನ್ ಸರಕಾರದಿಂದ ಅಮೆರಿಕದೊಂದಿಗೆ ಮೈತ್ರಿ
ವಿಪಕ್ಷ ನಾಯಕಿ ಚೆಂಗ್ ಚೀನಾಕ್ಕೆ ಮಹತ್ವದ ಪ್ರವಾಸ

ಚೀನಾ ಅಧ್ಯಕ್ಷ ಕ್ಷಿ ಜಿನ್‌ಪಿಂಗ್, ತೈವಾನ್ ವಿರೋಧ ಪಕ್ಷದ ನಾಯಕಿ ಚೆಂಗ್ ಭೇಟಿ!

ಬೀಜಿಂಗ್: ಇಡೀ ವಿಶ್ವ ಅಮೆರಿಕ-ಇರಾನ್ ನಡುವಿನ ಶಾಂತಿ ಮಾತುಕತೆಯ ಬಗ್ಗೆ ಚರ್ಚೆ ನಡೆಸುತ್ತಿದ್ದರೆ, ಇನ್ನೊಂದು ಕಡೆ ಕ್ಷಿ ಜಿನ್‌ಪಿಂಗ್ ಮತ್ತು ತೈವಾನ್‌ನ ವಿರೋಧ ಪಕ್ಷದ ನಾಯಕಿ ಚೆಂಗ್ ಲೀ ವುನ್ ನಡುವೆ ಐತಿಹಾಸಿಕ ಮಾತುಕತೆ ನಡೆಸಿದೆ. ತೈವಾನ್‌ನ ವಿರೋಧ ಪಕ್ಷವಾದ ಕುವೊಮಿಂಟಾಂಗ್ ನಾಯಕಿ ಚೆಂಗ್ ಲಿ-ವುನ್ ಚೀನಾಗೆ ಶಾಂತಿಯಾತ್ರೆ ಕೈಗೊಂಡಿದ್ದಾರೆ. ಇಂದು ಬೀಜಿಂಗ್‌ನ ಪೀಪಲ್ ಸಭಾಂಗಣದಲ್ಲಿ ಇಬ್ಬರೂ ಭೇಟಿಯಾದರು.

ಮಾತುಕತೆಯ ವೇಳೆ ಜಿನ್‌ಪಿಂಗ್, ಜಲಸಂಧಿಯ ಎರಡೂ ಬದಿಯಲ್ಲಿರುವವರು ಒಂದೇ ಕುಟುಂಬಕ್ಕೆ ಸೇರಿದ ಚೀನೀಯರು. ಚೀನಾ ಮತ್ತು ತೈವಾನ್ ಜನರು ಒಂದು ದಿನ ಒಂದಾಗುತ್ತಾರೆ ಎಂಬ ಬಗ್ಗೆ ತಮಗೆ ಪೂರ್ಣ

ವಿಶ್ವಾಸವಿದೆ ಎಂದು ತಿಳಿಸಿದರು. ತೈವಾನ್ ಜಲಸಂಧಿಯು ಜಾಗತಿಕ ಸಂಘರ್ಷದ ಕೇಂದ್ರವಾಗಬಾರದು ಮತ್ತು ಉಭಯ ದೇಶಗಳ ನಡುವೆ ಯುದ್ಧವನ್ನು ತಪ್ಪಿಸುವುದು ಅತ್ಯಗತ್ಯ. ಈ ಭೇಟಿಯು ಎರಡೂ ದೇಶಗಳ ನಡುವೆ ಭಶಾಂತಿಯ ಬೀಜಭಿ ಬಿತ್ತುವ ಪ್ರಯತ್ನವಾಗಿದೆ ಎಂದು ಚೆಂಗ್ ಲಿ-ವುನ್ ಬಣ್ಣಿಸಿದ್ದಾರೆ. ತೈವಾನ್‌ನಲ್ಲಿ ಅಧಿಕಾರದಲ್ಲಿರುವ ಸರ್ಕಾರ ಅಮೆರಿಕದತ್ತ ವಾಲುತ್ತಿರುವ ಸಮಯದಲ್ಲೇ ಈ ಭೇಟಿ ನಡೆದಿದೆ.

ಸಮಾಚಾರ ಸಣ್ಣದಲ್ಲ

ನರಸಿಂಹ ಜಯಂತಿ ಮಹೋತ್ಸವ 29ಕ್ಕೆ

ಬೆಂಗಳೂರು: ಭಕ್ತಿ ಭಾರತಿ ಪ್ರತಿಷ್ಠಾನ ವತಿಯಿಂದ ಏ.29 ಮತ್ತು 30 ರಂದು ನಗರದ ಜೆ.ಪಿ.ನಗರ 8ನೇ ಹಂತದ ಶ್ರೀ ವಿಶ್ವೇಶಪುರಂದರ ವೇದಿಕೆಯಲ್ಲಿ ಶ್ರೀ ನರಸಿಂಹ ಜಯಂತೀ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ವೆಂಕಟೇಶ್ ಬಾಯರಿಗೆ ವಿಶ್ವೇಶವಿದ್ವದ್ವರ್ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ವೇಳೆ ಪೂರ್ಣ ಪ್ರಜ್ಞವಿದ್ಯಾಪೀಠದ ವೀರ ನಾರಾಯ ಣಾಚಾರ್ಯ ಪಾಂಡುರಂಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದು, ಸಂಜೆ ಸಂಗೀತ ಕಛೇರಿ ಮತ್ತು ಅನ್ನ ಪ್ರಸಾದವಿರುವುದು. ಏ.30 ರಂದು ಬೆ.8 ರಿಂದ ನರಸಿಂಹದೇವರಿಗೆ ಪೂಜೆ, ಸಂಜೆ 5ಕ್ಕೆ ಡಾ. ಗುರುರಾಜ್ ಕರಜಗಿ ಇಂದ ವಿಶೇಷ ಉಪನ್ಯಾಸ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

3 ಅನುವಾದಿತ ನಾಟಕ ಬಿಡುಗಡೆ ನಾಳೆ

ಬೆಂಗಳೂರು: ಬಹುವಚನ ಪ್ರಕಾಶನ ವತಿಯಿಂದ ಏ.12 ಬೆ.10.30ಕ್ಕೆ ನಗರದ ಬನಶಂಕರಿ 2ನೇ ಹಂತದ ಸುಚಿತ್ರಾ ಸಭಾಂಗಣದಲ್ಲಿ ಮರಾಠಿಯಿಂದ ಕನ್ನಡಕ್ಕೆ ಅನುವಾದಗೊಂಡ ಮೂರು ನಾಟಕಗಳನ್ನು ಬಿಡುಗಡೆಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ದತ್ತಾ ಪಾಟೀಲರ -ರಾಜಹಂಸ,ಚೇತನ್ ದಾತಾರರ-ನೆರಳುಗಳು ಹಾಗೂ ಜಯಂತ್ ಪವಾರರ-ಅತಂತ್ರ ಎಂಬ ಮೂರು ನಾಟಕಗಳನ್ನು ಬಿಡುಗಡೆಗೊಳಿಸಲಾಗುತ್ತಿದ್ದು, ಮಾರಾಠಿಯಿಂದ ಕನ್ನಡಕ್ಕೆ ಕೃತಿಗಳ ಅನುವಾದದ ಕಾರ್ಯವನ್ನು ಅಶೋಕ್ ಚಿಕ್ಕಪಾರಪ್ಪ, ಡಾ.ಮಾಧುರಿ ಕುಲಕರ್ಣಿ,ಅನಿರುದ್ಧ ಜೋಶಿ ಹಾಗೂ ವಿಶಾಲ ರಾಮಚಂದ್ರ ಮಹಾಲೆ ಅವರು ಮಾಡಿದ್ದಾರೆ. ಹಿರಿಯ ರಂಗಕರ್ಮಿ ಹಾಗೂ ಧಾರವಾಡ ರಂಗಾಯಣದ ಮಾಜಿ ನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಹಿರಿಯ ಲೇಖಕಿ ಡಾ.ಹೇಮಾ ಪಟ್ಟಣಶೆಟ್ಟಿ ಮತ್ತು ರಂಗಕರ್ಮಿ ಹಾಗೂ ಅನುವಾದಕರಾದ ಡಿ.ಎಸ್.ಚೌಗಲೆ ಭಾಗವಹಿಸಲಿದ್ದು, ನಾಟಕ ವಾಚನವನ್ನು ಕೀರ್ತಿ ಭಾನು ಮತ್ತು ಪ್ರಾಚಿ ರವಿಚಂದ್ರ ಮಾಡಲಿ ದ್ದಾರೆ ಎಂದು ಪ್ರಕಟಣೆಯಲ್ಲಿ ಆಯೋಜಕರು ತಿಳಿಸಿದ್ದಾರೆ.

ಇಡ್ಲಿ ಕಾಫಿ ಪರಂಪರೆ ಪಯಣ 19ಕ್ಕೆ ಬಿಡುಗಡೆ

ಬೆಂಗಳೂರು: ಬ್ರಾಹ್ಮಣರ ಕಾಫಿಬಾರ್, ದೃಶ್ಯ ಕಾವ್ಯ, ಅಡಿಗಾಸ್ ಕುಟುಂಬ ವತಿಯಿಂದ ಏ.19 ಬೆ.10.30ಕ್ಕೆ ನಗರದ ಜಯನಗರದಲ್ಲಿರುವ ಆರ್ .ವಿ.ಟೀಚರ್ಸ್ ಕಾಲೇಜ್‌ನ ಸಭಾಂಗಣದಲ್ಲಿ ರಾಧಾಕೃಷ್ಣ ಅಡಿಗ ವಿರಚಿತ 'ಇಡ್ಲಿ ಕಾಫಿ ಪರಂಪರೆ-ಪಯಣ' ಎಂಬ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ದಕ್ಷಿಣ ಕನ್ನಡದ ಪುಟ್ಟ ಊರಿನಿಂದ ದಶಕಗಳ ಹಿಂದೆ ಬೆಂಗಳೂರಿಗೆ ವಲಸೆ ಬಂದು ಹೊಟೇಲ್ ಉದ್ಯಮದಲ್ಲಿ ಸ್ಮರಣೀಯ ಪರಂಪರೆ ಹುಟ್ಟುಹಾಕಿದ ಅಪೂರ್ವ ಕಥನ ಇದಾಗಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಮಂತ್ರಾಲಯದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ, ಉಚ್ಚ ನ್ಯಾಯಾಲಯ ನ್ಯಾಯಾಧೀಶ ದೇವದಾಸ್, ಗೃಹಸಚಿವ ಡಾ.ಜಿ.ಪರಮೇಶ್ವರ್, ಸಂಸದ ತೇಜಸ್ವಿ ಸೂರ್ಯ, ವಿಶ್ವವಾಣಿ ಸಮೂಹ ಸಂಸ್ಥೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಶಾಸಕ ಉದಯ್ ಗರುಡಾಚಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಂಜಲ್ ತಿವಾರಿ ರಾಜ್ಯಕ್ಕೆ 2ನೇ ರ‍್ಯಾಂಕ್

ಬೆಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಬೆಂಗಳೂರಿನ ವಿದ್ಯಾರ್ಥಿನಿ ಏಂಜಲ್ ತಿವಾರಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 598 ಪಡೆಯುವ ಅಂಕ ಮೂಲಕ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿದ್ದಾರೆ. ನಗರದ ಎಂ.ಜಿ ರೋಡ್‌ನಲ್ಲಿರುವ ಬೇಸ್ ಪಿ.ಯು ಕಾಲೇಜಿನ ವಿದ್ಯಾರ್ಥಿನಿ ಏಂಜಲ್ ತಿವಾರಿ ವಿಜ್ಞಾನ ವಿಭಾಗ ದಲ್ಲಿ 598 ಅಂಕ ಪಡೆಯುವ ಮೂಲಕ ಅಪ್ರತಿಮ ಸಾಧನೆ ಮಾಡಿದ್ದಾರೆ. ಇಂಗ್ಲಿಷ್ ವಿಷಯದಲ್ಲಿ 100 ಕ್ಕೆ 98 ಅಂಕ ಪಡೆದಿದ್ದರೆ, ಇನ್ನುಳಿದ ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಹಾಗೂ ಹಿಂದಿ ವಿಷಯಗಳಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ.

₹19.44 ಕೋಟಿ ನಿವ್ವಳ ಲಾಭ ಗಳಿಕೆ

ಬೆಂಗಳೂರು: ಸಹಕಾರಿ ಬ್ಯಾಂಕ್‌ಗಳಲ್ಲಿ ಒಂದಾಗಿರುವ ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ 2025-26ನೇ ಆರ್ಥಿಕ ಸಾಲಿನಲ್ಲಿ 19.44 ಕೋಟಿ ರು. ಲಾಭ ಗಳಿಸಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಎನ್.ಎಂ.ಸುರೇಶ್ ತಿಳಿಸಿದ್ದಾರೆ. ಒಟ್ಟು ಆರು ಶಾಖೆಗಳನ್ನು ಹೊಂದಿದೆ. ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿ ಮುನ್ನಡೆಯುತ್ತಿರುವ ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯವಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಆಡಿಟ್‌ಗೂ ಮುನ್ನ .19.44 ಕೋಟಿ ರು. ಗಳಿಸಿದ್ದು ಬ್ಯಾಂಕ್‌ನ ಸಮರ್ಥ ಆಡಳಿತ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಷೇರು ಬಂಡವಾಳ 21.97ಕೋಟಿ ರು., ಆಪದ್ಧನ ನಿಧಿ 25.02 ಕೋಟಿ ರು., ಇತರೆ ನಿಧಿಗಳು 80.17 ಕೋಟಿ ರು., ಠೇವಣಿ ಸಂಗ್ರಹಣೆ 813.28 ಕೋಟಿ ರು., ದುಡಿಯುವ ಬಂಡವಾಳ 978.81 ಕೋಟಿ ರು., ಹಾಗೂ ಬ್ಯಾಂಕ್ ನೀಡಿರುವ ಸಾಲ ಹಾಗೂ ಮುಂಗಡಗಳು. 495.03 ಕೋಟಿ ರು., ಸರಕಾರಿ ಹೂಡಿಕೆಗಳಲ್ಲಿ 272.19 ಕೋಟಿ ರು. ಗಳನ್ನು ತೊಡಗಿಸಲಾಗಿದೆ ಎಂದು ಹೇಳಿದರು.

ಆಟೋ ಗ್ಯಾಸ್ ಸಂಕಷ್ಟ ಮುಂದುವರಿಕೆ | ತೈಲ ಕಂಪನಿಗಳ ಮುಖ್ಯಸ್ಥರ ಸಭೆ ಬಳಿಕ ಮಾಹಿತಿ

ಸುಧಾರಣೆಗೆ ಬಂದ ಅಡುಗೆ ಅನಿಲಗಳ ಪೂರೈಕೆ ಸಮಸ್ಯೆ: ಕೆ.ಎಚ್.ಮುನಿಯಪ್ಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧ ಸನ್ನಿವೇಶದ ಪರಿಣಾಮವಾಗಿ ಉಂಟಾಗಿದ್ದ ಅಡುಗೆ ಅನಿಲ ಸಮಸ್ಯೆ ರಾಜ್ಯದಲ್ಲಿ ಕ್ರಮೇಣ ಸುಧಾರಣೆಯ ದಾರಿಗೆ ಬಂದಿದೆ. ಆದರೆ, ಆಟೋ ಗ್ಯಾಸ್ ಕೊರತೆ ಇನ್ನೂ ನಿವಾರಣೆಯಾಗದೆ, ಬದಲಾಗಿ ಹೆಚ್ಚಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ. ಎಚ್. ಮುನಿಯಪ್ಪ ತಿಳಿಸಿದರು.

ಶುಕ್ರವಾರ ಆಯೋಜಿಸಿದ್ದ ಕೇಂದ್ರ ಸರಕಾರಿ ಸ್ವಾಮ್ಯದ ತೈಲ ಕಂಪನಿಗಳ ಮುಖ್ಯಸ್ಥರು ಹಾಗೂ ಸಮನ್ವಯಕಾರರೊಂದಿಗೆ ಮಹತ್ವದ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸುಮಾರು 5 ಲಕ್ಷ ಆಟೋ ರಿಕ್ಷಾಗಳಿದ್ದು, ಅವುಗಳಲ್ಲಿ ಸುಮಾರು 3 ಲಕ್ಷ ಆಟೋಗಳು ಗ್ಯಾಸ್ ಮೇಲೆ ಅವಲಂಬಿತವಾಗಿವೆ. ಬೆಂಗಳೂರಿನಲ್ಲಿ ಮಾತ್ರವೇ 1.60 ಲಕ್ಷಕ್ಕೂ ಹೆಚ್ಚು ಆಟೋಗಳು ಆಟೋ ಗ್ಯಾಸ್ ಬಳಸುತ್ತಿವೆ. ಸರಕಾರಿ ಸ್ವಾಮ್ಯದ ಗ್ಯಾಸ್ ಬಂಕ್‌ಗಳು ಒಟ್ಟಾರೆ 60 ಲಕ್ಷ ಮೆಟ್ರಿಕ್ ಟನ್ ಗ್ಯಾಸ್ ಪೂರೈಸುತ್ತಿದ್ದು, ಖಾಸಗಿ ಕಂಪನಿಗಳು ಸುಮಾರು 220 ಲಕ್ಷ ಮೆಟ್ರಿಕ್ ಟನ್ ಗ್ಯಾಸ್ ಪೂರೈಕೆ ಮಾಡುತ್ತಿವೆ. ಭಾರತ್ ಪೆಟ್ರೋಲಿಯಂ ಮತ್ತು ಇಂಡಿಯನ್ ಆಯಿಲ್ ಸೇರಿದಂತೆ ಸರಕಾರಿ ಬಂಕ್‌ಗಳಲ್ಲಿ ಶೇ.98ರಷ್ಟು ಪೂರೈಕೆ ಸಾಮಾನ್ಯ ಸ್ಥಿತಿಯಲ್ಲಿದೆ. ಆದರೆ ಖಾಸಗಿ ಗ್ಯಾಸ್ ಬಂಕ್‌ಗಳಿಗೆ ಸರಬರಾಜು ಸ್ಥಗಿತಗೊಂಡಿದ್ದು, ಅವು ವಿದೇಶದಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ. ಗ್ಯಾಸ್ ದೊರೆಯದ ಕಾರಣ ಬಹುತೇಕ ಖಾಸಗಿ ಬಂಕ್‌ಗಳು ಮುಚ್ಚಲ್ಪಟ್ಟಿವೆ. ಗ್ಯಾಸ್ ಕಂಪನಿ ಮಾತ್ರ ಅಲ್ಪ ಪ್ರಮಾಣದಲ್ಲಿ ಪೂರೈಕೆ ಮಾಡುತ್ತಿದೆ. ಕಾಳಸಂತೆಯಲ್ಲಿ ಗ್ಯಾಸ್ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅವೈಧವಾಗಿ ಹೆಚ್ಚಿನ ದರ ವಸೂಲಿ ಮಾಡುವ ಬಂಕ್‌ಗಳನ್ನು ಜಪ್ತಿ ಮಾಡಲಾಗುವುದು ಎಂದರು.

ನಗರ ಪ್ರದೇಶದಲ್ಲಿ 25 ದಿನಗಳಿಗೆ ಒಂದು ಅಡುಗೆ ಸಿಲಿಂಡರ್ ಮತ್ತು ಗ್ರಾಮೀಣ ಪ್ರದೇಶದಲ್ಲಿ 45 ದಿನಗಳಿಗೆ ಒಂದು ಸಿಲಿಂಡರ್ ವಿತರಿಸುವ ಕ್ರಮವನ್ನು ಕೇಂದ್ರ ಸರಕಾರ ಜಾರಿಗೆ ತಂದಿದೆ. ಯುದ್ಧ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ನಿಯಮ ಜಾರಿಗೊಂಡಿದ್ದು, ಗ್ರಾಹಕರು ಹೊಸ ಸಿಲಿಂಡರ್ ಬುಕ್ ಮಾಡಿದ ತಕ್ಷಣವೇ ಅದೇ ದಿನ ಸರಬರಾಜು ಆಗುವಂತೆ ಕ್ರಮ ಕೈಗೊಳ್ಳಬೇಕೆಂದು ಕೇಂದ್ರಕ್ಕೆ ಸೂಚನೆ ನೀಡಿದೆ ಎಂದರು.

ಖಾಸಗಿ ಬಂಕ್ ಮಾಲೀಕರೊಂದಿಗೆ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗುವುದು. ಖಾಸಗಿ ವಲಯವು ಗ್ಯಾಸ್ ಆಮದು ಮಾಡಲು ಅಸಮರ್ಥತೆ ವ್ಯಕ್ತಪಡಿಸಿದರೆ, ಕೇಂದ್ರ ಸರಕಾರಕ್ಕೆ ಮತ್ತೊಮ್ಮೆ ಪತ್ರ ಬರೆಯಲಾಗುವುದು. ಗ್ಯಾಸ್ ಪೂರೈಕೆ, ಪರವಾನಗಿ ನೀಡುವುದು ಸೇರಿದಂತೆ ಎಲ್ಲಾ ಅಧಿಕಾರ ಕೇಂದ್ರ ಸರಕಾರದ ಅಧೀನದಲ್ಲಿರುವುದರಿಂದ, ರಾಜ್ಯ ಸರಕಾರ ಪಾತ್ರ ಸೀಮಿತವಾಗಿದೆ.

- ಕೆ.ಎಚ್.ಮುನಿಯಪ್ಪ
ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

ಗ್ಯಾಸ್ ದರದಲ್ಲಿ ಅಕ್ರಮ ವಸೂಲಿ: ಕ್ರಮಕ್ಕೆ ಸೂಚನೆ

ಕೇಂದ್ರ ಸರಕಾರ ಜನರ ಸಂಕಷ್ಟಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸಲು ವಿಫಲವಾಗಿದೆ. ಲಕ್ಷಾಂತರ ಆಟೋ ಚಾಲಕರು ಗ್ಯಾಸ್ ಅವಲಂಬಿತ ಜೀವನ ನಡೆಸುತ್ತಿದ್ದು, ಸಾರ್ವಜನಿಕರ ಸಾರಿಗೆ ವ್ಯವಸ್ಥೆಯ ಮೇಲೂ ಇದರ ಪರಿಣಾಮ ಬೀರುತ್ತಿದೆ. ಸಮಸ್ಯೆಗೆ ತ್ವರಿತ ಪರಿಹಾರ ನೀಡುವುದು ಕೇಂದ್ರದ ಜವಾಬ್ದಾರಿ. ಗ್ಯಾಸ್ ದರವನ್ನು ಸರಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚಾಗಿ ವಸೂಲಿ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ 1491 ದಾಳಿಗಳನ್ನು ನಡೆಸಿ, 29 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. 22 ಮಂದಿಯನ್ನು ಬಂಧಿಸಲಾಗಿದ್ದು, 1694 ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಪ್ರಾಯೋಗಿಕ ಕಲಿಕೆ ಅಗತ್ಯ

ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರು ಬಿಎಂಎಸ್‌ಇ ಎಐಸಿಟಿಇ ಐಡಿಯಾ ಲ್ಯಾಬ್ ಮತ್ತು ಡಿಜಿಟಲ್ ಡಿಸ್ಪ್ಲೇ ಸಿಸ್ಟಂ ಉದ್ಘಾಟಿಸಿದರು. ಬಿಎಂಎಸ್‌ಸಿಇ ಟ್ರಸ್ಟಿ ಡಾ.ಬಿ.ಎಸ್.ರಾಗಿಣಿ ನಾರಾಯಣನ್, ಬಿಎಂಎಸ್‌ಸಿಇ ಟ್ರಸ್ಟಿ ಅವಿರಾಮ್ ಶರ್ಮಾ, ಉಪ ಪ್ರಾಂಶುಪಾಲ ಡಾ.ಎಲ್.ರವಿಕುಮಾರ್ ಇದ್ದರು.

ಬೆಂಗಳೂರು: ವಿದ್ಯಾರ್ಥಿಗಳು ಕಾಲಹರಣ ಮಾಡುವ ಬದಲು ಹೆಚ್ಚಿನ ಸಮಯ ಪ್ರಯೋಗಾಲಯದಲ್ಲಿ ಕಳೆಯುವ ಮೂಲಕ ಕೌಶಲ್ಯ ಶಿಕ್ಷಣ ಪಡೆದುಕೊಂಡು ಉದ್ಯೋಗಗಿಟ್ಟಿಸಿಕೊಳ್ಳಿ ಎಂದು ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಹೇಳಿದರು.

ಬಿಎಂಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್ ಬಸವನಗುಡಿಯಲ್ಲಿ ಆಯೋಜಿಸಿದ್ದ ಬಿಎಂಎಸ್‌ಇ ಎಐಸಿಟಿಇ ಐಡಿಯಾ ಲ್ಯಾಬ್ ಮತ್ತು ಡಿಜಿಟಲ್ ಡಿಸ್ಪ್ಲೇ ಸಿಸ್ಟಂ ಉದ್ಘಾಟಿಸಿ ಮಾತನಾಡಿ, ಇಂದು ವಿದ್ಯಾರ್ಥಿಗಳಿಗೆ ತರಗತಿಗಿಂತ ಪ್ರಯೋಗಾಲಯದಲ್ಲಿ ಸಮಯ ಕಳೆಯಬೇಕು. ಏಕೆಂದರೆ, ಥಿಯರಿ ಶಿಕ್ಷಣಕ್ಕಿಂತ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತಿದೆ. ಇಲ್ಲಿ ವಿದ್ಯಾರ್ಥಿಗಳು ಪ್ರಯೋಗಾಲಯದಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ನೂತನ ಉತ್ಪನ್ನಗಳನ್ನು ನಿರೀಕ್ಷಿಸಬಹುದಾಗಿದೆ ಎಂದರು. ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಭೀಮೇಶ ಆರ್ಯ ಮಾತನಾಡಿ, ಇದು ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡುವ ಉದ್ದೇಶದಿಂದ ಲ್ಯಾಬ್ ತೆರೆಯಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ನೇರವಾಗಿ ಕೌಶಲ್ಯ ತರಬೇತಿ ನೀಡಲಿದೆ. ಇದರಿಂದ ವಿದ್ಯಾರ್ಥಿಗಳು ಕನಿಷ್ಠ ನಾಲ್ಕು ಕೌಶಲ್ಯ ಕೋರ್ಸ್‌ನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬಹುದಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸುಲಭವಾಗಿ ಉದ್ಯೋಗ ಸಿಗಲಿದೆ ಎಂದರು.

ಮಕ್ಕಳಲ್ಲಿನ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

ವಾಸವಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಿ.ಆರ್. ವಿಜಯಸಾರಥಿ ಅವರು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿದರು.

ಬೆಂಗಳೂರು: ಪ್ರತಿಭೆ ಯಾರೊಬ್ಬರ ಸ್ವತ್ತು ಅಲ್ಲ. ಪ್ರತಿಯೊಬ್ಬ ಮಕ್ಕಳಲ್ಲೂ ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹ ಮತ್ತು ಸಹಕಾರ ನೀಡುವುದು ಅತ್ಯಂತ ಮುಖ್ಯ. ಈ ದಿಸೆಯಲ್ಲಿ ವಾಸವಿ ವಿದ್ಯಾಪೀಠ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ವಾಸವಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಿ. ಆರ್. ವಿಜಯಸಾರಥಿ ತಿಳಿಸಿದರು.

ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು, ಪೋಷಕರಿಗೆ ವಾಸವಿ ಇಂಟರ್ ನ್ಯಾಷನಲ್ ಪಿ.ಯು.ಕಾಲೇಜಿನಲ್ಲಿ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಮಕ್ಕಳಿಗೂ ಶಿಕ್ಷಣ ದೊರೆಯಬೇಕು, ಯಾರೂ ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ. ನಮ್ಮ ಕಾಲೇಜಿನಲ್ಲಿ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳೇ ಹೆಚ್ಚು ಇದ್ದರೂ, ಅವರಿಗೆ ಹೈಟೆಕ್ ಕಾಲೇಜುಗಳಲ್ಲಿ ದೊರೆಯುವಂತಹ ಗುಣಮಟ್ಟದ ಶಿಕ್ಷಣ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದರ ಜತೆಗೆ, ಪದವಿ ಪೂರ್ಣಗೊಂಡ ಬಳಿಕ ಉದ್ಯೋಗ ಮೇಳಗಳನ್ನು ಆಯೋಜಿಸಿ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗುತ್ತಿದೆ. ಈಗಾಗಲೇ ಸಾವಿರಾರು ಯುವಕ-ಯುವತಿಯರಿಗೆ ಉದ್ಯೋಗ ಲಭಿಸಿದೆ. ಅತಿಹೆಚ್ಚು ಅಂಕ ಗಳಿಸಿದ ಪದವಿ ಶಿಕ್ಷಣಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ 50 ಶೇಕಡಾ ವಿನಾಯಿತಿ ನೀಡಲಾಗುತ್ತದೆ. ನಮ್ಮ ಸಂಸ್ಥೆಯಲ್ಲಿ ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಹೈಟೆಕ್ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಈ ವೇಳೆ ವಾಸವಿ ಇಂಟರ್ ನ್ಯಾಷನಲ್ ಪಿ.ಯು ಕಾಲೇಜಿನ ಅತಿಹೆಚ್ಚು ಅಂಕ ಗಳಿಸಿದ ಅಮೂಲ್ಯ, ಶ್ರೇಯಾ, ಯಶ್ವಿನಿ, ಜಲಾಧರಿ ಲಹರಿ, ತರುಣ್, ಎಲ್.ಮದನ್ ಹಾಗೂ ಭೂಮಿಕಾ ಅವರನ್ನು ಸನ್ಮಾನಿಸಲಾಯಿತು.

ವಂಡರ್‌ಲಾದಲ್ಲಿ ಇನ್ವರ್ಟೆಡ್ ರೋಲರ್ ಕೋಸ್ಟರ್ ರೈಡ್‌ಗೆ ಶ್ರೇಯಾಂಕಾ ಚಾಲನೆ

ಬೆಂಗಳೂರು: ಬೆಂಗಳೂರಿನ ವಂಡರ್ ಲಾದಲ್ಲಿ ಗರುಡ ಗ್ಲೈಡ್ ಎಂಬ ಅತ್ಯಾಧುನಿಕ ಇನ್ವರ್ಟೆಡ್ ರೋಲರ್ ಕೋಸ್ಟರ್ ರೈಡ್‌ನ್ನು ಆರಂಭಿಸಿದೆ. ಈ ಮೂಲಕ ರಾಜ್ಯದಲ್ಲೇ ಮೊದಲ ಬಾರಿಗೆ ಇನ್ವರ್ಟೆಡ್ ರೋಲರ್ ಕೋಸ್ಟರ್ ಅನುಭವ ಲಭ್ಯವಾಗುತ್ತಿದ್ದು, ಒಂದೇ ಪಾರ್ಕ್‌ನಲ್ಲಿ ಎರಡು ಬೃಹತ್ ಇನ್ವರ್ಷನ್ ಕೋಸ್ಟರ್‌ಗಳನ್ನು ಹೊಂದಿರುವ ಭಾರತದ ಏಕೈಕ ಅಮ್ಯೂಸ್‌ಮೆಂಟ್ ಪಾರ್ಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಅರುಣ್ ಕೆ. ಚಿತ್ತಿಲಪ್ಪಿಲ್ಲಿ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನೆದರ್‌ಲ್ಯಾಂಡ್ಸ್ ತಯಾರಕ ಸಂಸ್ಥೆಯಾದ ವೆಕೋಮ್ ವಿನ್ಯಾಸಗೊಳಿಸಿರುವ ಗರುಡ ಗ್ಲೈಡ್ ಸಸ್ಪೆಂಡೆಡ್ ಲೂಪಿಂಗ್ ಕೋಸ್ಟರ್ ಆಗಿದ್ದು, ಸವಾರರು ಹಳಿಯ ಕೆಳಭಾಗದಲ್ಲಿ ಕುಳಿತುಕೊಂಡು ಕಾಲುಗಳನ್ನು ಗಾಳಿಯಲ್ಲಿ ತೂಗಾಡಿಸುತ್ತಾ ಪ್ರಯಾಣಿಸುವ ವಿಶಿಷ್ಟ ಅನುಭವವನ್ನು ಪಡೆಯುತ್ತಾರೆ. ಗಾಳಿಯಲ್ಲಿ ಹಾರುವಂತಿರುವ ಈ ವಿನ್ಯಾಸವು ಪ್ರತಿ ತಿರುವು ಮತ್ತು ಪಲ್ಟಿಗಳಲ್ಲಿ ಹೆಚ್ಚಿದ ರೋಮಾಂಚನ ನೀಡುತ್ತದೆ.

ಗರುಡ ಗ್ಲೈಡ್ ಇನ್ವರ್ಟೆಡ್ ರೋಲರ್ ಕೋಸ್ಟರ್‌ಅನ್ನು ಭಾರತೀಯ ಕ್ರಿಕೆಟ್ ತಾರೆ ಶ್ರೇಯಾಂಕಾ ಪಾಟೀಲ್, ಯುಟ್ಯೂಬರ್ ಡಾ.ಬ್ರೋ ಉದ್ಘಾಟಿಸಿದರು. ಈ ವೇಳೆ ವಂಡರ್ ಲಾ ಹಾಲಿಡೇಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಅರುಣ್ ಕೆ. ಚಿತ್ತಿಲಪ್ಪಿಲ್ಲಿ, ಬೆಂಗಳೂರು ವಂಡರ್‌ಲಾ ಪಾರ್ಕ್ ಮುಖ್ಯಸ್ಥ ರುದ್ರೇಶ್ ಎಸ್.ಎಚ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗರುಡ ಗ್ಲೈಡ್‌ನ ವೈಶಿಷ್ಟ್ಯತೆ: ಸುಮಾರು 662 ಮೀಟರ್ ಉದ್ದದ ಸ್ಟೀಲ್ ಹಳಿಯ ಮೇಲೆ ಗಂಟೆಗೆ 80 ಕಿಮೀ ವೇಗದಲ್ಲಿ ಸಾಗುವ ಈ ಕೋಸ್ಟರ್, ಗರಿಷ್ಠ 31 ಮೀಟರ್ ಎತ್ತರ ತಲುಪುತ್ತದೆ. 130 ಸೆಕೆಂಡ್‌ಗಳಲ್ಲಿ ಈ ಪ್ರಯಾಣವು ಪ್ರವಾಸಿಗರಿಗೆ ನಿರಂತರ ಅಡ್ರಿನಾಲಿನ್ ರಶ್ ನೀಡುವಂತೆ ವಿನ್ಯಾಸಗೊಳಿಸಲಾಗಿದೆ. ಡ್ಯುಯಲ್ ಟ್ರೈನ್ ವ್ಯವಸ್ಥೆಯೊಂದಿಗೆ, ಒಂದೇ ಸಮಯದಲ್ಲಿ ಎರಡು ರೈಲುಗಳು ಸಂಚರಿಸುವ ಸಾಮರ್ಥ್ಯ ಹೊಂದಿದ್ದು, ಪ್ರತಿಯೊಂದರಲ್ಲಿ 14 ಸವಾರರು ಕುಳಿತುಕೊಳ್ಳಬಹುದು.

ಶಾರ್ವಿ ಆರ್. ರಾಜ್ಯಕ್ಕೆ 10ನೇ ರ‍್ಯಾಂಕ್

ಬೆಂಗಳೂರು: ಮೂಡುಬಿದ್ರಿಯ ಆಳ್ವಾಸ್ ಪಿ.ಯು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದ ಶಾರ್ವಿ ಆರ್.ಯೆಕ್ಕಾರ್ ಅವರು ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ 600ಕ್ಕೆ 591 ಅಂಕಗಳಿಸುವ ಮೂಲಕ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 10 ನೇ ಸ್ಥಾನ ಪಡೆದಿದ್ದಾರೆ. ವಿಷಯಗಳಾದ ಇಂಗ್ಲಿಷ್ ಹಾಗೂ ಸಂಸ್ಕೃತ 94 ಹಾಗೂ 100 ಅಂಕಗಳಿಸಿದ್ದು, ಕೋರ್ ವಿಷಯಗಳಾದ ವವ್ಯಹಾರ ಅಧ್ಯಯನ 100, ಲೆಕ್ಕಶಾಸ್ತ್ರ ದಲ್ಲಿ 100, ಸಂಖ್ಯಾಶಾಸ್ತ್ರ 98 ಹಾಗೂ ಬೇಸಿಕ್ ಗಣಿತ 99 ಅಂಕಗಳಿಸಿದ್ದಾರೆ.

ದೀಕ್ಷಾ ವೇದಾಂತು ಕಾಲೇಜು ರ‍್ಯಾಂಕ್

ಬೆಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಅಗ್ರ 10 ರಲ್ಲಿ 30 ರ‍್ಯಾಂಕ್‌ಗಳು ದೀಕ್ಷಾ ವೇದಾಂತು ಕಾಲೇಜಿನ ಪಾಲಾಗಿವೆ. ಜೆಇಇ, ನೀಟ್ ಮತ್ತು ಕೆಸಿಇಟಿಯಂತಹ ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಜತೆಗೆ ರಾಜ್ಯ ಮಟ್ಟದ ಪರೀಕ್ಷೆಗಳಲ್ಲಿಯೂ ದೀಕ್ಷಾ ವೇದಾಂತು ತನ್ನ ಯಶೋಗಾಥೆ ಮುಂದುವರಿಸಿದೆ. ವಿಜ್ಞಾನ ವಿಭಾಗದ 21 ವಿದ್ಯಾರ್ಥಿಗಳು ಮತ್ತು ವಾಣಿಜ್ಯ ವಿಭಾಗದ 4 ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ಪಡೆದಿದ್ದಾರೆ. ಕಾಲೇಜಿನ ಕಾರ್ತಿಕ್ ಹಾಗೂ ಸುಘೋಷ್ ಜೋಶಿ 596 ಅಂಕಗಳೊಂದಿಗೆ ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದುಕೊಂಡರೆ, ಕನ್ಯಾಕಾಂತಿಶ್ರೀ ಮೌಕ್ತಿ 595 ಅಂಕಗಳೊಂದಿಗೆ ರಾಜ್ಯಕ್ಕೆ 5ನೇ ರ‍್ಯಾಂಕ್ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಭೂಮಿಕಾ ಅವರು 595 ಅಂಕಗಳೊಂದಿಗೆ ರಾಜ್ಯಕ್ಕೆ 6ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ದೀಕ್ಷಾ ವೇದಾಂತುವಿನ ಸಂಸ್ಥಾಪಕ ಡಾ.ಜಿ.ಶ್ರೀಧರ್ ತಿಳಿಸಿದ್ದಾರೆ.

- ವಿಜ್ಞಾನ ವಿಭಾಗದ 21 ವಿದ್ಯಾರ್ಥಿಗಳು ವಾಣಿಜ್ಯ ವಿಭಾಗದ 4 ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ.

ಸೆಕೆಂಡ್ ಪಿಯು ಫಲಿತಾಂಶ ತಾಂತ್ರಿಕ ದೋಷ ನಿವಾರಣೆ

ಬೆಂಗಳೂರು: ಗುರುವಾರ ಬಿಡುಗಡೆಯಾದ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಣೆಯಲ್ಲಿ ಗಂಭೀರ ತಾಂತ್ರಿಕ ಎಡವಟ್ಟುಗಳು ಬೆಳಕಿಗೆ ಬಂದಿದ್ದು, ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಭಾರಿ ಗೊಂದಲ ಮತ್ತು ಆತಂಕ ಸೃಷ್ಟಿಯಾಗಿದೆ. ಕೆಲವು ವಿದ್ಯಾರ್ಥಿಗಳಿಗೆ 100 ಅಂಕಗಳ ವಿಷಯದಲ್ಲಿ 111 ಅಂಕಗಳನ್ನು ನೀಡಿರುವುದು ಸೇರಿದಂತೆ ಒಟ್ಟು ಅಂಕಗಳಲ್ಲಿ ಸಹ ಅಸಾಧಾರಣ ವ್ಯತ್ಯಾಸ ಕಂಡುಬಂದಿದೆ.

ಹಿಂದಿ ವಿಷಯದಲ್ಲಿ ಒಬ್ಬ ವಿದ್ಯಾರ್ಥಿಗೆ 100 ಅಂಕಗಳಿಗೆ 111 ಅಂಕ ನೀಡಲಾಗಿದ್ದು, ಥಿಯರಿ ವಿಭಾಗದಲ್ಲಿ 80 ಅಂಕಗಳಿಗೆ 94 ಅಂಕ ನೀಡಲಾಗಿದೆ ಎಂಬುದು ಮತ್ತಷ್ಟು ಅನುಮಾನಕ್ಕೆ ಕಾರಣವಾಗಿದೆ. ಕಾಲೇಜು ನೀಡಿದ 17 ಆಂತರಿಕ ಅಂಕಗಳನ್ನು ಸೇರಿಸಿದರೂ, ಒಟ್ಟು ಅಂಕ 111 ಆಗಿರುವುದು ಲೆಕ್ಕಾಚಾರದಲ್ಲಿ ಸ್ಪಷ್ಟ ದೋಷ ಎಂದು ತೋರಿಸುತ್ತದೆ. ಜತೆಗೆ ಕೆಲ ವಿದ್ಯಾರ್ಥಿಗಳಿಗೆ 6 ವಿಷಯಗಳಲ್ಲೂ 100ಕ್ಕಿಂತ ಹೆಚ್ಚು ಅಂಕಗಳನ್ನು ನೀಡಿರುವುದು ಪತ್ತೆಯಾಗಿದ್ದು, ಮತ್ತೊಬ್ಬ ವಿದ್ಯಾರ್ಥಿಗೆ 600ಕ್ಕೆ 683 ಅಂಕಗಳನ್ನು ನೀಡಿರುವುದು ದೊಡ್ಡ ಮಟ್ಟದ ಎಡವಟ್ಟನ್ನು ಸೂಚಿಸುತ್ತದೆ. ಮರುಪರೀಕ್ಷೆ ಬರೆದ ವಿದ್ಯಾರ್ಥಿಗಳ ಫಲಿತಾಂಶದಲ್ಲೂ ಈ ರೀತಿಯ ತಪ್ಪುಗಳು ಕಂಡುಬಂದಿರುವುದರಿಂದ ಸಮಸ್ಯೆ ವ್ಯಾಪಕವಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಅಧಿಕೃತ ವೆಬ್‌ಸೈಟ್‌ನಲ್ಲಿ ಈ ತಪ್ಪು ಅಂಕಪಟ್ಟಿಗಳು ಪ್ರದರ್ಶವಾಗುತ್ತಿರುವಾಗ, ಡಿಜಿಲಾಕರ್‌ನಲ್ಲಿ ಕೆಲ ವಿದ್ಯಾರ್ಥಿಗಳ ಅಂಕಪಟ್ಟಿ ಸರಿಯಾಗಿ ಕಾಣುತ್ತಿರುವುದು ತಾಂತ್ರಿಕ ದೋಷದ ಅನುಮಾನ ಹೆಚ್ಚಿಸಿದೆ. ಆದರೆ ಪಿಯು ಮಂಡಳಿ ಶುಕ್ರವಾರ ಮಧ್ಯಾಹ್ನದಿಂದಲೇ ಇದನ್ನು ಸರಿಪಡಿಸಿದ್ದು, ಅಧಿಕೃತ ಅಂಕಪಟ್ಟಿ ಬಿಡುಗಡೆಮಾಡಿದೆ.

ಇದು ತಾಂತ್ರಿಕ ದೋಷದಿಂದ ಉಂಟಾದ ಸಮಸ್ಯೆಯಾಗಿದ್ದು, 50 ರಿಂದ 60 ವಿದ್ಯಾರ್ಥಿಗಳ ಅಂಕಗಳಲ್ಲಿ ಈ ರೀತಿಯ ದೋಷ ಕಂಡುಬಂದಿದೆ. ಶುಕ್ರವಾರ ಮಧ್ಯಹ್ನದಿಂದಲೇ ಇದನ್ನು ಸರಿಪಡಿಸಿ, ಪರಿಷ್ಕೃತ ಫಲಿತಾಂಶ ಬಿಡುಗಡೆ ಮಾಡಲಾಗಿದೆ. ವಿದ್ಯಾರ್ಥಿಗಳು ಮತ್ತು ಪೋಷಕರು ಗಾಬರಿಯಾಗಬೇಕಿಲ್ಲ ಸಮಸ್ಯೆ ನಿವಾರಣೆಯಾಗಿದೆ .

- ಪ್ರಕಾಶ್ ನಿಟ್ಟಾಲಿ
ಅಧ್ಯಕ್ಷ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ

ಕ್ಲೌಡ್ ಪ್ಲಾಟ್ ಫಾರ್ಮ್‌ನಲ್ಲಿ ಪಿಇಎಸ್‌ನ ದರ್ಶನ್ ಸಾಧನೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯೊಬ್ಬರು ಜಾಗತಿಕ ಮಟ್ಟದಲ್ಲಿ ಅಪರೂಪದ ಸಾಧನೆ ಮಾಡಿದ್ದು, ವಿಶ್ವದ ಗಮನ ಸೆಳೆದಿದ್ದಾರೆ. ಪಿಇಎಸ್ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿ ದರ್ಶನ್ ಮಳಗಿಮಣಿ, ಜಾಗತಿಕ ಮಟ್ಟದ ಓಪನ್‌ಸೋರ್ಸ್ ಕ್ಲೌಡ್ ಪ್ಲಾಟ್‌ಫಾರ್ಮ್ ಆಗಿರುವ ಓಪನ್ ಸ್ಟಾಕ್ 2025.2 ಫ್ಲೆಮಿಂಗೊ ಬಿಡುಗಡೆಗೆ ತಮ್ಮ ಕೊಡುಗೆ ನೀಡಿ ಗುರುತಿಸಿಕೊಂಡಿದ್ದಾರೆ. ಇದು ಅವರ ಎರಡನೇ ನಿರಂತರ ಜಾಗತಿಕ ಕೊಡುಗೆ ಎಂಬುದು ವಿಶೇಷ.

ಈ ಕುರಿತು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜವಾಹರ್ ದೊರೆಸ್ವಾಮಿ ಮಾತನಾಡಿ, ಇದಕ್ಕೂ ಮೊದಲು 2024.1 ಬಿಡುಗಡೆ ಚಕ್ರದಲ್ಲಿ ದರ್ಶನ್ ಜಾಗತಿಕ ಮಟ್ಟದಲ್ಲಿ 11ನೇ ಸ್ಥಾನ ಪಡೆದು ಗಮನಸೆಳೆದಿದ್ದರು. ಆ ಸಂದರ್ಭದಲ್ಲಿ ಅವರು ಕೀಸ್ಟೋನ್ ಯುನಿಫೈಡ್ ಲಿಮಿಟ್ ವ್ಯವಸ್ಥೆಯಲ್ಲಿದ್ದ ಪ್ರಮುಖ ತಾಂತ್ರಿಕ ದೋಷವನ್ನು ಪರಿಹರಿಸಿ, ಸೈಲೆಂಟ್ ಕೋಟಾ ಸಮಸ್ಯೆ ಸಮಸ್ಯೆಯನ್ನು ನಿವಾರಿಸಿದ್ದರು. ಈ ಪರಿಹಾರವು ವಿಶ್ವದ ಅನೇಕ ಕ್ಲೌಡ್ ವ್ಯವಸ್ಥೆಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು ಸಹಾಯ ಮಾಡಿತ್ತು. ಫ್ಲೆಮಿಂಗೊ ಬಿಡುಗಡೆ ವಿಶ್ವದಾದ್ಯಂತ 55 ಮಿಲಿಯನ್‌ಗಿಂತ ಹೆಚ್ಚು ಪ್ರೊಡಕ್ಷನ್ ಕೋರ್‌ಗಳಿಗೆ ಆಧಾರವಾಗಿದ್ದು, ಎನ್‌ವಿಐಡಿಐಎ, ರೆಡ್ ಹ್ಯಾಟ್ ಸೇರಿ ಪ್ರಮುಖ ಸಂಸ್ಥೆಗಳ 480 ತಜ್ಞರೊಂದಿಗೆ ದರ್ಶನ್ ಕೆಲಸ ಮಾಡಿದ್ದಾರೆ ಎಂದರು.

ಆದ್ಯ ಮನುಗೆ 566 ಅಂಕ

ಬೆಂಗಳೂರು: ನಗರದ ಯಲಹಂಕದ ನ್ಯೂ ಟೌನ್‌ನಲ್ಲಿರುವ ಟ್ಯಾಪ್ರೂಟ್ ಪಿ.ಯು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದ ಆದ್ಯ ಮನು. ಅವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 566 ಅಂಕ ಪಡೆದಿದ್ದಾರೆ. ವಿಷಯಗಳಾದ ಇಂಗ್ಲಿಷ್ ಹಾಗೂ ಕನ್ನಡ 89 ಹಾಗೂ 93 ಅಂಕಗಳಿಸಿದ್ದು, ಕೋರ್ ವಿಷಯಗಳಾದ ವವ್ಯಹಾರ ಅಧ್ಯಯನ 97, ಲೆಕ್ಕಶಾಸ್ತ್ರ ದಲ್ಲಿ 95, ಅರ್ಥಶಾಸ್ತ್ರ 100 ಹಾಗೂ ಕಂಪ್ಯೂಟರ್ ಸೈನ್ಸ್ 92 ಅಂಕಗಳಿಸಿದ್ದಾರೆ.

ರಂಗಚಂದಿರ ಸಾಂಸ್ಕೃತಿಕ ಸಂಭ್ರಮ

ಬೆಂಗಳೂರು: ರಂಗಚಂದಿರ ಟ್ರಸ್ಟ್ ವತಿಯಿಂದ ಏ.15ರಂದು ಸಂಜೆ 5 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರ ಆವರಣದ ನಯನ ರಂಗಮಂದಿರದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಖ್ಯಾತ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರ 'ಮಹಾಮನೆ' ನಾಟಕ ಕೃತಿಯ ಪುಸ್ತಕ ಬಿಡುಗಡೆ, ರಂಗಗೀತೆಗಳ ಗಾಯನ ಹಾಗೂ ರಂಗಗೌರವ ಸಮಾರಂಭ ಒಂದೇ ವೇದಿಕೆಯಲ್ಲಿ ಜರುಗಲಿದೆ.

ಈ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ. ಶಿವರಾಮಯ್ಯ ಅವರ 'ಮಹಾಮನೆ' ಕೃತಿಯನ್ನು ಬಿಡುಗಡೆಗೊಳಿಸಲಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ರಂಗ ನಿರ್ದೇಶಕ ಮತ್ತು ನಾಟಕಕಾರ ಡಾ. ಬೇಲೂರು ರಘುನಂದನ್ ಕೃತಿಯ ಕುರಿತು ವಿಮರ್ಶಾತ್ಮಕವಾಗಿ ಮಾತನಾಡಲಿದ್ದಾರೆ. ಕಾರ್ಯಕ್ರಮಕ್ಕೆ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಹಿರಿಯ ಪತ್ರಕರ್ತ ಜಿ.ಎನ್. ಮೋಹನ್, ರಂಗಚಂದಿರ ಟ್ರಸ್ಟ್‌ನ ಗೌರವಾಧ್ಯಕ್ಷ ರಾಧಾಕೃಷ್ಣ ಹೆಗಡೆ, ಚಾರುಮತಿ ಪ್ರಕಾಶನದ ಬಿ.ಎಸ್. ವಿದ್ಯಾರಣ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಮತ್ತೊಂದು ಆಕರ್ಷಣೆಯಾಗಿ ಆದಿಮೂಲ ಹೊಕ್ಕಳ ಬಳ್ಳಿಯ ಚರಿತೆ ಎಂಬ ರಂಗಗೀತೆಗಳ ಗಾಯನ ಪ್ರಸ್ತುತಪಡಿಸಲಾಗುತ್ತಿದ್ದು, ಸಂಗೀತ ಮತ್ತು ನಾಟಕದ ಸಂಯೋಜನೆಯ ಈ ವಿಶೇಷ ಭಾಗವು ಪ್ರೇಕ್ಷಕರಿಗೆ ಕಲಾತ್ಮಕ ಅನುಭವ ನೀಡಲಿದೆ. ಅಲ್ಲದೇ ಕರ್ನಾಟಕದ ರಂಗಭೂಮಿಗೆ ತಮ್ಮದೇ ಆದ ಕೊಡುಗೆ ನೀಡಿರುವ ಐದು ಗಣ್ಯರನ್ನು ಇದೇ ಸಂದರ್ಭದಲ್ಲಿ ರಂಗಗೌರವ ಪ್ರಶಸ್ತಿಯಿಂದ ಸನ್ಮಾನಿಸಲಾಗುತ್ತಿದ್ದು, ಡಾ.ಎಚ್.ಎಲ್.ಪುಷ್ಪ,ಡಾ.ಟಿ.ಪದ್ಮ ಚಿನ್ಮಯಿ,ವಡವಾಟಿ ಶಾರದಾ ಭರತ್, ಕಾವೇರಿ ಶ್ರೀಧರ್ ಹಾಗೂ ಭಾಸ್ಕರ್ ಕುಪ್ಪೂರು ಅವರು ಈ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ಸಂಸ್ಥೆ ತಿಳಿಸಿದೆ.

ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೂಚನೆ

ಡ್ರೋನ್ ಮೂಲಕ ಸಮೀಕ್ಷೆ ನಡೆಸಿ ವರದಿ ನೀಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಿಬಿಎ ವ್ಯಾಪ್ತಿಯಲ್ಲಿ ರಾಜಕಾಲುವೆಗಳಲ್ಲಿ ಹೂಳೆತ್ತುವ ಮೊದಲು ನಂತರ ಡ್ರೋನ್ ಮೂಲಕ ಸಮೀಕ್ಷೆ ನಡೆಸಿ ವರದಿ ನೀಡಲು ಅಧಿಕಾರಿಗಳಿಗೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಮಳೆ ಪ್ರಾರಂಭವಾಗುತ್ತಿರುವ ಹಿನ್ನೆಲೆ ಜಿಬಿಎ ಕೇಂದ್ರ ಕಚೇರಿಯಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯನ್ನು ಉದ್ದೇಶಿಸಿ ಮಾತನಾಡಿ, ನಗರದಲ್ಲಿನ ಪ್ರಮುಖ ರಾಜಕಾಲುವೆಗಳಲ್ಲಿ ಆದ್ಯತೆ ಮೇರೆಗೆ ಹೂಳೆತ್ತುವ ಕೆಲಸ ಕೈಗೊಳ್ಳಬೇಕು. ಡ್ರೋನ್ ಮೂಲಕ ದೃಶ್ಯಾವಳಿ ಮಾಡುವ ವೇಳೆ ಎಲ್ಲೆಲ್ಲಿ ಚೋಕಿಂಗ್ ಪಾಯಿಂಟ್ಸ್ ಬರುತ್ತದೆ ಎಂಬುದನ್ನು ಗುರುತಿಸಬೇಕು. ಬಳಿಕ ಗುರುತಿಸಿರುವ ಚೋಕಿಂಗ್ ಪಾಯಿಂಟ್ಸ್‌ಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲು ಸೂಚನೆ ನೀಡಿದರು.

ಆಯಾ ನಗರ ಪಾಲಿಕೆಗಳ ಹಿರಿಯ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸ್ ಅಧಿಕಾರಿಳು ಪ್ರವಾಹ ಪೀಡಿತ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸಿದರು. ರಸ್ತೆ ಬದಿಯ ಸೈಡ್ ಡ್ರೇನ್‌ಗಳಲ್ಲಿ ಹೂಳೆತ್ತಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ರಸ್ತೆ ಮೇಲೆ ಬೀಳುವ ಮಳೆನೀರು ಸೈಡ್ ಡ್ರೇನ್‌ಗಳಿಗೆ ಸರಾಗವಾಗಿ ಹರಿದು ಹೋಗುವಂತೆ ಶೋಲ್ಡರ್ ಡ್ರೈನ್‌ಗಳ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ: ಮಳೆಗಾಲ ಪ್ರಾರಂಭವಾಗುವುದಕ್ಕೂ ಮುನ್ನ ನಗರ ಪಾಲಿಕೆ ನಿಯಂತ್ರಣ ಕೊಠಡಿಗಳಿಗೆ ಪಾಲಿಕೆ, ಬೆಸ್ಕಾಂ ಹಾಗೂ ಜಲಮಂಡಳಿ ಅಧಿಕಾರಿಗಳನ್ನು ನಿಯೋಜಿಸಲು ಕ್ರಮ ಕೈಗೊಳ್ಳಬೇಕು. ಜತೆಗೆ ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಅಧಿಕಾರಿಗಳ ಪಟ್ಟಿಯನ್ನು ಸಿದ್ಧಪಡಿಸಲು ಸೂಚಿಸಿದರು. ಉಪವಿಭಾಗ ಮಟ್ಟದಲ್ಲಿನ ನಿಯಂತ್ರಣ ಕೊಠಡಿಗಳನ್ನು ಕಾರ್ಯಗತಗೊಳಿಸಿ, ಮಳೆಗಾಲಕ್ಕೆ ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಸಿದ್ಧವಾಗಿಡಲು ಸೂಚಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ 75 ಹಾಗೂ 150 ಉಪವಿಭಾಗಗಳು ಒಳಗೊಂಡಿದ್ದು, 20 ಅಗ್ನಿಶಾಮಕ ಠಾಣೆಗಳು ಹಾಗೂ ಎಸ್ಡಿಆರ್‌ಎಫ್ನ ಒಂದು ಕಂಪನಿ ಕಾರ್ಯನಿರ್ವಹಿಸುತ್ತಿದೆ. ಆಯಾ ನಗರ ವ್ಯಾಪ್ತಿಯ ಅಗ್ನಿಶಾಮಕ ಠಾಣೆಗಳನ್ನು ವಿಭಾಗ ಹಾಗೂ ಉಪವಿಭಾಗಗಳೊಂದಿಗೆ ಸಮನ್ವಯ ಸಾಧಿಸಿ ವಾಟ್ಸ್ ಆಪ್ ಗುಂಪುಗಳನ್ನು ರಚಿಸಿಕೊಳ್ಳಬೇಕು ಎಂದರು.

ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ಆರ್ಟೀರಿಯಲ್ ರಸ್ತೆಗಳ ಸೈಡ್ ಡ್ರೇನ್‌ಗಳಲ್ಲಿರುವ ಚೋಕ್ ಪಾಯಿಂಟ್‌ಗುರುತಿಸಿ ತ್ಯಾಜ್ಯ ತೆರವುಗೊಳಿಸಿ, ಸಂಪೂರ್ಣವಾಗಿ ಹೂಳೆತ್ತಿ ಮಳೆಯ ಸಂದರ್ಭದಲ್ಲಿ ನೀರಿನ ಹರಿವಿಗೆ ಯಾವುದೇ ಅಡಚಣೆ ಆಗದಂತೆ ಕ್ರಮ ವಹಿಸಿ. ರಾಜಕಾಲುವೆಗಳ ಬಳಿ ಕ್ಯಾಮೆರ‍್ಾ ಅಳವಡಿಸಲು ಸೂಚಿಸಿ, ಕೆ.ಎಸ್.ಎನ್.ಡಿಎಂಸಿ ಜತೆ ಸಮನ್ವಯ ಸಾಧಿಸಿ ಅಗತ್ಯ ದುರಸ್ತಿ ಕೈಗೊಳ್ಳಲು ನಿರ್ದೇಶನ ನೀಡಿದರು.

ಪಂಚರಾಜ್ಯ ಪವರ್ ವಾರ್

ಮೆಲುಕು

ಮತಪತ್ರವೇ ಪುಸ್ತಕವಾದರೆ!

ಇದು 1996ರಲ್ಲಿ ನಡೆದ ಒಂದು ವಿಲಕ್ಷಣ ಘಟನೆ. ತಮಿಳುನಾಡಿನ ಈರೋಡ್ ಜಿಲ್ಲೆಯ 'ಮೋಡ ಕುರಿಚಿ' ಕ್ಷೇತ್ರದಲ್ಲಿ 1,033 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ ಪರಿಣಾಮ, ವಿಧಾನಸಭಾ ಚುನಾವಣೆಯನ್ನೇ ಮುಂದೂಡ ಬೇಕಾಗಿಬಂದ ಘಟನೆಯಿದು.

ಅದಾಗಿದ್ದು ಹೀಗೆ: ವಿವಿಧ ಸಮಸ್ಯೆಗಳತ್ತ ಸರಕಾರದ ಗಮನ ಸೆಳೆಯಲು ರೈತ ಸಂಘಗಳ ಒಕ್ಕೂಟ 1,000ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಕಣಕ್ಕಿಳಿಸಿತು. ಇದರೊಂದಿಗೆ 28 ಮಹಿಳಾ ಅಭ್ಯರ್ಥಿಗಳೂ ಸೇರಿಕೊಂಡು ಕಣದಲ್ಲಿ ಅಂತಿಮವಾಗಿ ಉಳಿದ ಅಭ್ಯರ್ಥಿಗಳ ಸಂಖ್ಯೆ 1,033ಕ್ಕೆ ಮುಟ್ಟಿತು. ಹೀಗಾಗಿ, ಎಲ್ಲಾ ಅಭ್ಯರ್ಥಿಗಳ ಹೆಸರನ್ನು ಅಡಕಗೊಳಿಸಲೆಂದು 50 ಪುಟಗಳ ಕಿರುಪುಸ್ತಕವನ್ನೇ ಮುದ್ರಿಸಬೇಕಾಗಿ ಬಂತು ಮತ್ತು ಆ ಕಾರಣಕ್ಕೆ ಚುನಾವಣೆಯನ್ನೂ ಮುಂದೂಡಬೇಕಾಯಿತು. ಮತದಾನದ ದಿನವಾದ ಜೂನ್ 1ರಂದು ಮತದಾರರು ತಮ್ಮಾಯ್ಕೆಯ ಅಭ್ಯರ್ಥಿಯನ್ನು ಕಂಡುಕೊಳ್ಳಲು ಆ ಒಂದಿಡೀ ಪುಸ್ತಕವನ್ನು ತಿರುವಿಹಾಕುವಂಥ ಪರಿಸ್ಥಿತಿ ಉದ್ಭವವಾಯಿತು. ಅಂತಿಮವಾಗಿ, ಡಿಎಂಕೆಯ ಸುಬ್ಬುಲಕ್ಷ್ಮಿ ಜಗದೀಶನ್ 39,450 ಮತಗಳ ಅಂತರದಿಂದ ಈ ಸ್ಪರ್ಧೆಯಲ್ಲಿ ಜಯಗಳಿಸಿದರು.

ಚುನಾವಣಾ ಚುರುಮುರಿ

ಬಿಜೆಪಿಯ ಸೇನಾನಿ

ಸುವೇಂದು ಅಧಿಕಾರಿ ಅವರು ಪಶ್ಚಿಮ ಬಂಗಾಳ ಬಿಜೆಪಿಯ ಭರವಸೆಯ ನಾಯಕರಲ್ಲಿ ಒಬ್ಬರಾಗಿದ್ದು, ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಅವರು ಪ್ರಧಾನಪಾತ್ರ ವಹಿಸುವ ನಿರೀಕ್ಷೆಯಿದೆ.



ಮೂಲತಃ ಟಿಎಂಸಿ ನಾಯಕರಾಗಿದ್ದು 2021ರ ಚುನಾವಣೆಗೆ ಮುನ್ನ ಬಿಜೆಪಿ ಸೇರಿದ ಸುವೇಂದು, ನಂದಿಗ್ರಾಮ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾರನ್ನು ಸೋಲಿಸಿ ಇಡೀ ದೇಶದ ಗಮನ ಸೆಳೆದರು. ಪೂರ್ವ ಮೇದಿನೀಪುರದ ಪ್ರಭಾವಿ ರಾಜಕೀಯ ಕುಟುಂಬಕ್ಕೆ ಸೇರಿರುವ ಸುವೇಂದು ಅವರಿಗೆ ಕರಾವಳಿ ಜಿಲ್ಲೆಗಳು ಮತ್ತು 'ಜಂಗಲ್ ಮಹಲ್' ವಲಯದಲ್ಲಿ ಅದ್ಭುತವಾದ ಸಂಘಟನಾತ್ಮಕ ಜಾಲವಿದೆ. ದೃಢನಿಲುವಿನ ಪ್ರಚಾರಶೈಲಿಗೆ ಹೆಸರುವಾಸಿಯಾಗಿರುವ ಸುವೇಂದು, ದಕ್ಷಿಣ ಬಂಗಾಳದಲ್ಲಿ ಹೆಜ್ಜೆಗುರುತುಗಳನ್ನು ವಿಸ್ತರಿಸುವ ಬಿಜೆಪಿಯ ಯತ್ನಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿಶ್ವಾಸಾರ್ಹ 'ಸೇನಾನಿ'ಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿರುವ ಸುವೇಂದು, ಆಡಳಿತಾರೂಢ ಟಿಎಂಸಿಯ ವಿರುದ್ಧದ ಹೋರಾಟಕ್ಕೆ ತಮ್ಮ ಶಸ್ತ್ರಾಸ್ತ್ರಗಳನ್ನು ಸಾಣೆ ಹಿಡಿದುಕೊಳ್ಳುತ್ತಿದ್ದಾರೆ. ಕಾನೂನು-ಸುವ್ಯವಸ್ಥೆ ಹದಗೆಟ್ಟಿರುವಿಕೆ, ಭ್ರಷ್ಟಾಚಾರ, ಆಡಳಿತ ವೈಫಲ್ಯಗಳನ್ನು ಬಂಗಾಳಿಗಳಿಗೆ ಅವರು ಸಮರ್ಥವಾಗಿ ಮನವರಿಕೆ ಮಾಡಿಕೊಟ್ಟು ಪಕ್ಷವು ಗದ್ದುಗೆಯನ್ನು ಅಲಂಕರಿಸಲು ನೆರವಾಗುತ್ತಾರೆ ಎಂಬ ವಿಶ್ವಾಸ ಬಿಜೆಪಿ ವರಿಷ್ಠರದ್ದು. ಕಾದುನೋಡೋಣ.

ಜನಾನುರಾಗಿ ಕೃತಿಕಾ

ಜನಪ್ರಿಯ ಸ್ತ್ರೀರೋಗ ತಜ್ಞೆ ಹಾಗೂ ಪ್ರಸೂತಿ ತಜ್ಞೆ ಡಾ. ಆರ್.ಎಸ್. ಕೃತಿಕಾ ದೇವಿ ಅವರು ತಮಿಳುನಾಡಿನ ತಾಂಬರಮ್ ಕ್ಷೇತ್ರದಿಂದ ಡಿಎಂಕೆ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಈ ಸಂಬಂಧವಾಗಿ ಅವರು ಪ್ರಚಾರಕಾರ್ಯದಲ್ಲಿ ವ್ಯಸ್ತರಾಗಿದ್ದಾಗ, ಯುವ ಪದವೀಧರರೊಬ್ಬರು, ''ನೀವು ನನ್ನ ತಂಗಿಗೆ ಹೆರಿಗೆ ಮಾಡಿಸಿ ತುಂಬಾ ಉಪಕಾರ ಮಾಡಿದ್ದೀರಿ'' ಎಂದು ಕೃತಜ್ಞತಾಪೂರ್ವಕವಾಗಿ ಹೇಳಿದರಂತೆ. ಈ ಮಾತಿಗೆ ಭಾವುಕರಾದ ಕೃತಿಕಾ ದೇವಿ ಆ ಯುವಕನನ್ನು ಬಾಚಿ ತಬ್ಬಿಕೊಂಡು ಧನ್ಯವಾದ ಹೇಳಿದರಂತೆ. ಚುನಾವಣಾ ಪ್ರಚಾರ ಕಾರ್ಯಕ್ಕೆ ತೆರಳಿದ ಕಡೆಯೆಲ್ಲಾ ಕೃತಿಕಾ ಅವರಿಗೆ ಅಭೂತಪೂರ್ವ ಸ್ವಾಗತವೇ ದೊರೆಯುತ್ತಿದೆಯಂತೆ. ಕ್ಷೇತ್ರದ ಮತದಾರರ ಪೈಕಿ ಅನೇಕರು ಕೃತಿಕಾರನ್ನು ಗುರುತಿಸಿ, ತಮ್ಮನ್ನು ಅಥವಾ ತಮ್ಮ ಕುಟುಂಬದ ಸದಸ್ಯರನ್ನು ಅವರು ಹೇಗೆ ಹೃತ್ಪೂರ್ವಕವಾಗಿ ನಡೆಸಿಕೊಳ್ಳುತ್ತಿದ್ದರು ಎಂಬುದನ್ನು ನೆನಪಿಸಿಕೊಳ್ಳುತ್ತಿದ್ದಾರಂತೆ. ಇಂಥ ಸಂದರ್ಭಗಳಲ್ಲಿ ಕೃತಿಕಾ, ''24/7 ವೈದ್ಯೆಯಾಗಿರುವುದು ನನಗೆ ಪ್ರಯೋಜನಕಾರಿಯಾಗಿದ್ದು ಸಾರ್ವಜನಿಕ ಜೀವನಕ್ಕೆ ಅದು ನನ್ನನ್ನು ಸಜ್ಜುಗೊಳಿಸಿದೆ; ನಾನು ಯಾವಾಗಲೂ ನಿಮ್ಮ ಸೇವೆಯಲ್ಲಿ ವ್ಯಸ್ತಳಾಗಿರುತ್ತೇನೆ'' ಎನ್ನುತ್ತಾರಂತೆ.

ಇದಲ್ಲವಾ 'ಜನಾನುರಾಗ' ಅಂದ್ರೆ...?!

ನುಸುಳುಕೋರರಿಗೆ ಇನ್ನು ಕಾಲವಿಲ್ಲ | ನಿರುದ್ಯೋಗಿಗಳಿಗೆ ಮಾಸಿಕ 3,000 ರು. ಭತ್ಯೆ

ಯುಸಿಸಿ ಜಾರಿಗೆ ಶಾ ಭರವಸೆ

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ, 6 ತಿಂಗಳ ಒಳಗಾಗಿ 'ಏಕರೂಪ ನಾಗರಿಕ ಸಂಹಿತೆ'ಯನ್ನು (ಯುಸಿಸಿ) ಜಾರಿಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿಯ ಪ್ರಣಾಳಿಕೆ 'ಸಂಕಲ್ಪ ಪತ್ರ'ವನ್ನು ಇಲ್ಲಿ ಬಿಡುಗಡೆ ಮಾಡಿ ಮಾತನಾಡುತ್ತಿದ್ದ ಅವರು, ''ಏಕರೂಪ ನಾಗರಿಕ ಸಂಹಿತೆಯ ಶಿಫಾರಸು ಬಿಜೆಪಿಯದ್ದಲ್ಲ, ಇದು ಸಾಂವಿಧಾನಿಕವಾದುದು. ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರಕಾರವು ಮಾಡುತ್ತಿರುವ ತುಷ್ಟೀಕರಣ ರಾಜಕಾರಣದಿಂದಾಗಿ ಈ ಸಂಹಿತೆಯನ್ನು ಇಷ್ಟು ದಿನ ಜಾರಿಗೆ ತರಲಾಗಲಿಲ್ಲ. ಕಳೆದ 15 ವರ್ಷಗಳ ಟಿಎಂಸಿ ಆಡಳಿತವು ರಾಜ್ಯದ ಜನರ ಪಾಲಿಗೆ ಒಂದು ಕೆಟ್ಟ ಕನಸಾಗಿ ಪರಿಣಮಿಸಿದೆ. ಯಾವೆಲ್ಲಾ ರಾಜ್ಯಗಳಲ್ಲಿ ಬಿಜೆಪಿಯು ಸರಕಾರವನ್ನು ರಚಿಸಿದೆಯೋ ಅಲ್ಲಿ 'ಯುಸಿಸಿ'ಯನ್ನು ಜಾರಿಗೆ ತರಲಾಗಿದೆ, ಬಂಗಾಳದಲ್ಲೂ ಅದನ್ನೇ ಮಾಡಲಿದ್ದೇವೆ. ಬಂಗಾಳದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಒಂದೇ ಕಾನೂನು ಅನ್ವಯವಾಗಲಿದೆ. ಬಂಗಾಳದವರ ಆಹಾರ ಪದ್ಧತಿಯಲ್ಲಿ ಬಿಜೆಪಿ ಹಸ್ತಕ್ಷೇಪ ಮಾಡುವುದಿಲ್ಲ, ಮೀನು ಹಾಗೂ ಮೊಟ್ಟೆಯ ಸೇವನೆಯನ್ನು ನಿಲ್ಲಿಸುವುದಿಲ್ಲ; ಅದು ಟಿಎಂಸಿ ಪಕ್ಷದ ಮಿಥ್ಯಾರೋಪವಾಗಿದೆ'' ಎಂದು ಪ್ರತಿಪಾದಿಸಿದರು.

ಇದೇ ವೇಳೆ, 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ಯಾರು?' ಎಂಬ ಪ್ರಶ್ನೆಗೆ, 'ನಮ್ಮದು ಕುಟುಂಬ ರಾಜಕಾರಣದ ಪಕ್ಷವಲ್ಲ, ಮುಖ್ಯಮಂತ್ರಿ ಅಭ್ಯರ್ಥಿಯು ಬಂಗಾಳದವರೇ ಆಗಿರುತ್ತಾರೆ' ಎಂದು ಅಮಿತ್ ಶಾ ಉತ್ತರಿಸಿದರು.

ಭರ್ಜರಿ ಭರವಸೆ

ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಡುಗಡೆಯಾಗಿರುವ ಬಿಜೆಪಿಯ ಪ್ರಣಾಳಿಕೆ 'ಸಂಕಲ್ಪ ಪತ್ರ'ವನ್ನು

'ಸೋನಾರ್ ಬಾಂಗ್ಲಾ ನಿರ್ಮಾಣದ ಮಾರ್ಗಸೂಚಿ' ಎಂದು ಬಣ್ಣಿಸಿರುವ ಅಮಿತ್ ಶಾ, 'ಬಂಗಾಳದ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡುವ ಪ್ರತಿಯೊಬ್ಬ ನಾಗರಿಕರಿಗೂ ಇದು ಹೊಸ ಭರವಸೆಯನ್ನು ಒದಗಿಸುತ್ತದೆ' ಎಂದಿದ್ದಾರೆ. ಪ್ರಣಾಳಿಕೆಯ ಪ್ರಮುಖ ಭರವಸೆಗಳು ಹೀಗಿವೆ:

- ರಾಜ್ಯದಲ್ಲಿ ಒಳನುಸುಳುವಿಕೆ ತಡೆಗೆ ಶೂನ್ಯ ಸಹಿಷ್ಣುತೆ ನೀತಿಯ ಅನುಸರಣೆ.
- ನುಸುಳುಕೋರರನ್ನು ಪತ್ತೆಹಚ್ಚಿ ಗಡಿಪಾರು ಮಾಡಲು ಅಗತ್ಯ ಕಾನೂನಿನ ರೂಪಣೆ.
- ಬಂಗಾಳದಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ಅನ್ವಯವಾಗುವ ರೀತಿಯಲ್ಲಿ 'ಏಕರೂಪ ನಾಗರಿಕ ಸಂಹಿತೆ'ಯ ಜಾರಿ.
- ಪ್ರತಿಯೊಬ್ಬರೂ ತಮ್ಮ ಧರ್ಮವನ್ನು ಮುಕ್ತವಾಗಿ ಆಚರಿಸುವುದನ್ನು ಖಾತ್ರಿಪಡಿಸಿಕೊಳ್ಳಲು ಕಾನೂನಿನ ಜಾರಿ.
- ರಾಜ್ಯದ ಗಡಿಗಳ ಸಂರಕ್ಷಣೆಗೆ ಮತ್ತು ಜಾನುವಾರುಗಳ ಕಳ್ಳಸಾಗಣೆಯ ತಡೆಗೆ ಕ್ರಮ.
- ರಾಜ್ಯದ ಮಹಿಳೆಯರಿಗೆ ಮಾಸಿಕ 3,000 ರುಪಾಯಿ ನೀಡಿಕೆ.
- ಪೊಲೀಸ್ ಪಡೆ ಸೇರಿದಂತೆ ಎಲ್ಲಾ ಸರಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡಿಕೆ.
- ನಿರುದ್ಯೋಗಿ ಯುವಜನರಿಗೆ ಮಾಸಿಕ 3,000 ರುಪಾಯಿ ಭತ್ಯೆಯ ನೀಡಿಕೆ.
- ಬಿಜೆಪಿ ಅಧಿಕಾರಕ್ಕೆ ಬಂದ 45 ದಿನಗಳೊಳಗೆ ಸರಕಾರಿ ನೌಕರರಿಗೆ ಏಳನೇ ವೇತನ ಆಯೋಗದ ಶಿಫಾರಸುಗಳ ಜಾರಿ.
- ಮುಂದಿನ 5 ವರ್ಷಗಳಲ್ಲಿ 1 ಕೋಟಿ ಹೊಸ ಉದ್ಯೋಗ ಮತ್ತು ಸ್ವಯಂ ಉದ್ಯೋಗಾವಕಾಶಗಳ ಸೃಷ್ಟಿ.
- ಆಯುಷ್ಮಾನ್ ಭಾರತ್ ಯೋಜನೆಯ ವಿಸ್ತರಣೆ. ಮಹಿಳೆಯರಿಗೆ ಉಚಿತ ಕ್ಯಾನ್ಸರ್ ತಪಾಸಣೆ ಹಾಗೂ 'ಎಚ್‌ಪಿವಿ' ಲಸಿಕೆ.
- ರಾಜ್ಯದಲ್ಲಿರುವ 'ಸಿಂಡಿಕೇಟ್' ಮತ್ತು 'ಕಟ್ ಮನಿ' ಸಂಸ್ಕೃತಿಗೆ ಸಂಪೂರ್ಣ ಕಡಿವಾಣ.
- ಕಳೆದ 15 ವರ್ಷಾವಧಿಯ ಭ್ರಷ್ಟಾಚಾರ ಮತ್ತು ಅಪರಾಧ ಪ್ರಕರಣಗಳ ಮರುತನಿಖೆ, ತಪ್ಪಿತಸ್ಥರಿಗೆ ಜೈಲುಶಿಕ್ಷೆ.
- ಟಿಎಂಸಿ ಅಧಿಕಾರಾವಧಿಯಲ್ಲಿ ನಡೆದ ಭ್ರಷ್ಟಾಚಾರ ಹಾಗೂ ಕಾನೂನು-ಸುವ್ಯವಸ್ಥೆ ಹದಗೆಟ್ಟ ಬಗೆಗಿನ ಶ್ವೇತಪತ್ರ ಪ್ರಕಟಣೆ.
- ಭಾರತೀಯ ಸಂವಿಧಾನದ 8ನೇ ಪರಿಚ್ಛೇದಕ್ಕೆ 'ಕುರ್ಮಾಲಿ' ಮತ್ತು 'ರಾಜ್ಬೋಂಗ್ಶಿ' ಭಾಷೆಗಳ ಸೇರ್ಪಡೆ.
- ಉತ್ತರ ಬಂಗಾಳದಲ್ಲಿ ಹೊಸ 'ಏಮ್ಸ್', 'ಐಐಟಿ' ಮತ್ತು 'ಐಐಎಂ' ಸಂಸ್ಥೆಗಳ ಸ್ಥಾಪನೆ.
- ಸಿಂಗೂರಿನಲ್ಲಿ ಬೃಹತ್ ಕೈಗಾರಿಕಾ ಪಾರ್ಕ್ ನಿರ್ಮಾಣ.
- ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ಮತ್ತು 'ವಂದೇ ಮಾತರಂ' ವಸ್ತುಸಂಗ್ರಹಾಲಯದ ಸ್ಥಾಪನೆ.
- ಆಲೂಗಡ್ಡೆ, ಭತ್ತ ಮತ್ತು ಮಾವು ಬೆಳೆಗಾರರಿಗೆ ಬೆಂಬಲ.
- ಬಂಗಾಳವನ್ನು 'ಮೀನು ರಫ್ತಿನ ಕೇಂದ್ರ'ವಾಗಿ ಪರಿವರ್ತಿಸಲು 'ಪ್ರಧಾನಮಂತ್ರಿ ಮತ್ಸ್ಯಸಂಪದ' ಯೋಜನೆಯ ಜಾರಿ.

ಚುನಾವಣಾ ಆಯೋಗಕ್ಕೆ ಯಶವಂತ ಸಿನ್ಹಾ ಕೂರಂಬು

ಹಜಾರಿಬಾಗ್: ಚುನಾವಣಾ ಚಟುವಟಿಕೆಗಳಿಗೆ ಸಂಬಂಧಿಸಿ ವಸ್ತುನಿಷ್ಠವಾಗಿ ಕಾರ್ಯನಿರ್ವಹಿಸಬೇಕಿದ್ದ ದೇಶದ ಚುನಾವಣಾ ಆಯೋಗವು ಬಿಜೆಪಿಯ ಕಾರ್ಯಕರ್ತನಂತೆ ನಡೆದುಕೊಳ್ಳುತ್ತಿದೆ ಎಂದು ಕೇಂದ್ರದ ಮಾಜಿ ಸಚಿವ ಯಶವಂತ ಸಿನ್ಹಾ ಟೀಕಿಸಿದ್ದಾರೆ.



ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಚುನಾವಣಾ ಆಯೋಗವು ಅಂತಿಮ ಎಚ್ಚರಿಕೆ ನೀಡಿದ ಸುದ್ದಿಗೆ ಪ್ರತಿಕ್ರಿಯಿಸುತ್ತಿದ್ದ ಅವರು, ''ಚುನಾವಣಾ ಆಯೋಗವು ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ನಡೆಸುತ್ತದೆ ಎಂದು ನಾವು ನಂಬುವುದು ಸಹಜ; ಆದರೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಬಿಜೆಪಿಯ ಸಕ್ರಿಯ ಸದಸ್ಯರಂತೆ ಕಾರ್ಯನಿರ್ವಹಿಸುತ್ತಿದ್ದಾರೆ'' ಎಂದು ಆರೋಪಿಸಿದರು. ಚುನಾವಣಾ ಆಯೋಗವು 'ಎಕ್ಸ್' (ಟ್ವಿಟರ್) ಸಾಮಾಜಿಕ ಜಾಲತಾಣದಲ್ಲಿ, 'ತೃಣಮೂಲ ಕಾಂಗ್ರೆಸ್‌ನೊಂದಿಗೆ ಚುನಾವಣಾ ಆಯೋಗದ ನೇರ ಸವಾಲು. ಈ ಬಾರಿ ಭಯ-ಮುಕ್ತ, ಬೆದರಿಕೆ-ಮುಕ್ತ, ಹಿಂಸಾಚಾರ-ಮುಕ್ತ, ನಕಲಿ ಮತದಾನವಿಲ್ಲದ, ಬೂತ್ ಜಾಮಿಂಗ್ ಮತ್ತು ಸೋರ್ಸ್ ಜಾಮಿಂಗ್ ನಡೆಯದ ಚುನಾವಣೆ ಕಾಣಬರಲಿದೆ' ಎಂದು ಬರೆದುಕೊಂಡಿತ್ತು. ಇದಕ್ಕೆ ಯಶವಂತ ಸಿನ್ಹಾ ಅವರು ಹೀಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ತಿಳಿದುಬಂದಿದೆ. ಆಯೋಗದ ಟ್ವೀಟ್‌ಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ತೃಣಮೂಲ ಕಾಂಗ್ರೆಸ್, ''ಇದು ತಟಸ್ಥ ಸಾಂವಿಧಾನಿಕ ಸಂಸ್ಥೆಯೊಂದು ವರ್ತಿಸುವ ರೀತಿಯೇ?'' ಎಂದು ಪ್ರಶ್ನಿಸಿತ್ತು.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಘೋಷಣೆಗೂ ಮೊದಲ ದಿನಗಳಿಂದಲೇ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ವಿಷಯದಲ್ಲಿ ಕೇಂದ್ರ ಚುನಾವಣಾ ಆಯೋಗ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷದ ನಡುವೆ ತಿಕ್ಕಾಟ ನಡೆದುಕೊಂಡೇ ಬಂದಿದೆ. 'ಮತದಾರರ ಪಟ್ಟಿಯಿಂದ ಹಲವರ ಹೆಸರುಗಳನ್ನು ಆಯೋಗವು ಬಿಜೆಪಿಯ ಸೂಚನೆ ಮೇರೆಗೆ ಅಳಿಸಿಹಾಕಿದೆ' ಎಂದು ಟಿಎಂಸಿ ಈ ಹಿಂದೆ ಆರೋಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು. 294 ಸ್ಥಾನಗಳ ಪಶ್ಚಿಮ ಬಂಗಾಳ ವಿಧಾನಸಭೆಗೆ ಏಪ್ರಿಲ್ 23 ಮತ್ತು 29ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಮೇ ತಿಂಗಳ 4ರಂದು ಉಳಿದ ನಾಲ್ಕು ರಾಜ್ಯಗಳೊಂದಿಗೆ ಫಲಿತಾಂಶ ಪ್ರಕಟವಾಗಲಿದೆ.

ಮೈತ್ರಿಗೆ ಎಐಎಂಐಎಂ ಎಳ್ಳು-ನೀರು!

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗೆ ಇನ್ನೇನು ಕೆಲವೇ ದಿನಗಳು ಬಾಕಿ ಉಳಿದಿವೆ. ಈ ಘಟ್ಟದಲ್ಲಿ, ಹುಮಾಯೂನ್ ಕಬೀರ್ ಅವರ 'ಆಮ್ ಜನತಾ ಉನ್ನಾಯನ್ ಪಾರ್ಟಿ' (ಎಜೆಯುಪಿ) ಜತೆಗಿನ ಅಲ್ಪಾವಧಿಯ ಮೈತ್ರಿಗೆ 'ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್' (ಎಐಎಂಐಎಂ) ಪಕ್ಷವು ಅಂತ್ಯಹಾಡಿದೆ.

ಕಬೀರ್ ಅವರು ಬಂಗಾಳದ ಮುಸ್ಲಿಮರ ಬಗ್ಗೆ ಹಾಗೂ ಬಿಜೆಪಿ ಜತೆಗಿನ ತಮ್ಮ ಸಂಬಂಧಗಳ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡುತ್ತಿದ್ದಾರೆ ಎಂದು ಹೇಳಲಾದ 'ಕುಟುಕು ಕಾರ್ಯಾಚರಣೆ' ವಿಡಿಯೋವೊಂದನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಬಿಡುಗಡೆ ಮಾಡಿದ ನಂತರ ಈ ಬೆಳವಣಿಗೆಯಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಎಐಎಂಐಎಂ, ''ಬಂಗಾಳದ ಮುಸ್ಲಿಮರು ಎಷ್ಟು ದುರ್ಬಲರು ಎಂಬುದನ್ನು ಈ ಬಹಿರಂಗಪಡಿಸುವಿಕೆಗಳು ತೋರಿಸಿಕೊಟ್ಟಿವೆ. ಮುಸ್ಲಿಮರ ಸಮಗ್ರತೆಯನ್ನು ಪ್ರಶ್ನಿಸುವ ಯಾವುದೇ ಹೇಳಿಕೆಗೂ ಇದಕ್ಕೂ ನಂಟು ಕಲ್ಪಿಸಲಾಗದು. ಕಬೀರ್ ಅವರ ಪಕ್ಷದ ಜತೆಗಿನ ಮೈತ್ರಿಯನ್ನು ತಕ್ಷಣವೇ ಕೊನೆಗೊಳಿಸಿ, ಚುನಾವಣೆಯಲ್ಲಿ ಎಐಎಂಐಎಂ ಸ್ವತಂತ್ರವಾಗಿ ಸ್ಪರ್ಧಿಸಲಿದೆ. ಮುಂದೆ ಪಕ್ಷವು ಇವರೊಂದಿಗೆ ಯಾವುದೇ ಮೈತ್ರಿ ಮಾಡಿಕೊಳ್ಳುವುದಿಲ್ಲ'' ಎಂದು ಬರೆದುಕೊಂಡಿದೆ.

ಬಂಗಾಳದಲ್ಲಿ ಮುಸ್ಲಿಮರು ಸಾಮಾಜಿಕ- ಆರ್ಥಿಕವಾಗಿ ಮೂಲೆಗುಂಪಾಗಿದ್ದಾರೆ. ದಶಕಗಳ ಜಾತ್ಯತೀತ ಆಡಳಿತದ ಹೊರತಾಗಿಯೂ ಮುಸ್ಲಿಮರು ಬಡವರಾಗಿದ್ದಾರೆ, ತುಳಿತಕ್ಕೆ ಒಳಗಾದವರಲ್ಲಿ ಸೇರಿದ್ದಾರೆ. ಇಂಥವರಿಗೆ ರಾಜಕೀಯವಾಗಿ ಸ್ವತಂತ್ರ ದನಿಯಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಗುರಿಯೊಂದಿಗೆ ಯಾವುದೇ ರಾಜ್ಯದಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸಲು ನಿರ್ಧರಿಸಲಾಗಿದೆ ಎಂದು ಎಐಎಂಐಎಂ ಹೇಳಿಕೊಂಡಿದೆ.

ಏನಿದು ವಿಡಿಯೋ?

'ಎಜೆಯುಪಿ'ಯ ಹುಮಾಯೂನ್ ಕಬೀರ್, ಬಿಜೆಪಿಯ ವಿಪಕ್ಷನಾಯಕ ಸುವೇಂದು ಅಧಿಕಾರಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾರೊಂದಿಗೆ ತಾವು ನಿಕಟವಾಗಿರುವುದಾಗಿ ಬಿಂಬಿಸಿಕೊಂಡು ಹೇಳಿಕೆ ನೀಡುತ್ತಿರುವ ವಿಡಿಯೋ ಒಂದನ್ನು ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಹಂಚಿಕೊಂಡ ಟಿಎಂಸಿ ಪಕ್ಷ, ಈ ವಿಷಯದ ಕುರಿತಂತೆ ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸಬೇಕೆಂದು ಆಗ್ರಹಿಸಿತ್ತು. 'ಬಂಗಾಳದಲ್ಲಿ ಸಿಎಂ ಮಮತಾರನ್ನು ಪದಚ್ಯುತಗೊಳಿಸಲು ತಾವು ಯಾವುದೇ ಮಟ್ಟಕ್ಕೆ ಹೋಗಲು ಸಿದ್ಧ' ಎಂದು ವಿಡಿಯೋದಲ್ಲಿ ಕಬೀರ್ ಹೇಳಿರುವುದು ಕೇಳಿಬಂದಿದೆ. ಟಿಎಂಸಿಯಿಂದ ಅಲ್ಪಸಂಖ್ಯಾತರ ಮತಗಳನ್ನು ಬೇರೆಡೆಗೆ ತಿರುಗಿಸುವ ಗುರಿ ತಮಗಿದೆ ಎಂದು ಕಬೀರ್ ಹೇಳುತ್ತಿರುವುದು ಮತ್ತು ಇಂಥ ಬದಲಾವಣೆ ಬಿಜೆಪಿಗೆ ಚುನಾವಣಾ ಲಾಭವನ್ನು ತಂದುಕೊಡಬಹುದು ಎಂಬುದು ಅಲ್ಲಿ ಧ್ವನಿತವಾಗಿರುವುದು ಕೂಡ ಈ ವಿಡಿಯೋದಲ್ಲಿ ಸೆರೆಯಾಗಿದೆ. ಕಳೆದ ವರ್ಷದ ಕೊನೆಯಲ್ಲಿ ಟಿಎಂಸಿಯಿಂದ ಅಮಾನತುಗೊಂಡ ಕೆಲವು ದಿನಗಳ ನಂತರ 'ಎಜೆಯುಪಿ'ಯನ್ನು ಸ್ಥಾಪಿಸಿದ ಕಬೀರ್, ಪ್ರಧಾನ ಮಂತ್ರಿಗಳ ಕಚೇರಿಯೊಂದಿಗೆ ತಾವು ಸಂವಹನ ನಡೆಸುತ್ತಿದ್ದುದಾಗಿ ಹಾಗೂ ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳ ನಾಯಕರೊಂದಿಗೆ ಸಮನ್ವಯ ಸಾಧಿಸಲು ತಮಗೆ ಸೂಚಿಸಲಾಗಿತ್ತು ಎಂಬುದಾಗಿ ಹೇಳಿಕೊಂಡಿರುವುದು ವಿಡಿಯೋದಲ್ಲಿ ದಾಖಲಾಗಿದೆ ಎಂದು ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ.

ಮಮತಾ ದೀದಿ ದೇಶದ ಅತಿ ಬಡ ಮುಖ್ಯಮಂತ್ರಿಯಂತೆ!

ಸ್ವಂತ ಮನೆಯಿಲ್ಲ, ಕಾರೂ ಇಲ್ಲ

ಭವಾನಿಪುರ: ಪಶ್ಚಿಮ ಬಂಗಾಳದ ಈ ಬಾರಿಯ ವಿಧಾನಸಭಾ ಚುನಾವಣೆಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭವಾನಿಪುರ ಕ್ಷೇತ್ರದಿಂದ ಇತ್ತೀಚೆಗೆ ನಾಮಪತ್ರ ಸಲ್ಲಿಸಿದ್ದು, ಸ್ವಂತ ಮನೆ, ಕಾರು ಅಥವಾ ಯಾವುದೇ ಪ್ರಮುಖ ಸ್ಥಿರಾಸ್ತಿ ತಮ್ಮಲ್ಲಿ ಇಲ್ಲವೆಂದು ಚುನಾವಣಾ ಅಫಿಡವಿಟ್‌ನಲ್ಲಿ ಅವರು ಘೋಷಿಸಿದ್ದಾರೆ.

ತಮ್ಮ ಸುದೀರ್ಘ ರಾಜಕೀಯ ಜೀವನದುದ್ದಕ್ಕೂ ಸರಳ ಜೀವನಶೈಲಿಯನ್ನು ಅನುಸರಿಸಿಕೊಂಡು ಬಂದಿರುವ 71ರ ಹರೆಯದ ಮಮತಾ, ಅತ್ಯಂತ ಕಡಿಮೆ ಆಸ್ತಿ ಹೊಂದಿರುವ ದೇಶದ ಮುಖ್ಯಮಂತ್ರಿಗಳ ಪೈಕಿ ಒಬ್ಬರಾಗಿ ಗುರುತಿಸಲ್ಪಟ್ಟಿದ್ದಾರೆ. 2021ರ ಚುನಾವಣೆಯ ಸಂದರ್ಭದಲ್ಲಿ, ದೇಶದ 31 ಮುಖ್ಯಮಂತ್ರಿಗಳ ಪೈಕಿ ಮಮತಾ ಅವರು ಸುಮಾರು 15 ಲಕ್ಷ ರು. ಮೌಲ್ಯದ ಆಸ್ತಿ ಹೊಂದುವುದರೊಂದಿಗೆ ಅತಿ ಕಡಿಮೆ ಸಂಪತ್ತಿನ ಒಡತಿಯಾಗಿದ್ದರು ಎಂದು 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ಸಂಸ್ಥೆ ತಿಳಿಸಿದೆ. ಅದೇ ವೇಳೆಗೆ, ಸುಮಾರು 930 ಕೋಟಿ ರುಪಾಯಿ ಮೌಲ್ಯದ ಆಸ್ತಿಯೊಂದಿಗೆ ಆಂಧ್ರಪ್ರದೇಶದ ಎನ್. ಚಂದ್ರಬಾಬು ನಾಯ್ಡು ಅತ್ಯಂತ ಶ್ರೀಮಂತ ಮುಖ್ಯಮಂತ್ರಿ ಎನಿಸಿಕೊಂಡಿದ್ದರು!

ಮಮತಾರ ಸ್ವತ್ತು-ಸಂಪತ್ತು

- ಆಸ್ತಿಯ ಒಟ್ಟು ಮೌಲ್ಯ: 15.4 ಲಕ್ಷ ರು.
- ವಾರ್ಷಿಕ ಆದಾಯ: 2024-25ರಲ್ಲಿ 23,21,570 ರು.; 2023-24ರಲ್ಲಿ 20,72,740 ರು.; 2021-22ರಲ್ಲಿ 38,14,410 ರು.
- ಟಿಡಿಎಸ್ ಮರುಪಾವತಿ: 2025-26ರ ವರ್ಷದಲ್ಲಿ 40,600 ರು.
- ಚಿನ್ನ: 9.750 ಗ್ರಾಂ, ಅದರ ಮೌಲ್ಯ ಸುಮಾರು 1,45,000 ರು.
- ಯಾವುದೇ ಕೃಷಿ ಅಥವಾ ಕೃಷಿಯೇತರ/ವಾಣಿಜ್ಯ ಭೂಮಿಯಿಲ್ಲ.

'ದೀದಿ' ಸಾಗಿಬಂದ 'ಹಾದಿ'

- 1970ರ ದಶಕದಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ಜೀವನದ ಆರಂಭ.
- 1998ರಲ್ಲಿ ಕಾಂಗ್ರೆಸ್‌ನಿಂದ ಬೇರ್ಪಟ್ಟು ತೃಣಮೂಲ ಕಾಂಗ್ರೆಸ್ ಪಕ್ಷದ ಸ್ಥಾಪನೆ.
- 1984ರಲ್ಲಿ ಹಿರಿಯ ಕಮ್ಯುನಿಸ್ಟ್ ನಾಯಕ ಸೋಮನಾಥ್ ಚಟರ್ಜಿಯವರನ್ನು ಸೋಲಿಸಿ ಸಂಸತ್ತಿಗೆ ಆಯ್ಕೆ; ದೇಶದ ಅತಿ ಕಿರಿಯ ಸಂಸದರಲ್ಲಿ ಒಬ್ಬರು ಎಂಬ ಹೆಗ್ಗಳಿಕೆ.
- 1991, 1996, 1999, 2004 ಮತ್ತು 2009ರ ಲೋಕಸಭಾ ಚುನಾವಣೆಗಳಲ್ಲೂ ಗೆಲುವು.
- 1991ರಲ್ಲಿ ಅಂದಿನ ಪ್ರಧಾನಮಂತ್ರಿ ಪಿ.ವಿ.ನರಸಿಂಹರಾವ್ ಅವರ ಸಂಪುಟದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ, ಯುವಜನ ಮತ್ತು ಕ್ರೀಡೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಗಳ ರಾಜ್ಯ ಸಚಿವೆಯಾಗಿ ಕರ್ತವ್ಯ ನಿಭಾವಣೆ.
- 1999ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ರೈಲ್ವೆ ಸಚಿವೆಯಾಗಿ ಕಾರ್ಯನಿರ್ವಹಣೆ. 2003ರಲ್ಲಿ ಮತ್ತೆ ಕೇಂದ್ರ ಸಚಿವೆಯಾಗಿ, ಕೆಲ ಕಾಲ ಖಾತೆ ರಹಿತ ಹುದ್ದೆಯಲ್ಲಿ ಕಾರ್ಯನಿರ್ವಹಣೆ.
- 2011ರಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು ಪಶ್ಚಿಮ ಬಂಗಾಳದಲ್ಲಿ ಜಯಭೇರಿ ಬಾರಿಸಿದ ನಂತರ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆ. ಬಳಿಕ ನಿರಂತರವಾಗಿ ಇದೇ ಹುದ್ದೆಯಲ್ಲಿ ಮುಂದುವರಿಕೆ.

ಇನ್ನೇಲೆ ಎರಡೇ ಪಕ್ಷಗಳ ದರ್ಬಾರ್: ರಾಜೀವ್

ತಿರುವನಂತಪುರಂ: ಈ ಸಲದ ವಿಧಾನಸಭಾ ಚುನಾವಣೆಯು ಕೇರಳದಲ್ಲಿ 3 ರಾಜಕೀಯ ಪಕ್ಷಗಳ ನಡುವಿನ ಕೊನೆಯ ಸಮರವಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ನೇಮೋಮ್ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಅವರು ಮಾಧ್ಯಮಗಳೊಂದಿಗೆ ಮಾತನಾಡುತ್ತಾ, ''ಇನ್ನು ಮುಂದೆ ರಾಜ್ಯದಲ್ಲಿ ಒಂದೆಡೆ 'ಎನ್‌ಡಿಎ', ಮತ್ತೊಂದೆಡೆ ಕಾಂಗ್ರೆಸ್-ಸಿಪಿಐ (ಎಂ) ಮೈತ್ರಿಕೂಟವಿರುತ್ತದೆ. ಕಾಂಗ್ರೆಸ್ ಮತ್ತು ಸಿಪಿಐ(ಎಂ) ನಡುವೆ ಯಾವುದೇ ವ್ಯತ್ಯಾಸವಿಲ್ಲ; ಅವುಗಳ ರಾಜಕೀಯ ಸಿದ್ಧಾಂತ ಮತ್ತು ಟ್ರ್ಯಾಕ್ ರೆಕಾರ್ಡ್ ಒಂದೇ ಆಗಿವೆ. ಕೇರಳವು ದ್ವಿ-ಧ್ರುವಿ ರಾಜಕಾರಣದತ್ತ ಸಾಗುತ್ತಿರುವುದರಿಂದ ದೊಡ್ಡ ಬದಲಾವಣೆಯಾಗಲಿದ್ದು, ಆ ಪೈಕಿ ಒಂದು ಧ್ರುವವು ಬಿಜೆಪಿ ನೇತೃತ್ವದ 'ಎನ್‌ಡಿಎ' ಆಗಿರುತ್ತದೆ. ಬಿಜೆಪಿ ದುರಹಂಕಾರಿ ಪಕ್ಷವಲ್ಲ; ಮತದಾರರಿಂದ ಅದು ಪಡೆದ ಸ್ವೀಕಾರಾರ್ಹತೆಯು ಮೇ 4ರ ಫಲಿತಾಂಶದಲ್ಲಿ ಸ್ಪಷ್ಟವಾಗಲಿದೆ'' ಎಂದರು.

ಮಾತು ಮುಂದುವರಿಸಿದ ಅವರು, ''ಎಲ್ಲಾ 140 ಕ್ಷೇತ್ರಗಳಲ್ಲೂ ಮತದಾರರ ವಿಶ್ವಾಸವನ್ನು ಗಳಿಸಲು ನಾವು ಶ್ರಮಿಸಿದ್ದೇವೆ. ನೇಮೋಮ್ ಕ್ಷೇತ್ರದಲ್ಲೂ, ನಮಗೆ ಜನಬೆಂಬಲ ಸಿಕ್ಕರೆ ಏನು ಮಾಡುತ್ತೇವೆ ಎಂದು ತಿಳಿಸಿದ್ದೇವೆ. ನಿರ್ಧರಿಸುವುದು ಜನರಿಗೆ ಬಿಟ್ಟದ್ದು. ಮತದಾನದಲ್ಲಿನ ಹೆಚ್ಚಳವು, ಬೆಳೆಯುತ್ತಿರುವ ಜನಜಾಗೃತಿ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುವ ಅವರ ಬಯಕೆಯನ್ನು ಪ್ರತಿಬಿಂಬಿಸುತ್ತದೆ. ಜನರು ತಮ್ಮ ಭವಿಷ್ಯದ ಮಾಲೀಕತ್ವವನ್ನು ತೆಗೆದುಕೊಂಡಿದ್ದಾರೆ, ಇದು ನಮ್ಮ ಮಕ್ಕಳ ಭವಿಷ್ಯವನ್ನೂ ನಿರ್ಧರಿಸುವ ಚುನಾವಣೆಯಾಗಿದೆ'' ಎಂದರು.

ಪವನ್ ಖೇರಾಗೆ ನಿರೀಕ್ಷಣಾ ಜಾಮೀನು

ಹೈದರಾಬಾದ್: ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾರ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರು ದಾಖಲಿಸಿದ್ದ ಎಫ್‌ಐಆರ್‌ಗೆ ಸಂಬಂಧಿಸಿದಂತೆ, ಕಾಂಗ್ರೆಸ್ ನಾಯಕ ಪವನ್ ಖೇರಾ ಅವರಿಗೆ ತೆಲಂಗಾಣ ಉಚ್ಚ ನ್ಯಾಯಾಲಯ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಿದೆ.

ಪವನ್ ಖೇರಾ ಅವರು ಏಪ್ರಿಲ್ 5ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ, ''ರಿನಿಕಿ ಭುಯಾನ್ ಶರ್ಮಾ ಅವರು ಹಲವು ದೇಶಗಳ ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದಾರೆ, ಅವರಿಗೆ ವಿದೇಶಗಳಲ್ಲೂ ಆಸ್ತಿ-ಪಾಸ್ತಿಗಳಿವೆ. ಆದರೆ ಚುನಾವಣಾ ಅಫಿಡವಿಟ್‌ನಲ್ಲಿ ಈ ವಿವರಗಳನ್ನು ಅವರು ಬಹಿರಂಗಪಡಿಸಿಲ್ಲ'' ಎಂದು ಗಂಭೀರವಾಗಿ ಆರೋಪಿಸಿದ್ದರು. ಆದರೆ ಖೇರಾ ಅವರ ಈ ಆರೋಪಗಳನ್ನು ಹಿಮಂತ ಬಿಸ್ವ ಶರ್ಮಾ ತಳ್ಳಿಹಾಕಿದ್ದರು. ಈ ಆರೋಪದ ಸಂಬಂಧವಾಗಿ ರಿನಿಕಿ ಅವರು ಖೇರಾ ವಿರುದ್ಧ ಗುವಾಹಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ್ದರು. ಅದರನ್ವಯ ಅಸ್ಸಾಂ ಪೊಲೀಸರು ವಿಚಾರಣೆಗೆಂದು ದೆಹಲಿಯಲ್ಲಿನ ಪವನ್ ಖೇರಾ ಅವರ ನಿವಾಸಕ್ಕೆ ತೆರಳಿದ್ದರು. ಆದರೆ ಖೇರಾ ಅಲ್ಲಿರಲಿಲ್ಲ. ಬಳಿಕ ಖೇರಾ ಹೈದರಾಬಾದ್‌ನಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂಬುದನ್ನಿಲ್ಲಿ ಸ್ಮರಿಸಬಹುದು.

ಕಣದಲ್ಲಿ ಒಂದೇ ಹೆಸರಿನ ಅಭ್ಯರ್ಥಿಗಳು

ಚೆನ್ನೈ: 2019ರ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದರು ನಟಿ ಸುಮಲತಾ. ಆಗ ಅವರ ರಾಜಕೀಯ ಎದುರಾಳಿಗಳು ಅದೇ ಹೆಸರಿನ ಮತ್ತಷ್ಟು ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಮತದಾರರಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸಿದ್ದು ನಿಮಗೆ ನೆನಪಿರಬಹುದು. ಈಗ ತಮಿಳುನಾಡಿನಲ್ಲೂ ಅಂಥದೇ ಬೆಳವಣಿಗೆ ಕಂಡುಬಂದಿದೆ.

ನಟ ವಿಜಯ್ (ಸಿ. ಜೋಸೆಫ್ ವಿಜಯ್) ಅವರು 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಹೆಸರಿನ ತಮ್ಮದೇ ರಾಜಕೀಯ ಪಕ್ಷವನ್ನು ಹುಟ್ಟುಹಾಕಿ ಮತದಾರರಿಗೆ ನಿಕಟವಾಗುತ್ತಿದ್ದಂತೆ, ಅವರನ್ನು ಹಣಿಯಲು ಮಿಕ್ಕ ರಾಜಕೀಯ ಪಕ್ಷಗಳು ಇನ್ನಿಲ್ಲದ ಸರ್ಕಸ್ ಮಾಡುತ್ತಿವೆ. ವಿಜಯ್ ಸ್ಪರ್ಧಿಸುತ್ತಿರುವ ಎರಡೂ ಕ್ಷೇತ್ರಗಳಲ್ಲೂ ಅವರ ಹೆಸರನ್ನೇ ಬಹುತೇಕ ಹೋಲುವ ಒಂದಷ್ಟು ಅಭ್ಯರ್ಥಿಗಳು ಅಖಾಡವನ್ನು ಪ್ರವೇಶಿಸಿದ್ದು, ಇದರಿಂದಾಗಿ ಮತದಾರರು ಗೊಂದಲಕ್ಕೀಡಾಗಬಹುದೇ? ಎಂಬ ಪ್ರಶ್ನೆ ಕೆಲವರನ್ನು ಕಾಡುತ್ತಿದೆ.

ನಟ ಜೋಸೆಫ್ ವಿಜಯ್‌ಗೆ ಎದುರಾಗಿ ತಿರುಚ್ಚಿ (ಪೂರ್ವ) ಕ್ಷೇತ್ರದಲ್ಲಿ 'ಎಐಜೆಎಂಕೆ' ಪಕ್ಷದ ಕೆ.ವಿಜಯ್ ಮತ್ತು ಸ್ವತಂತ್ರ ಅಭ್ಯರ್ಥಿ ಜಿ. ವಿಜಯ್ ತೊಡೆ ತಟ್ಟಿದ್ದರೆ, ಪೆರಂಬೂರು ಕ್ಷೇತ್ರದಲ್ಲಿ ಎಂ. ಜೋಸೆಫ್ ಮತ್ತು ಎಸ್.ಜೋಸೆಫ್ ಎಂಬಿಬ್ಬರು ಪಂಥಾಹ್ವಾನ ನೀಡಿದ್ದಾರೆ. ಜನರು ಗಮನವಿಟ್ಟು ಮತ ಚಲಾಯಿಸಿದರೆ ಮಾತ್ರವೇ 'ದಳಪತಿ' ವಿಜಯ್‌ರ ಅದೃಷ್ಟ ಕುದುರೀತು! ಇತರ ಪಕ್ಷಗಳ ಅಭ್ಯರ್ಥಿಗಳಿಗೂ ಇಂಥದೇ ಸಮಸ್ಯೆ

ಎದುರಾಗಿದೆ. ತಿರುಚ್ಚಿ ಜಿಲ್ಲೆಯ ತುರೈಯೂರ್ (ಎಸ್‌ಸಿ) ಕ್ಷೇತ್ರದಲ್ಲಿ 'ಸರೋಜಾ' ಹೆಸರಿನ ಮೂವರು ಅಭ್ಯಥಿಗಳು ಕಣದಲ್ಲಿದ್ದು, ಈ ಪೈಕಿ ಒಬ್ಬರು ಎಐಎಡಿಎಂಕೆ ಪಕ್ಷದವರಂತೆ. ಮನ್ನಾರ್‌ಗುಡಿ ಕ್ಷೇತ್ರದಲ್ಲಿ 'ಕಾಮರಾಜ್' ಹೆಸರಿನ ನಾಲ್ವರು ಅಭ್ಯರ್ಥಿಗಳು ಕಣದಲ್ಲಿದ್ದಾರಂತೆ. ಇನ್ನು ಡಿಎಂಕೆಯ ಮಾಜಿ ಸಚಿವ ವಿ.ಸೆಂಥಿಲ್ ಬಾಲಾಜಿ ಸ್ಪರ್ಧಿಸುತ್ತಿರುವ ಕೊಯಮತ್ತೂರು (ದಕ್ಷಿಣ) ಕ್ಷೇತ್ರದಲ್ಲಿ 'ಸೆಂಥಿಲ್' ಹೆಸರಿನ ಐವರು ಕಣದಲ್ಲಿದ್ದಾರಂತೆ. ಡಿಎಂಕೆ ಅಭ್ಯರ್ಥಿ ಎನ್.ಕಾರ್ತಿಕೇಯನ್ ಅವರು ತಮ್ಮ ಕ್ಷೇತ್ರದಲ್ಲಿ ತಮ್ಮದೇ ಹೆಸರಿನ ಇನ್ನೂ ಮೂವರು ಅಭ್ಯರ್ಥಿಗಳೊಂದಿಗೆ ಸೆಣಸಬೇಕಾಗಿದೆಯಂತೆ.

ಒಟ್ಟಿನಲ್ಲಿ, ಈ ಸಲದ ತಮಿಳುನಾಡು ವಿಧಾನಸಭಾ ಚುನಾವಣೆ ರುಚಿಕಟ್ಟಾಗಿರೋದಂತೂ ಖರೆ!

ಬಿಜೆಪಿ ವಿರೋಧಿ ಅಭಿಯಾನದಲ್ಲಿ ನಿರ್ಮಲಾ ಪತಿ ಪರಕಾಲ ಪ್ರಭಾಕರ್ ಭಾಗಿ

ನಾನೊಂದು ತೀರ, ನೀನೊಂದು ತೀರ...!

ಚೆನ್ನೈ: ಜೀವತ್‌ರಾಮ್ ಭಗವಾನ್‌ದಾಸ್ ಕೃಪಲಾನಿ (ಇವರು 'ಆಚಾರ್ಯ ಕೃಪಲಾನಿ' ಎಂದೇ ಖ್ಯಾತರು) ಮತ್ತು ಸುಚೇತಾ ಕೃಪಲಾನಿ, ಗಂಡ-ಹೆಂಡತಿ ಆಗಿದ್ದವರು; ಆದರೆ ಅವರು ಅನುಸರಿಸುತ್ತಿದ್ದ ರಾಜಕೀಯ ಪಕ್ಷಗಳು ಮಾತ್ರ ಬೇರೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಇದ್ದುದರ ಹೊರತಾಗಿಯೂ ಇವರು ಪರಸ್ಪರರನ್ನು ಅಪಾರವಾಗಿ ಗೌರವಿಸುತ್ತಿದ್ದರು.

ದಶಕಗಳ ಹಿಂದಿನ ಕಥೆ ಈಗೇಕೆ? ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಿರಬಹುದು. ಇದಕ್ಕೆ ಉತ್ತರವಾಗಿ ಕಾಣುವವರು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಅವರ ಪತಿ ಪರಕಾಲ ಪ್ರಭಾಕರ್. ನಿರ್ಮಲಾ ಅವರು ಬಿಜೆಪಿಯ ಧುರೀಣೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ; ಆದರೆ ಖ್ಯಾತ ಅರ್ಥಶಾಸ್ತ್ರಜ್ಞರಾಗಿರುವ ಅವರ ಪತಿ ಪ್ರಭಾಕರ್ 'ಬಿಜೆಪಿ-ವಿರೋಧಿ' ಅಭಿಯಾನದಲ್ಲಿ ಪಾಲ್ಗೊಳ್ಳುವ ಮೂಲಕ ಹಲವರ ಹುಬ್ಬೇರಿಸಿದ್ದಾರೆ. ಇದಕ್ಕೆ ಕಾರಣವಾಗಿರುವುದು, ತಮಿಳುನಾಡಿನಾದ್ಯಂತ ಸಂಚಲನವನ್ನೇ ಸೃಷ್ಟಿಸಿ

ರುವ 'ಶೂನ್ಯ ಬಿಜೆಪಿ ಚಳವಳಿ' ಎಂಬ ಆಂದೋಲನ. ಸನ್ನಿಹಿತವಾಗಿರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಒಂದೇ ಒಂದು ಸ್ಥಾನವನ್ನೂ ದಕ್ಕಿಸಿಕೊಳ್ಳದಂತೆ ನೋಡಿಕೊಳ್ಳುವುದು ಈ ಆಂದೋಲನದ ಏಕೈಕ ಉದ್ದೇಶವಂತೆ. ಇದನ್ನು ಮುನ್ನಡೆಸುತ್ತಿರುವವರು ಪರಕಾಲ ಪ್ರಭಾಕರ್!

ಇದರ ಕಾರ್ಯತಂತ್ರವೇನು?

ತಮಿಳು ರಾಷ್ಟ್ರೀಯತೆ ಹಾಗೂ ದ್ರಾವಿಡ ಸಿದ್ಧಾಂತಗಳು ಆಳವಾಗಿ ಹಾಗೂ ಗಟ್ಟಿಯಾಗಿ ಬೇರುಬಿಟ್ಟಿರುವ ತಮಿಳುನಾಡಿನಲ್ಲಿ, ಬಿಜೆಪಿಯ ಪ್ರವರ್ಧಮಾನಕ್ಕೆ ಬ್ರೇಕ್ ಹಾಕಬಲ್ಲ ಸೈದ್ಧಾಂತಿಕ ಹೋರಾಟವಾಗಿ ಈ ಉಪಕ್ರಮವನ್ನು ಪರಿಗಣಿಸಲಾಗುತ್ತಿದೆ. ಬಿಜೆಪಿ ವಿರುದ್ಧ ತಳಮಟ್ಟದ ಪ್ರಭಾವಿ ಅಲೆಯನ್ನು ಸೃಷ್ಟಿಸುವುದು ಇದರ ಉದ್ದೇಶ. ಚುನಾವಣೆಯ ಸಂದರ್ಭದಲ್ಲಿ ಬೃಹತ್ತಾಗಿ ಸಂಘಟಿಸಲ್ಪಡುವುದಕ್ಕೆ ಬೇಕಾಗುವ ಸಾಧನ-ಸಲಕರಣೆಗಳನ್ನು ಹೊಂದಿಲ್ಲವಾದರೂ, ಇದೊಂದು ತೀವ್ರವಾದ ಜಾಗೃತಿ ಅಭಿಯಾನ ಎಂಬ ಗ್ರಹಿಕೆಯು ಯುವಜನರಲ್ಲಿ ಮತ್ತು ಸಾಮಾಜಿಕ ಮಾಧ್ಯಮಗಳ ಪ್ರಭಾವಿಗಳಲ್ಲಿ ಕೆನೆಗಟ್ಟಿದೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಗೆ ಗೆಲುವಿನ ಅವಕಾಶವಿರುವ ಕ್ಷೇತ್ರಗಳಲ್ಲಿ ಮತವಿಭಜನೆಯ ಮೂಲಕ, ಇಲ್ಲವೇ ಬಿಜೆಪಿ-ವಿರೋಧಿ ಮತಗಳ ಕ್ರೋಢೀಕರಣದ ಮೂಲಕ ಬಿಜೆಪಿಯನ್ನು ಸೋಲಿಸುವುದು ಈ ಆಂದೋಲನದ ಮುಖ್ಯಗುರಿ.

ಅಸ್ಮಿತೆಯನ್ನು ಕಾಪಾಡಲು ಕರೆ

ಮುಂಬರುವ ಚುನಾವಣೆಗಳಲ್ಲಿ, ತಮಿಳುನಾಡಿನ ಮತದಾರರು ಬಿಜೆಪಿ ವಿರುದ್ಧ ಮಾತ್ರವೇ ಹೋರಾಡದೆ, ಬಿಜೆಪಿಯ ಬೆಂಬಲಕ್ಕೆ ನಿಂತಿದೆ ಎನ್ನಲಾಗುವ ಚುನಾವಣಾ ಆಯೋಗ ಸೇರಿದಂತೆ ಕೇಂದ್ರ ಸರಕಾರದ ವಿವಿಧ ಸಂಸ್ಥೆಗಳಂಥ ಸಾಮೂಹಿಕ ಶಕ್ತಿಯೊಂದಿಗೆ ಹೋರಾಡಬೇಕು ಎಂಬುದು ಈ ಆಂದೋಲನದ ಪ್ರಧಾನತತ್ವ. ಅಂತೆಯೇ, ತಮಿಳುನಾಡಿನ ಅಸ್ಮಿತೆ, ಭಾಷಾ ವೈಶಿಷ್ಟ್ಯ, ಅನನ್ಯ ಸಾಂಸ್ಕೃತಿಕ ಗುರುತನ್ನು ಕಾಪಾಡಲೆಂದು ಜಾಗರೂಕತೆಯಿಂದ ಮತವನ್ನು ಚಲಾಯಿಸುವಂತೆ ಸಾರ್ವಜನಿಕರನ್ನು ಆಗ್ರಹಿಸಲು ಈ ಚಳವಳಿ ಪ್ರಚಾರ ಮಾಡುತ್ತಿದೆ ಎನ್ನಲಾಗಿದೆ. ಇದರ ಫಲಶ್ರುತಿ ಏನಾಗಬಹುದು? ಕಾದು ನೋಡೋಣ...

ವಿಜ್ಞಾನ ಎಂಬುದು ಪ್ರಶ್ನೆಗಳ ಅಂತ್ಯವೇ, ಆರಂಭವೇ?



● ಮಾಯಾ ಬಾಲಚಂದ್ರ, ಶ್ರೀನಿವಾಸಪುರ



ವಿಜ್ಞಾನವನ್ನು ಅನೇಕ ಬಾರಿ 'ಉತ್ತರಗಳ ಭಂಡಾರ' ಎಂದು ಭಾವಿಸಲಾಗಿದೆ. ವಿಜ್ಞಾನ ಎಲ್ಲ ಪ್ರಶ್ನೆಗಳಿಗೆ ಅಂತಿಮ ಉತ್ತರ ನೀಡುತ್ತದೆ ಎಂಬ ನಿರೀಕ್ಷೆ ಇದೆ. ಆದರೆ ವಿಚಿತ್ರವೆಂದರೆ, ವಿಜ್ಞಾನ ಎಷ್ಟು ಮುಂದು ವರಿದಿದೆಯೋ, ಪ್ರಶ್ನೆಗಳು ಅಷ್ಟೇ ಹೆಚ್ಚಾಗಿವೆ. ಹೀಗಾಗಿ, 'ವಿಜ್ಞಾನ' ಪ್ರಶ್ನೆಗಳ ಅಂತ್ಯವೋ ಅಥವಾ ಹೊಸ ಪ್ರಶ್ನೆಗಳ ಆರಂಭವೋ? ಎನ್ನುವ ಕುತೂಹಲಕ್ಕೆ ಭಾಷ್ಯ ಬರೆಯುತ್ತದೆ.

ಉತ್ತರಗಳ ಮೂಲಕ ಹುಟ್ಟುವ ಹೊಸ ಅನುಮಾನವೇ ವಿಜ್ಞಾನ. ವಿಜ್ಞಾನವು ಪ್ರಶ್ನೆಗೆ ಉತ್ತರ ನೀಡುತ್ತದೆ. ಆದರೆ ಆ ಉತ್ತರವೇ ಮತ್ತೊಂದು ಪ್ರಶ್ನೆಯನ್ನು ಹುಟ್ಟಿಸುತ್ತದೆ. ಭೂಮಿ ಸೂರ್ಯನನ್ನು ಸುತ್ತುತ್ತದೆ ಎಂದು ತಿಳಿದ ಕೂಡಲೇ ವಿಶ್ವದ ರಚನೆಯ ಬಗ್ಗೆ ಪ್ರಶ್ನೆ ಹುಟ್ಟಿತು. ವಿಶ್ವ ವಿಸ್ತರಿಸುತ್ತಿದೆ ಎಂದು ತಿಳಿದ ಕ್ಷಣವೇ, ಅದು ಹೇಗೆ ಹುಟ್ಟಿತು ಎಂಬ ಪ್ರಶ್ನೆ ಮೂಡಿತು. 'ಬಿಗ್ ಬ್ಯಾಂಗ್' ತತ್ವ ಬಂದ ಕೂಡಲೇ, ಬಿಗ್ ಬ್ಯಾಂಗ್‌ಗೆ ಮೊದಲು ಏನಿತ್ತು? ಎಂಬ ಪ್ರಶ್ನೆ ಹುಟ್ಟಿತು. ಇದು ವಿಜ್ಞಾನದ ಮೂಲಸ್ವಭಾವ. ವಿಜ್ಞಾನ ಅಂತಿಮ ಸತ್ಯ ಹೇಳುವುದಿಲ್ಲ, ಅದು ಪ್ರಶ್ನೆಗಳ ಗಡಿಯನ್ನು ವಿಸ್ತರಿಸುತ್ತದೆ. ವಿಜ್ಞಾನ ಎಂದರೆ ಮುಚ್ಚಿದ ಉತ್ತರ ಅಲ್ಲ, ಅದು ತೆರೆದ ಪ್ರಶ್ನೆ.

ವಿಜ್ಞಾನವು 'ಹೇಗೆ' ಎಂಬ ಪ್ರಶ್ನೆಗೆ ಉತ್ತರ ಕೊಡುತ್ತದೆ. ಆದರೆ 'ಏಕೆ' ಎಂಬ ಪ್ರಶ್ನೆ, ಅನೇಕ ಬಾರಿ ಹಾಗೆಯೇ ಉಳಿಯುತ್ತದೆ. ಜೀವ ಹೇಗೆ ಹುಟ್ಟಿತು? ಎನ್ನುವ ಪ್ರಶ್ನೆಗೆ ವಿಜ್ಞಾನ ಉತ್ತರ ಕೊಡುತ್ತದೆ. ಜೀವ ಏಕೆ ಹುಟ್ಟಿತು? ಇದು ತಾತ್ವಿಕ ಪ್ರಶ್ನೆ. ತತ್ವಶಾಸ್ತ್ರ ಅರ್ಥವನ್ನು ಹುಡುಕುತ್ತದೆ. ಇದರಿಂದ ಸ್ಪಷ್ಟವಾಗುವ ವಿಷಯ ಎಂದರೆ, ವಿಜ್ಞಾನ ಪ್ರಶ್ನೆಗಳನ್ನು ಮರೆಮಾಚಿ, ರಹಸ್ಯವಾಗಿಡುವುದಿಲ್ಲ. ಅವನ್ನು ಆಳಗೊಳಿಸುವ ಮೂಲಕ ಬೆಳಕನ್ನು ಕೊಡುತ್ತದೆ. ಆ ಬೆಳಕಿನಲ್ಲಿ ಕಾಣಿಸಿಕೊಳ್ಳುವ ನೆರಳೇ ಹೊಸ ಪ್ರಶ್ನೆಗಳು. ಉತ್ತರ ಸಿಕ್ಕಾಗಲೇ ಮನಸ್ಸು ಹೊಸ ಪ್ರಶ್ನೆ ಕೇಳುತ್ತದೆ. ಮಾನವನ ಮನಸ್ಸು ಕುತೂಹಲದಿಂದ ಕೂಡಿದೆ. ಒಂದು ಪ್ರಶ್ನೆಗೆ ಉತ್ತರ ಸಿಕ್ಕಾಗ, ಮನಸ್ಸಿಗೆ ತೃಪ್ತಿಯಾಗುವುದಿಲ್ಲ, ಮತ್ತೊಂದು ಪ್ರಶ್ನೆ ಕೇಳುತ್ತದೆ. ಇದನ್ನು ಮನೋವಿಜ್ಞಾನದಲ್ಲಿ curiosity loop ಎಂದು ಕರೆಯುತ್ತಾರೆ. ತಿಳಿಯುತ್ತಾ ಹೋದಂತೆ, ತಿಳಿಯದ್ದು ಹೆಚ್ಚಾಗುತ್ತದೆ. ಉತ್ತರ ಹೆಚ್ಚಾದಂತೆ ಅನುಮಾನ ಹೆಚ್ಚಾಗುತ್ತದೆ. ಇಲ್ಲಿ ಒಂದು ಮಹತ್ವದ ವಿಚಾರ ಇದೆ. ಅಜ್ಞಾನದಲ್ಲಿ ಪ್ರಶ್ನೆ ಕಡಿಮೆ. ಜ್ಞಾನದಲ್ಲಿ ಪ್ರಶ್ನೆ ಹೆಚ್ಚು. ಅಜ್ಞಾನಕ್ಕೆ ನಿಶ್ಚಿತತೆ ಇರುತ್ತದೆ. ಜ್ಞಾನಕ್ಕೆ ಅನುಮಾನ ಇರುತ್ತದೆ. ವಿಜ್ಞಾನ ಮನಸ್ಸನ್ನು ಅನುಮಾನಿಸುವಂತೆ ಮಾಡುತ್ತದೆ. ಅನುಮಾನವೇ ಹೊಸ ಪ್ರಶ್ನೆಗಳ ಉಗಮ ಸ್ಥಾನವೂ ಆಗುತ್ತದೆ.

ವಿಜ್ಞಾನವು ನಿಶ್ಚಿತತೆ ಅಲ್ಲ, ಅದು ತಾತ್ಕಾಲಿಕ ಸತ್ಯ. ಅಲ್ಲಿ ಸತ್ಯ ಶಾಶ್ವತವಲ್ಲ. ಹೊಸ ಸಾಕ್ಷಿ ಬಂದರೆ, ಹಳೆಯ ಸತ್ಯ ಬದಲಾಗುತ್ತದೆ. ಒಮ್ಮೆ ನ್ಯೂಟನ್‌ರ ಭೌತಶಾಸ್ತ್ರ ಸಂಪೂರ್ಣ ಸತ್ಯ ಎಂದು ಭಾವಿಸಲಾಯಿತು. ನಂತರ ಐನ್‌ಸ್ಟೀನ್‌ರ ಸಾಪೇಕ್ಷತೆಯ ತತ್ತ್ವಕ್ಕೆ ಮಹತ್ವ ದೊರೆಯಿತು. ಅಂದರೆ ವಿಜ್ಞಾನ ತನ್ನನ್ನೇ ಪ್ರಶ್ನಿಸುತ್ತದೆ. ಇದು ವಿಜ್ಞಾನದ ಮಹತ್ವ. ಇಲ್ಲಿ ಯಾವುದೇ ಒಂದು ಉತ್ತರವನ್ನು ಅಂತಿಮ ಎಂದು ಘೋಷಿಸಲಾಗುವುದಿಲ್ಲ, 'ಇದು ಈಗಿನ ಅತ್ಯುತ್ತಮ ವಿವರಣೆ' ಎಂದು ಮಾತ್ರ ಹೇಳಬಹುದಷ್ಟೇ. ಇದು ಪ್ರಶ್ನೆಗಳ ಅಂತ್ಯವಲ್ಲ, ಮುಂದಿನ ಪ್ರಶ್ನೆಗೆ ಮುನ್ನೆಲೆ ಎನ್ನಬಹುದು.

ವಿಜ್ಞಾನ, ಭ್ರಮೆಗಳನ್ನು ಒಡೆಯುತ್ತದೆ, ಆದರೂ ಪ್ರಶ್ನೆ ಉಳಿಯುತ್ತದೆ. ವೈಜ್ಞಾನಿಕವಾಗಿ ಮಾನವನು ಪ್ರಕೃತಿಯ ಒಂದು ಭಾಗ. ಭೂಮಿ ಕೇಂದ್ರವಲ್ಲ. ಮಾನವ ವಿಶೇಷವಲ್ಲ. ಇವೆಲ್ಲ ಭ್ರಮೆಗಳನ್ನು ಒಡೆಯುತ್ತವೆ. ಆದರೆ ಹೊಸ ಪ್ರಶ್ನೆ ಹುಟ್ಟುತ್ತದೆ: ನಾವು ಯಾರು? ಬದುಕಿನ ಅರ್ಥವೇನು? ಜೀವನದ ಉದ್ದೇಶ ಏನು? ಇಲ್ಲಿ ವಿಜ್ಞಾನ ಮೌನವಾಗುತ್ತದೆ. ಆ ಮೌನದಲ್ಲಿ ತತ್ವಶಾಸ್ತ್ರ ಪ್ರಾರಂಭವಾಗುತ್ತದೆ.

ಉಪನಿಷತ್ತುಗಳಲ್ಲಿ 'ವಿಜ್ಞಾನ ದರ್ಶನ'

ಜ್ಞಾನ, ಅನುಭವ, ಪರಿಶೀಲನೆಗಳೇ ಉಪನಿಷತ್ತಿನ ಆಧಾರ. ಇದು ಸಂಪೂರ್ಣ ವೈಜ್ಞಾನಿಕ ಮನೋಭಾವದ ತಳಹದಿಯ ಮೇಲೆ ನಿಂತಿದೆ. ಉಪನಿಷತ್ತುಗಳು ಧಾರ್ಮಿಕ ಗ್ರಂಥಗಳಷ್ಟೇ ಅಲ್ಲ, ಅವು ಅನುಭವಾಧಾರಿತ ವಿಚಾರಧಾರೆಯ ಪರಂಪರೆ. ಉಪನಿಷತ್ತಿನ ಋಷಿಗಳು ನಂಬಿಕೆಯನ್ನು ಒತ್ತಾಯಿಸಲಿಲ್ಲ. ಪ್ರಶ್ನೆಯನ್ನು ಪ್ರಾರಂಭಿಸಿದರು. ಇದೇ ಉಪನಿಷತ್ತಿನ 'ವಿಜ್ಞಾನ ದರ್ಶನ'. ಇಲ್ಲಿ ಪ್ರಶ್ನೆಯಿಂದಲೇ ಜ್ಞಾನಾರ್ಜನೆಯ ಆರಂಭ. 'ಯಾವುದನ್ನು ತಿಳಿದರೆ ಎಲ್ಲವೂ ತಿಳಿಯುತ್ತದೆ?' ಎಂದು ಪ್ರಶ್ನಿಸುತ್ತಲೇ ಮುಂಡಕೋಪನಿಷತ್ತು ಪ್ರಾರಂಭವಾಗುತ್ತದೆ. ಇದು ಶುದ್ಧ ವೈಜ್ಞಾನಿಕ ಪ್ರಶ್ನೆ. ವಿಜ್ಞಾನವೂ ಇದೇ ರೀತಿಯಲ್ಲಿ 'ಮೂಲ ತತ್ವ' ಹುಡುಕುತ್ತದೆ. ಉದಾಹರಣೆಗೆ, ಭೌತಶಾಸ್ತ್ರದಲ್ಲಿ ಏಕೀಕೃತ ಕ್ಷೇತ್ರ ತತ್ವ, ಜೀವಶಾಸ್ತ್ರದಲ್ಲಿ ಜೀವದ ಮೂಲ, ಉಪನಿಷತ್ತುಗಳಲ್ಲೂ ಮೂಲ ಸತ್ಯದ ಹುಡುಕಾಟ. ಉಪನಿಷತ್ತುಗಳು ಅಂಥ ನಂಬಿಕೆಯನ್ನು ಒತ್ತಾಯಿಸುವುದಿಲ್ಲ. ಅನುಭವಾಧಾರಿತ ಪರಿಶೀಲನೆಯನ್ನೇ ಅವು ಹೇಳುವುದು. ಆತ್ಮ ಸತ್ಯವನ್ನು ಪ್ರವಚನದಿಂದಲೂ, ಬುದ್ಧಿಯಿಂದಲೂ, ಕೇವಲ ಕೇಳುವುದರಿಂದಲೂ ಪಡೆಯಲಾಗುವುದಿಲ್ಲ ಎಂದೇ ಅಲ್ಲಿ ಹೇಳಲಾಗಿದೆ. ಇದು ವೈಜ್ಞಾನಿಕ ಮನೋಭಾವ. Authority ಮೇಲೆ ನಂಬಿಕೆ ಬೇಡ, ಅನುಭವದಿಂದ ಪಡೆದ ಜ್ಞಾನವನ್ನು ಮಾತ್ರ ನಂಬು ಎನ್ನುತ್ತದೆ ತತ್ವಶಾಸ್ತ್ರ. ವಿಜ್ಞಾನದಲ್ಲೂ ಇದೇ ವಿಧಾನವನ್ನು ಅನುಸರಿಸಲಾಗುತ್ತದೆ. ಸಿದ್ಧಾಂತ, ಪರೀಕ್ಷೆ, ಅನುಭವ, ದೃಢೀಕರಣ ಇವೇ ವಿಜ್ಞಾನದ ಪ್ರಮಾಣಗಳು.

ವಿಶ್ಲೇಷಣೆಯ ವಿಧಾನ

ತೈತ್ತಿರೀಯ ಉಪನಿಷತ್ತು ಮಾನವನನ್ನು ಐದು ಪದರಗಳಲ್ಲಿ ವಿಶ್ಲೇಷಿಸುತ್ತದೆ. ಅವು, ಅನ್ನಮಯ ಕೋಶ (ದೇಹ), ಪ್ರಾಣಮಯ ಕೋಶ (ಜೀವಶಕ್ತಿ), ಮನೋಮಯ ಕೋಶ (ಮನಸ್ಸು), ವಿಜ್ಞಾನಮಯ ಕೋಶ (ಬುದ್ಧಿ), ಆನಂದಮಯ ಕೋಶ (ಅನುಭವ). ಇದು ಮಾನವನ 'layered model''. ಇಂದಿನ ಮನೋವಿಜ್ಞಾನ ಮತ್ತು ನ್ಯೂರೋಸೈನ್ಸ್ ಕೂಡ ಮನಸ್ಸನ್ನು ಪದರಗಳಲ್ಲಿ ನೋಡುತ್ತವೆ. ಇದು ಉಪನಿಷತ್ತಿನ ವೈಜ್ಞಾನಿಕ ದೃಷ್ಟಿ, ಸಮಗ್ರ ವಿಶ್ಲೇಷಣೆ.

ಬೃಹದಾರಣ್ಯಕ ಉಪನಿಷತ್ತು ಹೇಳುವ 'ನೇತಿ ನೇತಿ' ವೈಜ್ಞಾನಿಕ ನಿರಾಕರಣೆಯ ವಿಧಾನ. 'ಇದು ಅಲ್ಲ, ಇದು ಅಲ್ಲ' ಎನ್ನುತ್ತಲೇ ಸತ್ಯದ ದಾರಿ ತೋರಿಸುತ್ತದೆ. ಒಂದು ಹೈಪೋಥೆಸಿಸ್ ತೆಗೆದುಕೊಳ್ಳಿ, ತಪ್ಪಾದರೆ ತಳ್ಳಿ. ಮತ್ತೊಂದು ತೆಗೆದುಕೊಂಡು, ಮತ್ತೆ ಪರೀಕ್ಷಿಸಿ.. ಈ ವಿಧಾನದಲ್ಲಿ ಸತ್ಯದತ್ತ ಸಾಗುವುದು ವೈಜ್ಞಾನಿಕ ವಿಧಾನ. ವಿಜ್ಞಾನದಲ್ಲಿ ತಪ್ಪುಗಳನ್ನು ತೆಗೆದುಹಾಕಿ ಸತ್ಯದತ್ತ ಸಾಗಿದರೆ, ಉಪನಿಷತ್ತು 'ನೇತಿ ನೇತಿ' ಎಂದು, ಅಸತ್ಯವನ್ನು ಪಕ್ಕಕ್ಕೆ ಸರಿಸುವುದರ ಮೂಲಕ ಸತ್ಯದತ್ತ ಸಾಗುತ್ತದೆ. ಛಾಂದೋಗ್ಯ ಉಪನಿಷತ್ತಿನ ಮಹಾವಾಕ್ಯವಾದ 'ಸರ್ವಂ ಖಲ್ವಿದಂ ಬ್ರಹ್ಮ' (ಈ ಎಲ್ಲವೂ ಒಂದೇ ಮೂಲದಿಂದ ಬಂದಿದೆ) ಬ್ರಹ್ಮಾಂಡದ ಏಕತ್ವದ ಕಲ್ಪನೆಯನ್ನು ನೀಡುತ್ತದೆ. 'ವಿಶ್ವ' ಒಂದೇ ಮೂಲದಿಂದ ಹುಟ್ಟಿತು, ಎಲ್ಲವೂ ಶಕ್ತಿಯ ರೂಪ ಎಂದು ಇಂದಿನ ವಿಜ್ಞಾನವೂ ಹೇಳುತ್ತದೆ. ಉಪನಿಷತ್ತುಗಳು ತತ್ವಶಾಸ್ತ್ರೀಯವಾಗಿ ಹೇಳಿದ್ದನ್ನು ವಿಜ್ಞಾನ ಭೌತಿಕವಾಗಿ ಪರಿಶೀಲಿಸುತ್ತದೆ.

ಒಳಗಿನ ಮತ್ತು ಹೊರಗಿನ ಪರಿಶೀಲನೆ

ವಿಜ್ಞಾನ ಹೊರಗಿನ ಜಗತ್ತನ್ನು ಪರಿಶೀಲಿಸುತ್ತದೆ. ಉಪನಿಷತ್ತು ಒಳಗಿನ ಜಗತ್ತನ್ನು ಪರಿಶೀಲಿಸುತ್ತದೆ. ಆದರೆ ಎರಡರ ವಿಧಾನವೂ ಒಂದೇ, ಪ್ರಶ್ನೆ, ಪರಿಶೀಲನೆ, ಅನುಭವ, ಅರಿವು. ಉಪನಿಷತ್ತು ಹೇಳುವುದು 'ಯೋ ವೇದ ನಿಹಿತಂ ಗುಹಾಯಾಂ' ಅಂದರೆ ಸತ್ಯ ಒಳಗಿನ ಅನುಭವದಲ್ಲಿದೆ'. ಇದು introspective science, ಒಳಗಿನ ವಿಜ್ಞಾನ. ಉಪನಿಷತ್ತುಗಳ ವೈಜ್ಞಾನಿಕ ಮನೋಭಾವವನ್ನು ಹೀಗೆ ಗ್ರಹಿಸಬಹುದು. ಪ್ರಶ್ನೆಯಿಂದ ಆರಂಭ, ಅನುಭವದ ಮೇಲೆ ಒತ್ತು, ವಿಶ್ಲೇಷಣೆಯ ವಿಧಾನ, ನಿರಾಕರಣೆ ವಿಧಾನ (ನೇತಿ ನೇತಿ), ಏಕತ್ವದ ಹುಡುಕಾಟ, ಒಳಗಿನ ಪರಿಶೀಲನೆ, ಕೊನೆಯಲ್ಲಿ ನಿರ್ಣಯ. ಉಪನಿಷತ್ತುಗಳು ವಿಜ್ಞಾನಕ್ಕೆ ವಿರೋಧವಲ್ಲ. ಅವು ವೈಜ್ಞಾನಿಕ ಮನೋಭಾವದ ಪ್ರಾಚೀನ ರೂಪ. ವಿಜ್ಞಾನ 'ಪರಿಶೀಲಿಸು' ಎಂದರೆ, ಉಪನಿಷತ್ತು 'ಸ್ವ ಅನುಭವಕ್ಕೆ ತಂದುಕೋ' ಎನ್ನುತ್ತದೆ. ಎರಡರ ಗುರಿಯೂ 'ಸತ್ಯ ದರ್ಶನ'ವೇ.

ತಂತ್ರಜ್ಞಾನ ಹೆಚ್ಚಿದಂತೆ ಪ್ರಶ್ನೆಗಳ ಹೆಚ್ಚಳವಾಗಿದೆ. Artificial Intelligence ಬಂದ ನಂತರ ಪ್ರಶ್ನೆಗಳು ಇನ್ನೂ ಹೆಚ್ಚಾಗಿವೆ. ಯಂತ್ರಕ್ಕೆ ಅರಿವು ಬರಬಹುದೇ? ಮಾನವ ನಿರ್ಧಾರಗಳ ಭವಿಷ್ಯ ಏನು? ಯಂತ್ರದಲ್ಲಿ ನೈತಿಕತೆ ಸಾಧ್ಯವೇ? ಎಂಬೆಲ್ಲ ಸಂದೇಹಗಳು ಮಿದುಳನ್ನು ಮುತ್ತುತ್ತವೆ. ವಿಜ್ಞಾನ ಸಮಸ್ಯೆಯನ್ನು ಪರಿಹರಿಸುತ್ತದೆ. ಆದರೆ ಹೊಸ ಸಮಸ್ಯೆಗಳನ್ನೂ ಹುಟ್ಟಿಸುತ್ತದೆ. ಔಷಧ ಕಂಡುಹಿಡಿದಂತೆ ಹೊಸ ಹೊಸ ರೋಗಗಳು ಹುಟ್ಟಿಕೊಳ್ಳುತ್ತವೆ. ತಂತ್ರಜ್ಞಾನ ಹೆಚ್ಚಿದಂತೆ ಏಕಾಂತ ಹೆಚ್ಚುತ್ತದೆ. ಹೀಗಾಗಿ ವಿಜ್ಞಾನ ಉತ್ತರ ಮತ್ತು ಪರಿಹಾರ ಮಾತ್ರವಲ್ಲ, ಹೊಸ ಪ್ರಶ್ನೆ ಮತ್ತು ಹೊಸ ಸಮಸ್ಯೆಯ ಮೂಲವೂ ಹೌದು. ಇಲ್ಲಿ ಪ್ರಶ್ನೆಗಳು ಮುಗಿಯುವುದೇ ಇಲ್ಲ, ಪ್ರಶ್ನೆಗಳ ಬೆಳವಣಿಗೆ ನಿರಂತರವಾಗಿರುತ್ತದೆ. ಅದಕ್ಕೆಲ್ಲ ವಿಜ್ಞಾನ ಉತ್ತರ ಕೊಡುತ್ತದೆ, ಆ ಉತ್ತರ ಮನಸ್ಸನ್ನು ಶಾಂತಗೊಳಿಸುವುದಿಲ್ಲ, ಬದಲಿಗೆ ಹೆಚ್ಚು ಕುತೂಹಲಗೊಳಿಸುತ್ತದೆ.

ವಿಜ್ಞಾನ ಅಂಧಕಾರವನ್ನು ಕಡಿಮೆ ಮಾಡುತ್ತದೆ. ಆದರೆ ಬೆಳಕು ಹೆಚ್ಚಿದಂತೆ, ಅದುವರೆಗೂ ಕಾಣದಿದ್ದ ಅನೇಕ ಅಂಧಕಾರಗಳು ಗೋಚರಿಸುತ್ತವೆ. ಅದೇ ವಿಜ್ಞಾನದ ಸೌಂದರ್ಯ. ಅನೇಕ ಬಾರಿ, ವಿಜ್ಞಾನ ಉತ್ತರ ನೀಡುವುದಿಲ್ಲ, ಪ್ರಶ್ನೆ ಕೇಳುವ ಶಕ್ತಿಯನ್ನು ಹೆಚ್ಚಿಸುತ್ತದೆ.

ಭಾರತೀಯ ಪರಂಪರೆಯಲ್ಲಿ 'ವಿಜ್ಞಾನ' ಎಂಬ ಪದವು, ಕೇವಲ ಯಂತ್ರ-ತಂತ್ರಜ್ಞಾನಕ್ಕೆ ಸೀಮಿತವಾಗಿರಲಿಲ್ಲ. ಪ್ರಕೃತಿ, ಮಾನವ ದೇಹ, ಚೇತನ, ಗಣಿತ, ಖಗೋಳ ಎಲ್ಲದರ ಮೇಲೂ ಸಮಗ್ರ ಪರಿಶೀಲನೆ ನಡೆದಿತ್ತು. ಅನುಭವ, ಅವಲೋಕನ ಹಾಗೂ ತತ್ವಚಿಂತನೆಗಳ ಮೊತ್ತವೇ ಈ ಪರಂಪರೆಯ ವಿಶೇಷತೆ.

ಗಣಿತ ಮತ್ತು ಶೂನ್ಯ ತತ್ವವನ್ನು ಗಮನಿಸಿದರೆ, 'ಶೂನ್ಯ' ಗಣಿತದಲ್ಲಿ ಮೌಲ್ಯದ ವ್ಯವಸ್ಥೆಯಾದರೆ, ತತ್ವ ಶಾಸ್ತ್ರದಲ್ಲಿ ಶೂನ್ಯತೆಯ ಕಲ್ಪನೆ. ಇಲ್ಲಿ ತತ್ವಶಾಸ್ತ್ರ ಮತ್ತು ವಿಜ್ಞಾನ ಒಂದೇ. ಖಗೋಳ ವಿಜ್ಞಾನದಲ್ಲಿ, ಭಾರತೀಯರು ಆಕಾಶವನ್ನು ಪೂಜ್ಯ ಭಾವದಿಂದ ಅವಲೋಕಿಸಿದರು. ಗ್ರಹಣಗಳನ್ನು ಗಣಿತದ ಮೂಲಕ ವಿವರಿಸಿದರು. ಅವಲೋಕನ, ಲೆಕ್ಕಾಚಾರ ಮತ್ತು ಪೂರ್ವಾನುಮಾನಗಳ ಮೂಲಕ ಜ್ಯೋತಿಷ್ಯ ಶಾಸ್ತ್ರವನ್ನೇ ವಿವರಿಸಿದರು. ಆಯುರ್ವೇದದ ಮೂಲತತ್ವವಾದ ವಾತ, ಪಿತ್ತ, ಕಫ ಇವು ದೇಹದ ಸಮತೋಲನದ ಕಲ್ಪನೆಯನ್ನು ನೀಡಿದವು. ಇಂದಿನ ಜೀವಶಾಸ್ತ್ರವೂ homeostasis ಬಗ್ಗೆ ಹೇಳುತ್ತದೆ. ಆಹಾರ, ಆರೋಗ್ಯ, ಜೀವನ ಶೈಲಿ, ರೋಗ ಇವುಗಳ ನಡುವಿನ ಸಂಬಂಧವನ್ನು ವಿವರಿಸುವ ಆಯುರ್ವೇದವು holistic science. ಯೋಗಶಾಸ್ತ್ರದ ಮೂಲಕ ಮನೋವಿಜ್ಞಾನದ ಅಧ್ಯಯನ, ಭಾಷಾಶಾಸ್ತ್ರದೊಂದಿಗೆ ಧ್ವನಿಯ ವಿಜ್ಞಾನ, ಲೋಹಶಾಸ್ತ್ರ (Metallurgy), ಕಾರ್ಯ-ಕಾರಣ ಸಂಬಂಧ ವಿವರಿಸುವ ತತ್ವ ಶಾಸ್ತ್ರ ಎಲ್ಲವೂ ಭಾರತೀಯ ಪರಂಪರೆಯ ವೈಜ್ಞಾನಿಕ ಆಯಾಮಗಳೇ. ಪ್ರಕೃತಿಯ ಅಧ್ಯಯನದ ಮೂಲಕ ಪ್ರಕೃತಿಯನ್ನು ಜಯಿಸುವುದಲ್ಲ, ಅರ್ಥಮಾಡಿಕೊಳ್ಳುವುದು ಎಂದು ಕಂಡುಕೊಂಡ ಬಗೆ ಇಡೀ ಜಗತ್ತಿಗೇ ಮಾದರಿ. ಭಾರತೀಯ ಪರಂಪರೆಯಲ್ಲಿ ವಿಜ್ಞಾನ ಮತ್ತು ತತ್ವಶಾಸ್ತ್ರ ಬೇರ್ಪಟ್ಟಿರಲಿಲ್ಲ. ಜ್ಞಾನ ಎಂದರೆ ಸಮಗ್ರ ಅರಿವು ಎಂದೇ ಅರ್ಥೈಸಲಾಗುತ್ತಿತ್ತು. Interdisciplinary ಅಧ್ಯಯನ ನಡೆಯುತ್ತಿತ್ತು. ಇದು ಕೇವಲ ಒಂದು ವಿಷಯಕ್ಕೆ ಸೀಮಿತವಾಗದೆ, ವಿವಿಧ ದೃಷ್ಟಿಕೋನಗಳನ್ನು ಬಳಸಿ ಸಮಗ್ರ ಜ್ಞಾನವನ್ನು ಪಡೆಯುವ ಕ್ರಮ.

ಪಶ್ಚಿಮದ ವಿಜ್ಞಾನ ಹೊರಗಿನ ಜಗತ್ತನ್ನು ವಿಶ್ಲೇಷಿಸಿತು. ಭಾರತೀಯ ಪರಂಪರೆಯು ಹೊರಗಿನ ಜತೆಗೆ ಒಳಗಿನ ಜಗತ್ತನ್ನೂ ಪರಿಶೀಲಿಸಿತು. ಭಾರತೀಯ ಪರಂಪರೆಯಲ್ಲಿ ವಿಜ್ಞಾನ ಕೇವಲ ಯಂತ್ರಗಳ ಬಳಕೆಯಲ್ಲ, ಅದು ಜೀವನವನ್ನು ಅರ್ಥಮಾಡಿಕೊಳ್ಳುವ ವಿಧಾನ. ಅದು, ಮಾನವ, ಪ್ರಕೃತಿ, ಚೇತನಗಳ ಏಕತೆಯನ್ನು ಅರಿಯುವ ಜ್ಞಾನಯಾತ್ರೆ...

ಮಾನಸಿಕ ಶುದ್ಧತೆಯನ್ನು ಗಳಿಸುವುದೇ ಆಧ್ಯಾತ್ಮಿಕ ಸಾಧನೆಯ ಉದ್ದೇಶ

● ಸತ್ ಶ್ರೀ ಸುಬ್ರಹ್ಮಣ್ಯ ಶಿವಬಾಲನ್

ಆಧ್ಯಾತ್ಮಿಕ ಅಭ್ಯಾಸದ ಉದ್ದೇಶವೇ ಮನಸ್ಸಿನ ಶುದ್ಧತೆಯನ್ನು ಹೆಚ್ಚಿಸುವುದು. ಉಳಿದೆಲ್ಲ, ಪ್ರತಿಯೊಂದು ಶಿಸ್ತು ಮತ್ತು ಅಭ್ಯಾಸದಲ್ಲಿ ಕಳೆಯುವ ಪ್ರತಿಗಂಟೆ, ಈ ಒಂದೇ ಗುರಿಯತ್ತ ಸಾಗುವಂತೆ ಮಾಡುತ್ತದೆ. ಆದರೆ ಮನಸ್ಸಿನ ಶುದ್ಧತೆ ಎಂದರೆ ನಿಜವಾಗಿ ಏನು? ಮನಸ್ಸಿನ ಶುದ್ಧತೆ ಎಂದರೆ ಮನಸ್ಸಿನಲ್ಲಿ ಯಾವುದನ್ನೂ ಉಳಿಯಲು ಬಿಡದಿರುವುದು. ಜನರು ಏಕೆ ಕಷ್ಟಪಡುತ್ತಾರೆಂದರೆ ಅವರು ಆಲೋಚನೆ, ನೆನಪು, ಭಾವನೆ ಮತ್ತು ಅನುಭವಗಳನ್ನು ಹಿಡಿದಿಟ್ಟುಕೊಂಡಿರುತ್ತಾರೆ. ಈ ಸಂಗ್ರಹವು ಮಾನಸಿಕ ಭಾರ ಎಂದು ನಾವು ಕರೆಯುವ ಒಂದು ನಿಜವಾದ ಹೊರೆಯನ್ನು ಸೃಷ್ಟಿಸುತ್ತದೆ, ಇದು ದೈನಂದಿನ ಅಸ್ವಸ್ಥತೆಯನ್ನು ಮೀರಿ ದೂರಗಾಮಿ ಪರಿಣಾಮಗಳನ್ನು ಹೊಂದಿರುತ್ತದೆ.

ಭವರೋಗ

ಮಾನಸಿಕ ಭಾರವು ಮನುಷ್ಯನ ಮನಸ್ಸನ್ನು ಮರಣದ ನಂತರವೂ ಪ್ರಾಪಂಚಿಕ ಲೋಕದಿಂದ ಮುಕ್ತಗೊಳಿಸುವುದನ್ನು ತಡೆಯುತ್ತದೆ. ಮನಸ್ಸಿನಲ್ಲಿರುವ ಮುದ್ರಣಗಳ ಪ್ರಭಾವಗಳಿಂದ ಭಾರವಾದ ಮನಸ್ಸು ಮೇಲೆ ಏರಲು ಸಾಧ್ಯವಿಲ್ಲ; ಅದು ಶರೀರವಿಲ್ಲದೆ ಭೂಮಿಯಲ್ಲಿಯೇ ಅಲೆದಾಡುತ್ತಾ ಇರುತ್ತದೆ, ಜೀವನಾವಧಿಯಲ್ಲಿ ಬಿಡಲು ಸಾಧ್ಯವಾಗದ ಆ ಆಸೆಗಳಿಗೆ ಬಂಧಿತವಾಗಿರುತ್ತದೆ. ಈ ಸ್ಥಿತಿಯನ್ನು ಭವರೋಗ ಎಂದು ಕರೆಯಲಾಗುತ್ತದೆ, ಇದು ಪ್ರಾಪಂಚಿಕ ಲೋಕದ ಮೇಲಿನ ಗಾಢವಾದ ಬಂಧನಗಳಿಂದ ಬೆಳೆಯುವ ಒಂದು ರೋಗವಾಗಿದೆ.

ನಮ್ಮ ಮನಸ್ಸು ಯಾವುದೇ ವಿಷಯದಲ್ಲಿ ಸಿಲುಕಬಾರದು ಅಥವಾ ಪ್ರಭಾವಗಳನ್ನು ಸೃಷ್ಟಿಸಬಾರದು. ಒಳಗಿನ ಅಡೆತಡೆಗಳಿಲ್ಲದೆ ಜೀವನವು ಸಹಜವಾಗಿ ಹರಿಯಬೇಕು. ಆದರೆ ನಾವು ಪ್ರಾಪಂಚಿಕ ಲೋಕದಿಂದ ಆನಂದ ಮತ್ತು ಸಂತೋಷವನ್ನು ಹುಡುಕಿದಾಗ, ನಾವು ಆ ಹರಿವನ್ನು ಅಡ್ಡಿಪಡಿಸುತ್ತೇವೆ. ಅಂಥ ಆಸೆಗಳು ಹೊಸ ಪ್ರಭಾವಗಳನ್ನು ಸೃಷ್ಟಿಸುತ್ತವೆ ಮತ್ತು ಮನಸ್ಸಿಗೆ ಹೊಸ ಭಾರವನ್ನು ಸೇರಿಸುತ್ತವೆ, ನಮ್ಮನ್ನು ಬಂಧಿಸುವ ಮಾದರಿಗಳನ್ನು ಇನ್ನಷ್ಟು ಬಲಪಡಿಸುತ್ತವೆ. ಶರೀರದೊಂದಿಗೆ ಕೊನೆಗೊಳ್ಳುವ ದೈಹಿಕ ಕಾಯಿಲೆಗಳಿಗಿಂತ ಭಿನ್ನವಾಗಿ, ಭವರೋಗವು ಅದನ್ನು ಮೀರಿ ಮುಂದುವರಿಯುತ್ತದೆ, ನಾವು ಬಿಡಿಸದೆ ಬಿಟ್ಟ ಪ್ರಭಾವಗಳಿಂದ ಪೋಷಿಸಲ್ಪಡುತ್ತದೆ.

ದೈವಿಕ ಸಹಾಯದ ಅವಶ್ಯಕತೆ

ದೈಹಿಕ ರೋಗಗಳಿಗೆ ಔಷಧಿಗಳು ಮತ್ತು ಚಿಕಿತ್ಸೆಗಳಂಥ ಬಾಹ್ಯ ಸಹಾಯದ ಅಗತ್ಯವಿರುವಂತೆ, ಮಾನಸಿಕ ಭಾರಕ್ಕೂ ಬಾಹ್ಯ ದೈವಿಕ ಸಹಾಯದ ಅಗತ್ಯವಿದೆ. ನಮ್ಮ ವೈಯಕ್ತಿಕ ಪ್ರಯತ್ನಗಳು ಮಾತ್ರವೇ ಅನೇಕ ಜನ್ಮಗಳಲ್ಲಿ ಸಂಗ್ರಹವಾದ ಭಾರವನ್ನು ಕರಗಿಸಲು ಸಾಧ್ಯವಿಲ್ಲ.

'ಚಿವಾಲಿಟಿ ಪದ್ಧತಿ'ಯಲ್ಲಿ, ನಾವು ಈ ದೈವಿಕ ಸಹಾಯವನ್ನು ಗುರುಗಳ ಊರ್ಜೆಯ ಮೂಲಕ ಪಡೆಯುತ್ತೇವೆ, ಇದನ್ನು ಮಾಸ್ಟರ್‌ರವರ ನಿರಂತರ ಸ್ಮರಣೆಯ ಮೂಲಕ ಪಡೆಯಲಾಗುತ್ತದೆ, ಅಂದರೆ ಗುರುಗಳನ್ನು ತನ್ನ ಹೃದಯದಲ್ಲಿ ಇಟ್ಟುಕೊಳ್ಳುವುದು ಮತ್ತು ಅವರನ್ನು ನಿರಂತರವಾಗಿ ನೆನಪಿಸಿಕೊಳ್ಳುವುದು. ಗುರುಗಳ ಊರ್ಜೆಯು ಒಳಗಿನಿಂದ ಹೇಗೆ ಕೆಲಸ ಮಾಡುತ್ತದೆ ಎಂಬುದರ ಪ್ರಾಯೋಗಿಕ ವ್ಯವಸ್ಥೆ ಇದು; ಇದು ಮಾನಸಿಕ ಭಾರವನ್ನು ಕಡಿಮೆಗೊಳಿಸುತ್ತದೆ ಮತ್ತು ಹಗುರವಾದ ಮನಸ್ಸನ್ನು ತರುತ್ತದೆ. ಈ ಹಗುರವಾದ ಮನಸ್ಸು ಭೌತಿಕ ಲೋಕದಲ್ಲಿ ಪರಿಣಾಮ ಹೊಂದದೆ ಮುಕ್ತವಾಗಿ ಚಲಿಸುತ್ತದೆ.

ಶುದ್ಧೀಕರಿಸಿದ ಮನಸ್ಸಿನಿಂದ ಬರುವ ಶಾಂತಿ

ಹಗುರವಾದ ಮತ್ತು ಶುದ್ಧೀಕರಿಸಿದ ಮನಸ್ಸಿನಿಂದ ಶಾಂತಿ ಉದಯಿಸಿದಾಗ, ಬಾಹ್ಯ ಸಂತೋಷದ ಅಗತ್ಯತೆ ಕಣ್ಮರೆಯಾಗುತ್ತದೆ. ಶಾಂತಿಯುಳ್ಳ ಮನಸ್ಸು ಎಂದಿಗೂ ಹೊರಗಿನಿಂದ ಸಂತೋಷವನ್ನು ನಿರೀಕ್ಷಿಸುವುದಿಲ್ಲ. ಆದ್ದರಿಂದ, ನಮ್ಮ ಅಂತಿಮ ಗುರಿ ಯಾವಾಗಲೂ ಶಾಂತಿಯುಳ್ಳ ಮನಸ್ಸನ್ನು ಪಡೆಯುವುದು ಮತ್ತು ಕಾಪಾಡಿಕೊಳ್ಳುವುದು ಆಗಿರಬೇಕು. ಇದು ದೂರದ ಆದರ್ಶವಲ್ಲ; ಇದು ಜೀವಂತ ಸಾಧ್ಯತೆಯಾಗಿದೆ. ಗುರುಗಳ ನಿರಂತರ ಸ್ಮರಣೆಯ (ಮಾಸ್ಟರ್ ಫುಲ್‌ನೆಸ್) ಮೂಲಕ, ನಮ್ಮ ಮಾನಸಿಕ ಭಾರವನ್ನು ಬಿಡುಗಡೆ ಮಾಡುವುದಲ್ಲದೆ ಸ್ಪಷ್ಟತೆ ಮತ್ತು ಸುಲಭವಾಗಿ ಜೀವನದಲ್ಲಿ ಮುಂದುವರಿಯಲು ನಮಗೆ ಸಾಧನಗಳನ್ನು ನೀಡಲಾಗುತ್ತದೆ. ಪ್ರತಿಯೊಂದು ಕ್ಷಣವೂ ಶುದ್ಧೀಕರಿಸಲು, ನೆನಪಿಸಿಕೊಳ್ಳಲು ಮತ್ತು ಒಳಗಿನ ನಿಶ್ಚಲತೆಗೆ ಮರಳಲು ಒಂದು ಅವಕಾಶವಾಗಲಿ. ಆ ನಿಶ್ಚಲತೆಯಲ್ಲಿ, ಶಾಂತಿಯು ನಾವು ಹುಡುಕುವ ಯಾವುದೇ ವಿಷಯವಲ್ಲ ಆದರೆ ನಾವೇ ಶಾಂತಿಯ ಸ್ವರೂಪವಾಗಿದ್ದೇವೆ ಎನ್ನುವ ಅನುಭೂತಿಯಾಗಿರುತ್ತದೆ.

ರಾಮಚರಿತ ಮಾನಸ: ಮರಳಿದ ಹನುಮಂತನ ಆತ್ಮವಿಶ್ವಾಸ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಸೀತೆಯನ್ನು ಹುಡುಕುತ್ತಾ ದಕ್ಷಿಣ ಸಮುದ್ರ ತೀರಕ್ಕೆ ಬಂದ ವಾನರ ಸೈನ್ಯಕ್ಕೆ ನೂರು ಯೋಜನ ವಿಸ್ತಾರದ ಸಮುದ್ರವನ್ನು ದಾಟುವುದು ಹೇಗೆಂಬ ಚಿಂತೆ ಕಾಡುತ್ತದೆ. ಎಲ್ಲಾ ವೀರರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ಅಂಗದನು ''ನಾನು ಸಮುದ್ರವನ್ನು ದಾಟಬಲ್ಲೆ, ಆದರೆ ಮರಳಿ ಬರುವ ಶಕ್ತಿ ನನಗಿದೆಯೇ ಎಂದು ಸಂಶಯವಿದೆ'' ಎಂದನು. ಜಾಂಬವಂತನು ''ನನಗೆ ಮುಪ್ಪು ಬಂದಿದೆ, ಹಳೆಯ ಶಕ್ತಿ ಈಗ ಉಳಿದಿಲ್ಲ'' ಎಂದು ಗೊಣಗಿದನು. ಹೀಗೆ ಪ್ರತಿಯೊಬ್ಬರೂ ತಮ್ಮ ಮಿತಿಯನ್ನು ಹೇಳುತ್ತಾ ಅಸಹಾಯಕತೆಯಿಂದ ಮೌನವಾದಾಗ, ಇಡೀ ವಾತಾವರಣದಲ್ಲಿ ನಿರಾಶೆ ಮನೆಮಾಡಿತ್ತು.

ಆದರೆ ಅಲ್ಲಿ ಒಬ್ಬ ವೀರ ಮಾತ್ರ ಸಮುದ್ರದ ಅಲೆಗಳನ್ನು ನೋಡುತ್ತಾ ಶಾಂತನಾಗಿ ಕುಳಿತಿದ್ದ. ಅವನೇ ಪವನಪುತ್ರ, ಹನುಮಂತ. ಹನುಮಂತನಿಗೆ ತನ್ನ ಮಹಾಶಕ್ತಿಯ ಅರಿವೇ ಇರಲಿಲ್ಲ. ಬಾಲ್ಯದಲ್ಲಿ ಋಷಿಗಳ ಶಾಪದಿಂದಾಗಿ, ಯಾರಾದರೂ ನೆನಪಿಸುವವರೆಗೂ ಅವನ ಶಕ್ತಿ ಅವನಿಗೆ ಮರೆತುಹೋಗುತ್ತಿತ್ತು. ವಾನರ ಸೈನ್ಯದ ಹಿರಿಯನಾದ, ಜ್ಞಾನವೃದ್ಧ ಜಾಂಬವಂತನು ಹನುಮಂತನ ಈ ಮೌನವನ್ನು ಗಮನಿಸಿದನು. ಹನುಮಂತನ ಹತ್ತಿರ ನಡೆದು ಬಂದು ಅವನ ಭುಜದ ಮೇಲೆ ಕೈ ಇಟ್ಟು ಮೆಲ್ಲಗೆ ಕೇಳಿದನು: ಕಹಇ ರೀಛಪತಿ ಸುನು ಹನುಮಾನಾ । ಕಾ ಚುಪ ಸಾಧಿ ರಹೇಹು ಬಲವಾನಾ ॥ (ಎಲೈ ಬಲಶಾಲಿಯಾದ ಹನುಮಂತನೇ, ನೀನೇಕೆ ಈ ರೀತಿ ಮೌನವಾಗಿ ಕುಳಿತಿದ್ದೀಯಾ? ನಿನಗೆ ನಿನ್ನ ಬಗ್ಗೆ ಅರಿವಿಲ್ಲವೇ?).

ಜಾಂಬವಂತನ ದನಿ ಗಂಭೀರವಾಯಿತು. ಅವನು ಹನುಮಂತನಿಗೆ ಅವನ ಹಿರಿಮೆಯನ್ನು ನೆನಪಿಸಲು ಪ್ರಾರಂಭಿಸಿದನು. ''ಹನುಮಂತ, ನೀನು ಸಾಧಾರಣ ವಾನರನಲ್ಲ. ನೀನು ವಾಯುಪುತ್ರ. ನಿನ್ನ ವೇಗ ವಾಯುವಿನಷ್ಟೇ ಅಗಾಧವಾದುದು. ಜಗತ್ತಿನ ಕಷ್ಟಗಳನ್ನು ಪರಿಹರಿಸಲೆಂದೇ ಅವತರಿಸಿದ ಮಹಾಪ್ರಾಣ ನೀನು. ಬುದ್ಧಿ, ವಿವೇಕ ಮತ್ತು ವಿಜ್ಞಾನದ ಮಹಾಸಾಗರ ನೀನು. ನಿನ್ನಂಥ ವೀರನಿಗೆ ಈ ನೂರು ಯೋಜನದ ಸಮುದ್ರವು ಒಂದು ಸಣ್ಣ ಗೋವಿನ ಪಾದದ ಗುರುತಿನಷ್ಟೇ (ಗೋಷ್ಪದ) ಸಣ್ಣದು!''.

ಜಾಂಬವಂತನ ಪ್ರತಿಯೊಂದು ಮಾತು ಕಿವಿಗೆ ಬೀಳುತ್ತಿದ್ದಂತೆ, ಹನುಮಂತನ ಸುಪ್ತಪ್ರಜ್ಞೆ ಎಚ್ಚರಗೊಳ್ಳತೊಡಗಿತು. ಅವನ ರಕ್ತದಲ್ಲಿ ಮಿಂಚಿನ ಸಂಚಾರವಾದಂತಾಯಿತು. ಹನುಮಂತನು ನಿಧಾನವಾಗಿ ಎದ್ದು ನಿಂತನು. ಅವನ ಶರೀರವು ಆಕಾಶದಷ್ಟು ಬೆಳೆಯತೊಡಗಿತು. ಅವನ ಮುಖದಲ್ಲಿ ಈಗ ಅಂಜಿಕೆಯಿಲ್ಲ, ಬದಲಾಗಿ ರಾಮನ ಕಾರ್ಯವನ್ನು ಪೂರೈಸಲೇಬೇಕೆಂಬ ದೃಢ ಸಂಕಲ್ಪವಿತ್ತು. ಪರ್ವತದಂತೆ ಬೃಹತ್ ರೂಪ ತಾಳಿದ ಹನುಮಂತನು ಗುಡುಗಿನ ದನಿಯಲ್ಲಿ ಹೇಳಿದನು: ''ಜಾಂಬವಂತನೇ, ನಿನ್ನ ಮಾತುಗಳು ನನ್ನ ಮೈಯಲ್ಲಿ ಹೊಸ ಚೈತನ್ಯ ತುಂಬಿವೆ. ಈ ಸಮುದ್ರವನ್ನೇನು, ಇಡೀ ಬ್ರಹ್ಮಾಂಡವನ್ನೇ ಹಾರಿ ಬರಬಲ್ಲ ಶಕ್ತಿ ಈಗ ನನಗಿದೆ ಎನಿಸುತ್ತಿದೆ. ನಾನು ಈ ಕ್ಷಣವೇ ಲಂಕೆಗೆ ಹಾರುತ್ತೇನೆ, ಸೀತೆಯ ದರ್ಶನ ಪಡೆಯುತ್ತೇನೆ. ನಾನು ರಾಮನ ಕಾರ್ಯವನ್ನು ಮುಗಿಸದ ಹೊರತು ವಿಶ್ರಮಿಸುವುದಿಲ್ಲ!''.

ಹನುಮಂತನು ಸಮುದ್ರದ ಮೇಲೆ ಹಾರಲು ಸಿದ್ಧನಾಗಿ ನಿಂತ ಆ ಕ್ಷಣ, ಮನುಕುಲಕ್ಕೆ ಒಂದು ದೊಡ್ಡ ಪಾಠವನ್ನು ನೀಡಿತು.

ನಮ್ಮಲ್ಲಿ ಪ್ರತಿಯೊಬ್ಬರೂ ಹನುಮಂತನಂತೆ ಅಪಾರ ಶಕ್ತಿಯನ್ನು ಹೊತ್ತವರು. ಆದರೆ ಸಂಕೋಚ, ಭಯ ಮತ್ತು 'ನನ್ನಿಂದ ಅಸಾಧ್ಯ' ಎಂಬ ಅಳುಕು ನಮ್ಮನ್ನು ಕಟ್ಟಿಹಾಕಿರುತ್ತದೆ. ನಮಗೆ ಬೇಕಾಗಿರುವುದು ನಮ್ಮನ್ನು ಪ್ರೋತ್ಸಾಹಿಸುವ ಒಬ್ಬ 'ಜಾಂಬವಂತ'. ಸೋತಾಗ ಅಥವಾ ಅಡೆತಡೆಗಳು ಬಂದಾಗ ನಾವು ಹನುಮಂತನಂತೆ ಮೌನವಾಗಿ ಕುಳಿತುಬಿಡುತ್ತೇವೆ. ನಮಗೆ ಬೇಕಾಗಿರುವುದು ಕೇವಲ ನಮ್ಮ ಮೇಲೆ ನಮಗಿರುವ ನಂಬಿಕೆ. ದಾರಿಯಲ್ಲಿ ಅಡೆತಡೆಗಳು ಬರುವುದು ನಮ್ಮನ್ನು ತಡೆಯಲಿಕ್ಕಲ್ಲ, ಬದಲಿಗೆ ನಮ್ಮ ಶಕ್ತಿಯನ್ನು ಪರೀಕ್ಷಿಸಿ ನಮ್ಮನ್ನು ಗಟ್ಟಿಗೊಳಿಸಲು. ಆದರೆ ನಮ್ಮ ಶಕ್ತಿಯನ್ನು ನಾವೇ ನೆನಪಿಸಿಕೊಂಡಾಗ ಅಥವಾ ಗುರುವಿನ ಪ್ರೇರಣೆ ಸಿಕ್ಕಾಗ, ಹನುಮಂತನು ಸಮುದ್ರವನ್ನು ದಾಟಿದಂತೆ ನಾವು ಬದುಕಿನ ಯಾವುದೇ ಅಡೆತಡೆಯನ್ನು ಸುಲಭವಾಗಿ ದಾಟಬಹುದು. ಇಂಥ ಶಕ್ತಿ ನೀಡುವ ಗುರು ಪ್ರೇರಣೆ ಎಲ್ಲರಿಗೂ ಆಗಲಿ, ಬದುಕನ್ನು ಆತ್ಮವಿಶ್ವಾಸದಿಂದ ಎದುರಿಸುವಂತೆ ಆಗಲಿ ಎನ್ನುವುದೇ ಹಾರೈಕೆ.



ಮೌನದಲ್ಲೇ ಮರೆಯಾಗದಿರಲಿ ಆಕೆ...

● ನಂದಿನಿ ಪಟೇಲ್ ಎಚ್.ಸಿ

ಒಬ್ಬ ಮಹಿಳೆ ತನ್ನ ಜೀವನದಲ್ಲಿ ಎಷ್ಟು ಪಾತ್ರಗಳನ್ನು ನಿಭಾಯಿಸುತ್ತಾಳೋ, ಅವಳ ಮನಸ್ಸು ಅದಕ್ಕಿಂತಲೂ ಹೆಚ್ಚಿನ ಯುದ್ಧಗಳಲ್ಲಿ ಹೋರಾಡುತ್ತದೆ''.

ಮೌನದಲ್ಲಿ ಮುಚ್ಚಿದ ಕಣ್ಣೀರು,
ನಗುವಿನ ಹಿಂದೆ ಮರೆಯಾದ ನೋವು,
ಹೇಳದ ಮಾತಿನ ಭಾರ,
ಅವಳು ನಡೆದುಹೋಗುವ ಹಾದಿ ದೂರ!

ಮಹಿಳೆಯ ಜೀವನವನ್ನು ನಾವು ಬಹುಪಾಲು ಹೊರಗೆ ಕಾಣುವ ನಗುವಿನಿಂದ, ಯಶಸ್ಸಿನಿಂದ ಮತ್ತು ಕುಟುಂಬದ ಸಂತೋಷದಿಂದ ಅಳೆಯುತ್ತೇವೆ. ಆದರೆ, ಆ ನಗುವಿನ ಹಿಂದೆ ಮೌನದಲ್ಲಿ ನಡೆಯುವ ಅನೇಕ ಹೋರಾಟಗಳು ನಮ್ಮ ಗಮನಕ್ಕೆ ಬರುವುದಿಲ್ಲ. ಈ ಮೌನ ಹೋರಾಟಗಳು ಪ್ರಪಂಚದ ಎಲ್ಲ ಮಹಿಳೆಯರಿಗೂ ಸಾಮಾನ್ಯವಾಗಿವೆ. ಆದರೆ ಅವುಗಳ ಬಗ್ಗೆ ಮಾತನಾಡುವುದು ಕಡಿಮೆ, ಅನುಭವಿಸುವುದು ಹೆಚ್ಚು. ಬಹು ಮಹಿಳೆಯರು 'ನಾನು ಇದಕ್ಕೆ ಅರ್ಹಳೇ?' ಎಂಬ ಸ್ವ-ಸಂದೇಹದೊಂದಿಗೆ ಬದುಕುತ್ತಾರೆ. ಇದು Imposter Syndrome ಎಂದು ಕರೆಯಲ್ಪಡುತ್ತದೆ. ಎಷ್ಟು ಸಾಧನೆ ಮಾಡಿದರೂ ತಮ್ಮನ್ನು ತಾವು ಒಪ್ಪಿಕೊಳ್ಳಲು ಅವರಿಗೆ ಕಷ್ಟವಾಗುತ್ತದೆ. ಇದರೊಂದಿಗೆ ಕುಟುಂಬ ಮತ್ತು ಕನಸುಗಳ ನಡುವಿನ ಸಂಘರ್ಷವೂ ಅವರನ್ನು ಕಾಡುತ್ತದೆ. ಸಮಾಜದಲ್ಲಿ ಮಹಿಳೆಗೆ ಕುಟುಂಬ ಮೊದಲ ಆದ್ಯತೆ ಎನ್ನುವ ನಿರೀಕ್ಷೆ ಇರುವುದರಿಂದ, ಅವಳ ಸ್ವಂತ ಆಸೆಗಳು ಕೆಲವೊಮ್ಮೆ ನೇಪಥ್ಯಕ್ಕೆ ಸರಿಯುತ್ತವೆ. ಇದರ ಜತೆಗೆ, ಮಹಿಳೆಯರು ಭಾವನಾತ್ಮಕ ಒತ್ತಡ ವನ್ನು ಮೌನದಲ್ಲೇ ಹೊರುತ್ತಾರೆ. ಅವರು ಸದಾ ಬಲವಾಗಿ ರಬೇಕು ಎಂಬ ನಿರೀಕ್ಷೆ ಇರುತ್ತದೆ. ಆದರೆ ಅವರ ಮನಸ್ಸಿನ ಒಳಗಡೆ ನಡೆಯುವ ನೋವು ಮತ್ತು ಆತಂಕವನ್ನು ಕೇಳು ವವರು ಕಡಿಮೆ. ಈ ಮೌನವೇ ಅವರ ದೊಡ್ಡ ಹೋರಾಟ.

ಸಾಮಾಜಿಕ ನಿರೀಕ್ಷೆಗಳೂ ಮಹಿಳೆಯರ ಮೇಲೆ ಭಾರವಾಗುತ್ತವೆ. ''ಹೀಗೆ ಇರಬೇಕು, ಹಾಗೆ ಮಾತನಾಡಬೇಕು'' ಎಂಬ ನಿಯಮಗಳು ಅವಳ ವ್ಯಕ್ತಿತ್ವವನ್ನು ಕುಗ್ಗಿಸುತ್ತವೆ. We teach girls to shrink themselves' ಎನ್ನುತ್ತಾರೆ ಚಿಮಮಾಂಡಾ ಗೋಜಿ ಅಡಿಚಿ ಎಂಬ ನೈಜೀರಿಯನ್ ಲೇಖಕಿ. ಇದು ಮಹಿಳೆಯರ ಮೇಲೆ ಸಮಾಜ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ದೇಹಾಕಾರ (body image) ಮತ್ತು ಸೌಂದರ್ಯದ ಮಾನದಂಡಗಳೂ ಮಹಿಳೆಯ ಆತ್ಮಗೌರವವನ್ನು ಪ್ರಭಾವಿ ಸುತ್ತವೆ. ಸಾಮಾಜಿಕ ಮಾಧ್ಯಮ ಮತ್ತು ಸಿನಿಮಾ ರೂಪಿಸಿರುವ ಮಾನದಂಡಗಳು ಅವರ ಮೇಲೆ ಒತ್ತಡ ಹೇರುತ್ತವೆ. ಆದರೂ, ಪ್ರತಿದಿನ ತನ್ನನ್ನು ತಾನು ಸ್ವೀಕರಿಸುವುದು ಅವಳಿಗೆ ಒಂದು ಹೋರಾಟವೇ. ಈ ಎಲ್ಲ ಸಂಕಷ್ಟಗಳ ನಡುವೆಯೂ ಮಹಿಳೆ ನಿಲ್ಲುತ್ತಾಳೆ. ಅವಳು ತನ್ನ ನೋವನ್ನು ಮೌನದಲ್ಲೇ ಹೊತ್ತುಕೊಂಡು, ಇತರರಿಗೆ ಬೆಳಕು ನೀಡುತ್ತಾಳೆ. ಅವಳು ಪ್ರತಿದಿನ ತನ್ನನ್ನು ತಾನೇ ಕಟ್ಟಿಕೊಳ್ಳುತ್ತಾಳೆ. ಅವಳು ತನ್ನ ಗಾಯಗಳನ್ನು ಮುಚ್ಚಿಕೊಂಡು, ಮತ್ತೊಬ್ಬರ ಜೀವನವನ್ನು ಬೆಳಗಿಸುತ್ತಾಳೆ. ಅವಳ ಹೋರಾಟಗಳು ದುರ್ಬಲತೆ ಅಲ್ಲ; ಅವು ಅವಳ ಶಕ್ತಿಯ ಸಂಕೇತ. ಮಹಿಳೆಯ ಮೌನ ಹೋರಾಟಗಳನ್ನು ನಾವು ಗುರುತಿಸಬೇಕು. ಅವಳ ನಗುವಿನ ಹಿಂದೆ ಇರುವ ಕಥೆಯನ್ನು ಕೇಳಬೇಕು. ಅವಳಿಗೆ ಬೆಂಬಲ ಮತ್ತು ಸ್ವಾತಂತ್ರ್ಯ ನೀಡಬೇಕು. ಏಕೆಂದರೆ, ಮಹಿಳೆಯೊಬ್ಬಳು ತನ್ನನ್ನು ತಾನೇ ಗೆದ್ದಾಗ, ಒಂದು ಸಮಾಜವೇ ಮುಂದೆ ಸಾಗುತ್ತದೆ....

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಗುಂಗು ಹಿಡಿಸಿತು ಬಣ್ಣ (2)
4. ದೂರದಲ್ಲಿರುವವರಿಗೆ ಬರೆದ ಓಲೆ (2)
6. ದನಕ್ಕೆ ಮತ್ತೊಂದು ಹೆಸರು (2)
8. ಅಗತ್ಯಕ್ಕೆ ತಕ್ಕಷ್ಟು ಹಣವಿಲ್ಲದ್ದಕ್ಕೆ ತಂದ ಕಡ (2)
9. ಕೊನೆಗೆ ಆಂಗ್ಲರ ಚಿಂತೆಯಿರುವ ಮಗಳು (3)
10. ಮಟ್ಟಸವಾಗಿರುವ ಪ್ರದೇಶ (4)
12. ಮನಸ್ಸಿಗೆ ಮುದ ನೀಡುವ ಸುಗಂಧ (4)
14. ವಿಷಯವೊಂದನ್ನು ಚೆನ್ನಾಗಿ ಅರಿತವನು (4)
17. ಸಪ್ತಋಷಿಗಳಲ್ಲಿ ಒಬ್ಬರು (4)
19. ಗುರುಹಿರಿಯರಿಂದ ತರುವ ಪತ್ರ (3)
20. ಕೋಪಗೊಳ್ಳು ಎನ್ನುತ್ತಾ ಬಂದಿರುವ ಋಷಿ (2)
21. ತಲೆಗೆ ಮತ್ತೊಂದು ಹೆಸರು (2)
23. ಮೇಕೆ ಜಾತಿಗೆ ಸೇರಿದ ತುಪ್ಪಳವಿರುವ ಪ್ರಾಣಿ (2)
24. ತಪ್ಪಬಾರದು ಈ ಲಕ್ಷ್ಯ (2)

ಮೇಲಿಂದ ಕೆಳಕ್ಕೆ

1. ಬೇಸಗೆ ಹತ್ತಿರ ಬಂದಂತೆ ಹೆಚ್ಚಾಗಿದೆ ಬಾಯಾರಿಕೆ (2)
3. ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
4. ಸುತ್ತಮುತ್ತಲು ಹರಡು (4)
5. ಪ್ರಾಣಿಗಳ ಲಾಂಗೂಲ (2)
7. ಸರಾಗವಾದ, ಸಲೀಸಾದ (3)
8. ಶಕ್ತಿ ಮೀರಿ ಮಾಡುವ ಕೆಲಸ (3)
11. ನೀರಿನಲ್ಲಿ ಉಂಟಾದ ಅಲೆ (3)
13. ವಾರದ ನಡುವಿನ ಕಪಿ (3)
15. ಇರುಳಿಗೆ ಆರಂಭದಲ್ಲಿ ಅನುಸ್ವಾರ ಸೇರಿದೆ (3)
16. ತಾರಾಳಿಗೆ ಕಾಯಿ ತುರಿಯಲು ಏನು ಅವಸರ (4)
17. ಮನಸ್ಸಿಗೆ ಕಾಣು ಅಥವಾ ತೋರು (4)
18. ಪಕ್ಷದ ಹನ್ನೆರಡನೆಯ ದಿನ (3)
20. ಸಸ್ಯಗಳಲ್ಲಿರುವ ಮೊನಚಾದ, ಚುಚ್ಚುವ ಭಾಗ (2)
22. ಸೂರ್ಯನ ಕಿರಣ (2)

ಸರಿಯುತ್ತರಗಳು

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮುಲ್ಲರ್ ಬೆಂಬಲಕ್ಕೆ ಸುನಿಲ್ ಗವಾಸ್ಕರ್



ಮುಂಬೈ: ಇದೇ ಏ. 8ರಂದು ದೆಹಲಿಯಲ್ಲಿ ನಡೆದಿದ್ದ ಗುಜರಾತ್ ಟೈಟನ್ಸ್ ಹಾಗೂ ದೆಹಲಿ ಕ್ಯಾಪಿಟಲ್ಸ್ ತಂಡದ ನಡುವಿನ ಐಪಿಎಲ್ ಪಂದ್ಯದಲ್ಲಿ, ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಪಂದ್ಯ ಗೆಲ್ಲಲು ಇನ್ನು ಎರಡೇ ರನ್ ಬೇಕಿದ್ದಾಗ ಕ್ರೀಸ್ ನಲ್ಲಿದ್ದ ನಾಯಕ ಡೇವಿಡ್ ಮುಲ್ಲರ್ ಒಂದು ಸಿಂಗಲ್ ರನ್ ಪಡೆಯುವ ಅವಕಾಶ ನಿರಾಕರಿಸಿದರು. ಆ ಪಂದ್ಯದಲ್ಲಿ ಡೆಲ್ಲಿ ತಂಡ ಕೇವಲ ಒಂದೇ ಒಂದು ರನ್ ಗಳಿಂದ ಪಂದ್ಯದಲ್ಲಿ ಪರಾಭವಗೊಂಡಿತ್ತು. ಇದು ವಿವಾದಕ್ಕೆ ಕಾರಣವಾಗಿದೆ. ಆದರೆ,ಡೇವಿಲ್ ಮುಲ್ಲರ್ ಅವರಿಗೆ ಭಾರತ ತಂಡದ ಮಾಜಿ ನಾಯಕ ಸುನಿಲ್ ಗವಾಸ್ಕರ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಫಾರ್ಮ್ ನಲ್ಲಿದ್ದ ಮುಲ್ಲರ್ ತಾವೇ ಪಂದ್ಯ ಮುಗಿಸಲು ಉತ್ಸಾಹ ತೋರಿದರು. ಆದರೆ, ಅದು ಆಗಲಿಲ್ಲ ಅಷ್ಟೆ. ಆದರೆ, ಇಲ್ಲಿ ಮುಲ್ಲರ್ ತಪ್ಪು ಮಾಡಿದ್ದಾರೆಂದು ಹೇಳಲಾಗದು ಎಂದಿದ್ದಾರೆ.

ತರಬೇತುದಾರರಾಗಿ ಚೆಟ್ರಿ ಪುನರಾಗಮನ

ದೆಹಲಿ: ಭಾರತೀಯ ಮಹಿಳಾ ಫುಟ್‌ಬಾಲ್ ತಂಡದ ಮುಖ್ಯ ತರಬೇತು ದಾರರಾಗಿ ಕ್ರಿಸ್ಪಿನ್ ಚೆಟ್ರಿ ಅವರು ಮತ್ತೆ ನೇಮಕ ಗೊಳ್ಳುವ ಸಾಧ್ಯತೆ ಗಳಿವೆ. ಭಾರತೀಯ ಫುಟ್ಬಾಲ್ ಸಂಸ್ಥೆ (ಎಐಎಫ್‌ಎಫ್) ತಾಂತ್ರಿಕ ಸಮಿತಿಯು ಅವರ ಹೆಸರನ್ನು ಈ ಮಹತ್ವದ ಜವಾಬ್ದಾರಿಗೆ ಶಿಫಾರಸು ಮಾಡಿದೆ. ಕ್ರಿಸ್ಪಿನ್ ಚೆಟ್ರಿ ಅವರು ಈ ಹಿಂದೆ ಭಾರತೀಯ ಮಹಿಳಾ ಫುಟ್‌ಬಾಲ್ ತಂಡಕ್ಕೆ ಕೋಚ್ ಆಗಿ ಉತ್ತಮ ಸೇವೆ ಮಾಡಿದ್ದರು. ಅದೇ ಹಿನ್ನೆಲೆಯಲ್ಲಿ ಅವರನ್ನು ಕೋಚ್ ಆಗಿ ನೇಮಿಸಿಕೊಳ್ಳು ಎಐಎಫ್ ಎಫ್ ಸಂಸ್ಥೆ ನಿರ್ಧರಿಸಿದೆ. ಇತ್ತೀಚೆಗೆ, ಕೋಸ್ಟರಿಕಾ ಮೂಲದ ಅಮೇಲಿಯಾ ವಾಲ್ವೆಂಡ್ರೆ ಎಂಬುವರನ್ನು ಕೋಚ ಆಗಿ ನೇಮಿಸಿಕೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ, ಏ.10ರಂದು ಸಭೆ ಸೇರಿದ ಐ.ಎಂ. ವಿಜಯನ್ ನೇತೃತ್ವದ ಎಐಎಫ್‌ಎಫ್ ತಾಂತ್ರಿಕ ಸಮಿತಿಯು ಹಲವಾರು ಅಭ್ಯರ್ಥಿಗಳನ್ನು ಸಂದರ್ಶಿಸಿದ ನಂತರ ಚೆಟ್ರಿ ಅವರ ಹೆಸರನ್ನು ಅಂತಿಮಗೊಳಿಸಿದೆ. ಭಾರತೀಯ ಮಹಿಳಾ ತಂಡಕ್ಕೆ ಸ್ವದೇಶಿ ಕೋಚ್ ಇರಲಿ ಎಂದು ಸಮಿತಿಯು ನಿರ್ಧರಿಸಿದೆ. ಅಲ್ಲದೆ, ಚೆಟ್ರಿಯವರು, ಸಂತೋಷ್ ಟ್ರೋಫಿಯಲ್ಲಿ ಗೋವಾ ತಂಡವನ್ನು ಮುನ್ನಡೆಸಿದ ಅವರ ಕಾರ್ಯವೈಖರಿಯು ಸಮಿತಿಯ ಮೆಚ್ಚುಗೆಗೆ ಪಾತ್ರವಾಗಿದೆ.

ಫಿಫಾ ನೇರಪ್ರಸಾರ ಭಾರತ ನಿರಾಸಕ್ತಿ

ಜ್ಯೂರಿಚ್ (ಸ್ವಿಜರ್ಲೆಂಡ್): ಅಂತಾರಾಷ್ಟ್ರೀಯ ಫುಟ್ಬಾಲ್ ಸಂಸ್ಥೆ (ಫಿಫಾ) ವತಿಯಿಂದ ಆಯೋಜಿಸಲಾಗಿ ರುವ 2026ರ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ಆರಂಭಕ್ಕೆ ಇನ್ನೆರಡು ತಿಂಗಳಷ್ಟೇ ಬಾಕಿಯಿದೆ. ಆದರೆ, ಭಾರತದ ವಲಯಕ್ಕೆ ಆ ಪಂದ್ಯಗಳ ನೇರಪ್ರಸಾರದ ಹಕ್ಕು ಗಳನ್ನು ಖರೀದಿ ಮಾಡಲು ಯಾರೂ ಮುಂದೆ ಬಂದಿಲ್ಲ. ಇದರಿಂದಾಗಿ, 2022ರ ವಿಶ್ವಕಪ್ ಅನ್ನು ಜಗತ್ತಿನಾದ್ಯಂತ 5 ಬಿಲಿಯನ್ (500 ಕೋಟಿ) ಜನರು ವೀಕ್ಷಿಸಿದ್ದರು. ಈ ಬಾರಿ, ಭಾರತ ವಲಯಕ್ಕೆ ಈ ಬಾರಿಯ ವಿಶ್ವಕಪ್ ನೇರ ಪ್ರಸಾರ ಸಿಗದ ಕಾರಣ ವೀಕ್ಷಕರ ಸಂಖ್ಯೆಯಲ್ಲಿ ಇಳಿಮುಖವಾಗುವ ನಿರೀಕ್ಷೆ ಯಿದೆ. ಈ ಬಾರಿ ಫಿಫಾ, ಮುಂದಿನ ವಿಶ್ವಕಪ್ ಗಳ ಎರಡು ಆವೃತ್ತಿಗಳಿಗೆ ಜಂಟಿಯಾಗಿ ನೇರಪ್ರಸಾರದ ಹಕ್ಕುಗಳನ್ನು ಮಾರಾಟ ಮಾಡಲು ನಿರ್ಧರಿಸಿದೆ. ಮೊದಲು, 2026 ಮತ್ತು 2030 ವಿಶ್ವಕಪ್‌ಗಳ ಸಂಯುಕ್ತ ಪ್ರಸಾರ ಹಕ್ಕುಗಳಿಗೆ ಸುಮಾರು 100 ಮಿಲಿಯನ್ ಡಾಲರ್ (ಅಂದಾಜು 929 ಕೋಟಿ ರೂ.) ಬೆಲೆ ನಿಗದಿಪಡಿಸಿತ್ತು. ಆದರೆ, ಭಾರತೀಯ ಬ್ರಾಡ್‌ಕಾಸ್ಟರ್‌ಗಳಿಂದ ಆಸಕ್ತಿ ತೋರದ ಹಿನ್ನೆಲೆ, ಈ ದರವನ್ನು ಸುಮಾರು ಶೇ. 65 ಕಡಿತಗೊಳಿಸಿ 35 ಮಿಲಿಯನ್ ಡಾಲರ್‌ಗೆ (325 ಕೋಟಿ ರೂ.) ಇಳಿಸಲಾಯಿತು. ಆದರೂ ಕೂಡ ಯಾವುದೇ ಸಂಸ್ಥೆ ಮುಂದೆ ಬಂದಿಲ್ಲ. ಪ್ರಸಾರ ಮಾರುಕಟ್ಟೆಯಲ್ಲಿ ಕ್ರಿಕೆಟ್ ಪ್ರಾಬಲ್ಯ ಹೆಚ್ಚಿದ್ದು, ಬ್ರಾಡ್‌ಕಾಸ್ಟರ್‌ಗಳು ಈಗಾಗಲೇ ಐಪಿಎಲ್ ಹಾಗೂ ಐಸಿಸಿ ಟೂರ್ನಿಗಳ ಹಕ್ಕುಗಳಿಗೆ ದೊಡ್ಡ ಮೊತ್ತ ಹೂಡಿಕೆ ಮಾಡಿದ್ದಾರೆ. ಈ ಎರಡೂ ಕಾರಣಗಳಿಂದ ಟೂರ್ನಿಯ ಪ್ರಸಾರದ ಹಕ್ಕುಗಳನ್ನು ಕೊಳ್ಳಲು ಭಾರತೀಯ ಬ್ರಾಡ್ ಕಾಸ್ಟರ್ ಗಳು ಹಿಂದೇಟು ಹಾಕುತ್ತಿದ್ದಾರೆ.

ಪಾಟೀದಾರ್ ಹೋರಾಟ ವ್ಯರ್ಥ | ಮಳೆ ಲಾಭ ಪಡೆದ ಆರ್‌ಆರ್

ಅಬ್ಬರಿಸಿದ ವೈಭವ್, ಧ್ರುವ್

ಆರ್‌ಸಿಬಿಗೆ ಮೊದಲ ಸೋಲು

ಪಂದ್ಯಶ್ರೇಷ್ಠ ವೈಭವ್ ಸೂರ್ಯವಂಶಿ

ಗುವಾಹಟಿ: ಧ್ರುವ್ ಜ್ಯುರೆಲ್ (81) ವೈಭವ್ ಸೂರ್ಯವಂಶಿಯವರ (78) ಸ್ಫೋಟಕ ಬ್ಯಾಟಿಂಗ್ ಹಾಗೂ ರವಿ ಬಿಷ್ಣೋಯಿ, ಜೋರಾ ಅರ್ಚರ್, ಬ್ರಿಜೇಶ್ ಶರ್ಮಾ (ತಲಾ 2 ವಿಕೆಟ್) ರಾಜಸ್ಥಾನ ರಾಯಲ್ಸ್ (ಆರ್‌ಆರ್) ಪಡೆ, ಶುಕ್ರವಾರದಂದು ಗುವಾಹಟಿಯಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಆಫ್ ಬೆಂಗಳೂರು (ಆರ್‌ಸಿಬಿ) ವಿರುದ್ಧ 6 ವಿಕೆಟ್ ಗಳ ಜಯ ಸಾಧಿಸಿತು.

ಬರ್ಸಾಪಾರಾ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ, 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿತ್ತು. ಈ ಮೊತ್ತವನ್ನು ಬೆನ್ನಟ್ಟಿದ ಆರ್‌ಆರ್ ತಂಡ, 18 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿ ಜಯದ ನಗೆ ಬೀರಿತು. ಈ ಮೂಲಕ ಪ್ರಸಕ್ತ ಐಪಿಎಲ್‌ನಲ್ಲಿ ಸತತ ನಾಲ್ಕು ಜಯ ಗಳಿಸಿರುವ ರಾಜಸ್ಥಾನ ತಂಡ, ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಮತ್ತೊಂದೆಡೆ, ಆರ್‌ಸಿಬಿ ಪ್ರಸಕ್ತ ಐಪಿಎಲ್ ಆವೃತ್ತಿಯಲ್ಲಿ ತನ್ನ ಮೊದಲ ಸೋಲು ಕಂಡಿದೆ.

ಆರ್‌ಸಿಬಿ ನೀಡಿದ್ದ ಗುರಿಯನ್ನು ಬೆನ್ನಟ್ಟಿದ ರಾಜಸ್ಥಾನ ರಾಯಲ್ಸ್ ತಂಡ ಖಾತೆ ಆರಂಭಿಸಿದ ಕೆಲವೇ ನಿಮಿಷಗಳಲ್ಲಿ ಆರಂಭಿಕ ಯಶಸ್ವಿ ಜೈಪಾಲ್ ಬೇಗನೇ ಔಟ್ ಆದರು. ಕ್ರೀಸ್ ನಲ್ಲಿದ್ದ ಮತ್ತೊಬ್ಬ ಆರಂಭಿಕ ವೈಭವ್ ಸೂರ್ಯವಂಶಿ ಈ ಆರಂಭಿಕ ಆಘಾತದಿಂದ ತಂಡವನ್ನು ಪಾರು ಮಾಡಿದರು. ಈ ಜೋಡಿ, 2ನೇ ವಿಕೆಟ್‌ಗೆ 108 ರನ್ ಪೇರಿಸಿ ತಂಡವನ್ನು ಗೆಲುವಿನ ಹಾದಿಗೆ ತಂದರು. ಆದರೆ, ತಂಡದ ಮೊತ್ತ 128 ರನ್ ಆಗಿದ್ದಾಗ ವೈಭವ್ ಔಟಾದರೆ, ಅವರ ಬೆನ್ನಲ್ಲೇ ಶಿಮೊನ್ ಹೆಟ್ಮೆರ್ (0) ಔಟಾದರು. ಅದಾಗಿ ಕೆಲ ಹೊತ್ತಿನಲ್ಲೇ ರಿಯಾನ್ ಪರಾಗ್ (3) ಔಟಾದರು. ಆದರೂ, ಆರಂಭಿಕರಾಗಿ ಕ್ರೀಸ್‌ನಲ್ಲಿದ್ದ ಧ್ರುವ್ ಜುರೆಲ್ ಹಾಗೂ ಮಧ್ಯಮ ಕ್ರಮಾಂಕದ ರವೀಂದ್ರ ಜಡೇಜಾ, ತಂಡಕ್ಕೆ ಗೆಲುವು ತಂದುಕೊಟ್ಟರು.

ಮುಗ್ಗರಿಸಿದ ಪಾಟಿದಾರ್ ಪಡೆ: ಆರ್‌ಸಿಬಿ ಇನ್ನಿಂಗ್ಸ್ ಆರಂಭದ ಮೊದಲ ಎಸೆತದಲ್ಲೇ ಫಿಲ್ ಸಾಲ್ಟ್ (0) ವಿಕೆಟ್ ಉರುಳುವ ಮೂಲಕ ಬೆಂಗಳೂರು ತನ್ನಕ್ಕೆ ಮೊದಲ ಪೆಟ್ಟು ಬಿತ್ತು. ಆನಂತರ 3ನೇ ಓವರ್‌ನಲ್ಲಿ ದೇವದತ್ತ ಪಡಿಕ್ಕಲ್ (14) ಔಟಾದರು. 3ನೇ ವಿಕೆಟ್ಟಿಗೆ ರಜತ್ ಪಾಟೀದಾರ್ ಜೊತೆಗೆ 3ನೇ ವಿಕೆಟ್‌ಗೆ ಕೇವಲ 13 ರನ್ ಪೇರಿಸುವಷ್ಟರಲ್ಲಿ ಕೊಹ್ಲಿ (32) ಔಟಾದರು. ಅವರ ಹಿಂದೆಯೇ 7ನೇ ಓವರಿನಲ್ಲಿ ಕೃನಾಲ್ ಪಾಂಡ್ಯ (1), 9ನೇ ಓವರ್ ನಲ್ಲಿ ಜಿತೇಶ್ ಶರ್ಮಾ (5) ವಿಕೆಟ್ ಒಪ್ಪಿಸಿದರು. 10ನೇ ಓವರ್ ಮುಗಿಯುವಷ್ಟರಲ್ಲಿ ಆರ್‌ಸಿಬಿ 89 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು.

ಆರ್‌ಸಿಬಿ ಪಡಿಪಾಟಲು ಇಷ್ಟಕ್ಕೇ ನಿಲ್ಲಲಿಲ್ಲ. 11ನೇ ಓವರ್ ಟಿಮ್ ಡೇವಿಡ್ (13), 14ನೇ ಓವರ್‌ನಲ್ಲಿ ಶೆಫರ್ಡ್ (22) ಔಟಾದರು.

ಪಾಟೀದಾರ್ ಏಕಾಂಗಿ ಹೋರಾಟ: ಆರ್‌ಸಿಬಿ ವಿಕೆಟ್‌ಗಳು ಹೀಗೆ ಉದುರುತ್ತಿದ್ದರೆ ಕ್ರೀಸ್‌ನಲ್ಲಿ ಗಟ್ಟಿಯಾಗಿ ಬೇರೂರಿದ್ದ ನಾಯಕ ರಜತ್ ಪಾಟೀದಾರ್, ಕೆಲವಾರು ಬಿರುಸಿನ ಹೊಡೆತಗಳ ಮೂಲಕ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಆದರೆ, 18ನೇ ಓವರ್‌ನಲ್ಲಿ ಸಂದೀಪ್ ಶರ್ಮಾ ಎಸೆತಕ್ಕೆ ಔಟಾಗುವ ಮೂಲಕ ಅವರ ಇನಿಂಗ್ಸ್ (63 ರನ್, 40 ಎಸೆತ, 4 ಬೌಂಡರಿ, 4 ಸಿಕ್ಸರ್) ಅಂತ್ಯವಾ ಯಿತು. ವೆಂಕಟೇಶ್ ಅಯ್ಯರ್ (29), ಭುವನೇ ಶ್ವರ್ ಕುಮಾರ್ (9) ಔಟಾಗದೇ ಉಳಿದರು.

ಇತ್ತಂಡಗಳಲ್ಲಿ ಬದಲಾವಣೆ: ಎರಡೂ ತಂಡಗಳು ತಲಾ ಒಂದು ಬದಲಾವಣೆ ಮಾಡಿಕೊಂಡೇ ಕಣಕ್ಕಿಳಿದಿದ್ದವು. ರಾಜಸ್ಥಾನ್ ರಾಯಲ್ಸ್ ಪರ. ತುಷಾರ್ ದೇಶಪಾಂಡೆ ಅವರ ಬದಲಿಗೆ ಬ್ರಿಜೇಶ್ ಶರ್ಮಾ ಅವರನ್ನು ಸೇರಿಸಿಕೊಂಡಿತು. ಇತ್ತ, ಆರ್‌ಸಿಬಿ ತಂಡದಲ್ಲಿ ಜೋಷ್ ಹ್ಯಾಜಲ್‌ವುಡ್ ಮರಳಿ ತಂಡಕ್ಕೆ ಸೇರ್ಪಡೆಯಾಗಿದ್ದು, ಜೇಕಬ್ ಡಫಿ ಅವರನ್ನು ಈ ಪಂದ್ಯದಿಂದ ಕೈಬಿಡಲಾಗಿದೆ.

ಸಂಕ್ಷಿಪ್ತ ಸ್ಕೋರ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 201ಕ್ಕೆ 8, ಪಾಟೀದಾರ್ 63, ಕೊಹ್ಲಿ 32; ರವಿ ಬಿಷ್ಣೋಯಿ 32ಕ್ಕೆ 2, ಆರ್ಚರ್ 33ಕ್ಕೆ 2.

ರಾಜಸ್ಥಾನ ರಾಯಲ್ಸ್ : 18 ಓವರ್‌ಗಳಲ್ಲಿ 4ಕ್ಕೆ 202. ಧ್ರುವ್ ಜುರೆಲ್ 81, ಸೂರ್ಯವಂಶಿ 78; ಹ್ಯಾಜೆಲ್‌ವುಡ್ 44ಕ್ಕೆ 2, ಕ್ರುನಾಲ್ ಪಾಂಡ್ಯ 30ಕ್ಕೆ 2.

ಹೆಚ್ಚು ಮೊತ್ತಕ್ಕೆ ಸೇಲ್ ಗ್ರೌಂಡಿನಲ್ಲಿ ಫೇಲ್!

ಮುಂಬೈ: ಐಪಿಎಲ್ 2026ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಹೊರತುಪಡಿಸಿ ಉಳಿದ ಎಲ್ಲಾ ತಂಡಗಳು ಈಗಾಗಲೇ ತಲಾ ಮೂರು ಪಂದ್ಯಗಳನ್ನು ಆಡಿವೆ. ಒಂದು ಲೆಕ್ಕಾಚಾರದ ಪ್ರಕಾರ, 2026ರ ಹರಾಜಿನಲ್ಲಿ ಅತ್ಯಧಿಕ ಮೊತ್ತ ಪಡೆದ ಬಹುತೇಕ ಆಟಗಾರರು ಇನ್ನೂ ತಮ್ಮ ಸಾಮರ್ಥ್ಯವನ್ನು ತೋರಿಸಲು ವಿಫಲರಾಗಿದ್ದಾರೆ.

ರಾಜಸ್ಥಾನ್ ರಾಯಲ್ಸ್ ತಂಡದ ಸ್ಪಿನ್ನರ್ ರವಿ ಬಿಷ್ಣೋಯ್ ಮಾತ್ರ ತಮ್ಮ ತಂಡದೊಂದಿಗೆ ಹೊಸ ಉತ್ಸಾಹದೊಂದಿಗೆ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಇವರನ್ನು ಹೊರತುಪಡಿಸಿದರೆ, ಉಳಿದ ದೊಡ್ಡ ಮೊತ್ತದ ಆಟಗಾರರು ಇನ್ನೂ ತಮ್ಮ ನಿಜವಾದ ಸಾಮರ್ಥ್ಯವನ್ನು ಪ್ರದರ್ಶಿಸಲು ಸಾಧ್ಯವಾಗಿಲ್ಲ.

- **ಕ್ಯಾಮರೂನ್ ಗ್ರೀನ್ (ಕೆಕೆಆರ್ - ₹25.20 ಕೋಟಿ):** ಕೋಲ್ಕತ್ತಾ ತಂಡದ ಈ ಆಲ್ ರೌಂಡರ್ ನಿರೀಕ್ಷಿತ ಮಟ್ಟ ತಲುಪಿಲ್ಲ. ಬ್ಯಾಟಿಂಗ್‌ನಲ್ಲಿ 4 ಪಂದ್ಯಗಳಿಂದ ಕೇವಲ 56 ರನ್ (ಸರಾಸರಿ 18.67) ಗಳಿಸಿದ್ದಾರೆ. ಬೌಲಿಂಗ್‌ನಲ್ಲಿ ಲಕ್ನೋ ವಿರುದ್ಧ 2 ಓವರ್‌ಗಳಲ್ಲಿ 28 ರನ್ ನೀಡಿ 1 ವಿಕೆಟ್ ಪಡೆದಿದ್ದಾರೆ.
- **ಮಥೀಶ ಪಥಿರಣ (ಕೆಕೆಆರ್ - ₹18 ಕೋಟಿ):** ಟಿ20 ವಿಶ್ವಕಪ್ 2026ರ ವೇಳೆ ಸ್ನಾಯು ಸೆಳೆತಕ್ಕೆ ಒಳಗಾಗಿದ್ದ ಇವರು, ಪ್ರಸ್ತುತ ನೆಟ್ಸ್‌ನಲ್ಲಿ ಬೌಲಿಂಗ್ ಆರಂಭಿಸಿದ್ದಾರೆ. ಆದರೆ ಅವರು ಪಂದ್ಯಕ್ಕೆ ಮರಳುವ ಅಧಿಕೃತ ದಿನಾಂಕ ಇನ್ನೂ ತಿಳಿದುಬಂದಿಲ್ಲ.
- **ಕಾರ್ತಿಕ್ ಶರ್ಮಾ (ಸಿಎಸ್‌ಕೆ - ₹14.20 ಕೋಟಿ):** ಭಾರಿ ಮೊತ್ತಕ್ಕೆ ಹರಾಜಾಗಿದ್ದ ಈ ಯುವ ಆಟಗಾರ ಆಡಿದ ಮೂರು ಪಂದ್ಯಗಳಲ್ಲಿ (18, 1, 6 ರನ್) ವಿಫಲರಾಗಿದ್ದಾರೆ.
- **ಪ್ರಶಾಂತ್ ವೀರ್ (ಸಿಎಸ್‌ಕೆ - ₹14.20 ಕೋಟಿ):** ಆರ್ಸಿಬಿ ವಿರುದ್ಧ 43 ರನ್ ಗಳಿಸಿ ಭರವಸೆ ಮೂಡಿಸಿದ್ದನ್ನು ಹೊರತುಪಡಿಸಿ, ಉಳಿದ ಪಂದ್ಯಗಳಲ್ಲಿ ಇವರಿಂದ ವಿಶೇಷ ಪ್ರದರ್ಶನ ಮೂಡಿಬಂದಿಲ್ಲ.
- **ಲಿಯಾಮ್ ಲಿವಿಂಗ್‌ಸ್ಟೋನ್ (ಹೈದರಾಬಾದ್ - ₹13 ಕೋಟಿ):** ಈವರೆಗೆ ಕೇವಲ ಒಂದು ಪಂದ್ಯವನ್ನಾಡಿ 14 ರನ್ ಗಳಿಸಲಷ್ಟೇ ಶಕ್ತರಾಗಿದ್ದಾರೆ.
- **ಮುಸ್ತಾಫಿಜುರ್ ರೆಹಮಾನ್ (ಕೆಕೆಆರ್ - ₹9.20 ಕೋಟಿ):** ಬಾಂಗ್ಲಾದೇಶದ ಈ ವೇಗಿಗೆ ಟೂರ್ನಿ ಆರಂಭಕ್ಕೂ ಮುನ್ನವೇ ಐಪಿಎಲ್ 2026ರಲ್ಲಿ ಆಡಲು ನಿಷೇಧ ಹೇರಲಾಗಿತ್ತು.
- **ಜೋಶ್ ಇಂಗ್ಲಿಸ್ (ಲಕ್ನೋ ಸೂಪರ್ ಜೈಂಟ್ಸ್ - ₹8.60 ಕೋಟಿ):** ಈ ಸೀಸನ್‌ನಲ್ಲಿ ಇನ್ನೂ ತಮ್ಮ ಮೊದಲ ಪಂದ್ಯವನ್ನು ಆಡಬೇಕಿದೆ.
- **ಆಕಿಬ್ ನಬಿ (ಡೆಲ್ಲಿ- ₹8.40 ಕೋಟಿ):** ಈ ಸೀಸನ್‌ನಲ್ಲಿ ಇನ್ನೂ ತಮ್ಮ ಮೊದಲ ಪಂದ್ಯವನ್ನು ಆಡಬೇಕಿದೆ.
- **ಜೇಸನ್ ಹೋಲ್ಡರ್ (ಗುಜರಾತ್ - ₹7.20 ಕೋಟಿ):** ಈ ಸೀಸನ್‌ನಲ್ಲಿ ಇನ್ನೂ ತಮ್ಮ ಮೊದಲ ಪಂದ್ಯವನ್ನು ಆಡಬೇಕಿದೆ.
- **ರವಿ ಬಿಷ್ಣೋಯ್ (ರಾಜಸ್ತಾನ- ₹7.20 ಕೋಟಿ):** ಹೆಚ್ಚು ಹಣ ಪಡೆದ ಆಟಗಾರರಲ್ಲಿ ಇವರೊಬ್ಬರೇ ಪ್ರಸ್ತುತ ಯಶಸ್ವಿ ಪ್ರದರ್ಶನ ನೀಡುತ್ತಿದ್ದಾರೆ. ಆಡಿದ ಕೇವಲ 3 ಪಂದ್ಯಗಳಲ್ಲಿ 7 ವಿಕೆಟ್ ಪಡೆದು ಮಿಂಚುತ್ತಿದ್ದಾರೆ.

ಚೆಪಾಕ್‌ನಲ್ಲಿ ಋತುರಾಜ್-ಅಕ್ಷರ್ ಪಟೇಲ್ ಬಣಗಳ ಮುಖಾಮುಖಿ

ಸೂಪರ್ ಕಿಂಗ್ಸ್ ತವರಿನಲ್ಲಿ ಡೆಲ್ಲಿ ಸವಾಲು

ಚೆನ್ನೈ: ಐಪಿಎಲ್ 2026ರ 18ನೇ ಪಂದ್ಯದಲ್ಲಿ ಋತುರಾಜ್ ಗಾಯಕ್ವಾಡ್ ನೇತೃತ್ವದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಅಕ್ಷರ್ ಪಟೇಲ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗುತ್ತಿವೆ. ಈ ಪಂದ್ಯವು ಏಪ್ರಿಲ್ 12, 2026 ರಂದು ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ (ಚೆಪಾಕ್) ನಡೆಯಲಿದೆ.

ತಂಡಗಳ ವಿಶ್ಲೇಷಣೆ

ಚೆನ್ನೈ ಸೂಪರ್ ಕಿಂಗ್ಸ್: ಸಿಎಸ್‌ಕೆ ತಂಡವು ತನ್ನ ತವರಿನಲ್ಲಿ ಅತ್ಯಂತ ಬಲಿಷ್ಠವಾಗಿದೆ. ಕಳೆದ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋತಿದ್ದರೂ, ಚೆಪಾಕ್ ಅಂಗಳದಲ್ಲಿ ಚೇತರಿಸಿಕೊಳ್ಳುವ ವಿಶ್ವಾಸ ದಲ್ಲಿದೆ. ರಚಿನ್ ರವೀಂದ್ರ ಮತ್ತು ಶಿವಂ ದುಬೆ ಅವರ ಬ್ಯಾಟಿಂಗ್ ತಂಡಕ್ಕೆ ಶಕ್ತಿ ತುಂಬಲಿದೆ. ಸರ್ಫರಾಜ್ ಖಾನ್ ಅವರು ತಂಡದ ಇಂಪ್ಯಾಕ್ಟ್ ಪ್ಲೇಯರ್ ಎನಿಸಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್: ಡೆಲ್ಲಿ ತಂಡವು ಈ ಸೀಸನ್‌ನಲ್ಲಿ ಮಿಶ್ರ ಪ್ರದರ್ಶನ ನೀಡುತ್ತಿದೆ. ಟ್ರಾವಿಸ್ ಹೆಡ್ ಮತ್ತು ಜೇಕ್ ಫ್ರೇಸರ್-ಮ್ಯಾಕ್‌ಗುರ್ಕ್ ಅವರ ಸ್ಫೋಟಕ ಆರಂಭದ ಮೇಲೆ ತಂಡ ಹೆಚ್ಚು ಅವಲಂಬಿತವಾಗಿದೆ. ಆದರೆ, ಚೆನ್ನೈನ ಸ್ಪಿನ್ ಸ್ನೇಹಿ ಪಿಚ್‌ನಲ್ಲಿ ಅವರ ಬ್ಯಾಟರ್‌ಗಳಿಗೆ ಸವಾಲು ಎದುರಾಗಬಹುದು. ಸಮೀರ್ ರೆಝ್ವಿಯವರು ತಂಡದ ಇಂಪ್ಯಾಕ್ಟ್ ಪ್ಲೇಯರ್ ಎನಿಸಿದ್ದಾರೆ.

ಪಿಚ್ ವರದಿ: ಚೆನ್ನೈನ ಚೆಪಾಕ್ ಮೈದಾನವು ಸಾಂಪ್ರದಾಯಿಕವಾಗಿ ಸ್ಪಿನ್ನರ್‌ಗಳಿಗೆ ಹೆಚ್ಚಿನ ನೆರವು ನೀಡುತ್ತದೆ. ಪಂದ್ಯ ಸಾಗುತ್ತಿದ್ದಂತೆ ಪಿಚ್ ನಿಧಾನಗತಿಯಾಗುವುದರಿಂದ, ಮೊದಲು ಬ್ಯಾಟಿಂಗ್ ಮಾಡುವ ತಂಡವು 170-180 ರನ್ ಗಳಿಸಿದರೆ ಅದು ಉತ್ತಮ ಮೊತ್ತವಾಗಲಿದೆ.

ಅಭಿಮಾನಿಗಳ ಅಂದಾಜು

ಒಂದು ವೇಳೆ ಸಿಎಸ್‌ಕೆ ಮೊದಲು ಬ್ಯಾಟಿಂಗ್ ಮಾಡಿದರೆ, ಅವರು 175-185 ರನ್ ಗಳಿಸಬಹುದು. ಈ ಸಂದರ್ಭದಲ್ಲಿ ಸಿಎಸ್‌ಕೆ ಜಯಗಳಿಸುವ ಸಾಧ್ಯತೆ ಹೆಚ್ಚು. ಒಂದು ವೇಳೆ ಡೆಲ್ಲಿ ಮೊದಲು ಬ್ಯಾಟಿಂಗ್ ಮಾಡಿದರೆ, ಅವರು 160-170 ರನ್ ಗಳಿಸಬಹುದು. ಈ ಸ್ಥಿತಿಯಲ್ಲೂ ಸಿಎಸ್‌ಕೆ ತನ್ನ ತವರಿನ ಲಾಭ ಪಡೆದು ಜಯ ಸಾಧಿಸುವ ನಿರೀಕ್ಷೆಯಿದೆ.

ಸಂಭವನೀಯ ಆಟಗಾರರು

ಚೆನ್ನೈ ಸೂಪರ್ ಕಿಂಗ್ಸ್: ಋತುರಾಜ್ ಗಾಯಕ್ವಾಡ್ (ನಾಯಕ), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಆಯುಷ್ ಮ್ಹಾತ್ರೆ, ಡೆವಾಲ್ಡ್ ಬ್ರೆವಿಸ್, ಶಿವಂ ದುಬೆ, ಪ್ರಶಾಂತ್ ವೀರ್, ಜೇಮಿ ಓವರ್ಟನ್, ನೂರ್ ಅಹ್ಮದ್, ಅನ್ಶುಲ್ ಕಾಂಬೋಜ್, ಮ್ಯಾಟ್ ಹೆನ್ರಿ, ಖಲೀಲ್ ಅಹ್ಮದ್

ಡೆಲ್ಲಿ ಕ್ಯಾಪಿಟಲ್ಸ್: ಕೆಎಲ್ ರಾಹುಲ್ (ವಿಕೆಟ್ ಕೀಪರ್), ಪಾತುಮ್ ನಿಸ್ಸಾಂಕ, ನಿತೀಶ್ ರಾಣಾ, ಟ್ರಿಸ್ಟಾನ್ ಸ್ಟಬ್ಸ್, ಡೇವಿಡ್ ಮಿಲ್ಲರ್, ಅಕ್ಷರ್ ಪಟೇಲ್ (ನಾಯಕ), ವಿಪ್ರಜ್ ನಿಗಮ್, ಕುಲದೀಪ್ ಯಾದವ್, ಲುಂಗಿ ಎನ್‌ಗಿಡಿ, ಟಿ ನಟರಾಜನ್, ಮುಖೇಶ್ ಕುಮಾರ್.

ಚಂಡೀಗಢದ ಮಹಾರಾಜ ಯಾದವೀರ ಸಿಂಗ್ ಮೈದಾನದಲ್ಲಿ ಪಂದ್ಯ

ಇಂದು ಪಂಜಾಬ್-ಹೈದರಾಬಾದ್ ಸೆಣಸು

ಚಂಡೀಗಢ: ಐಪಿಎಲ್ 2026ರ 17ನೇ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನೇತೃತ್ವದ ಪಂಜಾಬ್ ಕಿಂಗ್ಸ್ (ಪಿಬಿಕೆಎಸ್) ಮತ್ತು ಇಶಾನ್ ಕಿಶನ್ ನೇತೃತ್ವದ ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡಗಳು ಮುಖಾಮುಖಿಯಾಗುತ್ತಿವೆ. ಈ ಪಂದ್ಯವು ಏ. 11ರಂದು ನವ ಚಂಡೀಗಢದಲ್ಲಿರುವ ಮಹಾರಾಜ ಯಾದವೀಂದ್ರ ಸಿಂಗ್ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಧ್ಯಾಹ್ನ 3:30ಕ್ಕೆ ಆರಂಭವಾಗಲಿದೆ.

ತಂಡಗಳ ಪರಿಸ್ಥಿತಿ ಹೇಗಿದೆ?

ಪಂಜಾಬ್: ಪಂಜಾಬ್ ತಂಡವು ಈ ಸೀಸನ್‌ನಲ್ಲಿ ಅಮೋಘ ಫಾರ್ಮ್ ನಲ್ಲಿದೆ. ಆಡಿದ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು, ಒಂದು ಪಂದ್ಯ ಮಳೆಯಿಂದ ರದ್ದಾಗಿದ್ದರಿಂದ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ತಂಡದ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ಬಲಿಷ್ಠವಾಗಿ ಕಂಡು ಬರುತ್ತಿದೆ. ಈ ಎರಡೂ ವಿಭಾಗಗಳಲ್ಲಿ ಸಮತೋಲಿತ ಪ್ರದರ್ಶನ ನೀಡುತ್ತಿರುವ ಪಂಜಾಬ್ ತಂಡ ಈ ಹೈದರಾಬಾದ್ ವಿರುದ್ಧವೂ ಗೆಲ್ಲುವ ಉಮೇದಿನಲ್ಲಿದೆ.

ಹೈದರಾಬಾದ್: ಅಸಲಿಗೆ, ಹೈದರಾಬಾದ್ ತಂಡದ ಪಟ್ಟಿಯಲ್ಲಿ ಘಟಾನುಘಟಿ ಬ್ಯಾಟ್ಸ್‌ಮನ್‌ಗಳಿದ್ದಾರೆ. ಆದರೆ, ಅದರ ಹೊರತಾಗಿಯೂ ಈವರೆಗೆ ಸ್ಥಿರ ಪ್ರದರ್ಶನ ನೀಡಲು ವಿಫಲವಾಗಿದೆ. ಆಡಿದ ಮೂರು ಪಂದ್ಯಗಳಲ್ಲಿ ಕೇವಲ ಒಂದರಲ್ಲಿ ಮಾತ್ರ ಗೆಲುವು ಸಾಧಿಸಿದೆ. ಅವರ ಬೌಲಿಂಗ್ ವಿಭಾಗವು ಕೂಡ ಅಷ್ಟಾಗಿ ಪರಿಣಾಮಕಾರಿಯಾಗಿ ಬೌಲ್ ಮಾಡುತ್ತಿಲ್ಲ. ಇನ್ನು, ಶನಿವಾರದ ಪಂದ್ಯವು ಚಂಡೀಗಢದಲ್ಲಿ ನಡೆಯುತ್ತಿದೆ. ಅಲ್ಲಿನ ಹವಾಮಾನದಲ್ಲಿ ಪಂಜಾಬ್ ತಂಡದ ತವರಿನಲ್ಲಿ ಆ ತಂಡದ ಪ್ರೇಕ್ಷಕರ ಸಮ್ಮುಖದಲ್ಲಿ ಆಡಿ ಗೆಲ್ಲಬೇಕೆಂದರೆ ಹೈದರಾಬಾದ್ ತಂಡ ಒಂದಿಷ್ಟು ಹೆಚ್ಚಿನ ಶ್ರಮವನ್ನೇ ಹಾಕಬೇಕಿದೆ.

ಪಿಚ್ ಮತ್ತು ಹವಾಮಾನ: ಮುಲ್ಲನ್‌ಪುರದ ಪಿಚ್ ಬ್ಯಾಟಿಂಗ್‌ಗೆ ಪೂರಕವಾಗಿದೆ. ಮಧ್ಯಾಹ್ನದ ಪಂದ್ಯವಾಗಿರುವುದರಿಂದ ಇಲ್ಲಿ ಇಬ್ಬನಿಯ ಪ್ರಭಾವ ಇರುವುದಿಲ್ಲ. ಇದು ಎರಡನೇ ಇನಿಂಗ್ಸ್‌ನಲ್ಲಿ ಬೌಲರ್‌ಗಳಿಗೆ ಸ್ವಲ್ಪ ಸಹಾಯ ಮಾಡಬಹುದು. ಆದರೂ, ಟಾಸ್ ಗೆದ್ದ ತಂಡವು ಮೊದಲು ಬ್ಯಾಟಿಂಗ್ ಮಾಡಲು ಇಷ್ಟಪಡಬಹುದು.

ಸಂಭವನೀಯ ಆಟಗಾರರು

ಪಂಜಾಬ್: ಶ್ರೇಯಸ್ ಅಯ್ಯರ್ (ನಾಯಕ), ಪ್ರಭಾಸಿಮ್ರಾನ್ ಸಿಂಗ್ (ವಿಕೆಟ್ ಕೀಪರ್), ಕೂಪರ್ ಕೊನೊಲಿ, ಶಶಾಂಕ್ ಸಿಂಗ್, ನೆಹಾಲ್ ವಧೇರಾ, ಮಾರ್ಕಸ್ ಸ್ಟೊಯಿನಿಸ್, ಮಾರ್ಕೊ ಜಾನ್ಸೆನ್, ಕ್ಸೇವಿಯರ್ ಬಾರ್ಟ್ಲೆಟ್, ವಿಜಯ್ ಕುಮಾರ್ ವೈಶಾಕ್, ಅರ್ಷದೀಪ್ ಸಿಂಗ್, ಯಜುವೇಂದ್ರ ಚಾಹಲ್

ಹೈದರಾಬಾದ್: ಇಶಾನ್ ಕಿಶನ್ (ನಾಯಕ ಮತ್ತು ನಾಯಕ), ಟ್ರಾವಿಸ್ ಮುಖ್ಯಸ್ಥ, ಅಭಿಷೇಕ್ ಶರ್ಮಾ, ತೀಶ್ ಕುಮಾರ್ ರೆಡ್ಡಿ, ಹೆನ್ರಿಚ್ ಕ್ಲಾಸೆನ್, ಲಿಯಾಮ್ ಲಿವಿಂಗ್‌ಸ್ಟೋನ್, ಅನಿಕೇತ್ ವರ್ಮಾ, ಹರ್ಷ್ ದುಬೆ, ಶಿವಂಗ್ ಕುರ್ಮಾ, ಜಯದೇವ್ ಉನಾದ್ಕತ್, ಹರ್ಷಲ್ ಪಟೇಲ್.

ಮಲೆನಾಡಿನ ಮಡಿಲಲ್ಲಿ ರೋಚಕ ರಹಸ್ಯ

ಮಲೆನಾಡಿನ ಸುಂದರ ಸೊಬಗಿನಲ್ಲಿ ಸಾಗುವ ಕಥೆಗಳು ಮನಸೂರೆಗೊಳ್ಳುತ್ತವೆ. ಅದರಲ್ಲಿಯೂ ಆ ಸ್ಟೋರಿಗೆ ಒಂದಷ್ಟು ಥ್ರಿಲ್ಲಿಂಗ್ ಸ್ಪರ್ಶ ಇದ್ದರೆ ಕುತೂಹಲ ಮೂಡಿಸುತ್ತಾ ಸಾಗುತ್ತದೆ. ಅಂತಹದ್ದೇ ಕಥೆಯನ್ನು ಹೊತ್ತ ಪೀಟರ್ ತೆರೆಗೆ ಬಂದಿದೆ. ಕೊಡಗಿನ ಸುಂದರ ಪರಿಸರದ ನಡುವೆ ಸಿನಿಮಾದ ಕಥೆ ತೆರೆದುಕೊಳ್ಳುತ್ತದೆ. ಆತ ಪೀಟರ್ ಬಹುದಿನಗಳ ಬಳಿಕ ತನ್ನೂರಿಗೆ ಬರುತ್ತಾನೆ. ಅವನ ಹಳ್ಳಿಯ ಸೊಬಗು ಆತನನ್ನು ಸೆಳೆಯುತ್ತದೆ. ಪೀಟರ್ ಸುತ್ತ ಹಲವು ಪಾತ್ರಗಳು ತೆರೆದುಕೊಳ್ಳುತ್ತವೆ. ಅದರಲ್ಲಿಯೂ ವಿಶೇಷವಾಗಿ ಚಂಡೆ ವಾದ್ಯದ ಮಾಧುರ್ಯ ಸಿನಿಮಾದ ಕಥೆಗೆ ತಿರುವು ನೀಡುತ್ತದೆ.

ಸಿನಿಮಾ ಟ್ವಿಸ್ಟ್ ಮೇಲೆ ಟ್ವಿಸ್ಟ್ ಪಡೆದುಕೊಳ್ಳುತ್ತಾ ಸಾಗುತ್ತದೆ. ತನ್ನೂರನ್ನು ಅಗಾಧವಾಗಿ ಪ್ರೀತಿಸುವ, ತನ್ನವರನ್ನು ಪ್ರಾಣವನ್ನೇ ಒತ್ತೆಯಿಟ್ಟು ರಕ್ಷಿಸುವ ಪೀಟರ್, ತನ್ನೂರನ್ನು ಬಿಟ್ಟು ಹೋಗಿದ್ದೇಕೆ ಎಂಬುದೇ ಕಡೆಯವರೆಗೂ ಕಾಡುವ ಕುತೂಹಲ. ಅದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಈ ಹಿಂದೆ ದೂರದರ್ಶನ ಚಿತ್ರದ ಮೂಲಕ ಹೊಸತನದ ಕಥೆಯನ್ನು ತೆರೆಯಲ್ಲಿ ಕಟ್ಟಿಕೊಟ್ಟು ಸೈ ಎನಿಸಿಕೊಂಡಿದ್ದ ನಿರ್ದೇಶಕ ಸುಕೇಶ್ ಶೆಟ್ಟಿ ಈ ಬಾರಿಯೂ ಸುಂದರ ಕಥೆಯನ್ನು ಹೆಣೆದು ಅದನ್ನು ಎಲ್ಲರಿಗೂ ಹಿಡಿಸುವಂತೆ ತೆರೆಯಲ್ಲಿ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪೀಟರ್ ಪಾತ್ರದಲ್ಲಿ ರಾಜೇಶ್ ಧ್ರುವ್ ಮೆಚ್ಚುವ ಅಭಿನಯ ತೋರಿದ್ದಾರೆ. ರಾಜೇಶ್ ಡಬ್ಬಲ್ ಶೇಡ್‌ನಲ್ಲಿ ಮಿಂಚಿದ್ದು, ಒಂದರಲ್ಲಿ ಲವ್ವರ್ ಬಾಯ್ ಆಗಿ ಮತ್ತೊಂದರಲ್ಲಿ ನಿರಾಶವಾದಿಯಾಗಿ ಗಮನಸೆಳೆಯುತ್ತಾರೆ.

ವಿಟಾಕೀಸ್

ಜಾನ್ವಿ ರಾಯುಲ, ಸಮೀಕ್ಷಾ ನಾಯಕಿಯರಾಗಿ ಬಣ್ಣಹಚ್ಚಿದ್ದು, ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಉಳಿದಂತೆ ಪ್ರತಿಮಾ ನಾಯಕ್ ಪೋಷಕ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಹಿನ್ನೆಲೆ ಸಂಗೀತ ಅದ್ಭುತವಾಗಿದೆ.

ಅದರಲ್ಲಿಯೂ ಚೆಂಡೆ ಮೇಳದ ಸದ್ದು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುತ್ತದೆ. ಇನ್ನು ಛಾಯಾಗ್ರಹಣಕ್ಕೂ ಫುಲ್‌ಮಾರ್ಕ್ಸ್ ನೀಡಬಹುದು. ಒಟ್ಟಾರೆ ಪೀಟರ್ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರನ್ನೂ ಸೆಳೆಯುವ, ಕನೆಕ್ಟ್ ಆಗುವ ಸ್ಟೋರಿಯಾಗಿದೆ.

ಚಿತ್ರ	:	ಪೀಟರ್
ನಿರ್ಮಾಣ	:	ರವಿ ಹಿರೇಮಠ್ ಮತ್ತು ರಾಕೇಶ್ ಹೆಗ್ಗಡೆ
ತಾರಾಗಣ	:	ರಾಜೇಶ್ ಧ್ರುವ, ಜಾಹ್ನವಿ ರಾಯುಲ, ಸಮೀಕ್ಷಾ, ಪ್ರತಿಮಾ ನಾಯಕ್ ಮುಂತಾದವರು
ರೇಟಿಂಗ್	:	★★★½

ಸಾಮಾಜಿಕ ಸಮಸ್ಯೆಗೆ ಚುಚ್ಚುಮದ್ದು ನೀಡುವ ವೈದ್ಯ

ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಈ ಹಿಂದಿನ ಎಲ್ಲಾ ಸಿನಿಮಾಗಳಿಂತ ವಿಭಿನ್ನ ಕಥೆಯನ್ನು ಹೊತ್ತ ಕ್ಯಾಲೆಂಡರ್ ಈ ವಾರ ತೆರೆಗೆ ಬಂದಿದೆ. ಇಂದಿಗೂ ಮಹಿಳೆಯರು ಸಮಸ್ಯೆಗಳನ್ನು ಎದಿರಿಸುತ್ತಲೇ ಇದ್ದಾರೆ. ಅದರಲ್ಲಿಯೂ ಇಂದು ಮಹಿಳೆಯರು ಯಾಕೆ ಮಾನಸಿಕಹಿಂಸೆ ಅನುಭವಿಸುತ್ತಿದ್ದಾರೆ ಎಂಬುದನ್ನು ಕ್ಯಾಲೆಂಡರ್ ಸಿನಿಮಾದಲ್ಲಿ ಎಳೆ ಎಳೆಯಾಗಿ ಕಟ್ಟಿಕೊಡಲಾಗಿದೆ.

ಚಿತ್ರ	:	ಕ್ಯಾಲೆಂಡರ್
ನಿರ್ದೇಶನ	:	ನವೀನ್ ಶಕ್ತಿ
ನಿರ್ಮಾಣ	:	ಆದರ್ಶ್ ಗುಂಡುರಾಜ್
ತಾರಾಗಣ	:	ಆದರ್ಶ್, ಸುಷ್ಮಿತಾ, ಮಾಲಾಶ್ರೀ,ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡು ಮುಂತಾದವರು.
ರೇಟಿಂಗ್	:	★★★

ನಾಯಕ ವೈದ್ಯ, ವೈದ್ಯೋ ನಾರಾಯಣೋ ಹರಿ ಎಂಬ ಮಾತಿಗೆ ತಕ್ಕಂತೆ ಕರ್ತವ್ಯ ನಿಷ್ಠೆ ಮೆರೆಯುತ್ತಿರುತ್ತಾನೆ. ಹೀಗಿರುವಾಗಲೇ ಸಮಾಜದಲ್ಲಿ ನೆಲೆಸಿರುವ ಸಮಸ್ಯೆಗಳು, ಅದನ್ನು ಹುಟ್ಟು ಹಾಕುತ್ತಿರುವ ವ್ಯವಸ್ಥೆಯ ವಿರುದ್ಧ ಸಿಡಿದೇಳುತ್ತಾನೆ. ಇದರಲ್ಲಿ ನಾಯಕ ಯಶಸ್ವಿಯಾಗುತ್ತಾನಾ, ದುರುಳರ ವಿರುದ್ಧ ಆತನ ಹೋರಾಟ ಹೇಗಿರುತ್ತದೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಈ ಚಿತ್ರಕ್ಕೆ ಕ್ಯಾಲೆಂಡರ್ ಎಂಬ ಶೀರ್ಷಿಕೆ ಯಾಕೆ? ಆಯ್ದುಕೊಂಡಿದ್ದಾರೆ. ಎಂಬುದು ಸಿನಿಮಾ ನೋಡಿದ ಮೇಲೆ ತಿಳಿಯುತ್ತದೆ. ನಿರ್ದೇಶಕ ನವೀನ್ ಶಕ್ತಿ, ಇಂದು ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆಯರು ಅನಿಭವಿಸುತ್ತಿರುವ ಒತ್ತಡಗಳು, ಅದರಿಂದ ತಲೆದೋರುತ್ತಿರುವ ಸಮಸ್ಯೆಗಳು ಇದೆಲ್ಲವನ್ನೂ ಗಮನಿಸಿ ಅದಕ್ಕೆ ಪರಿಹಾರ ಕಂಡು ಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ಲವ್, ಸಸ್ಪೆನ್ಸ್, ಥ್ರಿಲ್ಲರ್, ಆ್ಯಕ್ಷನ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಆದರ್ಶ್ ಗುಂಡುರಾಜ್ ವೈದ್ಯನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು ತಮ್ಮ ಪಾತ್ರಕ್ಕೆ ಜೀವತುಂಬಿ ಅಭಿನಯಿಸಿದ್ದಾರೆ. ಸುಷ್ಮಿತಾ ನಾಯಕಿಯಾಗಿ ಮನಗೆಲ್ಲುತ್ತಾರೆ. ಹಿರಿಯ ನಟಿ ಮಾಲಾಶ್ರೀ ಆರೋಗ್ಯ ಸಚಿವರ ಪಾತ್ರದಲ್ಲಿ ನಟಿಸಿದ್ದು, ಆ ಪಾತ್ರಕ್ಕೆ ಶಕ್ತಿ ತುಂಬಿದ್ದಾರೆ. ಪ್ರಮೋದ್ ಶೆಟ್ಟಿ ರಾಜಕಾರಣಿಯಾಗಿ ಕಾಣಿಸಿಕೊಂಡಿದ್ದಾರೆ. ರಮೇಶ್ ಇಂದಿರಾ ಸೇರಿದಂತೆ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಚಿತ್ರದ ಕಥೆಗೆ ಇನ್ನೂ ಒಂದಷ್ಟು ಒತ್ತು ನೀಡಿ, ಸಂಭಾಷಣೆಗೆ ಮೊನಚು ನೀಡಿದ್ದರೆ, ಸಿನಿಮಾ ಇನ್ನೂ ಅದ್ಭುತವಾಗಿ ಮೂಡಿಬರುತ್ತಿತ್ತು ಎನ್ನಿಸುತ್ತದೆ. ಛಾಯಾಗ್ರಹಣ, ಸಂಗೀತ ಕಥೆಗೆ ಪೂರಕವಾಗಿದೆ. ಒಟ್ಟಾರೆ ಕ್ಯಾಲೆಂಡರ್ ಮನೆಮಂದಿಯೆಲ್ಲಾ ಕುಳಿತು ನೋಡುವ ಸಿನಿಮಾವಾಗಿದೆ.